ಉಪ್ಪಾರಳ್ಳಿ ರಾಮಪ್ಪಯ್ಯ ರಚಿತ

ಗೀತಾರ್ಥ ಪ್ರಕಾಶಿಕೆ

ಮತ್ತು

ಕುಮಾರವ್ಯಾಸನ ಕನ್ನಡ ಭಗವದ್ಗೀತೆ

(ಮೂಲ ಮತ್ತು ತಾತ್ಪರ್ಯಸಹಿತ)

38

ಪ್ರೊ. ಜಿ. ಅಶ್ವತ್ಥನಾರಾಯಣ



[illegible]

ಗೀತಾರ್ಥ ಪ್ರಕಾಶಿಕೆ

ಮತ್ತು

ಕುಮಾರವ್ಯಾಸನ ಕನ್ನಡ ಭಗವದ್ಗೀತೆ

([illegible])

[illegible]

[illegible]

([illegible])

[illegible]

[illegible]

[illegible]

[illegible]

[illegible]

ಉಪ್ಪಾರಳ್ಳಿ ರಾಮಪ್ಪಯ್ಯ ರಚಿತ

ಗೀತಾರ್ಥ ಪ್ರಕಾಶಿಕೆ

ಮತ್ತು

ಕುಮಾರವ್ಯಾಸನ ಕನ್ನಡ ಭಗವದ್ಗೀತೆ

(ಮೂಲ ಮತ್ತು ತಾತ್ಪರ್ಯಸಹಿತ)

ಸಂಪಾದಕರು:

ಪ್ರೊ. ಜಿ. ಅಶ್ವತ್ಥನಾರಾಯಣ, ಬೆಂಗಳೂರು

(ನಿ॥ ಕನ್ನಡ ಪ್ರಾಧ್ಯಾಪಕರು)

ಪ್ರಕಾಶಕರು

ಸ್ನೇಹಾ ಪ್ರಿಂಟರ್ಸ್

ನಂ. ೧೬, ೩ನೇ ಮಹಡಿ, ೧ನೇ ಬಿ. ಮುಖ್ಯರಸ್ತೆ

ಶ್ರೀ ರಾಘವೇಂದ್ರ ಮಠದ ರಸ್ತೆ, ಪಾಪರೆಡ್ಡಿಪಾಳ್ಯ ೧೧ನೇ ಬ್ಲಾಕ್

ನಾಗಗಬಾವಿ ೨ನೇ ಹಂತ, ಬೆಂಗಳೂರು-೭೨

ಉಪ್ಪಾರಳ್ಳಿ ರಾಮಪ್ಪಯ್ಯ ರಚಿಸಿದ

ಗೀತಾರ್ಥ ಪ್ರಕಾಶಿಕೆ ಮತ್ತು ಕುಮರವ್ಯಾಸನ ಭಗವದ್ಗೀತೆ

(ಮೂಲ ಮತ್ತು ತಾತ್ಪರ್ಯಸಹಿತ)

ಸಂಪಾದಕರು

ಪ್ರೊ. ಜಿ. ಅಶ್ವತ್ಥನಾರಾಯಣ (ನಿವೃತ್ತ ಕನ್ನಡ ಪ್ರಾಧ್ಯಾಪಕರು)
೯೫, ೩೪'ಬಿ' ಕ್ರಾಸ್, ೧೬ನೇ ಮೈನ್, ೪ನೇ'ಟಿ' ಬ್ಲಾಕ್, ಜಯನಗರ,
ಬೆಂಗಳೂರು ೫೬೦೦೪೧. ದೂರವಾಣಿ: ೦೮೦ – ೨೬೬೩೭೭೮೩.

ಪ್ರಕಾಶಕರು : ಸ್ನೇಹಾ ಪ್ರಿಂಟರ್ಸ್
ನಂ. ೧೬, ೩ನೇ ಮಹಡಿ, ೧ನೇ ಬಿ. ಮುಖ್ಯರಸ್ತೆ
ಶ್ರೀ ರಾಘವೇಂದ್ರ ಮಠದ ರಸ್ತೆ, ಪಾಪರೆಡ್ಡಿಪಾಳ್ಯ ೧೧ನೇ ಬ್ಲಾಕ್
ನಾಗರಬಾವಿ ೨ನೇ ಹಂತ, ಬೆಂಗಳೂರು–೭೨

ಮೊದಲ ಮುದ್ರಣ : ೨೦೨೨

ಬೆಲೆ : ರೂ. 240/-

ಪುಟಗಳು : xvi + 212 = 228

ಬಳಸಿದ ಕಾಗದ – ೭೦ ಜಿಸಿಎಂ ಮ್ಯಾಪ್‌ಲಿಥೊ ಪೇಪರ್

ಅಕ್ಷರ ಜೋಡಣೆ – ಕನ್ನಡ ಗಣಕ ಪರಿಷತ್ತು, ಬೆಂಗಳೂರು – ೧೮

ರಕ್ಷಾಪತ್ರವಿನ್ಯಾಸ : ನಾರಾಯಣ್

ಮುದ್ರಕರು : ಸ್ನೇಹಾ ಪ್ರಿಂಟರ್ಸ್
ನಂ. ೧೬, ೧ನೇ ಬಿ ಮುಖ್ಯರಸ್ತೆ, ಶ್ರೀರಾಘವೇಂದ್ರ ಮಠದ ರಸ್ತೆ,
ಪಾಪರೆಡ್ಡಿಪಾಳ್ಯ, ೧೧ನೇ ಬ್ಲಾಕ್, ನಾಗರಬಾವಿ, ೨ನೇ ಹಂತ,
ಬೆಂಗಳೂರು–೭೨ (ದೂ) ೦೮೦–೨೩೨೧೨೮೧೪.
ಮೊ: ೯೮೪೫೦೬೨೫೪೯

ಪರಿವಿಡಿ

ಅನುಬಂಧಗಳು

ಪ್ರಕಾಶಕರ ಬಿನ್ನಹ

ಕನ್ನಡದಲ್ಲಿ ಭಗವದ್ಗೀತೆಯ ಪ್ರಕಟನೆಗಳು ವೈವಿಧ್ಯಮಯವಾಗಿವೆ. ಮೂಲ ಸಂಸ್ಕೃತ ಗೀತೆಯ ಕನ್ನಡಾನುವಾದಗಳು ಗದ್ಯರೂಪದಲ್ಲಿ ಪದ್ಯರೂಪದಲ್ಲಿ ವಿಮರ್ಶೆ, ವ್ಯಾಖ್ಯಾನ, ಭಾಷಾನುವಾದ, ಗದ್ಯಾನುವಾದ ಟೀಕೆ ಟಿಪ್ಪಣಿ ಪರಿಚಯಾತ್ಮಕರೂಪ, ಇತರ ಭಾಷೆಗಳಲ್ಲಿ ಪ್ರಕಟವಾದ ಗ್ರಂಥಗಳ ಅನುವಾದ ಇತ್ಯಾದಿ ಗದ್ಯರೂಪದಲ್ಲಿ ನೂರಾರು ಗ್ರಂಥಗಳು ಪ್ರಕಟವಾಗಿವೆ. ಈಗಲೂ ಪ್ರಕಟವಾಗುತ್ತಿವೆ. ಅಂತೆಯೇ ಗೀತೆಯ ಪದ್ಯಾನುವಾದಗಳು ಕನ್ನಡದಲ್ಲಿ ೬೦ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾಗಿವೆ. (ಅನುಬಂಧ ೩ರಲ್ಲಿ ವಿವರಗಳಿಗೆ ನೋಡಿ) ಈ ಪದ್ಯಾನುವಾದಗಳ ಸಾಲಿನಲ್ಲಿ ಈಗ ನಾವು ಪ್ರಕಟಿಸುತ್ತಿರುವ ಪದ್ಯಾನುವಾದ ಗ್ರಂಥಕ್ಕೆ ವಿಶೇಷ ಸ್ಥಾನವಿದೆ. ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಎಂಬ ಭಾಮಿನಿ ಷಟ್ಪದಿರೂಪದ ಪದ್ಯಾನುಗ್ರಂಥವು ಮೊದಲಬಾರಿಗೆ ೧೮೬೫ರ ಸುಮಾರಿಗೆ ಕುಮಾರವ್ಯಾಸಭಾರತದ ಪ್ರಥಮ ಮುದ್ರಣ(ಸಮಗ್ರ) ಪ್ರಕಟವಾದಾಗ ಅದರಲ್ಲಿ ಸೇರಿಕೊಂಡು ಪ್ರಕಟವಾಯಿತು. ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಪ್ರಯತ್ನ ಪ್ರೋತ್ಸಾಹಗಳಿಂದ ಕುಮಾರವ್ಯಾಸಭಾರತವನ್ನು (೨ ರೂ) ಸರ್ಕಾರ ಪ್ರಕಟಿಸಿದಾಗ ಅದರಲ್ಲಿ ರಾಮಪ್ಪಯ್ಯನ ಭಗವದ್ಗೀತೆಯನ್ನು ಪ್ರಕ್ಷಿಪ್ತ ಭಾಗವೆಂದು ಕೈಬಿಡಲಾಯಿತು. ಹೀಗಾಗಿ ಅನಂತರದಲ್ಲಿ ಕುಮಾರವ್ಯಾಸಭಾರತ ಪ್ರಕಟಿಸಿದ ಯಾವ ಪ್ರಕಾಶಕರೂ ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆಯನ್ನು ಅದರಲ್ಲಿ ಸೇರಿಸಲಿಲ್ಲ. ಇದರಿಂದ ಗೀತಾರ್ಥ ಪ್ರಕಾಶಿಕೆ ಸಂಶೋಧಕರ ವಿನಾ ಉಳಿದ ಜನರ ಮನಸ್ಸಿಂದ ಅದು ಮರೆಯಾಯಿತು.

೧೯ನೆಯ ಶತಮಾನದಲ್ಲಿ ಪ್ರಕಟವಾದ ನಾಲ್ಕೈದು ಭಗವದ್ಗೀತೆಗಳಲ್ಲಿ ಮುಖ್ಯವಾದ ೪೦೭ ಭಾಮಿನಿ ಷಟ್ಪದಿಗಳ ಈ ಕಾವ್ಯವನ್ನು ಜನ ಮರೆಯಬಾರದು. ಏಕಹಸ್ತಪ್ರತಿಯಿಂದ ಪ್ರಕಟವಾದ ಗೀತಾರ್ಥ ಪ್ರಕಾಶಿಕೆ ಅಶುದ್ಧರೂಪದಲ್ಲಿ ಗದ್ಯದಂತೆ ಸಾಲುಸಾಲಾಗಿ ಪ್ರಕಟವಾಗಿತ್ತು. ಅಚ್ಚಿನ ದೋಷಗಳು ಅಪಾರವಾಗಿತ್ತು. ಆದರೆ ಗಮಕಿಗಳಿಗೆ ವಾಚನಕ್ಕೆ ದೊರೆಯಬೇಕೆಂಬ ಆಶಯದಿಂದ ವಿದ್ವಾಂಸರೂ ವಾಗ್ಮಿಗಳೂ ಆದ, ನಮ್ಮ ಪೂಜ್ಯ ತಂದೆ ಎಸ್. ವಿದ್ಯಾಶಂಕರ್ ಅವರ ಸಹಪಾಠಿಗಳಾಗಿದ್ದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಪರಿಷ್ಕರಿಸಿ ಸಿದ್ಧಪಡಿಸಿಕೊಟ್ಟಿದ್ದಾರೆ. ಈ ಕೃತಿಯನ್ನು ಸಿದ್ಧಪಡಿಸಿಕೊಡಲು ಸಂಪಾದಕರನ್ನು ಒಪ್ಪಿಸಿ ಪ್ರಕಟನೆಗೆ ನೆರವಾದ ಡಾ. ಬಿ. ನಂಜುಂಡಸ್ವಾಮಿಯವರಿಗೆ ನಾವು ಆಭಾರಿಗಳಾಗಿದ್ದೇವೆ. ಕನ್ನಡ ಗಮಕಿಗಳಿಗೆ ಅಲಭ್ಯವಾದ ಈ ಗೀತೆಯ ಪದ್ಯಾನುವಾದ ಗ್ರಂಥವನ್ನು ಮಹಾಜನರು ಕೊಂಡೋದಿ ಪ್ರೋತ್ಸಾಹಿಸುವಿರಿ ಎಂದು ನಂಬಿರುತ್ತೇನೆ. ಹಸ್ತಪ್ರತಿಯನ್ನು ಚೊಕ್ಕವಾಗಿ ಡಿಟಿಪಿ ಮಾಡಿಕೊಟ್ಟ ಕನ್ನಡ ಗಣಕ ಪರಿಷತ್ತಿನ ಜಿ. ಎನ್. ನರಸಿಂಹಮೂರ್ತಿಯವರಿಗೆ ಕೃತಜ್ಞರಾಗಿದ್ದೇವೆ.

ಎ. ಮಹೇಶ್
ಪ್ರಕಾಶಕರು

ಸಂಪಾದಕನ ಬಿನ್ನಹ

ಗೀತಾರ್ಥ ಪ್ರಕಾಶಿಕೆ : ಹಿನ್ನೆಲೆ

ಕುಮಾರವ್ಯಾಸನ ಭೀಷ್ಮಪರ್ವದ ೩ನೇ ಸಂಧಿಯ ಕೊನೆಯಲ್ಲಿ ಸೇರಿರುವ ಬೆಂಗಳೂರು ಲಾಲ್‌ಬಾಗ್ ಬಳಿಯಿರುವ ಉಪ್ಪಾರಳ್ಳಿ ರಾಮಪ್ಪಯ್ಯ ರಚಿಸಿದ ೪೦೭ ಭಾಮಿನೀ ಷಟ್ಪದಿಗಳ ೧೮ ಅಧ್ಯಾಯಗಳ ಗೀತಾರ್ಥ ಪ್ರಕಾಶಿಕೆಯೆಂಬ ಪ್ರಕ್ಷಿಪ್ತ ಗೀತಾನುವಾದ ಗ್ರಂಥವು ೧೮೫೬ರಲ್ಲಿ ಬಹುಶಃ ಮೊದಲಮುದ್ರಣಪ್ರತಿಯಾದ ಕುಮಾರವ್ಯಾಸ ದಶಪರ್ವದ ಅಚ್ಚಿನ ಗ್ರಂಥದಲ್ಲಿ ಸೇರಿತು.

ಆಗ ಮದ್ರಾಸ್‌ನಲ್ಲಿದ್ದ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳನ್ನು ಕುಮಾರವ್ಯಾಸ ಭಾರತವನ್ನು ಅಚ್ಚಿಗೆ ಸಿದ್ಧಪಡಿಸಿಕೊಡಿ ಎಂದು ಪ್ರಕಾಶಕರೊಬ್ಬರು ಕೇಳಿಕೊಂಡಾಗ ಅವರು ತಮ್ಮ ಬಳಿಯಿದ್ದ ಹಸ್ತಪ್ರತಿಯಲ್ಲಿದ್ದ ಕುಮಾರವ್ಯಾಸ ಕಾವ್ಯವನ್ನೂ ಹಾಗೂ ಅದರ ಭೀಷ್ಮಪರ್ವದಲ್ಲಿ ಸೇರ್ಪಡೆ ಆಗಿದ್ದ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಗ್ರಂಥವನ್ನೂ ಅನಾಮತ್ತಾಗಿ ಪ್ರತಿಮಾಡಿಕೊಟ್ಟರು. ಹಾಗಾಗಿ ಅಲ್ಲಿಂದ ೧೯೨೮ರ ವರೆಗೆ ಮುದ್ರಿತವಾದ ಅಚ್ಚಿನ ಗ್ರಂಥಗಳಲ್ಲೆಲ್ಲಾ ಹಾಗೆಯೇ ಉಳಿದುಕೊಂಡು ಬಂದಿತು.

ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಬೆಳಕಿಗೆ ಬಂದದ್ದು

ಈ ಸಂದರ್ಭದಲ್ಲಿ ಕುಮಾರವ್ಯಾಸನ ದಶಪರ್ವದ ಮುದ್ರಿತ ಪ್ರತಿಗಳ ಅನ್ವೇಷಣೆಯಲ್ಲಿ ನಾನು ತೊಡಗಿದಾಗ ಗೋಖಲೆ ಸಂಸ್ಥೆಯ ವೆಂಕಟರಮಣನ್ ಅವರು ಸಂಸ್ಥೆಯ ಪುಸ್ತಕ ಭಂಡಾರದಲ್ಲಿದ್ದ ಕುಮಾರವ್ಯಾಸನ ಕಾವ್ಯದ ಮುದ್ರಿತ ಪ್ರತಿಗಳನ್ನು ನನ್ನ ಗಮನಕ್ಕೆ ತಂದರು. ಆ ಗ್ರಂಥಗಳ ಪೈಕಿ ೧೮೬೫ರಲ್ಲಿ ಅಚ್ಚಾದ ಮದರಾಸಿನ ಸರಸ್ವತಿ ವಿಲಾಸ ಪ್ರೆಸ್‌ನಲ್ಲಿ ಅಚ್ಚಾದ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಿದ್ಧಪಡಿಸಿದ ಕುಮಾರವ್ಯಾಸ ಭಾರತದ ಪ್ರತಿಯನ್ನು ಕಂಡಾಗ ಅದರಲ್ಲಿ "ಬೆಂಗಳೂರಿನ ಲಾಲ್‌ಬಾಗ್ ಬಳಿಯಿರುವ ಉಪ್ಪಾರಳ್ಳಿಯ ರಾಮಪ್ಪಯ್ಯನು ರಚಿಸಿದ ಭಗವದ್ಗೀತೆ" ಎಂಬ ಶೀರ್ಷಿಕೆಯೊಂದಿಗೆ ಸೇರ್ಪಡೆಯಾದ ೪೦೭ ಭಾಮಿನಿ ಷಟ್ಪದಿಗಳ ಕಾವ್ಯವು ಸೇರಿಕೊಂಡಿತ್ತು.

ಆನಂತರ ಅದೇ ಪ್ರತಿಯನ್ನು ಬೆಂಗಳೂರು, ಬಳ್ಳಾರಿ, ಮೈಸೂರುಗಳಲ್ಲಿಯ ಪ್ರಕಾಶಕರು ನನ್ನ ಗಮನಕ್ಕೆ ಬಂದಂತೆ ೧೮೭೭, ೧೯೧೬, ೧೯೨೮ ಇತ್ಯಾದಿ ವರ್ಷಗಳಲ್ಲಿ ಪುನರ್ಮುದ್ರಣ ಮಾಡಿದರು. ಸಾಕಷ್ಟು ಅಕ್ಷರಸ್ಖಾಲಿತ್ಯಗಳೊಡನೆ ಗದ್ಯದಂತೆ ಉದ್ದನೆ ಸಾಲುಗಳಲ್ಲಿ ನಡುವೆ ಪಾದಗಳಿಗೆ ಗೀಟುಹಾಕಿದ ಕುಮಾರವ್ಯಾಸ ಭಾರತವು ಅಚ್ಚಾಯಿತು.

ಮೊದಲು ಮದರಾಸಿನಲ್ಲಿ ಅಚ್ಚಾದ ಪ್ರತಿಯಲ್ಲಿ ಇದ್ದ "ಬೆಂಗಳೂರಿನ ಲಾಲ್‌ಬಾಗ್ ಬಳಿಯಿರುವ ಉಪ್ಪಾರಳ್ಳಿ ರಾಮಪ್ಪಯ್ಯನು ರಚಿಸಿದ ಗೀತಾರ್ಥ ಪ್ರಕಾಶಿಕೆ" ಎಂಬ ಸಾಲು ಮಾಯವಾಗಿ ಅನಂತರದ ಎಲ್ಲ ಪ್ರತಿಗಳಲ್ಲಿ ಭೀಷ್ಮಪರ್ವದ ೩ನೇ ಸಂಧಿಯ ಕೊನೆಯಲ್ಲಿ ಗೀತಾರ್ಥ ಪ್ರಕಾಶಿಕೆ ಎಂಬ ಹೆಸರಿನಲ್ಲಷ್ಟೆ ಈ ಗೀತೆ ಪ್ರಕಟವಾಗಿದೆ. ಪ್ರಕಾಶಕರು ಲೇಖಕರ ಹೆಸರನ್ನು ಏಕೆ ಬಿಟ್ಟರೋ ತಿಳಿಯದು ಮತ್ತು ಆ ನಂತರದ ಎಲ್ಲ ಪ್ರಕಾಶಕರು ಯಥಾವತ್ತಾಗಿ ಒಂದೇ ರೀತಿಯಾಗಿ ಈ ಲೇಖಕನ ಹೆಸರನ್ನು ಬಿಟ್ಟು ಕುಮಾರವ್ಯಾಸನ ಭಾರತವನ್ನು ಸುಮಾರು ೧೯೨೮ರವರೆಗೆ ಪುನರ್ಮುದ್ರಿಸಿದರು. ಅನಂತರ ಮುದ್ರಿತವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಪರಿಷ್ಕರಣಕ್ಕೆ ಬಳಸಿದ ಪ್ರತಿಗಳು

ಈ ಪುನರ್ಮುದ್ರಣಗಳ ಪೈಕಿ ೧೮೮೦ರಲ್ಲಿ ಬ್ರಹ್ಮಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಕುಮಾರವ್ಯಾಸ ಭಾರತ ದಶಪರ್ವವನ್ನು ಆದಿಪಂಚಕ ಮತ್ತು ಯುದ್ಧಪಂಚಕಗಳೆಂದು ೨ ಭಾಗಗಳಲ್ಲಿ ಮೂಲದ ಜತೆಗೆ ತಾತ್ಪರ್ಯ ಟೀಕಾರೂಪವಾಗಿ ಸಂಕ್ಷಿಪ್ತ ಅನುವಾದವನ್ನು ಪ್ರತಿಪರ್ವದಲ್ಲೂ ದಶಪರ್ವಗಳಿಗೂ ಬರೆದಿದ್ದಾರೆ. ಇದರಲ್ಲಿ ಗೀತಾರ್ಥ ಪ್ರಕಾಶಿಕೆಯೂ ಸೇರಿದ್ದು ಅದಕ್ಕೂ ಪ್ರತಿಸಂಧಿಗೂ ತಾತ್ಪರ್ಯ ಬರೆದಿದ್ದಾರೆನಿದನ್ನು ವೆ. ಬಿ. ಸುಬ್ಬಯ್ಯ ಅವರು ಪ್ರಕಟಿಸಿದ್ದಾರೆ. ಇದೊಂದು ಸಾಹಸವೇ ಸರಿ. ಈ ತಾತ್ಪರ್ಯಾನುವಾದವು ಉಪಯುಕ್ತವಾದುದರಿಂದ ಈ ಗ್ರಂಥದಲ್ಲಿ ಸೇರ್ಪಡೆ ಮಾಡಲಾಗಿದೆ.

ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು (ಜನನ ೧೮೨೦ ಮರಣ ಸು.೧೯೦೦)

ಬೆಂಗಳೂರು ನಿವಾಸಿಗಳು. ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದರು. ಹಲವಾರು ಸ್ವತಂತ್ರ ಗ್ರಂಥಗಳನ್ನು ರಚಿಸಿರವುದಲ್ಲದೆ ಅನೇಕ ಸಂಸ್ಕೃತ–ಕನ್ನಡ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು (ಜನನ ೧೮೬೪ ಮರಣ ಸು.೧೯೪೨)

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ಕನ್ನಡ ವಿದ್ವಾಂಸರಾಗಿದ್ದರು (೧೮೬೪–೧೯೪೨) ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಸೇವೆ ಸಲ್ಲಿಸಿದ ಇವರು ೧೯೨೧ರಲ್ಲಿ ೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

೧೯ನೇ ಶತಮಾನದಲ್ಲಿದ್ದ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ಕುಮಾರವ್ಯಾಸ ಭಾರತದ ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಇದ್ದ ಪ್ರತಿ ಹೇಗೆ ಲಭ್ಯವಾಯಿತೋ ತಿಳಿಯದು. ಆದರೆ ಆ ಪ್ರಯತ್ನವನ್ನು ಮೊದಲ ಬಾರಿಗೆ ಅಚ್ಚಿಗೆ ಸಿದ್ಧಪಡಿಸಿಕೊಟ್ಟಿದ್ದರಿಂದ ಗೀತಾರ್ಥ ಪ್ರಕಾಶಿಕೆ ಬೆಳಕಿಗೆ ಬಂದಂತಾಯಿತು.

ಇದನ್ನೇ ಉಳಿದವರು ಯಥಾವತ್ತಾಗಿ ಅಚ್ಚುಮಾಡಿದ್ದಾರೆ. ಆ ಪೈಕಿ ೧೯೧೬ರಲ್ಲಿ ಮತ್ತು ೧೯೨೮ರಲ್ಲಿ ಪ್ರಕಟವಾದ ಮುದ್ರಣಗಳನ್ನು ಗಮನಿಸಿದ್ದೇನೆ. ಈ ಪೈಕಿ ಭಾರತೀ ಸಂಪಂಗಿರಾಮಯ್ಯನವರು ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಪಾದಿಸಿದ ಕುಮಾರವ್ಯಾಸ ಭಾರತದ ಪ್ರತಿಯನ್ನು ಪರಿಷ್ಕರಿಸಿ ೧೯೨೮ರಲ್ಲಿ ಪ್ರಕಟಿಸಿದರು. ಇದು ಉಳಿದವರು ಪ್ರಕಟಿಸಿದ ಮುದ್ರಣಗಳಿಗಿಂತ ಹೆಚ್ಚು ಶುದ್ಧವಾಗಿದೆ. ಅಕ್ಷರಸ್ಖಾಲಿತ್ಯಗಳು ಅತ್ಯಲ್ಪವಾಗಿವೆ. ಈ ಪ್ರತಿಯನ್ನೇ ಪ್ರಸ್ತುತ ಪ್ರಕಟಣೆಗೆ ಆಧಾರವಾಗಿಟ್ಟುಕೊಳ್ಳಲಾಗಿದೆ.

ರಾಮಪ್ಪಯ್ಯನ ಮೂಲ ಹಸ್ತಪ್ರತಿ ಅಲಭ್ಯ

ಗೀತಾರ್ಥ ಪ್ರಕಾಶಿಕೆಯೊಂದಿಗೆ ಕುಮಾರವ್ಯಾಸ ಭಾರತದ ಭೀಷ್ಮಪರ್ವದ ೩ನೇ ಸಂಧಿ (೯೫ ಗೀತೆಯ ಪದ್ಯಗಳು)ಯನ್ನು ಮೂಲ ಮತ್ತು ಗದ್ಯಾನುವಾದವನ್ನು ಕೊಟ್ಟಿದೆ. ಹೀಗಾಗಿ ಕುಮಾರವ್ಯಾಸನ ಭಗವದ್ಗೀತೆ ಮತ್ತು ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಮೊದಲ ಬಾರಿಗೆ ಪ್ರತ್ಯೇಕವಾಗಿ ಅನುವಾದದೊಡನೆ ಪಾಠಾಂತರ ಪರಿಷ್ಕರಣಗಳೊಂದಿಗೆ ಪ್ರಕಟವಾಗುತ್ತಿದೆ.

ಬಿ ಎಂ ಶ್ರೀಕಂಠಯ್ಯನವರು ೧೯೧೧ರಲ್ಲಿ "ದೇಶದಲ್ಲಿ ಹುಳುತಿಂದು ಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು ಆದ್ಯ ಕರ್ತವ್ಯ. ಈ ಕೆಲಸವನ್ನು ಮೈಸೂರು ಸರ್ಕಾರದವರೂ ಕಾವ್ಯಮಂಜರಿ ಮತ್ತು ಕಾವ್ಯಕಲಾನಿಧಿಗಳ ಸಂಪಾದಕರೂ ಆಗಲೇ ಮಾಡುತ್ತಲೇ ಇದ್ದಾರೆ" ಎಂದು ಹೇಳಿದ್ದರು. ಈ ಕೆಲಸ ಈ ಕಾಲಕ್ಕೂ ಮುಂದುವರೆಯಬೇಕಾಗಿದೆ. ಬಿ ಎಂ ಶ್ರೀ ಅವರು ತಾಳೆಗರಿ, ಕಾಗದದ ಪ್ರತಿಗಳ ಬಗ್ಗೆ ಹೇಳಿದ ಮಾತನ್ನು ಈ ಕಾಲದಲ್ಲಿ ಕನ್ನಡದಲ್ಲಿ ಮುದ್ರಣ ಕಾರ್ಯ ಪ್ರಾರಂಭವಾಗಿ ಸುಮಾರು ಎರಡು ಶತಮಾನಗಳ ಹತ್ತಿರಕ್ಕೆ ಬರುತ್ತಿದೆ. ೧೯ನೇ ಶತಮಾನದ ಅಚ್ಚಿನ ಗ್ರಂಥಗಳು ಪ್ರಾಚೀನತೆಯಲ್ಲಿ ತಾಳೆಗರಿ ಗ್ರಂಥಗಳ ಸಾಲಿಗೆ ಸೇರುತ್ತವೆ. ಪ್ರಾಚೀನ ತಾಳೆಗರಿಗಳ ಸ್ಥಾನವನ್ನು ಇಂದು ಹಳೆಯ ಶತಮಾನದ ಹಿಂದಿನ ಅಚ್ಚಾದ ಗ್ರಂಥಗಳೂ ಅಲಂಕರಿಸಿವೆ. ಶತಮಾನಗಳಷ್ಟು ಹಳೆಯ ಗ್ರಂಥಗಳನ್ನು ಪುನರ್ಮುದ್ರಿಸುವ ಕಾಲ ಇದಾಗಿದೆ. ಹೀಗಾಗಿ ಸುಮಾರು ೨೦೦ ವರ್ಷಗಳ ಹಿಂದೆ ರಚಿತವಾದ ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆಯನ್ನು ಪರಿಷ್ಕರಿಸಿ ಪ್ರಕಟಿಸಬೇಕೆಂದು ನಿರ್ಧರಿಸಿದೆನು. ಉಪ್ಪಾರಳ್ಳಿಯಲ್ಲಿ ಇಂದು ರಾಮಪ್ಪಯ್ಯನ ಬಗ್ಗೆ ಏನೂ ವಿಷಯ ತಿಳಿಯುತ್ತಿಲ್ಲ. ತಿಳಿಸುವವರೂ ಇಲ್ಲ. ಒಂದು ಕಾಲದಲ್ಲಿ ಅದೊಂದು ವಿದ್ವಾಂಸರ ನೆಲೆ ಆಗಿತ್ತೆಂದು ಊಹಿಸಬಹುದು. ಇಂದು ಬೆಂಗಳೂರು ಮಾವಳ್ಳಿಯಲ್ಲಿ ಅಂತರ್ಗತವಾದ ಉಪ್ಪಾರಳ್ಳಿಯಲ್ಲಿ ಪ್ರಾಚೀನ ಲೇಖಕರ ಮಾಹಿತಿ ಏನೂ ಸಿಗುತ್ತಿಲ್ಲ.

ಪರಿಷ್ಕರಣ

ಗೀತಾರ್ಥ ಪ್ರಕಾಶಿಕೆಯನ್ನು ಒಳಗೊಂಡ ಕುಮಾರವ್ಯಾಸ ಭಾರತದ ಮುದ್ರಿತ ಪ್ರತಿಗಳು ಎಷ್ಟು ಬಾರಿ ಯಾವ ಯಾವ ಪ್ರಕಾಶಕರು ಪ್ರಕಟಿಸಿದ್ದಾರೋ ತಿಳಿಯದು. ನನಗೆ ಪರಿಶೀಲನೆಗೆ ದೊರೆತ ಮುದ್ರಿತ ಪ್ರತಿಗಳು ನಾಲ್ಕು.

೧. ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಿದ್ಧಪಡಿಸಿದ ೧೮೮೭ರಲ್ಲಿ ಮುದ್ರಿತವಾಗಿ ಮಲೆನಾಡು ಬಿ ಸುಬ್ಬಯ್ಯ ಅಂಡ್ ಸನ್ಸ್ ಅವರಿಂದ ಬೆಂಗಳೂರಿನಲ್ಲಿ ಪ್ರಕಟವಾದ ಪ್ರತಿ.

೨. ಮೈಸೂರು ಶ್ರೀರಂಗವಿಲಾಸ ಬುಕ್ ಡಿಪೊ ಬಿ ಆರ್ ಕೃಷ್ಣಸ್ವಾಮಿ ಶೆಟ್ಟರಿಗಾಗಿ ಶ್ರೀ ರಾಜರಾಜೇಶ್ವರಿ ಮುದ್ರಾಕ್ಷರ ಶಾಲೆಯಲ್ಲಿ ೧೯೧೭ರಲ್ಲಿ ಮುದ್ರಿತವಾದ ಪ್ರತಿ.

೩. ೧೯೨೮ರಲ್ಲಿ ಟಿ ಎನ್ ಕೃಷ್ಣಯ್ಯಶೆಟ್ಟಿ ಅವರಿಂದ ಸಂಪಾದಿತವಾದ ಕುಮಾರವ್ಯಾಸ ರಚಿತ "ಕನ್ನಡ ಭಾರತವು" (ದಶಪರ್ವ) ಮುದ್ರಿತ ಪ್ರತಿ.

೪. ಭಾರತೀ ಸಂಪಂಗಿರಾಮಯ್ಯನವರು ಸಂಪಾದಿಸಿ ೧೯೨೮ರಲ್ಲಿ ಪ್ರಕಟಿಸಿದ ಕುಮಾರವ್ಯಾಸ ದಶಪರ್ವದ ಪ್ರತಿ.

ಈ ನಾಲ್ಕು ಪ್ರತಿಗಳಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ಸಂಪಾದಿತವಾದ ಪ್ರತಿಯಲ್ಲಿ ಪ್ರತಿಸಂಧಿಯ ತಾತ್ಪರ್ಯ (ಸಂಕ್ಷಿಪ್ತ ಗದ್ಯಾನುವಾದ) ಮೂಲದ ಜೊತೆಗೆ ಪ್ರಕಟವಾಗಿದೆ. ಉಳಿದ ಪ್ರತಿಗಳಲ್ಲಿ ಗೀತಾರ್ಥ ಪ್ರಕಾಶಿಕೆ ಮೂಲ ಮಾತ್ರ ಪ್ರಕಟವಾಗಿದೆ.

ಈ ಎಲ್ಲ ಪ್ರತಿಗಳಲ್ಲೂ ಮೂಲಕಾವ್ಯ ಸಾಲಾಗಿ ಗದ್ಯದಂತೆ ಪ್ರಕಟವಾಗಿದೆ. ಅದನ್ನು ಈ ಆವೃತ್ತಿಯಲ್ಲಿ ಭಾಮಿನೀಷಟ್ಪದಿ ರೀತಿಯಲ್ಲಿ ೬ ಸಾಲುಗಳ ಪದ್ಯಗಳನ್ನಾಗಿ ಮಾಡಿ ಪ್ರಕಟಿಸಲಾಗಿದೆ. ಈ ನಾಲ್ಕು ಪ್ರತಿಗಳಲ್ಲಿ ಸಾಕಷ್ಟು ಅಚ್ಚಿನ ದೋಷಗಳಿವೆ. ಅವುಗಳನ್ನು ತಿದ್ದಲಾಗಿದೆ. ೧೯೧೭ರ ಮುದ್ರಣದಲ್ಲಿ ವಕಾರದ ಕಾಗುಣಿತವು ಬರಬೇಕಾದ ಕಡೆಗಳಲ್ಲೆಲ್ಲಾ ಇಡೀ ಗ್ರಂಥದ ಉದ್ದಕ್ಕೂ ಉ ಕಾರ ಅಚ್ಚಾಗಿದೆ. ಅದನ್ನು ತಿದ್ದಿದೆ. ಉಳಿದ ಅಚ್ಚಿನ ದೋಷಗಳನ್ನೆಲ್ಲಾ ತಿದ್ದಲಾಗಿದೆ. ಪದ್ಯಗಳ ಅಕಾರಾದಿಪಟ್ಟಿಯನ್ನು ಅನೂಚಾನವಾಗಿ ಕೊಟ್ಟಿದೆ. ೪ ಪ್ರತಿಗಳಲ್ಲಿ ಅಲ್ಲಲ್ಲಿ ಕೆಲವು ಪಾಠ ಪ್ರಭೇದಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾದುವನ್ನು ಅನುಬಂಧದಲ್ಲಿ ಕೊಟ್ಟಿದೆ.

ವಾಸ್ತವಿಕವಾಗಿ ಲಾಲ್‌ಬಾಗ್ ಬಳಿ ಉಪ್ಪಾರಳ್ಳಿ ಎಲ್ಲಿತ್ತು ಎಂದರೆ ಎಂಬುದನ್ನು ಪರಿಶೀಲಿಸಿದಾಗ; ಸಾಹಿತ್ಯಪ್ರಿಯರೂ, ನಾಗರಿಕ ವೇದಿಕೆ ಸಂಘಟಕರ ಆದ ಮಾವಳ್ಳಿ ಜಿ ರಾಮು ಅವರು ಹಲವಾರು ಸಂಶೋಧನೆ ಮಾಡಿ ಮಿತ್ರರ ಸಹಾಯದಿಂದ "ಮಾವಳ್ಳಿಯ

ಐತಿಹ್ಯಗಳು" ಎಂಬ ಸಂಶೋಧನಾ ಗ್ರಂಥವನ್ನು ೨೦೧೮ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಪೂರ್ಣವಾಗಿ ಮಾವಳ್ಳಿ ನಕ್ಷೆಯನ್ನು ಎಂ ಎನ್ ಸತ್ಯಪ್ರಸಾದ್ ಎಂಬುವರು ಸಿದ್ಧಪಡಿಸಿ ಪ್ರಕಟಿಸಿದ್ದಾರೆ.

ಅದರಲ್ಲಿ (ಪು.೧೫) ಲಾಲ್‌ಬಾಗ್ ಉಪ್ಪಾರಳ್ಳಿಯಲ್ಲಿ ಹೊಸ ಹೆಸರಿನ ರಸ್ತೆ ಹೆಸರುಗಳು ಬಳಕೆಗೆ ಬಂದು ಉಪ್ಪಾರಳ್ಳಿ ಯಾವುದು ಎಂಬುದನ್ನು ಗುರುತಿಸುವುದೇ ಕಷ್ಟವಾಗಿದೆ. ಈ ನಕ್ಷೆ ಪ್ರಕಾರ

ಉಪ್ಪಾರಳ್ಳಿ ಪ್ರದೇಶದಲ್ಲಿರುವ ರಸ್ತೆಗಳ ಈಗಿನ ಹೆಸರುಗಳು ಹೀಗಿವೆ:

೧. ಪಂಡಿತ ಪಟ್ಟಾಭಿರಾಮಯ್ಯ ರಸ್ತೆ (ಆರ್.ವಿ. ಕಾಲೇಜ್ ೧ನೇ ಕ್ರಾಸ್)

೨. ಗ್ರಾಮದೇವತಾ ಬೀದಿ

೩. ವೆಂಕಟಸ್ವಾಮಪ್ಪ ರಸ್ತೆ ಮತ್ತು ಕ್ರಾಸ್

೪. ಶಾನುಭೋಗ್ ನಂಜುಂಡಯ್ಯ ರಸ್ತೆ (ಎಸ್.ಎಸ್.ಲೇನ್)

ಈ ಭಾಗದ ಪ್ರದೇಶ ಉಪ್ಪಾರಳ್ಳಿ ಆಗಿತ್ತು ಎಂದು ಸ್ಥೂಲವಾಗಿ ಹೇಳಬಹುದು. ಗೀತಾರ್ಥ ಪ್ರಕಾಶಿಕೆ ರಚಿಸಿದ ರಾಮಪ್ಪಯ್ಯ ಈ ಸ್ಥಳದವನು ಎಂದು ಹೇಳಲು ಅಡ್ಡಿಯಿಲ್ಲ. ಧಾರವಾಡದಲ್ಲಿ ಶಾಂತಕವಿ (ಸಕ್ಕರೆ ಬಾಳಾಚಾರ್ಯರ) ೫ನೇ ತಲೆಮಾರಿನವರು ಇದ್ದಾರಂತೆ. ಹಾಗೆಯೇ ರಾಮಪ್ಪಯ್ಯನ ಸಂತತಿ ಅವರು ಇದ್ದಾರೆಯೇ ಎಂದು ಸಂಶೋಧಿಸಬೇಕಾಗಿದೆ.

೧೯೨೮ರ ನಂತರ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಕುಮಾರವ್ಯಾಸ ಭಾರತ ಅಗ್ಗದ ಬೆಲೆಯಲ್ಲಿ ಅಚ್ಚಾಗಿ ಮಾರಾಟವಾಯಿತು. ಆಗ ಭಾರತದ ಇತರ ಮುದ್ರಣಗಳೆಲ್ಲ ನಿಂತು ಹೋದವು. ಮಾಸ್ತಿ, ಕುವೆಂಪು ಸಂಪಾದಿತ ಪ್ರತಿಯೇ ಎಲ್ಲ ಕಡೆ ಪ್ರಚಾರವಾಗಿ ಪುನರ್ಮುದ್ರಣಗಳಾಗಿವೆ. ಈ ಮುದ್ರಣಗಳಲ್ಲಿ ಕುಮಾರವ್ಯಾಸ ಭಾರತದಲ್ಲಿ ಸೇರಿಕೊಂಡಿದ್ದ ರಾಮಪ್ಪಯ್ಯನ ಗೀತಾರ್ಥಪ್ರಕಾಶಿಕೆಯನ್ನು ಪ್ರಕ್ಷಿಪ್ತವಾದ ಭಾಗವೆಂದು ಬಿಡಲಾಯಿತು. ಈಗಿನ ತಲೆಮಾರಿನ ಓದುಗರಿಗೆ ಗೀತಾರ್ಥ ಪ್ರಕಾಶಿಕೆ ಕುಮಾರವ್ಯಾಸ ಭಾರತದಲ್ಲಿ ಸೇರಿಕೊಂಡಿತ್ತು ಎಂಬುದೇ ಗೊತ್ತಿಲ್ಲ ಎಂದರೆ ತಪ್ಪಾಗದು. ಕನ್ನಡದಲ್ಲಿ ೨೦೦ ವರ್ಷಗಳ ಹಿಂದೆ ರಚಿತವಾದ ೧೮ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದಿರಬಹುದಾದ ಕವಿಯೊಬ್ಬನ ಪದ್ಯಗೀತಾನುವಾದ ಪರಿಷ್ಕೃತ ರೂಪದಲ್ಲಿ ಇದೀಗ ಪ್ರಕಟವಾಗುತ್ತಿದೆ.

ಕೃತಜ್ಞತೆಗಳು

ಭಗವದ್ಗೀತೆಯ ಕನ್ನಡ ಮುದ್ರಿತ ಪ್ರತಿಗಳ ಅನ್ವೇಷಣೆ ಮಾಡುತ್ತಿದ್ದ ಕಾಲದಲ್ಲಿ ಗೀತಾರ್ಥ ಪ್ರಕಾಶಿಕೆ ಗಮನಕ್ಕೆ ಬಂದಿತು. ಕುಮಾರವ್ಯಾಸ ಭಾರತದ ಭೀಷ್ಮಪರ್ವವನ್ನು ಮೂಲ ಮತ್ತು ಅನುವಾದವನ್ನು ಟಿಪ್ಪಣಿಗಳೊಡನೆ ಸಿದ್ಧಪಡಿಸುವ ಕಾಲಕ್ಕೆ ಕುಮಾರವ್ಯಾಸ ಭಾರತದಲ್ಲಿ ಬಂದಿದ್ದ ಗೀತಾರ್ಥ ಪ್ರಕಾಶಿಕೆಯನ್ನು ಪ್ರತ್ಯೇಕವಾಗಿ ಪ್ರಕಟಿಸುವ ಹಂಬಲ ಉಂಟಾಯಿತು.

ಗೀತಾರ್ಥ ಪ್ರಕಾಶಿಕೆ ಸೇರಿದ್ದ ಕುಮಾರವ್ಯಾಸ ಭಾರತದ ಅಚ್ಚಾದ ಪ್ರತಿಗಳನ್ನು ಹುಡುಕುತ್ತಿದ್ದಾಗ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ರಚಿಸಲ್ಪಟ್ಟ ಸಂಕ್ಷಿಪ್ತ ಗದ್ಯಾನುವಾದ ದೊಡನೆ ಪ್ರಕಟವಾದ ಕುಮಾರವ್ಯಾಸ ಭಾರತದ ದಶಪರ್ವಗಳು ಆದಿಪಂಚಕ ಮತ್ತು ಯುದ್ಧಪಂಚಕಗಳೆಂಬ ಹೆಸರಿನಲ್ಲಿ ೧೮೮೭ರಲ್ಲಿ ವೆಲನಾಡು ಬಿ. ಸುಬ್ಬಯ್ಯ ಅಂಡ್ ಸನ್ಸ್ ಅವರಿಂದ ಪ್ರಕಟವಾದ ಎರಡು ಭಾಗಗಳ ಅಚ್ಚಿನ ಪ್ರತಿಯನ್ನು ೧೯೨೮ರಲ್ಲಿ ಭಾರತೀ ಸಂಪಂಗಿರಾಮಯ್ಯನವರು ಸಂಪಾದಿಸಿದ ಕುಮಾರವ್ಯಾಸ ಭಾರತದ ಅಚ್ಚಿನ ಪ್ರತಿಯನ್ನೂ ಆತ್ಮೀಯ ಮಿತ್ರರೂ, ಪ್ರಾಚೀನ ಕನ್ನಡ ಕೃತಿಗಳ ಸಂಗ್ರಾಹಕರೂ ಆದ ಕೆ ಎಸ್ ಮಧುಸೂದನ ಅವರು ಪರಿಶೀಲನೆಗೆ ಒದಗಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ವಿಶೇಷ ವಂದನೆಗಳು.

ಗಣಕ ಪರಿಷತ್ತಿನ ಜಿ.ಎನ್. ನರಸಿಂಹಮೂರ್ತಿ ಅವರು (ಸಮಗ್ರ ಕುಮಾರವ್ಯಾಸ ಭಾರತದ ಸಂಯೋಜಕ ಸಂಪಾದಕರು) ೧೯೧೬ ಮತ್ತು ೧೯೨೮ರ ಟಿ.ಎನ್. ಕೃಷ್ಣಯ್ಯಶೆಟ್ಟರ ಪ್ರಕಟಣೆ (ಕುಮಾರವ್ಯಾಸನ ದಶಪರ್ವ ಭಾರತ)ಯನ್ನು ಒದಗಿಸಿದ್ದಾರೆ.

ಗೋಖಲೆ ಸಂಸ್ಥೆಯ ವೆಂಕಟರಮಣನ್ ಅವರು ಮದ್ರಾಸಿನಲ್ಲಿ ಅಚ್ಚಾದ (೧೮೬೫?) ಕುಮಾರವ್ಯಾಸ ದಶಪರ್ವದ ಪ್ರತಿಯನ್ನು ನೋಡಲು ದೊರಕಿಸಿಕೊಟ್ಟಿದ್ದರು. ಅದರಲ್ಲಿ ಗೀತಾರ್ಥ ಪ್ರಕಾಶಿಕೆ ಇದ್ದು (ಭೀಷ್ಮಪರ್ವದ ೩ನೇ ಸಂಧಿ ನಂತರ ೪೦೭ ಭಾಮಿನೀಷಟ್ಪದಿಗಳು) ಉಪ್ಪಾರಳ್ಳಿ ರಾಮಪ್ಪಯ್ಯ ರಚಿಸಿದ್ದು ಎಂಬ ಶೀರ್ಷಿಕೆ ಇತ್ತು. ಅನಂತರದ ಪುನರ್ ಮುದ್ರಣಗಳಲ್ಲಿ ಈ ಮಾತನ್ನು ಪ್ರಕಾಶಕರು ತೆಗೆದುಹಾಕಿದ್ದಾರೆ. ಕಾರಣ ತಿಳಿಯದು.

ಬಿ ಎಂ ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಸಂಯೋಜನಾಧಿಕಾರಿಗಳೂ ಆತ್ಮೀಯ ಮಿತ್ರರೂ ಆದ ಶ್ರೀ ಬಿ. ಎಸ್. ಗುರುಪ್ರಸಾದ್ ಅವರು ಉಪ್ಪಾರಳ್ಳಿ ರಾಮಪ್ಪಯ್ಯನವರ ಗೀತಾರ್ಥ ಪ್ರಕಾಶಿಕೆಯನ್ನು ಆರು ಸಾಲುಗಳ ಭಾಮಿನೀ ಷಟ್ಪದಿಯ ರೂಪಕ್ಕೆ ತಂದು ಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಅದರಿಂದ ಗೀತಾರ್ಥ ಪ್ರಕಾಶಿಕೆ ರಚಿಸಿದ್ದು ಯಾರು ಎಂಬುದು ಅನಂತರದ ಮುದ್ರಣದ ಪ್ರತಿಗಳಲ್ಲಿ ತಿಳಿಯುವುದಿಲ್ಲ. ಈ ದೃಷ್ಟಿಯಲ್ಲಿ ಮದ್ರಾಸಿನ ಮೊದಲ ಮುದ್ರಣದ

ಪ್ರತಿ ಐತಿಹಾಸಿಕವಾಗಿ ಮುಖ್ಯವಾದ ಗ್ರಂಥವಾಗಿದೆ. ಇದಕ್ಕಾಗಿ ವೆಂಕಟರಮಣನ್ ಅವರನ್ನು ಸ್ಮರಿಸಬೇಕಾಗಿದೆ.

ಗೀತಾರ್ಥ ಪ್ರಕಾಶಿಕೆಯನ್ನು ಪ್ರಕಟಿಸಲೇಬೇಕೆಂದು ಒತ್ತಾಯ ಮಾಡಿ ಪ್ರಕಟಣೆಗಾಗಿ ಪ್ರಕಾಶಕರನ್ನು ಹುಡುಕಿಕೊಟ್ಟವರು ವಿದ್ವಾಂಸರೂ, ಆಯುರ್ವೇದ ವೈದ್ಯರೂ, ಆತ್ಮೀಯ ಮಿತ್ರರೂ ಆದ ಡಾ.ಬಿ.ನಂಜುಂಡಸ್ವಾಮಿ ಅವರು. ಅವರಿಗೆ ನನ್ನ ವಿಶೇಷ ನೆನಕೆಗಳು.

ಗೀತಾರ್ಥ ಪ್ರಕಾಶಿಕಯ ಸಂಪಾದಿಸುವ ವಿಚಾರವನ್ನು ಪ್ರಸ್ತಾಪಿಸಿದಾಗ ನನ್ನ ಪತ್ನಿ ಎಂ.ಆರ್. ಲಕ್ಷ್ಮೀದೇವಿ, ಅಮೆರಿಕೆಯಲ್ಲಿರುವ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಮಗಳು ಡಾ.ಕ್ಷಮಾ ಅಶ್ವತ್ಥ ಪ್ರೋತ್ಸಾಹಿಸಿದ್ದಾರೆ. ಕಣ್ಮರೆಯಾದ ಗ್ರಂಥವನ್ನು ಪ್ರಕಟಿಸುವುದು ಕಳೆದು ಹೋದ ಮಕ್ಕಳನ್ನು ಹುಡುಕಿಕೊಟ್ಟಂತೆ ಎಂದಿದ್ದಾರೆ.

ಮೊದಲು ಗೀತಾರ್ಥ ಪ್ರಕಾಶಿಕೆಯನ್ನು ಗಮನಿಸಲು ಅವಕಾಶ ಮಾಡಿಕೊಟ್ಟವರು ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಅವರು. ಅವರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದಾಗ ನಿವೃತ್ತರಾಗುವ ಕೆಲವು ತಿಂಗಳ ಹಿಂದೆ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಕುಮಾರವ್ಯಾಸನ ಭಾರತದ ಪರಿಷ್ಕೃತ ರೂಪವನ್ನು ಪಾಠಾಂತರ, ಟಿಪ್ಪಣಿಗಳೊಡನೆ ಲಭ್ಯವಿರುವ ಎಲ್ಲ ತಾಳೆಗರಿ ಕಾಗದ ಪ್ರತಿಗಳನ್ನು ಪರಿಶೀಲಿಸಿ ಹೊರತರಬೇಕೆಂದು ರೂಪರೇಷೆಯೊಂದನ್ನು ಸಿದ್ಧಪಡಿಸಲು ಪೂರ್ವಭಾವಿಯಾಗಿ ಒಂದು ಸಮಾಲೋಚನಾ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ "ಕುಮಾರವ್ಯಾಸನ ಕಾವ್ಯದ ಮುದ್ರಿತ ಪ್ರತಿಗಳು" ಬಗ್ಗೆ ಪ್ರಬಂಧ ಮಂಡಿಸಲು ಅವಕಾಶ ನೀಡಿದ್ದರಿಂದ ಗೀತಾರ್ಥ ಪ್ರಕಾಶಿಕೆಯನ್ನು ಮೊದಲ ಬಾರಿಗೆ ನಾನು ಗಮನಿಸಲು ಅವಕಾಶವಾಯಿತು. ಅದಕ್ಕಾಗಿ ಕೃತಜ್ಞನಾಗಿದ್ದೇನೆ.

ನನ್ನ ಸಹಪಾಠಿ ಆತ್ಮೀಯ ಮಿತ್ರರಾಗಿದ್ದ ವಿದ್ವಾಂಸ ಎಸ್. ವಿದ್ಯಾಶಂಕರ್ ಅವರ ಪುತ್ರರಾದ ಶ್ರೀ ವಿ. ಮಹೇಶ್ ಅವರು ತಮ್ಮ ಪ್ರಿಯದರ್ಶಿನಿ ಪ್ರಕಾಶನದ ಮೂಲಕ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ವಂದನೆಗಳು

ಕನ್ನಡದಲ್ಲಿ ೬೦ಕ್ಕೂ ಮಿಗಿಲು ಭಗವದ್ಗೀತೆಯ ಪದ್ಯಾನುವಾದಗಳಿವೆ (ಅನುಬಂಧ ವಾಗಿ ಕೊಡಲಾಗಿದೆ). ಅವುಗಳಲ್ಲಿ ಗಮಕಿಗಳಿಗೆ ಹೆಚ್ಚು ಉಪಯುಕ್ತವಾದವು ಷಟ್ಪದಿಯಲ್ಲಿ ರಚಿತವಾದ ಗೀತಾನುವಾದಗಳು. ಗಮಕಿಗಳು ನಾಡಿನಾದ್ಯಂತ ಕುಮಾರವ್ಯಾಸನ ಭಗವದ್ಗೀತೆಯೊಂದಿಗೆ ಪಠಿಸಲು ನೆರವಾಗುವ ಇನ್ನೊಂದು ಗೀತಾನುವಾದ ಗೀತಾರ್ಥ ಪ್ರಕಾಶಿಕೆ ಆಗಿದೆ. ಈ ಗ್ರಂಥವನ್ನು ಕುಮಾರವ್ಯಾಸನ ಓದುಗರು ಮತ್ತು ಗಮಕಿಗಳು ಕೊಂಡು ಪ್ರೋತ್ಸಾಹಿಸುತ್ತಾರೆ ಎಂದು ನಂಬಿದ್ದೇನೆ.

ದಿನಾಂಕ ೨೧-೧೧-೨೦೨೨ ಪ್ರೊ. ಜಿ. ಅಶ್ವತ್ಥನಾರಾಯಣ

ಬೆಂಗಳೂರು

ಪರಿವಿಡಿ

ಅನುಬಂಧಗಳು

ಅನುಬಂಧ ೧

ಅನುಬಂಧ ೨

ಅನುಬಂಧ ೩

ಅನುಬಂಧ ೪

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ–1
ಅರ್ಜುನ ವಿಷಾದಯೋಗ

ಶ್ರೀಗುರುವಿನಡಿಗೆರಗಿ ಕರುಣಾ
ಸಾಗರನು ಹರಿಯರ್ಜುನಂಗೆ ಸ
ರಾಗದಲಿ ತಾ ಪೇಳ್ದ ಗೀತಾಶಾಸ್ತ್ರದರ್ಥವನು ।
ಯೋಗಿಜನರು ಅಹುದೆನಲು ಕನ್ನಡ
ವಾಗಿ ಪೇಳುವೆ ಕೇಳ್ವುದೆಲ್ಲರು
ನೀಗುವುದು ಭವಭವದ ಸಂಚಿತ ಕೇಳ್ದ ಮಾತ್ರದಲಿ ॥೧॥

ಕೇಳು ಸಂಜಯ ಪಾಂಡವರು ಸಂ
ಮೇಳದಲಿ ನಮ್ಮವರು ಕೂಡಿದ
ಮೇಲೆ ಕಳನೊಳು ನಡೆದ ವೃತ್ತಾಂತವನುಕ್ರಮದಿಂದ ।
ಪೇಳುವುದು ನೀನೊಲಿದೆನಲು ಭೂ
ಪಾಲಕಂಗೆ ಸಂಜಯನು ಕುರುಕುಲ
ಮೌಳಿ ವ್ಯೂಹಾಕಾರದಲಿ ಕೂಡಿರ್ದ ಪಾಂಡವರ ॥೨॥

ಜಾಲವನು ಮಿಗೆ ನೋಡಿ ಗುರುವನು
ಕೇಳಲಲ್ಲಿಗೆ ಪೋಗಿ ಕುರು ಭೂ
ಪಾಲಕನು ಇಂತೆಂದು ಪೇಳಿದನೊಂದು ವಾಕ್ಯವನು ।
ಒಲವು ಮಿಗೆ ನೋಡಿದರೆ ಪಾಂಡವ
ದಳವನಾಚಾರಿಯರು ದ್ರುಪದನ
ಕಲಿತನಯ ರಚಿಸಿದನು ಬಲು ಹಿರಿದಾಗಿ ಪ್ರೌಢನಲ ॥೩॥

ಇಲ್ಲಿ ಭೀಮಾರ್ಜುನರ ಸಮವಹ
ಬಲ್ಲಿದರು ಮಿಗಿಲಹ ಧನುರ್ಧರ
ರಲ್ಲಿ ಯುಯುಧಾನನು ವಿರಾಟನು ದ್ರುಪದ ನಾಮಕನು ।
ಸಲ್ಲಲಿತನಹ ಧೃಷ್ಟಕೇತು ಮ
ಹೋಲ್ಲಸಿತನಹ ಚೇಕಿತಾನನು
ವಲ್ಲಭನು ಮಿಗೆ ಕಾಶಿರಾಜನು ಬಲು ಪರಾಕ್ರಮಿಯು ॥೪॥

ಪುರುಜಿತನು ವರ ಕುಂತಿಭೋಜನು
ನರಪತಿಯ ಶೈಬ್ಯಾಖ್ಯಪರ ಭೀ
ಕರ ಯುಧಾಮನ್ಯುತ್ತಮೌಂಜಸನು ಬಲು ಪರಾಕ್ರಮಿಯು
ಧುರವಿಜಯನಭಿಮನ್ಯು ವಂಶೋ
ತ್ಕರರು ಪಂಚದ್ರೌಪದೇಯರು
ಮೆರೆವರತಿರಥರೆನಿಸಿ ನಮ್ಮವರಲ್ಲಿ ಬಲಯುತರು ॥೫॥

ಪೇಳುವೆನು ಕೇಳ್ಬ್ರಾಹ್ಮಣೋತ್ತಮ
ಮೌಳಿ ಪಿರಿಯರಲಾಳಿಕಾರರ
ಲಾಲಿಸೈ ತಿಳಿಯಲಿಕೆ ಒರೆವೆನು ನೀನು ಗಾಂಗೇಯನು
ಲೀಲೆ ಮಿಗೆ ಬಲು ಕರ್ಣ ಕಾಳಗ
ದಾಳಿಕಾರನು ಕೃಪನು ದ್ರೌಣಿ ಕ
ರಾಳಬಲನು ವಿಕರ್ಣ ಭೂರಿಶ್ರವನು ಬಲುಭುಜನು ॥೬॥

ಮಿಕ್ಕವರು ಬಲುಶೂರರದರೊಳ
ಗಕ್ಕರಿಂದಲಿ ತನುವನೀವರು
ಕಕ್ಕಸರು ನಾನಾವಿಧಾಸ್ತ್ರದಿ ಹೊಕ್ಕು ಹೆಣಗುವರು
ಧಕ್ಕಡಿಗರಳವಿಯಲಿ ಕುಶಲರು
ಯೆಕ್ಕತುಳಬಲರಿಂದ ಕೂಡಿಯು
ಪೊಕ್ಕು ನೋಡೆ ಸಮರ್ಥವಾಗದು ಕಾದಲವರೊಡನೆ ॥೭॥

ದಳಪತಿಯು ಕಲಿಭೀಷ್ಮನದರಿಂ
ದಲಘುಭುಜಬಲ ಭೀಮರಕ್ಷಿತ
ದಳವವರದೇನೆಂಬೆ ಪರ್ಯಾಪ್ತದಿ ವಿರಾಜಿಪುದು ।
ಚಲಿಸಿದೆಯು ನೀವು ನಿಮ್ಮೆಡೆಗಳಲಿ
ಪಲವು ವ್ಯೂಹಾವ್ಯೂಹ ಮಾರ್ಗದಿ
ದಳಪತಿಯ ಮಿಗೆ ರಕ್ಷಿಪುದೆ ಅಭಿಮತವು ತನಗೆಂದ ॥೮॥

ಕೇಳಿ ದಳಪತಿ ದೊರೆಗೆ ಸಂತಸ
ದೇಳಿಗೆಯ ಪುಟ್ಟಲ್ಕೆ ಮಿಗೆ ತಾ
ನಾಲಿ ಹರಿನಾದದಲಿ ಶಂಖವನೊತ್ತೆ ಬಲುಬಲದಿ ।
ಮೇಲೆ ಮೇಲವರವರು ಸೈನ್ಯದೊ
ಳಾಲಿಸಲು ಭೀಕರವದಾಗೆ ಕ
ರಾಳ ಶಂಖವು ಪಣವ ಗೋಮುಖ ಮುಖ್ಯವಾದ್ಯಗಳ ॥೯॥

ರವವು ತುಮುಲಮದಾಗೆ ಧವಳಾ
ಶ್ವವನು ಪೂಡಿದ ಬಲುರಥದಿ ಮಾ
ಧವನು ಪಾರ್ಥನು ದೇವದತ್ತವ ಪಾಂಚಜನ್ಯವನು ।
ತವಕದಿಂದಲಿ ಭೀಮ ಪೌಂಡ್ರವ
ನವನಿಪತಿಯು ಅನಂತ ವಿಜಯನ
ನವಳಿಗಳು ದೃಢವಾಗಿ ಮಣಿಪುಷ್ಪಕ ಸುಘೋಷಗಳ ॥೧೦॥

ಕಾಶಿರಾಜನು ಬಾಣವಿದ್ಯಾ
ಕೌಶಲನು ಅತಿಬಲ ಶಿಖಂಡಿ
ವಿಶಾಲಮತಿ ಪಾಂಚಾಲಪುತ್ರ ವಿರಾಟ ಸಾತ್ಯಕಿಯು
ವಾಸಿ ಮಿಗೆ ಪಾಂಚಾಲಕನು ಸಂ
ತೋಷದಿಂದಲಿ ದ್ರೌಪದೇಯರು
ರೋಷದಿಂ ಸೌಭದ್ರೆಯಿವರೆಲ್ಲವರುವಿಮ್ಮಡಿಸಿ ॥೧೧॥

ಮೊಳಗಿಸಲು ತಮ ತಮ್ಮ ಶಂಖಂ
ಗಳ ನಿನಾದದಿ ಭೂ ನಭೋಂತರ
ದೊಳಗೆ ತುಮುಲಮದಾಗೆ ಕೌರವರೊಡಲುಗಳು ಬಿರಿಯೆ
ಕಲಿ ಸುಪಾರ್ಥನು ಧಾರ್ತರಾಷ್ಟ್ರರು
ಕೊಳಗುಳದಿ ಸನ್ನದ್ಧರಾಗಿರ
ಲೊಲಿದು ನಾವ್ ನೋಡುವೆವೆನುತ ಶರಚಾಪವನು ಕೊಂಡು॥೧೨॥

ಹರಿಯೊಡನೆಯಿಂತೆಂದು ಪೇಳಿದ
ನುರು ಚಮೂಯುಗಮಧ್ಯದಲಿ ನ
ಮ್ಮರುರಥವ ನಿಲ್ಲಿಸಲ್ಲಿ ನೋಡುವೆ ಯುದ್ಧಕಾಮುಕರ
ಧುರದಿ ನಮಗೀಕದನವಾರ
ಲ್ಲಿರುತಿರುವದಿದು ವೀರರಲಿ ಮತಿ
ವಿರಹಿತರು ಕುರುವೀರರಿಂಗಾರು ಕದನದಲಿ ॥೧೩॥

ಹಿತವ ತೋರ್ಪ ಸಮರ್ಥರಾರೀ
ಕ್ಷಿತಿಯೊಳೆನುತಲಿ ಪಾರ್ಥ ಪೇಳಿದ
ನತಿಶಯೋಕ್ತಿಗಳಿಂದಲೆಂದನು ಸಂಜಯನು ನೃಪಗೆ ।
ಕೇಳಿ ಪಾರ್ಥನ ಮಾತನಾ ಯದು
ಮೌಳಿ ದಿವ್ಯ ರಥೋತ್ತಮವ ಕಡು
ಮೇಳದಲಿ ನಡೆತಂದು ನಿಲಿಸಿದನುಭಯಮಧ್ಯದಲಿ ॥೧೪॥

ದ್ರೋಣ ಭೀಷ್ಮ ಪ್ರಮುಖರಾದೀ
ಕ್ಷೋಣಿಪಾಲರ ಮುಂದೆ ರಥವನು
ತಾ ನಿಲಿಸಿ ನರ ನೋಡಿದ್ಯೆ ಕೂಡಿರ್ದ ಕುರುಬಲವ ।
ನೀನೆನಲು ಮಿಗೆ ನೋಡಿ ಪಿತೃ ಗುರು
ಮಾನನಿಧಿಯು ಪಿತಾಮಹನು ಸು
ಜ್ಞಾನಿಯಹ ಮಾತುಲನು ಮೈದುನನಳಿಯನಾತ್ಮಜರ ॥೧೫॥

ಹಿತರ ಮಿತ್ರರ ಪೌತ್ರರನು ಪರಿ
ಚಿತರ ಬಾಂಧವ ಜನರ ನೋಡಿಯೆ
ಮತಿಯುತನು ಕಲಿಪಾರ್ಥ ಕರುಣಾವಿಷ್ಟ ತಾನಾಗಿ
ಯತಿ ಮನೋಹರ ಮೂರ್ತಿಗೆಂದನು
ಅತಿ ವಿಷಾದದಿ ನೋಡಿದ್ಯೆ ಯಿ
ಕ್ಷಿತಿತಲದಿ ಕಲಹಾರ್ಥಿಗಳು ತಾವಾಗಿ ಕೂಡಿರುವ ॥೧೬॥

ನರಪತಿಗಳಾಗಿರುವ ಬಾಂಧವ
ರಿರವ ಕಂಡುರೆ ಸೀಳುತಿದೆ ಮನ
ವರರೆ ಮುಖ ಪರಿಶೋಷಿಸುತ್ತಿದೆ ಕಂಪಿಸಿತು ತನುವು
ಕರದಿ ಗಾಂಡಿವವಿರದೆ ಜಾರಿತು
ಉರು ತ್ವಚವು ಬೇಯುತಿದೆ ನಿಲ್ಲಲು
ನೆರೆಯದಾಯಿತು ಎನ್ನ ಮನ ಉದ್ಭ್ರಮಿತವಾಗುತಿದೆ ॥೧೭॥

ನೋಡಿದ್ಯೆ ಹರಿ ದುರ್ನಿಮಿತ್ತಗ
ಳೀಡಿರಿವವಿದೆ ವೈಪರೀತ್ಯವು
ರೂಢಿಯಲಿ ಶತ್ರುಗಳ ಕೊಂದು ಫಲವ ಕಾಣೆನಲು ।
ರೂಢಿಯಲಿ ಗೆಲೆ ಕಾಂಕ್ಷೆಯಿಲ್ಲವು
ಹೋದಯೀ ರಾಜ್ಯವದು ಸುಖವದು
ವೋ ದಯಾಂಬುಧಿ ಬೇಡ ಭೋಗವು ಸುಖವು ಜೀವಿತವು ॥೧೮॥

ಅದರಿನಿಂದೇನಹುದದಾರಿಗೆ
ಒದಗಿಸಲು ಬೇಕವರ ಕದನದಿ
ಒದಗಿ ಪ್ರಾಣಧನಂಗಳನು ವೆಚ್ಚಿಪರದಾಗಿರರು
ಬುಧರು ಗುರುಗಳ ತಾತ ಪಿತ ಮೋ
ಹದ ಕುಮಾರರು ಮಾವ ಮೈದುನ
ರಿದಕೊ ಮೊಮ್ಮರು ಬಂಧುಗಳು ದಾಯಾದ್ಯ ಕೋವಿದರ ॥೧೯॥

ಕೊಲ್ಲಲಿಚ್ಛೆಯ ಮಾಡುವನು ನಾ
ನಲ್ಲವೆನ್ನನು ಕೊಂದಡೆಯು ಕೊಲ
ಲಿಲ್ಲಿ ಮೂಲೋಕದ ಪ್ರಭುತ್ವವು ಬರುವುದಾಗಿರಲು
ಬಲ್ಲಿದರ ಧೃತರಾಷ್ಟ್ರ ಪುತ್ರರ
ನೆಲ್ಲರನು ಕೊಂದೇನು ಪಾಪವು
ನಿಲ್ಲದೀಗಳೆ ಬಹುದು ಸದೆದಡೆ ಆತತಾಯಿಗಳ ॥೨೦॥

ಅದರ ಗೊಡವೇಕೆನಗೆ ಸಲ್ಲದು
ವಿದಿತವಿದು ಸ್ವಜನರನು ಕೊಂದರೆ
ಸದೆವುದಕೆ ನಾನೆಂತೊಡೊಡಬಡಬಹುದು ಲೋಕದಲಿ
ಪದಿಲದಲಿ ಸುಖವೆಂತು ಮಾಧವ
ವಿದಿತವಾಗದು ಲೋಕದಲಿ ಮದ
ಮುದಿತರನು ಕಡಿದಡೆ ಕುಲಕ್ಷಯ ದೋಷವದು ಬಿಡದು ॥೨೧॥

ಬಿಡದು ಮಿತ್ರವಿನಾಶದೋಷವು
ನಡೆಯೆ ಗೋತ್ರವಿನಾಶ ಪಾಪದಿ
ಕೆಡುವುದೈ ಶಾಶ್ವತದ ಧರ್ಮವು ತದ್ವಿನಾಶದಲಿ
ಕಡುಗಿ ಗೋತ್ರವಧರ್ಮಘಾತದಿ
ಕೆಡುವುದಹಹ ಅಧರ್ಮದಿಂದಲೆ
ನಡೆದಡೆಯು ಕುಲಸತಿಯರೆಲ್ಲರು ದುಷ್ಟರಾಗುವರು ॥೨೨॥

ವರ್ಣಸಂಕರವಪ್ಪುದದರಿಂ
ನಿರ್ಣಯವು ನರಕಂಗಳೆಲ್ಲವು
ದುರ್ನಯದ ಪಿತೃಜನರು ಪಿಂಡೋದಕವಿಹೀನರಲ
ಮುನ್ನಲೇ ನಾರಕಿಗಳಾಗುವ
ರೆನ್ನುತಲಿ ಶರಚಾಪವನ್ನು ರ
ಣಾರ್ಣವದಿ ರಥದೊಳಗಿರಿಸಿ ಶೋಕದೊಳಿರ್ದನಾ ನರನು ॥೨೩॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧

ಅರ್ಜುನ ವಿಷಾದಯೋಗ

ಕುರುಕ್ಷೇತ್ರದಲ್ಲಿ ಸೇರಿದ ನನ್ನವರೂ ಪಾಂಡವರೂ ಏನು ಮಾಡಿದರೆಂದು ಧೃತರಾಷ್ಟ್ರನಿಗೆ ಸಂಜಯನು ಹೇಳತೊಡಗಿದನು

ದುರ್ಯೋಧನನು ಆಚಾರ್ಯನನ್ನು ನೋಡಿ ದೃಷ್ಟದ್ಯುಮ್ನ ಪಾಲಿತವಾದ ಪಾಂಡವ ಸೈನ್ಯದಲ್ಲಿ ಯುಯುಧಾನ ವಿರಾಟ ದೃಪದ ದೃಷ್ಟಕೇತು ಚೇಕಿತಾನ ಕಾಶೀರಾಜ ಪುರುಜಿತ್ತು ಕುಂತಿಭೋಜ ಶೈಬ್ಯ ಯುಧಾಮನ್ಯು ಉತ್ತಮೌಜ ಅಭಿಮನ್ಯು ಉಪಪಾಂಡವರು ಮುಂತಾದವರು ಪ್ರಬಲರಾಗಿದ್ದಾರೆ.

ನಮ್ಮ ಸೈನ್ಯದಲ್ಲಿ ನೀನು ಭೀಷ್ಮನು ಕರ್ಣನು ಕೃಪನು ಅಶ್ವತ್ಥಾಮನು ವಿಕರ್ಣನು ಭೂರಿಶ್ರವನು ಮುಂತಾದವರು ಇದ್ದಾರೆ. ಭೀಷ್ಮಪಾಲಿತವಾದ ನಮ್ಮ ಸೈನ್ಯಕ್ಕೆ ಬಲಸಾಲದು. ಭೀಮಪಾಲಿತವಾದ ಅವರ ಸೈನ್ಯಕ್ಕೆ ಬಲ ಸಾಕು. ಆದ್ದರಿಂದ ದಾರಿಗಳಲ್ಲಿ ನೀವೆಲ್ಲರೂ ಇದ್ದುಕೊಂಡು ಭೀಷ್ಮನನ್ನು ಕಾಪಾಡಿರಿ ಎಂದನು.

ದುರ್ಯೋಧನನಿಗೆ ಹರ್ಷಕವಾಗಿ ಭೀಷ್ಮನು ಶಂಖನಾದ ಮಾಡಲಾಗಿ ವಾದ್ಯಘೋಷಗಳು ಸೈನ್ಯದಲ್ಲಿ ಗೌಜಾದವು. ಬಳಿಕ ಬಿಳಿಯ ಕುದುರೆಗಳುಳ್ಳ ಮಹಾರಥದಲ್ಲಿರುವ ಕೃಷ್ಣಾರ್ಜುನರು ಪಾಂಚಜನ್ಯ ದೇವದತ್ತಗಳನ್ನು ಪೂರೈಸಲಾಗಿ ಮಿಕ್ಕವರೆಲ್ಲರೂ ಜಯಶಂಖಧ್ವನಿಗೊಳಿಸಲು ಆ ಶಬ್ದವು ಕೌರವ ಹೃದಯಗಳನ್ನು ಒಡೆಯಿಸಿತು.

ಕಪಿಧ್ವಜನಾದ ಅರ್ಜುನನು ಬಿಲ್ಲು ಹಿಡಿದು ಕೃಷ್ಣನೇ, ನಾನು ಶತ್ರುಗಳೆಲ್ಲರನ್ನೂ ನೋಡುವೆನು ಉಭಯರ ನಡುವೆ ರಥವನ್ನು ನಡೆಯಿಸೆನ್ನುತಲೂ; ಕೃಷ್ಣನು ಹಾಗೆ ಮಾಡಿ, ಅರ್ಜುನನೇ ಎಲ್ಲರನ್ನೂ ನೋಡು, ತಂದೆಗಳು, ತಾತಂದಿರು; ಗುರುಗಳು, ಸೋದರ ಮಾವಂದಿರು, ಸೋದರರು, ಅಣ್ಣತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು, ಗೆಳೆಯರು, ಹೆಣ್ಣು ಕೊಟ್ಟವರು, ಮಿತ್ರರು, ನೆಂಟರೆಲ್ಲರೂ ಯುದ್ಧಕ್ಕೆ ನಿಂತಿರುವರೆಂದನು.

ಅರ್ಜುನನು ತನ್ನವರನು ನೋಡಿ ಕೃಷ್ಣನೇ! ನನ್ನ ಬಾಯಿ ಒಣಗುತ್ತೆ, ಮೈ ನಡುಗುತ್ತೆ, ಬಲ ತಗ್ಗಿತು, ಬಿಲ್ಲನ್ನು ಹಿಡಿಯಲಾರೆ, ಕೂತಿರಲಾರೆ, ಮನಸಿಗೆ ಭ್ರಾಂತಿಯುಂಟಾಗಿದೆ. ದುರ್ಲಕ್ಷಣಗಳು ತೋರುತ್ತಿವೆ. ನನಗೆ ಜಯವೂ ಬೇಡ,

ರಾಜ್ಯವೂ ಬೇಡ. ತನ್ನವರನ್ನು ಕೊಂದ ಮೇಲೆ ಯಾರಿಗೋಸ್ಕರ ರಾಜ್ಯವನ್ನಾಳಬೇಕು? ಇವರು ನನ್ನನ್ನು ಕೊಂದರೂ, ನಾನಿವರನ್ನು ಕೊಲ್ಲಲಾರೆ. ತನ್ನವರನ್ನು ಕೊಂದ ಪಾಪಕ್ಕೆ ಹೋಗಲಾರೆನು. ಕುಲಕ್ಷಯ ಮಾಡಿಕೊಂಡರೆ ಧರ್ಮ ನಾಶವಾಗಿ ಪಾಪ ಬಂದು ಸ್ತ್ರೀಯರು ಕೆಟ್ಟು ವರ್ಣಸಂಕರವಾಗಿ ಪಿತೃಗಳಿಗೆ ಗತಿಕೆಡುತ್ತೆ. ಹೀಗೆ ನರಕಕ್ಕೆ ಹೋಗುವ ದಾರಿ ನನಗೆ ಬೇಡ. ಧೃತರಾಷ್ಟ್ರನ ಮಕ್ಕಳು ನನ್ನನ್ನು ಕೊಂದಾರು. ಹಾಗಾದರೂ ನನಗೊಳ್ಳೇದೆ ಎಂದು ಹೇಳಿ ರಥದ ಬಳಿಯಲ್ಲಿ ಬಲ್ಲಂಬುಗಳನ್ನು ತೊರೆದು ದುಃಖಿತನಾಗಿ ಕುಳಿತನು.

—*—

ಅಧ್ಯಾಯ–೨
ಸಾಂಖ್ಯಯೋಗ

ಸಂಜಯನು ಧೃತರಾಷ್ಟ್ರ ನೃಪಗರಿ
ಭಂಜಕನು ಕಲಿಪಾರ್ಥ ಕೃಪೆಯಿಂ
ಮಂಜು ಮುಚ್ಚಿದ ಕಮಲದಂತಿರೆ ಶೋಕವಿಮ್ಮಡಿಸಿ ।
ಕಂಜನಾಭನು ಮುಗುಳುನಗೆಯಿಂ
ರಂಜಿಸುವ ಮುಖದೊಲವು ಮಿಗಲು ಧ
ನಂಜಯನ ಕೂಡೊಂದು ವಾಕ್ಯವ ಪೇಳ್ದನಿಂತೆಂದು ॥೧॥

ಏನಲೈ ವಿಷಮದಲಿ ಕಶ್ಮಲ
ವಾನಲಾದುದು ನಿನ್ನ ಪರಿಯಿದು
ಮಾನನಿಧಿಗಪಕೀರ್ತಿಕರವೀ ಸ್ವರ್ಗ್ಯಕರವಹುದು
ಹೀನರಂಗಿದು ಯೋಗ್ಯ ಕ್ಲೈಬ್ಯತೆ
ಯಾನದಿರು ಕಲಿಪಾರ್ಥ ಮನದೊಳ
ಗೇನು ಕ್ಷುದ್ರ ಹೃದಯದೌರ್ಬಲ್ಯತೆಯ ಬಿಟ್ಟೊಡನೆ ॥೨॥

ಏಳೆನಲು ಕಲಿನರನದೆಂತೈ
ಪೇಳು ಪೂಜಾಯೋಗ್ಯರಾಗಿಹ
ಮೌಳಿಗಳು ಗುರುಭೀಷ್ಮರೊಡನೆ ಶರಾನುಸಂಧಾನ
ಕೇಳು ಗುರುಗಳ ವಧಿಸಿ ಸುಖವನು
ತಾಳುವುದಕಿಂ ಭೈಕ್ಷ್ಯ ಉತ್ತಮ
ಕಾಳೆನಿಪ ಕಾಮಾರ್ಥದಿಂದಲಿ ಗುರುಗಳನು ವಧಿಸಿ ॥೩॥

ಇಲ್ಲಿ ರುಧಿರ ಪ್ರದಿಗ್ಧವಾಗಿಹ
ಖಿಲ್ಲಭೋಗವ ಬಯಸಿ ಕೆಡುವವ
ನಲ್ಲವೀ ಉಭಯದೊಳು ಗುರುತರವಾವುದದನೊರೆದು
ಒಳ್ಳಿತಹ ಮಾರ್ಗದಲಿ ಶಿಕ್ಷಿಸು
ಬಲ್ಲತನವೆನಗಿಲ್ಲ ಶಿಷ್ಯರಿ
ಗಿಲ್ಲೆನಗೆ ಇಂದ್ರಿಯ ವಿಶೋಷಣ ಶೋಕ ಪೋಪುದಕೆ ॥೪॥

ಸೇನೆಯೆರಡರ ನಡುವೆಯಿಂತೆನು
ತಾ ನರನು ಚಿಂತಿಸುತ ಪೇಳಿದ
ಹೀನವಾಕ್ಯವ ಕೇಳಿ ನಸುನಗೆವೆರಸಿ ಹರಿ ನರಗೆ ।
ಏನು ಚಿಂತಿಸಿದವರ್ಗೆ ಚಿಂತಿಪೆ
ನೀನು ಮಿಗೆ ಪ್ರಾಜ್ಞತೆಯ ತೋರ್ಪೆ ಮ
ಹಾನುಭಾವರು ಪೋದವರಿಗಿರುವವರಿಗೆ ಚಿಂತಿಪರೆ ॥೫॥

ಆನು ನೀ ರಾಜನ್ಯರಿವರ್ಗೆಯು
ಹಾನಿ ವೃದ್ಧಿಯ ತೋರದೆಂದು ನಿ
ಧಾನಿಸಲು ಇರ್ದಂತೆ ಯಿರುವೆವು ನಿತ್ಯತೆಯ ಕೊಂಡು
ಧೀನಿಧಿಗಳೀ ಬಾಲ್ಯಯೌವನ
ದಾ ನಿಧಾನದಿ ಜೀವಕೋಟಿಗೆ
ತಾನಿಲ್ಲ ದೇಹಾಂತರವು ಬಹುದೈ ಇದಕೆ ಮೋಹಿಪರೆ ॥೬॥

ಚಿತ್ತವೃತ್ತಿಗೆ ವಿಷಯ ಸಂತತಿ
ಯಿತ್ತುದೈ ಸುಖದುಃಖಗಳನದು
ನಿತ್ಯವಲ್ಲವು ಬಂದು ಪೋಪುದು ಸಹಿಪುದದ ನೀನು ।
ಉತ್ತಮರಿಗಿದು ವ್ಯಥೆಯನೀಯದು
ಸತ್ಯ ಸಮಸುಖದುಃಖವಾವಗೆ
ಮತ್ತೆ ಮೋಕ್ಷವನೀವುದೈ ಸಮಚಿತ್ತತೆಯು ನೋಡೆ ॥೭॥

ಭಾವವಿಲ್ಲವಸತ್ಪದಾರ್ಥ
ಭಾವವಿರದೈ ಸತ್ಪದಾರ್ಥಕೆ
ಈ ಉಭಯವಿದ ತಿಳಿವರೈ ತತ್ತ್ವಜ್ಞರಾದವರು
ಆವುದದು ಸರ್ವದಲಿ ವ್ಯಾಪಕ
ವಾವುದಳಿವುದದಲ್ಲ ತಿಳಿ ಸ
ದ್ಭಾವವಾರಿಂದಳಿವುದೈ ಅವ್ಯಯವು ಮಿಗೆ ನೋಡೆ ॥೮॥

ನಾಶವಹುದೈ ದೇಹವೆಲ್ಲವ
ವಾಸಿದೇಹಿಯು ಅಪ್ರಮೇಯನು
ವಾಸಿ ಮಿಗೆ ನಿತ್ಯಾತ್ಮನದರಿಂದಾಹವವ ಮಾಡೈ
ನಾಶವಹರಿವರೆಂಬರಿವವರು
ವಿನಾಶಕರು ಯೆಂತೆಂಬರಿಬ್ಬರು
ಲೇಶವೂ ತಾವ್ ತಿಳಿಯದಜ್ಞರು ಭೇದವಾದಿಗಳು ॥೯॥

ಸಾವುದೂ ತಾನಲ್ಲ ಕೊಲ್ಲುವ
ವಾವನೂ ತಾನಲ್ಲ ಪುಟ್ಟದು
ಸಾವುದಲ್ಲದಕಾಗುಹೋಗುಗಳಿಲ್ಲ ಶಾಶ್ವತವು
ಸಾವದೇಹಗಳೊಡನೆ ಸಾಯದು
ವೋವಿ ವೃದ್ಧಿಕ್ಷಯಗಳಿಲ್ಲವು
ಸಾವುದದು ತಾನೆಂತು ಕೊಲ್ಲುವನಾರು ಭಾವಿಸಲು ॥೧೦॥

ಮನುಜ ಜೀರ್ಣವ ಕಳೆದು ಪೊಸತಹ
ಘನವಸನಮುಡುವಂತೆ ಜೀವನು
ತನುವಜೀರ್ಣವ ಕಳೆದು ಹೊಸತಹ ತನುವ ಕೊಂಬುವನು
ಅನಘ ಛೇದಿಸ ಕೊಡದದು ಸುಡ
ದೊಣಗಿಸಲು ನೆನೆಸಲಿಕೆ ಬಾರದು
ಘನವು ಸರ್ವಾದಿ ವ್ಯಾಪಕವು ಸ್ಥಾಣು[illegible]ತನವು ॥೧೧॥

ವ್ಯಕ್ತಮಲ್ಲವಚಿಂತ್ಯಮವಿಕೃತಿ
ನಿತ್ಯನೆನಿಸಿಕೊಂಬುದದ ತಿಳಿ
ದುತ್ತಮನೆ ಶೋಕಿಸಲು ಸಲ್ಲದು ತಿಳಿಯತೀಂದ್ರಿಯವು
ಸತ್ತು ಹುಟ್ಟುವುದದುವೆ ದೇಹಕೆ
ಸತ್ಯವೆಂಬುದ ತಿಳಿದೆಯಾದರೆ
ಮತ್ತದಕೆ ಚಿಂತಿಸಲು ಸಲ್ಲದು ಸಹಜವದಕೆಂದು ॥೧೨॥

ಹುಟ್ಟಿದುದು ಸಾಯುವುದು ಸತ್ತಡೆ
ಪುಟ್ಟುವುದು ಧ್ರುವಪದಕೆ ಸಂಕಟ
ಪಟ್ಟಡಾರಿಂದೇನು ತೀರುವುದಪರಿಹಾರ್ಯವದು ।
ಮೊಟ್ಟ ಮೊದಲವ್ಯಕ್ತದಿಂದಲಿ
ಪುಟ್ಟಿ ನಡುವಿದು ತೋರಿ ಅದರಲೆ
ಕೆಟ್ಟು ಪೋಗುವದದಕೆ ಚಿಂತಿಸಲೇಕೆ ಕಲಿಪಾರ್ಥ ॥೧೩॥

ನೋಡಿಯದನಾಶ್ಚರ್ಯಪಡುವರು
ಮೇಣು ನುಡಿದಚ್ಚರಿಯಪಡುವರು
ಕೇಳಿದರು ಪಡುತಿಹರು ಅಚ್ಚರು ಆರು ಅರಿಯರದ ।
ನೋಡು ನಿತ್ಯನವಧ್ಯದೇಹಿಯು
ನೋಡೆ ದೇಹಗಳೆಲ್ಲದಲ್ಲಿಯ
ರೂಢಿಯಲ್ಲದಕೇಕೆ ಚಿಂತಿಪೆ ಪಾರ್ಥ ಕೇಳೆಂದ ॥೧೪॥

ತನ್ನ ಧರ್ಮವಿದೆಂದು ತಿಳಿದದ
ಕಿನ್ನು ಕಂಪಿಸಲೇಕೆ ತಕ್ಕುದ
ಕಿನ್ನು ಮಿಗಿಲಹ ಧರ್ಮವಿಲ್ಲೆಲೆ ಕ್ಷತ್ರಿಯರ ಕುಲಕೆ ।
ತನ್ನ ತನಗೆಯೆ ಪ್ರಾಪ್ತವಾಯಿ
ತ್ತಿನ್ನು ಬಾಗಿಲದೆರೆದ ಮೋಕ್ಷವು
ಯಿನ್ನುರಾಯರಿಗಾರ್ಗು ಲಭಿಸದು ಕದನಮಿತ್ತೆರದಿ ॥೧೫॥

ಆದಡೆಯು ನಿನಗುಕ್ತ ಕದನವ
ನಾದರದಿ ನೀ ಬಿಟ್ಟೆಯಾದಡೆ
ಮೇದಿನಿಯಲಪಕೀರ್ತಿ ಪಾಪವು ಧರ್ಮ ಸಂಹನನ ।
ಆದಡಪಯಶವಾಡುವುದು ಜಗ
ವಾದಡದು ನಿರಯಕ್ಕಧಿಕಭಯ
ಮಾದಡದರಿಂದೋಡಿ ಪೋದನದೆನ್ನುವುದು ಜಗವು ॥೧೬॥

ಅದರಿನಿಂ ಬಹುಮತಿಯನೊಂದಿಯು
ಬದೆಗೆನಹುದದು ಲಾಘವವು ಪರ
ರದರಿನಿಂದಾಡುವರು ಆಡದ ಮಾತ ಸಾವಂತೆ ।
ವಿದಿತವರಿಗಳ ಕೈಯ ಸತ್ತಡೆ
ಪದಿಲವದು ಹರಿಪದವು ಗೆದ್ದಡೆ
ವೊದಗುವುದು ಸರ್ವಾವನೀತಲದಾಧಿಪತ್ಯವದು ॥೧೭॥

ಯುದ್ಧವಂ ಮಾಡುವುದೆ ಮನದೊಳು
ನಿರ್ಧರಿಸಿಯೇಳ್ಳೆಯ ಯುದ್ಧಕೆ
ಬುದ್ಧಿಯಿಂ ಸುಖದುಃಖವೆರಡನು ಸಮದಿ ಕಾಣುತಲಿ ।
ಶುದ್ಧನಾಗಿ ಜಯಾಜಯದಿ ಅರಿ
ಮರ್ದನನೆ ನಿಂದಿರುವುದದರಿಂ
ಸಿದ್ಧವಾಗಿಯೆ ಪಾಪಲೇಪಿಸದಕಟನಿಶ್ಚಯವು ॥೧೮॥

ಇಂತು ಸಾಂಖ್ಯದಿ ಬುದ್ಧಿ ಪುಟ್ಟಿದ
ಡಿಂತೆಯನುತಿರೆ ಸಲ್ಲದದರಿಂ
ಮುಂತೆ ಮತಿಯೋಗವನು ಮಾಡಲಿಬೇಕುಯಿದರಿಂದೆ ।
ಸಂತತವು ಘನಕರ್ಮ ಬಂಧವ
ನಿಂ ತ್ಯಜಿಸಿದಪೆ ವಿಘ್ನವಿಲ್ಲಿದ
ಕಂತೆ ದಾವಪ್ರತ್ಯವಾಯವದಿಲ್ಲವೆಂದಿಗೆಯು ॥೧೯॥

ಸಂತಸದಿ ಕೇಳ್ ಬುದ್ಧಿಯೋಗವ
ನೀಂ ತಿಳಿಯಲೆತ್ನಿಸಿದಡದರಿಂ
ಮುಂತೆಪೊರೆವುದು ಭವಭಯದಿ ನೋಡಿದಡೆ ಕೊಂಚವದು ।
ಕಂತುಶರನೆಸುಗೆಯಲಿ ಯಾಮನ
ವಂತೆಸೆಯದಿರಲದರಿಂದವರ
ಚಿಂತೆಯನು ಬಿಟ್ಟವನು ಸುಖಿಯಹನೆಂದನಸುರಾರೀ ॥೨೦॥

ಕೇಳಿದಭ್ಯಾಸಾತ್ಮಬುದ್ಧಿಯ
ಕಾಳುಯೇಕಾಂತತೆಯನಂದಿರೆ
ಕಾಳುವುದು ಬಹುಮುಖದಿ ವೃತ್ತಿಗಳಿಲ್ಲದಿರಲದುವೇ ।
ಪೇಳುವೀ ವೇದಗಳ ನುಡಿವವ
ರೇಳಿಲವ ಮಾಡುವರದಿಲ್ಲೆಂ
ದಾಳಿಕಾರರು ಪುಷ್ಪವಾಕ್ಯವನು ನುಡಿವರರಿಯದರು ॥೨೧॥

ದ್ವಂದ್ವವನು ಮಿಗೆ ಜಯಿಸಿ ನಿಶ್ಚಯ
ಮೊಂದಿರುವ ಮತಿಯಿಂದ ಧೈರ್ಯವ
ತಂದು ಯೋಗಕ್ಷೇಮವನು ಮಿಗಿಲೊಂದಿ ಬಯಸದೆಯು ।
ಪೊಂದಿಯಾತ್ಮತ್ತ್ವವನು ಸ್ವಲ್ಪಕೆ
ಯೊಂದಿರುವ ನೀರಿನಲೆ ಆವಾ
ವಂದವಹಕರ್ಮಗಳದೆಲ್ಲವು ಸಿಂಧುವಿನಲಹವೋಲ್ ॥೨೨॥

ತಿಳಿದ ಬುಧಪರಿಗೆ ಸರ್ವವೇದಂ
ಗಳಲಿ ತಿಳಿವುದದೆಲ್ಲ ತಿಳಿವಿ
ನೊಳೊದಗಿಹುದದರಂತೆ ತಿಳಿ ಸರ್ವವು ವಿಚಾರಿಸಲು ।
ಫಲದೊಳಾವಗನಿಗೆ ಕಾಂಕ್ಷೆಯ
ತಳೆವುದಾಗದು ಕರ್ಮದಲ್ಲಿಯೆ
ವಿಧಿವಿಹಿತವಾ ಕರ್ಮಫಲವನು ಕಾಂಕ್ಷಿಸಲು ಬಹುದೆ ॥೨೩॥

ಸಿದ್ಧಿಯಲ್ಲಿಯಸಿದ್ಧಿಯಲಿ ಸಮ
ವಿದ್ದು ಬಿಟ್ಟು ಫಲೇಚ್ಛೆಯನು ನೀ
ಹೊದ್ದಿ ಯೋಗದಿ ಕರ್ಮವನು ಮಾಡಿದಡೆ ಯೋಗವದು ।
ಬುದ್ಧಿ ಯೋಗಕ್ಕನ್ನ ನೀಚವ
ಬದ್ಧವಾಗಿಹ ಕರ್ಮವದರಿಂ
ಬುದ್ಧಿಯೋಗವನೊಂದು ಕಾಮ್ಯದ ಕೃಪಣತೆಯ ಬಿಟ್ಟು ॥೨೪॥

ಸೂರಿಗಳು ಕರ್ಮವನು ಮಾಳ್ಪರ
ಸಾರಫಲದಿಚ್ಛೆಯನು ಬಿಟ್ಟುರೆ
ಘೋರ ಜನಿಮರಣಂಗಳಿಂದವೆ ಮುಕ್ತರಾಗುವರು ।
ಸಾರು ವರನಾಮಯದ ಪದವನು
ವೀರ ನಿನಗಾವಾಗ ಬುದ್ಧಿಯ
ಲೂರದೀಯಜ್ಞಾನಮೋಹವು ವಿರತಿಯನುವಹುದು ॥೨೫॥

ನಿನಗದಾವಗ ವೇದಶಾಸ್ತ್ರದೊ
ಳನುವದಿಪ ಫಲದಿಚ್ಛೆಯಲಿ ಮನ
ನೆನೆಸದಿಹುದೋ ಆವಗರೆ ನಿಶ್ಚಲತೆಯಹುದು ಮತಿ ।
ಅನಘಬುದ್ಧಿಯ ನಿರ್ಮಲತೆಯಿಂ
ನಿನಗೆ ಯೋಗವು ಫಲಿಪುದಾಗಲೆ
ಮನದ ನೈಶ್ಚಲ್ಯತೆಯೆ ಬುದ್ಧಿಯ ಯೋಗವೆನಿಸುವುದು ॥೨೬॥

ಹರಿಯೊಡನೆ ನರನೆಂದನೆಂತೈ
ಸ್ಥಿರಮತಿಯು ತಾನಾಡುವಾ ನುಡಿ
ತೆರನದೆಂತೈ ಸ್ಥಿರಮನೀಷನು ನುಡಿದ ವಾಕ್ಯಗಳು ।
ಇರುವ ನಡೆವನೆಂತುಟೆಂದಾ
ನರನು ಕೇಳಲು ಭಕ್ತವತ್ಸಲ
ನಿರದೆ ಪೇಳಲು ತೊಡಗಿದನು ನರನೊಡನೆ ನಸುನಗುತ ॥೨೭॥

ಒರೆವೆನರ್ಜುನ ಕೇಳು ಮನದಲಿ
ನೆರವ ಕಾಮಾದಿಗಳನಾವಗ
ಪರಿಹರಿಪನೆಲ್ಲವನು ತನ್ನಲಿ ತಾನೆ ತುಷ್ಟತೆಯ ।
ಮೆರವನಾರಾಗಲಾ ಸ್ಥಿರಮತಿ
ಉರುತರದ ಸುಖದುಃಖದಲಿ ಸಮ
ನಿರುತವಿರದಾಕ್ರೋಧರಾಗದವನೆ ಮುನಿಯೆನಿಪ ॥೨೮॥

ಇಲ್ಲವಾವಗೆ ಸ್ನೇಹವೆಲ್ಲಿಯು
ಮುಳ್ಳುದಾವಗೆ ದ್ವಂದ್ವ ಸಹನತೆ
ಇಲ್ಲವಾವಗೆ ದುಃಖ ಸುಖದಲಿ ದ್ವೇಷ ಮೋಹಗಳು ।
ಪುಲ್ಲಶರನೆಸುಗೆಯಲಿವರ ಮನ
ಸಲ್ಲದಾವಗೆಯವು ಮುಮುಕ್ಷುವು
ಯೆಲ್ಲರಲ್ಲೊಂದಾಗಿ ನೋಡುವನವನೆ ಪಂಡಿತನು ॥೨೯॥

ಅವನ ಪ್ರಜ್ಞೆ ಪ್ರತಿಷ್ಠಿತವುದಾ
ವವನ ಸರ್ವಾಂಗವನು ಕೂರ್ಮವು
ಕವರಿಹುದು ತನ್ನೊಳಂದಿಗೆ ಅದರಿಂದಿಂದ್ರಿಯಾರ್ಥಗಳು ।
ಕವಿದು ನಿಲ್ಲುವುದಿಂದ್ರಿಯದಿ ಕೇ
ಳವನ ಪ್ರಜ್ಞೆ ಪ್ರತಿಷ್ಠಿತವು ಕೇಳ
ವನೆ ಪಂಡಿತನವನೆ ಯೋಗಿಯು ಕರಣ ಸಂಹನನು ॥೩೦॥

ರೋಗಿಗಾವಗ ವೃತ್ತಿ ವಿಷಯದ
ಭೋಗವನು ತಾನೊಲ್ಲದಿದ್ದರು
ಭೋಗದಿಚ್ಛೆಯು ವಾಸನಾತ್ಮಕವಾಗಿ ನಿಲ್ಲುವುದು ।
ಹಾಗೆಯೇ ಯಿಂತಿರುವ ಜ್ಞಾನಿಗೆ
ರಾಗವೆಲ್ಲವು ನಿಜದಿ ನಿಲ್ಲಲು
ಪೋಗುವುದು ತದ್ವಾಸನೆಯು ತದ್ಭೋಗಗಳು ಸಹಿತ ॥೩೧॥

ಜ್ಞಾನಿಯಾಗಿಹ ನರಪ್ರಯತ್ನವ
ನೀನು ಮಾಡಲು ಪಾರ್ಥ ಕೇಳೈ
ತಾನೆ ಹರಿವುದು ವೃತ್ತಿ ಬಲವಂತಂಗಳಿಂದ್ರಿಯವು ।
ತಾನದೆಲ್ಲವನುಳಿದು ಯುಕ್ತತೆ
ಯಾ ನಿಮತ್ಸರನಾಗಿ ನಿಲ್ಲುವ
ಮಾನವನ ಪ್ರಜ್ಞೆಯು ಪ್ರತಿಷ್ಠಿತವಾಗಿ ನಿಂದಿಹುದು ॥೩೨॥

ವಿಷಯಚಿಂತಕನವಗೆ ಭೋಗ
ವ್ಯಸನವೃದ್ಧಿಯನೆಸಗಲದರಿಂ
ದಸಮ ಕಾಮವು ಕ್ರೋಧಗಳು ನೆರೆವೃದ್ಧಿಯೈದುವುವು ।
ಎಸೆವುದದರಿಂ ಮೋಹವದರಿಂ
ಪಸರಿಸುವುದೈ ಸ್ಮೃತಿಯ ವಿಭ್ರಮೆ
ಯೊಸಗುವುದುದಾ ಬುದ್ಧಿನಾಶನನದರಿನಿಂ ಕೆಡುವ ॥೩೩॥

ರಾಗವೂ ದ್ವೇಷಂಗಳಿಲ್ಲದೊ
ಡಾಗವನ ಯಿಂದ್ರಿಯವು ವಿಷಯವ
ಭೋಗಿಸಿದೊಡಂ ಶಾಂತಿಯೊಂದುವನಾ ಜಿತೇಂದ್ರಿಯನು ।
ಆಗ ವಶ್ಯಾತ್ಮನು ಪ್ರಸಾದವ
ಬೇಗಲೊಂದುವನದರಿನಿಂದಲಿ
ನೀಗುವುದು ಬಲುದುಃಖವದರಿಂ ಶಾಂತಿಯೊಂದುವನು ॥೩೪॥

ಇಲ್ಲ ಬುದ್ಧಿಯು ಯುಕ್ತನಿಗೆ ಮ
ತ್ತಿಲ್ಲ ಭಾವನೆಯವಗೆ ಭಾವನೆ
ಯಿಲ್ಲದಗೆ ಮತ್ತಿಲ್ಲ ಶಾಂತಿ ಅಶಾಂತನಿಗೆ ಸುಖವು ।
ಎಲ್ಲಿಯದು ವಶ್ಯೇಂದ್ರಿಯವು ತಾ
ನಲ್ಲದಾತನ ಮನವು ಶರನಿಧಿ
ಯಲ್ಲಿ ವಾಯುವಿನಿಂದ ನಾವೆಯ ತೆರದಿ ಭ್ರಮಿಸುವುದು ॥೩೫॥

ಆವನಿಗೆ ಸರ್ವೇಂದ್ರಿಯಂಗಳು
ತಾವು ಪೊಗವ್ವೆ ಯಿಂದ್ರಿಯಾರ್ಥದಿ
ಪಾವನನೆ ಕೇಳವರ ನಿಜಪ್ರಾಜ್ಞೆಯು ಪ್ರತಿಷ್ಠಿತವು ।
ಜೀವಕೋಟಿಗೆ ನಿಶಿಯದಾವುದು
ಪಾವನವೆ ಜಾಗರವು ಯೋಗಿಗೆ
ಜೀವಕೋಟಿಯ ಜಾಗರವೆ ಯೋಗಿಗೆ ನಿಶಾಸಮಯ ॥೩೬॥

ನದಿಗಳಿಂದಾ ಪೂರ್ಣಮಾಗಿಯು
ನದಿಯ ಜಲಮಂ ಕೊಳುತ ಮೀರದ
ಪದಿಲದಲಿ ಕಾಮಗಳ ಗ್ರಹಿಸಿಯು ಶಾಂತನವನಾಗಿ
ಒದಗಿ ಕಾಮವ ಕಾಮಿಸದೆ ತಾ
ಮುದದಿ ನಿಸ್ಪೃಹನಾಗಿ ನಾ ನ
ನ್ನದುಯನದೆಯಿರಲವನೆ ಶಾಂತಿಯ ಪಡೆದು ಸುಖಿಯಹನು॥೩೭॥

ಇದುವೇ ಬ್ರಾಹ್ಮೀ ಸ್ಥಿತಿಯ ಕೇಳೈ
ವಿದಿತವಾಗಿಯೆ ಪಾರ್ಥಯಿದು ಸಂ
ಧಿಸಿದಡದರಿಂ ಮಗುಳಿ ಮೋಹಿಸನಂತ್ಯ ಕಾಲದಲೀ ।
ಒದಗುವುದು ಕೈವಲ್ಯವೆನುತಲಿ
ಪದುಮನಾಭನು ಪೇಳ್ದನೆಂತದು
ಮುದದಿ ಸಂಜಯನಂಧನೃಪನಿಗೆ ಪೇಳ್ದನೊಲವಿನಲಿ ॥೩೮॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೨

ಸಾಂಖ್ಯಯೋಗ

ಹಾಗೆ ಅಳುತ್ತಿರುವ ಅರ್ಜುನನಿಗೆ ಕೃಷ್ಣ ಹೇಳಿದನು, ಅರ್ಜುನನೇ! ಹಿರಿಯರು ಅಂಗೀಕರಿಸದ ಅಪಕೀರ್ತಿಕರವಾದ ಈ ದುಃಖವು ಈಗ ನಿನಗೆಲ್ಲಿ ಬಂತು? ನಪುಂಸಕನಾಗಬೇಡ, ಇದು ನಿನಗೆ ಸಲ್ಲದು. ಅಧೈರ್ಯವನ್ನು ಬಿಟ್ಟೇಳು, ಎನಲು; ಅರ್ಜುನನು ನನಗೆ ಉಪಕಾರಿಗಳಾದ ದ್ರೋಣ ಭೀಷ್ಮಾದಿಗಳನ್ನು ಕೊಂದು ಅವರ ರಕ್ತದಿಂದ ತೊಯ್ದ ನೆಲವನ್ನು ಉಣ್ಣಬೇಕಾಗಿದೆ. ಈಗ ನಾನು ಧರ್ಮವನ್ನು ನಿರ್ಣಯಿಸಲಾರದೇ ಕೇಳುತ್ತೇನೆ. ನನ್ನ ದುಃಖಕ್ಕೆ ಪರಿಹಾರವನ್ನು ಕಾಣೆನು ಎನ್ನುತ್ತಲೂ;

ಕೃಷ್ಣನು ನಗುವವನ ಹಾಗೆ ಅರ್ಜುನನೇ, ಯಾರಿಗೆ ಅಳತಕ್ಕದ್ದಿಲ್ಲವೋ ಅವರನ್ನು ಕುರಿತು ಅಳುತ್ತೀಯೆ, ಬಲ್ಲವರು ಸತ್ತವರಿಗಾದರೂ ಬದುಕಿದವರಿಗಾದರೂ ಅಳುವುದಿಲ್ಲ. ಯಾಕೆಂದರೆ ಆತ್ಮನಿಗೆ ನಾಶವಿಲ್ಲ. ಬಾಲ್ಯಾದ್ಯವಸ್ಥೆಗಳು ಬಂದು ಹೋಗುವಂತೆ ದೇಹಗಳೂ ಹುಟ್ಟಿ ಸಾಯುತ್ತವೆ. ಆದ್ದರಿಂದ ಸುಖದುಃಖಾದಿಗಳನ್ನು ಸಹಿಸಬೇಕು. ಉಂಟಾದಕ್ಕೆ ನಾಶವುಂಟು, ಇಲ್ಲದ್ದು ಆಗಲಾರದು. ಆತ್ಮವು ನಾಶವಿಲ್ಲದ್ದು. ಆದ್ದರಿಂದ ಕೊಲ್ಲುವನಾರು? ಕೊಲ್ಲಲ್ಪಡುವನಾರು? ಆತ್ಮನನ್ನು ಯಾರೂ ಕೊಲ್ಲುವುದಿಲ್ಲ. ಆತನಿಗೆ ಜನನ ಮರಣಾದಿಗಳು ಇಲ್ಲ. ಹೀಗೆ ತಿಳಿದವನು ಕೊಂದರೂ ಪಾಪವನ್ನು ಹೊಂದುವುದಿಲ್ಲ.

ಹಳೇ ಬಟ್ಟೆ ಹೋದರೆ ಹೊಸ ಬಟ್ಟೆಯನ್ನು ಕೊಳ್ಳುವಂತೆ ಆತ್ಮನು ಹಳೇ ದೇಹಗಳನ್ನು ಬಿಟ್ಟು ಹೊಸ ದೇಹಗಳನ್ನು ಹೊಂದುವನು. ದೇಹದೊಡನೆ ಆತ್ಮನೂ ಹುಟ್ಟಿ ಸಾಯುವೆನೆನ್ನುವ ಪಕ್ಷದಲ್ಲಿ ಹಾಗಾದರೂ ಅಳಬೇಕಾದ್ದಿಲ್ಲ. ಹುಟ್ಟಿದ ಮೇಲೆ ಸಾಯುವುದೂ, ಸತ್ತ ಮೇಲೆ ಹುಟ್ಟುವುದೂ ತಪ್ಪಿದ್ದಲ್ಲ. ಇದಕೆ ಅಳುವೇಕೆ?

ಹಿಂದೆ ತಿಳಿಯಲಿಲ್ಲ, ಮುಂದೇನೋ ಕಾಣಿಸದು, ಈಗ ತಿಳಿದ ಹಾಗೆ ಇದ್ದೇನೆ. ಈ ಆಶ್ಚರ್ಯವನ್ನು ಹೇಳಿದರೂ ಯಾರೂ ತಿಳಿಯರು. ನೀನು ಕ್ಷತ್ರಿಯನಾದ್ದರಿಂದ ಯುದ್ಧ ಮಾಡಬೇಕೇ ಹೊರತು ಹೆದರಬಾರದು. ದೊರೆತ ಯುದ್ಧವನ್ನು ಬಿಟ್ಟರೆ ಪುಣ್ಯ ಕೀರ್ತಿಗಳು ಕೆಟ್ಟು ಅಪಕೀರ್ತಿ ಬರುತ್ತದೆ. ಅದು ದುಃಖಕರವು ಎಲ್ಲರೂ ಹಳಿದಾಡುತ್ತಾರೆ.

ಯುದ್ಧ ಮಾಡಿ ಸತ್ತರೆ ವೀರಸ್ವರ್ಗ. ಗೆದ್ದರೆ ರಾಜ್ಯ. ಹೇಗೂ ಲಾಭವಿದೆ. ಆದ್ದರಿಂದ ಯುದ್ಧಕ್ಕೇಳು. ಸುಖದುಃಖಗಳನ್ನು ಸಮವಾಗಿ ಭಾವಿಸು. ಚೆನ್ನಾಗಿ ವಿಚಾರಿಸಿದರೆ ಯಥಾರ್ಥವಾದದ್ದು ಎಲ್ಲರಿಗೂ ಒಂದೇ ಬಗೆಯಾಗಿ ತೋರುತ್ತೆ. ಚೆನ್ನಾಗಿ ವಿಚಾರಿಸದವರಿಗೆ ಹಲವು ಬಗೆಯಾಗಿ ತೋರುವುದು. ಹಲವು ಸುಖಗಳನ್ನು ಬಯಸುವವರಿಗೆ ಸಮಾಧಾನ ಹುಟ್ಟುವುದಿಲ್ಲ. ಎಲ್ಲದರಲ್ಲಿಯೂ ಭೇದವೂ ತಾರತಮ್ಯವೂ ಇರುತ್ತದೆ. ಆ ಪೀಡೆಯನ್ನು ಬಿಡು. ನಿನ್ನ ಸುಖವನ್ನು ಪಡಕೋ ಹೆಚ್ಚು ವಿಚಾರ ನಮಗೇಕೆ? ನೀರಡಿಕೆ ಹತ್ತಿದಾಗ ಬೇಕಾದಷ್ಟು ನೀರು ಕುಡಿದರೆ ಸಾಕು. ಜಲಾಧಾರದ ನೀರೆಲ್ಲಾ ಯಾರಿಗೆ ಬೇಕು? ಪ್ರಯೋಜನವನ್ನೇ ಲಕ್ಷಿಸದೆ ಯೋಗ್ಯವಾದ ಕೆಲಸವನ್ನು ಮಾಡುತ್ತಿರಬೇಕು. ಕೆಟ್ಟ ಕೆಲಸಬೇಡ. ಅಭಿಮಾನ ಹಚ್ಚಿಕೊಳ್ಳದೆ ಆದರೂ ಹೋದರೂ ಸಮವೆಂಬುವನಿಗೆ ನೆಮ್ಮದಿಯುಂಟು. ತಿಳಿವಳಿಕೆ ಮುಖ್ಯವೇ ಹೊರತು ಕೆಲಸವಲ್ಲ. ಕೆಲಸದಲ್ಲಿ ಜಾಣನಾಗಿ ಪುಣ್ಯಪಾಪಗಳನ್ನು ತಪ್ಪಿಸಿಕೊಳ್ಳಬಹುದು.

ಆಶೆಯನ್ನು ಬಿಟ್ಟರೆ ಕೆಲಸದ ತೊಡಕಿಲ್ಲ. ಬುದ್ಧಿ ನೆಮ್ಮದಿಯಾದರೆ ಆಗ್ಗೆ ಕೇಳಿದ್ದನ್ನೂ ಕೇಳತಕ್ಕದ್ದನ್ನೂ ತಿಳಿಯುವೆ ಎಂದನು.

ಬುದ್ಧಿ ಸ್ಥಿರನಾದವನಿಗೆ ಗುರುತೇನೆಂದು ಅರ್ಜುನನು ಕೇಳಲಾಗಿ, ಅವನು ಬಯಕೆಗಳನ್ನು ತೊರೆದು ತೃಪ್ತನಾಗಿರುವನು; ಸುಖದುಃಖಗಳಿಗೆ ಹಿಗ್ಗಿ ತಗ್ಗುವನಲ್ಲ; ಅವನ ಕೆಲಸಗಳು ಸಹಜವಾಗಿ ಸಹಜವಾಗಿ ಹೆಚ್ಚಿ ತಗ್ಗುತ್ತಿರುವುವು; ಆಹಾರ ತಗ್ಗಿದರೆ ವಿಷಯ ಪ್ರವೃತ್ತಿ ತಗ್ಗುತ್ತೆ. ಆಶೆ ಮಾತ್ರ ಇರುತ್ತೆ; ತನ್ನನ್ನು ತಾನು ತಿಳಿದರೆ ಅದೂ ಬಿಟ್ಟು ಹೋಗುತ್ತೆ., ನಾನಾರೆಂದು ವಿಚಾರಿಸುವವನ ಮನಸ್ಸನ್ನು ಇಂದ್ರಿಯಗಳು ಎಳೆಯುತ್ತೆ. ಆದ್ದರಿಂದ ಅವುಗಳನ್ನು ನಿಗ್ರಹಿಸಬೇಕು.

ವಿಷಯ ಸಂಗದಿಂದ ಕಾಮ ಕ್ರೋಧಾದಿಗಳು ಹುಟ್ಟಿ ಮರಹು ಹೊಮ್ಮಿ ಬುದ್ಧಿ ನಾಶವಾಗಿ ಕೆಡುತ್ತಾನೆ. ಇಂದ್ರಿಯಗಳನ್ನು ವಶಪಡಿಸಿಕೊಂಡರೆ ಬುದ್ಧಿ ನಿರ್ಮಲವಾಗಿ ದುಃಖ ಶಾಂತಿಯಾಗುತ್ತೆ. ವಿಚಾರವಿಲ್ಲದವನಿಗೆ ಭಾವನೆಯೂ, ಶಾಂತಿಯೂ ಸುಖವೂ ಇಲ್ಲ; ಇಂದ್ರಿಯಗಳು ಹೋದ ಹಾಗೆಲ್ಲಾ ಮನಸ್ಸು ಅವುಗಳನ್ನು ಹಿಂಬಾಲಿಸಿ ಗಾಳಿಗೆ ಕೊಚ್ಚುವ ಹಡಗಿನಂತೆ ಹೋಗುವುದು. ಆದ್ದರಿಂದ ಇಂದ್ರಿಯಗಳನ್ನು ನಿಗ್ರಹಿಸಬೇಕು. ಎಲ್ಲರೂ ಮರೆತಿರುವುದನ್ನು ತಿಳಿದು, ಅವರು ತಿಳಿದಿರುವುದನ್ನು ಮರೆತವನೇ ಜ್ಞಾನಿಯು: ಬಯಕೆಗಳೆಲ್ಲವನ್ನೂ ಅಣಗಿಸಿಕೊಂಡವನಿಗೆ ಸುಖವುಂಟು; ಅಭಿಮಾನವನ್ನೂ ಆಶೆಯನ್ನೂ ತೊರೆದವನು ಸುಖಿಯಾಗುವನು; ಈ ಸ್ಥಿತಿಯು ಸಾಯುವಾಗ ಇದ್ದರೆ ಅವನಿಗೆ ಮೋಕ್ಷವಾಗುತ್ತೆ.

—*—

ಅಧ್ಯಾಯ–3

ಕರ್ಮಯೋಗ

ಶ್ರೀವರನಕೂಡೆಂದಡರ್ಜುನ
ದೇವ ನೀನೀ ಬುದ್ಧಿಯೋಗವು
ಪಾವನವು ನೆರೆಕರ್ಮಕಿಂದವೆಯೆಂದು ಪೇಳ್ದಿನ್ನು ।
ಆವ ಪರಿಯಂ ಘೋರವಾಗಿಹ
ಯಿೂ ವಿಧಾಹವಕರ್ಮವೆನಗೆಯು
ನೀನೊರೆದು ಯೋಚಿಸುವೆ ಸಂದೇಹಾಸ್ಪದದ ನುಡಿಯಿಂ ॥೧॥

ಎನ್ನ ಬುದ್ಧಿಯ ಮೋಹಿಸುವವೋ
ಲಿನ್ನು ಮಾಡಲದೇಕದೊಂದನು
ನಿರ್ಣಯಿಸು ಶ್ರೇಯೋ ಪಥವನೆಂದರ್ಜುನನು ನುಡಿಯೇ ।
ಪನ್ನಗಾರಿಧ್ವಜನು ಪಾರ್ಥಗೆ
ನನ್ನಿಯಿಂದಿಂತೆಂದ ಪೊಡವಿಯ
ಲಿನ್ನು ನಿಷ್ಠೆಯಿದೆರಡು ಪರಿಯಿಂದಿಹುದು ಸುಪಥವಿದು ॥೨॥

ಪೂರ್ವದಲಿ ನಾನೊರೆದೆನಿಂತೆಂ
ದುರ್ವಿಯಲಿ ಸಾಂಖ್ಯರ್ಗೆ ಜ್ಞಾನವ
ಗರ್ವಿತವ ಶುದ್ಧಾಂತರಂಗವವಿಲ್ಲದಗೆ ಕರ್ಮ ।
ಸರ್ವಕರ್ಮವ ಮಾಡಿದಲ್ಲದೆ
ನಿರ್ವಹಿಸೆ ನೈಷ್ಕರ್ಮ್ಯವಸದಳ
ಪರ್ವ ಯಾನೈಷ್ಕರ್ಮ್ಯಸಿದ್ಧಿಯದಿಲ್ಲದೇ ಬರಿದೆ ॥೩॥

ಸನ್ಯಸಿಸಲದು ಪೂರ್ವ ಸಿದ್ಧಿಯ
ನಿರ್ಣಯವು ಸಿದ್ಧಿಸದು ಬರಿದೇ
ಸನ್ನುತನೆ ಸತ್ಕರ್ಮವಾಚರಿಸದಗೆ ಧರಣಿಯಲಿ
ಇನ್ನು ಕರ್ಮವ ಮಾಡದಾವನು
ನಿರ್ನಯಿಸಿ ಯಿಹರಿಲ್ಲ ಲೋಕದಿ
ನಿರ್ಣಯವು ಆ ಪ್ರಕೃತಿಯೇ ಮಾಡಿಪಳು ಕರ್ಮಗಳ ॥೪॥

ಆರು ಕರ್ಮೇಂದ್ರಿಯವ ನಿಯಮಿಸಿ
ಸಾರೆ ಮನದಲಿ ಸ್ಮರಿಸುತಿರ್ದರು
ಘೋರ ವಿಷಯಂಗಳನು ಮಿಥ್ಯಾಜ್ಞಾನರವರೆಂದ
ಯಾರುಯಿಂದ್ರಿಯಗಳನು ಮನದಿಂ
ಸಾರೆ ನಿಯಮಿಸೆ ಕರ್ಮದಲಿ ಮಿಗೆ
ಸೇರುವರು ಆಸಕ್ತರಾಗದೆ ಶ್ರೇಷ್ಠರವರೆಂದ ॥೫॥

ಮಾಡತಕ್ಕುದಿದೆಂದು ಕರ್ಮವ
ಮಾಡು ನೀನೆಲೆ ಪಾರ್ಥ ಕರ್ಮದಿ
ಸೇರಿಬಿಡುವುದಕನ್ನ ಕರ್ಮವ ಮಾಡುವುದೆ ಲೇಸು ।
ಮಾಡದಿರೆ ಯಿೂ ದೇಹಯಾತ್ರೆಯು
ಕೂಡದದರಿಂ ಭಕ್ತಿಯಿಂದಲಿ
ಮಾಡು ಭಗವತ್ಪ್ರೀತಿಗೋಸುಗ ಸಂಗವನು ಬಿಟ್ಟು ॥೬॥

ಲೋಕವಿದು ನೆರೆಕರ್ಮಬಂಧನ
ಲೋಕವೆಲ್ಲವ ಸೃಜಿಸಿ ವಿಧಿ ಮೊದ
ಲೇ ಕೃಪೆಯ ಮಾಡಿಹನು ಕರ್ಮವು ಕಾಮದುಘವೆಂದು ।
ಲೋಕದಲಿ ಬೇಕಾದ ಫಲಗಳ
ಜೋಕೆಯಿಂ ಕೊಡುತಿರ್ಪುದೆಂದೇ
ಲೋಕ ಭಾವಿಪುದಾವಪರಿಯಿಂದವರೆ ರಕ್ಷಕರು ॥೭॥

ಇಷ್ಟ ಭೋಗಂಗಳನು ನಿನಗೆ ವಿ
ಶಿಷ್ಟವಾಗಿಯೆ ಕೊಡುವ ಮೊದಲೇ
ನೆಟ್ಟನಾರಾಧಿತನು ತಿರುಗದ ಕೊಡದನವ ಚೋರ ।
ಶಿಷ್ಟಯಜ್ಞಾನದಿಂ ಪಾಪಗ
ಳಷ್ಟು ಬಿಡುವುದು ತನಗಿದೆಂದೇ
ತುಷ್ಟಿಗೋಸುಗಮಾಗಿ ಪಾಪಗಳುಂಬುವನು ಪಾಪಿ ॥೮॥

ಅನ್ನದಿಂ ಭೂತಂಗಳುದಯಿಸು
ವನ್ನವಾಪರ್ಜನ್ಯನೋಸುಗು
ಸನ್ನುತನೆ ಪರ್ಜನ್ಯ ಯಜ್ಞದಿ ಕರ್ಮದಿಂ ಯಜ್ಞ ।
ಇನ್ನು ಕರ್ಮವು ಬ್ರಹ್ಮನಿರ್ಮಿತ
ವೆನ್ನುತಲಿ ತಿಳಿ ಬ್ರಹ್ಮವಕ್ಷರ
ದಿನ್ನಿಯನುವಾ ಬ್ರಹ್ಮವೇ ಯಜ್ಞದಿ ಪ್ರತಿಷ್ಠಿತವು ॥೯॥

ಈ ಪರಿಯಲೇ ನಡೆವ ಚಕ್ರವ
ತಾ ಪಡೆಯದವೆ ಚರಿಪನಾವನು
ಪಾಪಿಯಹನವನೊಡಲದಿದ್ದರು ವ್ಯರ್ಥ ಕೇಳೆಂದ ।
ಲೇಪವಿಲ್ಲದ ಆತ್ಮರತುನವ
ತಾಪವಿಲ್ಲದ ಆತ್ಮತೃಪ್ತನು
ತಾಪಡೆವನಾತ್ಮನಲೆ ತೃಪ್ತಿಯ ಕರ್ಮವಿರಲ್ಲವಗೆ ॥೧೦॥

ಅವನ ಕರ್ಮಕೆ ಫಲವದಿಲ್ಲವು
ಅವನು ಕರ್ಮವ ಮಾಡದಿರ್ದರು
ಹವಣಿಸದು ಘನಪ್ರತ್ಯವಾಯವು ಸರ್ವ ಭೂತದಲಿ ।
ಅವನು ಕೋರುವ ಫಲವದಿಲ್ಲವ
ದವನಿಯಲಿ ನಿಷ್ಕಾಮ ಕರ್ಮವ
ತವಕಿಸದೆ ರಚಿಸಿದಡೆ ಬ್ರಹ್ಮ ಪ್ರಾಪ್ತಿಯಾಗುವುದು ॥೧೧॥

ಧರಣಿಯಲಿ ಜನಕಾದಿಗಳು ತಾವ್
ಪರಮ ಸಿದ್ಧಿಯ ಕರ್ಮದಿಂದವೆ
ನೆರೆ ಪಡೆದರೀ ಲೋಕಸಂಗ್ರಹಕಾಗಿ ರಚಿಸುವುದು ।
ಹಿರಿಯರಾವುದನಾಚರಿಪರೋ
ನೆರವಿಯಲ್ಲವು ಮಾಳ್ಪುದದನಾ ಹಿರಿಯ
ರಂಗೀಕರಿಸಿದುದೆ ಲೋಕವು ಪ್ರವರ್ತಿಪುದು ॥೧೨॥

ಜಗದೊಳಗೆಯೆನಗಿಲ್ಲ ಕರ್ತ
ವ್ಯಗಳು ಪೊಂದಿದು ಪೊಂದತಕ್ಕದು
ಮಗುಳೆ ನಾ ಕರ್ಮದಲಿ ವರ್ತಿಸುತಿಹೆನು ಭುವನದಲಿ ।
ತಗಹುಮಿಗೆ ತಾ ಕೊಂಚವಾದರು
ಬಗೆದು ಕರ್ಮವ ಮಾಡುತಿರ್ದಡೆ
ಜಗವದೆಲ್ಲವು ಯನ್ನಮಾರ್ಗದಿ ವರ್ತಿಸುವುದೊಲಿದು ॥೧೩॥

ಲೋಕವಿದು ಭ್ರಷ್ಟತ್ವಮೊಂದುವು
ದೇಕೆನಲು ಕರ್ಮವನು ನಾನತಿ
ಲೌಕಿಕತ್ವದಿ ನಡೆಯದಿರೆಯೆನ್ನಿಂದ ಕೆಡುವುದಲ ।
ಜೋಕೆ ಮಿಗೆ ಫಲದಿಚ್ಛೆಯಲ್ಲವಿ
ವೇಕಿಗಳು ಆಚರಿಪರಂತೆ ನಿ
ರಾಕರಿಸದವೆ ಲೋಕ ಸಂಗ್ರಹಕಾಗಿ ರಚಿಸುವುದು ॥೧೪॥

ಕಾಮ್ಯಕರ್ಮವ ಮಾಡುವಜ್ಞರಿ
ಗೊಮ್ಮೆಯೂ ಮತಭೇದವಾಗದ
ಪೇರ್ಮೆಯಲಿ ತಾನಾಸಕ್ತನಾಗದೆ ಯುಕ್ತವಾದವನು ।
ನಿರ್ಮಲನು ತತ್ವವನು ತಿಳಿದವ
ಸಮ್ಮತದಿ ಮಾಡುವದೆ ಯುಕ್ತವು
ಕರ್ಮವನು ಮಾಡಿಸಲು ಅದರಿಂ ಸಂಗವಿಲ್ಲದನು ॥೧೫॥

ಮಾಡತಕ್ಕೀ ಕರ್ಮವೆಲ್ಲವ
ಮಾಡಿಸುವುದಾ ಪ್ರಕೃತಿಗುಣಗಳು
ಮಾಡುವೆನು ನಾನೆಂದಹಂಕೃತಿಯಿಂದಲಜ್ಞನಿಹ ।
ರೂಢಿಯಲಿ ತತ್ವಜ್ಞನಾದವ
ಮಾಡುವನು ಗುಣಕರ್ಮ ಭಾಗೆಯ
ಮಾಡಿಯದರಲ್ಲದುವೆ ವರ್ತಿಪುದೆಂಬ ನಿಸ್ಸಂಗೀ ॥೧೬॥

ತತ್ವವನು ತಿಳಿಯದ ವಿಮೂಢನು
ಮತ್ತೆ ವಿಷಯೇಂದ್ರಿಯ ಕರ್ಮದ
ಮೊತ್ತದಲಿ ನಾನೆಂದು ತಿಳಿಯನು ತತ್ವನಿಶ್ಚಿತನು ।
ಮತ್ತೆಯೆನ್ನಲಿ ಕರ್ಮವೆಲ್ಲದ
ನಿತ್ತು ಆಧ್ಯಾತ್ಮತೆಯ ಮತಿಯಿಂ
ದುತ್ತಮನೆ ನಾ ನನ್ನದೆನ್ನದೆ ಮಾಡು ಯುದ್ಧವನು ॥೧೭॥

ಎನ್ನ ಮತವಿದ ಶ್ರದ್ಧೆಯಿಂದಲಿ
ನಿರ್ಣಯಿಸಿ ಅನಸೂಯ ಬುದ್ಧಿಯ
ಲಿನ್ನು ಚರಿಸಿದಡಾವನಾಗಲಿ ಮುಕ್ತನಾಗುವನು ।
ಸನ್ನುತನೆ ತಿಳಿಯೆನ್ನ ಮತಿಯನು
ಮನ್ನಿಸದೆ ದೋಷಗಳನಿಟ್ಟುರೆ
ನಿರ್ಣಯದಲವ ಮೂಢನೆನಿಪನು ತತ್ವ ನಿಶ್ಚಯದಿ ॥೧೮॥

ಜ್ಞಾನಿಯಾದರು ಪೂರ್ವ ಸಂಸ್ಕಾ
ರಾನುಗುಣದಲಿ ಪ್ರಕೃತಿ ರಚಿಸಿದ
ಹಾನಿವೃದ್ಧಿಯ ಪಡೆವ ನಿಗ್ರಹದಿಂದಲೇನಹುದು ।
ಮಾನನಿಧಿಯಿಂದ್ರಿಯವು ವಿಷಯದಿ
ತಾನು ರಾಗದ್ವೇಷವೆನಿಸಿಹು
ದಾ ನಿಧಾನವ ತಿಳಿದದೆರಡರಧೀನನಾಗದಲೆ ॥೧೯॥

ತಾನದೆರಡೂ ಅದಕೆ ಶತ್ರುತೆ
ಯಾನಿಹುದದನರಿದು ತನ್ನಯ
ಹೀನ ಧರ್ಮವು ಪರರ ಧರ್ಮಾಚರಣಗಧಿಕವದ ।
ಸಾನುರಾಗದಿ ತಿಳಿದು ತನ್ನಯ
ಹೀನಧರ್ಮದಿ ಮರಣವಾದಡೆ
ತಾ ಮೇಲು ಪರಧರ್ಮಬಲ ಭಯವೀವುದೆಂದಿಗೆಯು ॥೨೦॥

ಎಂದು ಪೇಳಲು ಪಾರ್ಥ ಹರಿಯೊಡ
ನೆಂದ ಪುರುಷನದಾರ ಪ್ರೇರಣೆ
ಯಿಂದ ಪಾಪದಿ ಚರಿಪನಿಚ್ಛೆಯು ಪೊಂದದಿರೆ ಬಲದಿ ।
ಎಂದಡೆಂದ ಮುಕುಂದ ಕಾಮವು
ನಿಂದ್ಯಕೊಳಗಹ ಕ್ರೋಧವೆರಡೂ
ಬಂದದೊಂದು ರಜೋಗುಣದಿ ಬಹುಪಾಪಿಗಳು ಪರಕೆ ॥೨೧॥

ಎಂದು ತಿಳಿ ಪೊಗೆಯಿಂದ ವಹ್ನಿಯ
ನಿಂದ್ಯ ಆವರಿಸಿರ್ದ ತೆರದಲಿ
ಕಂದಿ ಕಲ್ಮಷದಿಂದ ಕನ್ನಡಿವುಲ್ಬದಿಂ ಗರ್ಭ ।
ಪೊಂದಿಯಿರ್ದಂದದಲಿ ಯೋಗವ
ಸಂದಿಡುವ ತೆರನಂತೆಯೋವ್ರಯೆ
ನಿಂದುಹುದು ಬಲುವಿಂದಲನವರವೆಂದು ತಾನೆಂದ ॥೨೨॥

ಆವರಿಸಿದಂದದಲಿ ಜ್ಞಾನವ
ನಾವರಿಸಿಕೊಂಡಿಹುದು ಜ್ಞಾನಕೆ
ತಾವು ವೈರಿಗಳಾಗಿ ಕಾಮದ ರೂಪು ಕೈಗೊಂಡು ।
ಭಾವಿತವು ದುಷ್ಪೂರದನಲನ
ಭಾವದಲಿಯಿಂದ್ರಿಯವು ಮನಮತಿ
ತಾನದಕಧಿಷ್ಠಾನವೆನಿಸಿಹುದವನ ಮೋಹಿಸುತ ॥೨೩॥

ಜ್ಞಾನವನ್ನಾವರಿಸಿಯದರಿಂ
ನೀನು ಮೊದಲಿಂದ್ರಿಯವ ನಿಯಮಿಸಿ
ಜ್ಞಾನನಾಶಕವಾದ ಪ್ರಕೃತಿಯ ಗೆಲವುದಕಟೆಂದ ।
ತಾನದಿಂದ್ರಿಯ ತನುವಿಗಧಿಕವು
ತಾನದಿಂದ್ರಿಯಕಧಿಕ ಮನವದು
ತಾನೆಮನಕಿಂ ಬುದ್ಧಿಬುದ್ಧಿಗೆ ಪರವದೇ ಜ್ಞಾನ ॥೨೪॥

ಹೀಗೆ ಬುದ್ಧಿಗೆ ಪರವೆನುತ ತಿಳಿ
ದೀಗ ಮನವನು ಬುದ್ಧಿಯಿಂ ತಡೆ
ದಾಗ ಶತ್ರುವ ಕಾಮರೂಪವ ಗೆಲುವುದಕಟೆಂದ ।
ಬೇಗಲೆನುತಲಿ ಹರಿಯು ನರಗನು
ವಾಗಿ ಪೇಳಿದನೆಂದು ಸಂಜಯ
ವಾಗಲಂಧನೃಪಂಗೆ ಪೇಳಿದನಿಂತೆನುತ ಮುದದೀ ॥೨೫॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೩

ಕರ್ಮಯೋಗ

ಕೃಷ್ಣನೇ! ಕೆಲಸಕ್ಕಿಂತಲೂ ತಿಳಿವಳಿಕೆಯೇ ಹೆಚ್ಚಾದರೆ ಕಷ್ಟವಾದ ಕೆಲಸದಲ್ಲಿ ನನ್ನನ್ನು ಯಾಕೆ ಪ್ರೇರೇಪಿಸುವಿ? ಎನಲು; ಅರ್ಜುನನೇ ಲೋಕದಲ್ಲಿ ಸಾಂಖ್ಯರಿಗೆ ತಿಳಿವಳಿಕೆಯೂ ಯೋಗಿಗಳಿಗೆ ಕೆಲಸವೂ ಮುಖ್ಯವಾಗಿವೆ. ಕೆಲಸ ಮಾಡದಿದ್ದರೆ ತಪ್ಪದು, ಬಿಡುವುದರಿಂದಲೇ ಸುಖವಿಲ್ಲ. ದೇಹವಿರುವತನಕ ಏನಾದರೂ ಕೆಲಸ ಮಾಡುತ್ತಿರಬೇಕು.

ಕೆಲಸ ಮಾಡದೆ ಮನಸ್ಸಿನಲ್ಲಿ ಚಿಂತಿಸುವನು ಸುಳ್ಳುಗಾರ. ಅವನಿಗೆ ಸುಖವಿಲ್ಲ, ಅಭಿಮಾನ ಹಚ್ಚಿಕೊಳ್ಳದೆ ಕೆಲಸ ಮಾಡುತ್ತಿರುವುದು ಮಾಡದೇ ಇರುವುದಕ್ಕಿಂತಲೂ ಉತ್ತಮ. ಪುಣ್ಯದ ಕೆಲಸ ಹೊರತು ಬೇರೆ ಕೆಲಸ ತೊಡಕಾಗದು. ದೇವರು ಸೃಷ್ಟಿಸಿದಾಗಲೇ ಪ್ರಾಣಿಗಳನ್ನು ಅನ್ಯೋನ್ಯವಾಗಿ ಒಬ್ಬರಿಗೊಬ್ಬರು ಕೆಲಸಕ್ಕೆ ಸಹಾಯ ಕೊಟ್ಟು ಸುಖಿಸುವಂತೆ ಕಟ್ಟಲೆ ಮಾಡಿರುವುದರಿಂದ ದೇವರಿಗಾಗಿ ಕೆಲಸ ಮಾಡಿ ಮಿಕ್ಕುದನ್ನು ಉಣ್ಣುವವರಿಗೆ ಪಾಪವಿಲ್ಲ. ಲೋಕಸ್ಥಿತಿಯು ಕೆಲಸ ಮಾಡುವುದರಲ್ಲಿದೆ. ಸುಮ್ಮನೆ ಇರುವವನ ಆಯುಷ್ಯವು ವ್ಯರ್ಥವಾಗುವುದು. ಇದು ಲೌಕಿಕ ರೀತಿಯು;

ಇನ್ನು ವಿರಕ್ತನಾಗಿ ತೃಪ್ತಿಗೊಂಡವನಿಗೆ ಕೆಲಸಬೇಕಿಲ್ಲ. ಆದ್ದರಿಂದ ಅಭಿಮಾನ ಹಚ್ಚಿಕೊಳ್ಳದೇ ಕೆಲಸ ಮಾಡು. ನಿನಗೆ ಬೇಕಿಲ್ಲದಿದ್ದರೂ ಜನಗಳಿಗೋಸ್ಕರ ಮಾಡಬೇಕು. ಹಿರಿಯರು ಕೆಲಸ ಮಾಡದಿದ್ದರೆ ಚಿಕ್ಕವರು ಸುಮ್ಮನೆಯಿದ್ದು ಕೆಡುವರು. ತಿಳಿಯದವರು ಕೆಲಸ ಮಾಡುವಂತೆಯೇ ಅವರಿಗಾಗಿ ತಿಳಿದವರೂ ಕೆಲಸ ಮಾಡಬೇಕು. ತಿಳಿಯದವರಿಗೆ ಬುದ್ಧಿಯನ್ನು ಕೆಡಿಸಬಾರದು. ಮೂಢನು, ನಾನು ಕೆಲಸ ಮಾಡುವೆನೆಂದು ಅಭಿಮಾನ ಹಚ್ಚಿಕೊಳ್ಳುವನು. ತಿಳಿದವನು ಅಭಿಮಾನಿಯಾಗುವುದಿಲ್ಲ.

ಕೊಂಚ ಬಲ್ಲವರನ್ನು ಪೂರ್ಣವಾಗಿ ಬಲ್ಲವನು ಬುದ್ಧಿ ಚಲಿಸುವಂತೆ ಮಾಡಬಾರದು. ನೀನು ಆಶೆಯನ್ನು ಬಿಟ್ಟು ಅಭಿಮಾನ ಹಚ್ಚಿಕೊಳ್ಳದೆ ಕೆಲಸದ ಭಾರ ನನ್ನಲ್ಲಿಟ್ಟು ನೆಮ್ಮದಿಯಾಗಿ ಯುದ್ಧ ಮಾಡು. ನನ್ನ ಅಭಿಪ್ರಾಯವನ್ನೇ ಗ್ರಹಿಸುವವರಿಗೆ ಕೆಲಸಗಳಿಗೆ ತೊಡಕಿಲ್ಲವು. ಈ ನನ್ನ ಅಭಿಪ್ರಾಯವನ್ನು ಗ್ರಹಿಸದವರು ಕೆಡುವರು.

ಸ್ವಭಾವವಿದ್ದಂತೆ ಎಲ್ಲರ ಅಳವಡಿಕೆಯೂ ಪ್ರವರ್ತಿಸುತ್ತೆ, ಅಲ್ಲಿ ಪ್ರಯತ್ನ ಸಾಗುವುದಿಲ್ಲ.

ಪ್ರತಿ ವಿಷಯದಲ್ಲಿಯೂ ಕಾಮಕ್ರೋಧಗಳು ಪೀಡಿಸುವವಾಗಿ ಅವುಗಳಿಗೆ ಸಿಕ್ಕಬಾರದು. ಹೆರವರ ಧರ್ಮಕ್ಕಿಂತಲೂ ಗುಣ ಸಾಲದಿದ್ದರೂ ತನ್ನ ಧರ್ಮವೇ ಉತ್ತಮವು ಎಂದನು.

ಕೃಷ್ಣನೇ! ಪುರುಷನು ಪಾಪವನ್ನು ಕಷ್ಟಕರವೆಂದರಿತರೂ ಕೂಡ ಏಕೆ ಮಾಡಬೇಕಾಗುವುದು? ಎನ್ನುತ್ತಲೂ, ಅರ್ಜುನನೆ! ಕಾಮಕ್ರೋಧಗಳಿಂದಲೇ ಸಹಜ ಶತ್ರುವಾಗಿ ಕೆಡಿಸುತ್ತೆ, ಆದ್ದರಿಂದ ಇಂದ್ರಿಯನಿಗ್ರಹ ಮಾಡಿ ಆಶೆಯನ್ನು ಗೆಲ್ಲಬೇಕು.

—*—

ಅಧ್ಯಾಯ–೪

ಜ್ಞಾನಯೋಗ

ಈ ಮಹಾಯೋಗವನು ಸೂರ್ಯಗೆ
ನಾ ಮೊದಲು ಪೇಳಿದೆನು ಅವನಿಂ
ದಾ ಮನು ಕೇಳಿದನವನಿಕ್ಷ್ವಾಕುವಿಗೆ ಪೇಳ್ದ ।
ನೇಮದಲಿ ಕ್ರಮವಾಗಿ ಪ್ರಾಪ್ತಿತ
ಯೀ ಮಹಿಯೊಳಾ ರಾಜಋುಷಿಗಳ
ನಾಮಯರು ತಿಳಿದಿಹರದುವೆ ಬಹುಕಾಲವಾದುದರಿಂ ॥೧॥

ಯೋಗವಿದು ಪೋಯಿತು ಪರಂತಪ
ಯಿೂಗದನು ನಿನಗೊರೆದೆ ನೀನೆನ
ಗಾಗಿ ಭಕ್ತನು ಸಖನು ಅದರಿಂ ಗೋಪ್ಯದುತ್ತಮವ ।
ಆಗದಕೆ ಮಗುಳೆಂದನರ್ಜುನ
ಯಿೂಗಲೀಚೆಯಲುದಿಸಿದವ ಮನು
ವಾಗ ಪೂರ್ವದಲುದಿಸಿದವನೆನಗೆಂತು ನಿಶ್ಚಯವು ॥೨॥

ಹರಿಯು ಮಗುಳಿಂತೆಂದ ಪರತರ
ವರರೆ ಜನ್ಮವು ನಿನಗೆಯೆನಗೆಯು
ಪರಿಗಣಿಸಿದರೆ ತಾ ಹಲವು ಪರಿಯಧಿಕವು ನಿಧಾನಿಸಲು ।
ಅರಿವೆ ನಾನದ ನೀನರಿಯೆ ನಾ
ಪರನಜನು ಅವಿನಾಶಿಭೂತಕೆ
ದೊರೆಯು ಪ್ರಕೃತಿಯನಡರಿ ಪುಟ್ಟುವೆನೆನ್ನ ಮಾಯೆಯಿದು ॥೩॥

ಸಾಧುಗಳ ಸಂರಕ್ಷಿಪುದಕೆ ಅ
ಸಾಧುಗಳ ಶಿಕ್ಷಿಪಡೆ ಧರ್ಮವ
ನಾದಿಯಿಂದಿಹುದಂತೆ ನಿಲ್ಲಿಸೆ ಜನ್ಮ ಯುಗಯುಗದೀ ।
ಈ ಧರೆಯಲೀಯೆನ್ನ ಜನ್ಮವ
ವಾದರದಿ ಕರ್ಮವನು ದಿವ್ಯವ
ಮೋದದಿಂ ನಿಜವಾಗಿ ತಿಳಿದರೆ ಯೆನ್ನ ಪೊಂದುವನು ॥೪॥

ಇಲ್ಲದಿಹ ಭಯರಾಗ ಕ್ರೋಧನು
ಬಲ್ಲಿದನು ಮನ್ಮಯಮದಾಶ್ರಿತ
ರೆಲ್ಲರು ಜ್ಞಾನದ ತಪಸ್ಸಲಿಪೂತಮನ್ಮಯರು ।
ಬಲ್ಲಿದನೆಯೆಂತೆಂತು ಪೂಜಿಪ
ರೆಲ್ಲವರು ಅದರಂತೆ ಭಜಿಪೆನು
ಯಲ್ಲರನುವರ್ತಿಪರು ಯೆನ್ನಯ ಮಾರ್ಗದಲಿ ಜನರು ॥೫॥

ಕರ್ಮಸಿದ್ಧಿಯ ಬಯಸಿ ಪೂಜೆಯ
ನೆಮ್ಮಿ ಪರದೇವತೆಗೆ ಮಾಡಲು
ಕರ್ಮದಿಂದವೆ ಸಿದ್ಧಿ ಜಾಗ್ರದಿ ಈ ನೃಲೋಕದಲಿ ।
ಪೆರ್ಮೆಯಿಂದಲಿ ನಾಲ್ಕು ವರ್ಣವ
ನಾ ಮೊದಲು ಗುಣಕರ್ಮ ಭಾಗದಿ
ನೇಮಿಸಿದ ಮೇಲದಕೆ ಕರ್ತನಕರ್ತನವ್ಯಯನು ॥೬॥

ಎನಗೆ ಕರ್ಮೇಚ್ಛೆಯು ಮದಿಲ್ಲವ
ದೆನಗೆ ಕರ್ಮಫಲಸ್ಪೃಹೆಯು ತಾ
ನೆನೆಯದೆಂಬುದ ತಿಳಿದನವ ಕರ್ಮದಲಿ ಸಿಲುಕುವನೆ ।
ಇನಿತು ತಿಳಿದು ಪುರಾತನರು ತಾವೆ
ನೆನೆದು ಕರ್ಮವ ರಚಿಸಿದರು ನೀ
ನನಿಶವೂ ನಡೆಸುವುದು ಕರ್ಮವ ಪಳೆಯವರ ತೆರದಿ ॥೭॥

ಮಾಡತಕ್ಕುದದಾವ ಕರ್ಮವು
ಮಾಡದಿಹ ಕರ್ಮಗಳದಾವವು
ರೂಢಿಯೊಳಗಿದು ಜ್ಞಾನಿಗಳಾರು ತಿಳಿಯಲಸದಳವು ।
ಆಡುವೆನು ನೀನಾವ ಕರ್ಮವ
ಮಾಡಿಯಶುಭವ ಕಳೆವೆ ತಿಳಿಯಲು
ನೋಡಿದನು ಕರ್ಮವಿಕರ್ಮವಕರ್ಮವತಿಗಹನ ॥೮॥

ಆರು ಕರ್ಮವ ಕರ್ಮವೆಂದಿದ
ಸಾರೆ ನೋಡುವರೀಯಕರ್ಮವ
ಸೇರಿ ಕರ್ಮವಿದೆಂದು ಕಾಣುವರವರೆ ಮನುಜರೊಳು ।
ಧೀರರವದಿರು ಸರ್ವ ಕರ್ಮವ
ಸಾರೆಮಾಡಿದ ಬುದ್ಧಿಯುಕ್ತರು
ಸಾರಗುಣ ಸಂಪನ್ನರವರೆಂದಚ್ಯುತನು ನುಡಿದ ॥೯॥

ತಾನು ನೆರೆಯದೆ ಕಾಮ್ಯ ಫಲದಲ
ನೂನಕರ್ಮವ ರಚಿಪನಾವನು
ಜ್ಞಾನವಹ್ನಿಯಲದನು ಸುಡುವವನವನೆ ಪಂಡಿತನು ।
ಏನನೂ ನೀನರಿಯೆನದರಿಂ
ಜ್ಞಾನದಿಂ ತಿಳಿಯಲ್ಕೆ ಪೇಳುವೆ
ನೀನು ಮನದಲಿ ವರಿಸಿ ನೋಡೈ ಪಾರ್ಥ ನೀನದನು ॥೧೦॥

ಬಿಟ್ಟು ಕರ್ಮಫಲೇಚ್ಛೆಯನು ತಾ
ನಿಟ್ಟು ತೃಪ್ತಿ ನಿರಾಶ್ರಯತ್ವವ
ಮುಟ್ಟಿ ಕರ್ಮವ ತಾನು ಮಾಡಲದೇನ ಮಾಡುವುದು ।
ಸುಟ್ಟು ತೃಷ್ಣೆಯ ನಿಯತ ಚಿತ್ತನು
ನೆಟ್ಟನೇ ನಿಯತಾತ್ಮನೆಲ್ಲವ
ಬಿಟ್ಟು ತಾನು ಪರಿಗ್ರಹಮಿಗೆ ಮಾಡೆ ಕರ್ಮವನು ॥೧೧॥

ಕಿಲ್ಬಿಷವ ತಾ ಪಡೆದು ಕರ್ಮವ
ನೆಲ್ಲವನು ನೆರೆಮಾಡಿ ಬಂದುದ
ರಲ್ಲಿ ತೃಪ್ತನು ದ್ವಂದ್ವವಿರಹಿತನೀತಮತ್ಸರನು ।
ಬಲ್ಲ ಸಿದ್ಧಿಯಸಿದ್ಧಿಯಲಿ ಸಮ
ದಲ್ಲಿಹನು ಕರ್ಮವನು ಮಾಡಲು
ಸಲ್ಲನವನು ನಿಬದ್ಧತೆಗೆ ಕೇಳ್ಪಾಂಡುನಂದನನೆ ॥೧೨॥

ಸಂಗವಿಲ್ಲದ ಮುಕ್ತ ಜ್ಞಾನದಿ
ಸಂಗಿಸಿದ ಘನ ಚಿತ್ತಯಜ್ಞವ
ಶಂಗತನು ತಾನಾಗಿ ಮಾಡಿದ ಕರ್ಮಫಲವಹುದು ।
ಅಂಗವಗ್ನಿಯು ಹವ್ಯದ್ರವ್ಯವ
ಭಂಗಬ್ರಹ್ಮವು ಬ್ರಹ್ಮಗರ್ಪಿತ
ಸಂಗರಹಿತಸಮಾಧಿಯೆಂದವೆ ಬ್ರಹ್ಮಮೊಂದುವನು ॥೧೩॥

ಧರೆಯಲಿಂದ್ರಾದಿಗಳಿಗೋಸುಗ
ಮೆರೆವ ಯಜ್ಞವ ಕರ್ಮ ಮಾಡುವ
ಪರಿಯಲೇ ಬ್ರಹ್ಮಾಗ್ನಿಯಲಿ ಸುಜ್ಞಾನಿಯಜ್ಞದವೋಲ್ ।
ವಿರಚಿಸುವ ಯೋಗವನು ಕೆಲಬರು
ಮೆರೆವ ಶ್ರೋತ್ರಾದಿಂದ್ರಿಯಂಗಳ
ನೆರೆದು ಸಂಯಮವೆಂಬ ವಹ್ನಿಯಲಿರದೆ ಹೋಮಿಪರು ॥೧೪॥

ಕೆಲಬರಿಂದ್ರಿಯ ವಹ್ನಿಯಲಿ ತಾ
ವೊಲಿದು ಹೋಮವ ಮಾಡುತಿರ್ಪರು
ವೊಲಿದು ಸರ್ವೇಂದ್ರಿಯದ ಕರ್ಮವ ಪ್ರಾಣಕರ್ಮವನು ।
ಕಲಿಮನದ ಸಂಯಮನ ವಹ್ನಿಯ
ಲೊಲಿದು ಹವನವ ಮಾಡುತಿರ್ಪರು
ನಲಿದು ಧ್ಯಾನದಿ ದೀಪಿಸುತ್ತಿಹ ಕೆಲರು ಯೋಗಿಗಳು ॥೧೫॥

ದ್ರವ್ಯ ಯಜ್ಞವು ತಪದ ಯಜ್ಞವು
ಸುವ್ರತನೆ ತಿಳಿ ಯೋಗಯಜ್ಞವು
ಪರ್ವದೀ ಸ್ವಾಧ್ಯಾಯ ಯಜ್ಞವು ಜ್ಞಾನಯಜ್ಞವನು
ನಿಲ್ಲದೆ ಪ್ರಯತ್ನಗಳ ಮಾಡುವೆ
ಬಲ್ಲಿದನು ನಿಶ್ಚಿತನು ಯತಿವರ
ಮಲ್ಲ ನೀ ಕೇಳಿಂದು ಪೇಳಿದ ಮಾಧವನು ನರಗೇ ॥೧೬॥

ಪ್ರಾಣವನಪಾನದಲಪಾನವ
ಪ್ರಾಣದಲಿ ಹೋಮಿಪರು ಕೆಲಬರು
ಪ್ರಾಣದಾಪಾನದ ಗತಿಯ ತಡೆಯುವರು ಅಸುಜಯರು ।
ಪ್ರಾಣವನು ನಿಯತಾನ್ನದಿಂದಲಿ
ಪ್ರಾಣದಲಿ ಪ್ರಾಣವನು ಹವಿಪರು
ಜಾಣರವರಧ್ವರದಗತಿಯಿಂದವರಕಲ್ಮಷರು ॥೧೭॥

ಯಜ್ಞ ಶಿಷ್ಟಾನ್ನವದೆಯಮೃತವು
ಪ್ರಾಜ್ಞನಾಗಿಹನಾವನುಂಬ ಹಿ
ತಜ್ಞ ಬ್ರಹ್ಮಸನಾತನನು ಮಿಗೆಯಿಲ್ಲದವಗಿಲ್ಲ ।
ಯಜ್ಞವೀ ಪರಿಬಹುವಿಧದಿ ನೆರೆ
ಪ್ರಾಜ್ಞನಾಗಿಹ ಬ್ರಹ್ಮ ಪೇಳಿದ
ನುಜ್ಞೆಯಲ್ಲವು ಕರ್ಮಜವು ಯಿದನರಿದಿರ್ದವನೆ ಪ್ರಾಜ್ಞ ॥೧೮॥

ದ್ರವ್ಯಯಜ್ಞಕ್ಕಿಂದಲಧಿಕವು
ನಿರ್ವಹಿಸಿದೀ ಜ್ಞಾನಯಜ್ಞವು
ಸರ್ವಕರ್ಮವು ಜ್ಞಾನದಲ್ಲಿಯೆ ಪರಿಸಮಾಪ್ತಿಕವು ।
ಗರ್ವವನು ಬಿಟ್ಟೊಡನೆ ವಂದಿಸಿ
ನಿರ್ವಹಿಸಿ ತಿಳಿ ಸೇವೆಯಿಂದಲು
ಸುರ್ವರೈ ನೆರೆ ತತ್ವದರ್ಶಕ ಜ್ಞಾನಿಗಳು ಮುದದೀ ॥೧೯॥

ಆವುದನು ನೀ ತಿಳಿದ ಬಳಿಕಿನೊ
ಳಾವಗವು ಮೋಹವನು ಪೊಂದೆಯ
ದಾವ ಸಚರಾಚರವ ನಿನ್ನೊಳು ಕಂಡು ನೀಯನ್ನೊಳ್ ।
ಭಾವಿಪೈಕ್ಯವ ಪಡೆದು ಪಾಪವ
ದಾವುದಾದರು ಜ್ಞಾನಪ್ಲವದಿಂ
ನೀ ವಹಿಲದಲಿ ತರಿಸಿ ಪೋದಪೆಯೆಂದು ಹರಿ ನುಡಿದ ॥೨೦॥

ಸಮಿಧೆಗಳನಾವಹ್ನಿಭಸ್ಮವ
ಕ್ರಮದಿ ಮಾಡುವ ಚಂದದಿಂದಲ
ದಮಮ ಕರ್ಮವನೆಲ್ಲ ಜ್ಞಾನವು ಸುಟ್ಟು ಬಿಸುಡುವುದು ।
ಆಮಮ ಜ್ಞಾನಕೆ ಸಾಮ್ಯವಾಗಿಹ
ವಿಮಲವಾದ ಪವಿತ್ರಮಿಲ್ಲವು
ಸುಮನಸಿಯಗಡುಸಿದ್ಧಿ ಕಾಲದಿ ತನಗದುವೆ ವೇದ್ಯ ॥೨೧॥

ಪೊಂದಲಹುದಾಜ್ಞಾನಸ್ಯೆಯತ
ದಿಂದ್ರಿಯಕೆ ಶ್ರದ್ಧಾಗರಿಷ್ಠಗೆ
ಪೊಂದಿ ಜ್ಞಾನವ ಪರಮ ಶಾಂತಿಯ ಬೇಗಲೊಂದುವನು ।
ಹೊಂದಿಯಶ್ರದ್ಧೆಯನು ಅಜ್ಞತೆ
ಹೊಂದಿ ಸಂಶಯಚಿತ್ತನಾದಡೆ
ಪೊಂದುವ ವಿನಾಶವನು ಸುಖ ಪರಲೋಕವಿಲ್ಲೆಂದಾ ॥೨೨॥

ಯೋಗದಿಂ ವಿನ್ಯಸ್ತ ಕರ್ಮದ
ದಾಗ ಜ್ಞಾನದಿ ಛಿನ್ನಸಂಶಯ
ತಾಗದಾತನ ಕರ್ಮಬಂಧನ ಜ್ಞಾನವಂತನನು ॥
ಬೇಗಲದರಿಂ ಸಂಶಯ ನೆರೆ
ನೀಗಿ ಹೃದಯದೊಳಿಹುದು ಜ್ಞಾನದಿ
ಯೋಗವಾಚರಿಸುವುದು ಕರ್ಮವನೇಳು ಭಾರತನೆ ॥೨೩॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೪

ಜ್ಞಾನಯೋಗ

ಅರ್ಜುನನೇ! ಇಂದ್ರಿಯ ನಿಗ್ರಹದಿಂದ ಮನೋಜಯವಾಗುವ ಯೋಗ ರಹಸ್ಯವನ್ನು ನಾನು ಸೂರ್ಯನಿಗೆ ಹೇಳಿದ್ದದ್ದು ಈಗ ನಷ್ಟವಾಗಿದೆ. ನೀನು ನನಗೆ ಪ್ರಿಯನಾದ್ದರಿಂದ ನಿನಗೆ ಹೇಳುತ್ತೇನೆ ಎಂದನು.

ಕೃಷ್ಣನೇ! ಈ ಕಾಲದ ನೀನು ಆಗ ಹೇಳಿದ್ದು ಹೇಗೆ? ಎಂದನು.

ಅರ್ಜುನನೇ! ನನಗೂ ನಿನಗೂ ಎಲ್ಲರಿಗೂ ಇಂಥಾ ದೇಹಗಳು ಎಷ್ಟೋ ಕಳೆದು ಹೋಗಿವೆ. ನಾನು ಬಲ್ಲೆನು, ನೀನರಿಯೆ, ಇದು ಭೇದವು. ಆತ್ಮನಾದ ನಾನು ಜನನವಿಲ್ಲದವನಾದರೂ ಮಾಯೆಯಿಂದ ಹುಟ್ಟುವೆನು. ಧರ್ಮನಷ್ಟವಾದಾಗ ಸಾಧುಗಳನ್ನು ಸಲಹುವದಕ್ಕೂ, ದುಷ್ಟರನ್ನು ಶಿಕ್ಷಿಸುವುದಕ್ಕೂ ಯುಗ ಯುಗದಲ್ಲಿಯೂ ಹುಟ್ಟುವೆನು. ನನ್ನ ಜನ್ಮ ಕರ್ಮಗಳ ರಹಸ್ಯವನ್ನು ದಿಟವಾಗಿ ಬಲ್ಲವನು ಸತ್ತ ಮೇಲೆ ಮರಳಿ ಹುಟ್ಟುವುದಿಲ್ಲ. ನನ್ನನ್ನು ಸೇರುವನು. ನನ್ನನ್ನು ಸೇರಿದವರು ನನ್ನ ಭಾವವನ್ನು ಹೊಂದುವರು.

ಯಾರು ನನ್ನನ್ನು ಹೇಗೆ ಭಾವಿಸಿದರೆ ನಾನು ಅವರನ್ನು ಹಾಗೆಯೇ ಭಾವಿಸುವೆನು. ನರಲೋಕದಲ್ಲಿ ಕರ್ಮಗಳಿಗೆ ಸಿದ್ಧಿಯು ತ್ವರೆಯಾಗಿ ಆಗುವುದು. ನಾಲ್ಕು ಜಾತಿಗಳನ್ನೂ ಅವುಗಳ ಗುಣ ಕ್ರಿಯೆಗಳ ಭೇದವನ್ನೂ ಮಾಡಿದವನು ಮಾಡದೆ ಇರುವವನು ನಾನೇ ಎಂದು ತಿಳಿಕೋ. ನಾನು ಪ್ರಯೋಜನದಲ್ಲಿ ಆಶೆಯಿಲ್ಲದವನಾದ್ದರಿಂದ ನನಗೆ ಕೆಲಸಗಳ ತೊಡಕಿಲ್ಲವು. ಹೀಗೆ ನನ್ನ ಸ್ಥಿತಿಯನು ಬಲ್ಲವನು ಕೆಲಸದ ಬಂಧದಿಂದ ಬಿಡಲ್ಪಡುವನು. ಪೂರ್ವಿಕರು ಹೀಗೆಯೇ ತಿಳಿದು ಮಾಡಿದರು. ನೀನೂ ಹಾಗೆಯೇ ಮಾಡು.

ಯಾವದರನ್ನು ಮಾಡಬೇಕೋ ಯಾವದರನ್ನು ಬಿಡಬೇಕೋ ಅದರ ತಿಳುವಳಿಕೆಯು ಸಿಕ್ಕಾಗಿರುವುದು. ಮಾಡದ ಆತ್ಮವನ್ನು ಮಾಡುವುದರಲ್ಲಿಯೂ ಮಾಡದ ಆತ್ಮದಲ್ಲಿ ಮಾಟವನ್ನೂ ಬಲ್ಲವನೇ ಬುದ್ಧಿವಂತನು. ಅವನೇ ಎಲ್ಲ ಕೆಲಸಗಳನ್ನೂ ಮಾಡಿದವನು. ಹಂಬಲಿಸದೆ ಎಲ್ಲ ಕೆಲಸಗಳಿಗೂ ಯತ್ನಿಸುವವನನ್ನು ತಿಳುವಳಿಕೆಯಿಂದ ಕೆಲಸದ ತೊಡಕನ್ನು ಸುಟ್ಟುಕೊಂಡವನನ್ನಾಗಿ ಬಲ್ಲವರೆನ್ನುವರು.

ಫಲಾಪೇಕ್ಷೆಯಿಲ್ಲದೆ ಮಾಡಿದರೂ ಮಾಡದ ಹಾಗೆಯೇ ಹೆಚ್ಚು ಬಯಸದೆ ಶರೀರ ಸ್ವಾಭಾವದ ಕೆಲಸವನ್ನು ಮಾಡುವುದರಲ್ಲಿ ಪಾಪವಿಲ್ಲವು.

ಎಷ್ಟಾದರೆ ಅಷ್ಟೇ ಸಾಕೆಂದು ಭೇದವೂ ಹೊಟ್ಟೆಕಿಚ್ಚು ಇಲ್ಲದೆ ಆಗದೂ ಆಗದೆ ಇದ್ದರೂ ಸಮನಾಗಿರುವವನು ಏನು ಮಾಡಿದರೂ ಅವನಿಗೆ ಕರ್ಮ ದೋಷವಿಲ್ಲವು. ಆತ್ಮನಿಗಾಗಿ ಸಂಗವಿಲ್ಲದೆ ಮಾಡಿದ ಕೆಲಸವು ಅಡಗಿ ಹೋಗುವುದು. ಕೆಲಸದ ಸಮಾಧಾನವು ಆತ್ಮನೊಳು ಆಗಿ ಆತ್ಮನೊಳೇ ಅಡುವುದು. ದೈವಾರಾಧನೆಯನ್ನು ಹಲವು ಮಂದಿ ಹಲವು ಬಗೆಯಾಗಿ ಮಾಡುವರು. ಕರ್ಮಜ್ಞಾನ ಭಕ್ತಿ ಯೋಗಿಗಳೆಲ್ಲವೂ ಆತ್ಮೋಪಾಸನೆಗಳೇ. ಅವುಗಳನ್ನು ಬಿಟ್ಟವನಿಗೆ ಗತಿಯಿಲ್ಲವು. ಧನಾದಿಗಳಿಂದ ಮಾಡುವ ಯಜ್ಞಕ್ಕಿಂತಲೂ ತಿಳುವಳಿಕೆಯಿಂದ ಮಾಡುವುದು ಉತ್ತಮವು.

ಜ್ಞಾನವನ್ನು ಬಲ್ಲವರು ಉಂಟುಮಾಡಲಾಪುವರು. ಜ್ಞಾನದಿಂದ ನಿನ್ನಲ್ಲಿಯೇ ಎಲ್ಲವನ್ನೂ ನೋಡುವಿ. ಪಾಪಗಳೆಲ್ಲವನ್ನೂ ಜ್ಞಾನವು ಸುಟ್ಟುಬಿಡುವುದು. ಜ್ಞಾನದಿಂದ ಮುಕ್ತಿಯಾಗುತ್ತೆ. ಮೂಢನೂ ಸಂದೇಹಿಸುವವನೂ ನಂಬಿಕೆಯಿಲ್ಲದವನೂ ಕೆಟ್ಟು ಹೋಗುತ್ತಾನೆ. ಆತ್ಮಜ್ಞಾನದಿಂದ ಸಂಶಯಗಳನ್ನು ಬಗೆಹರಿಸಿಕೊಂಡವನಿಗೆ ಕರ್ಮ ಬಂಧವಿಲ್ಲವು. ಆದ್ದರಿಂದ ಕೆಲಸದಲ್ಲಿ ಕುಶಲನಾಗು.

—*—

ಅಧ್ಯಾಯ–5

ಸಂನ್ಯಾಸಯೋಗ

ಕರ್ಮ ಸಂನ್ಯಾಸವನು ಪೇಳಿಯು
ಕರ್ಮಯೋಗವ ಪೇಳ್ವೆ ಮಗುಳೀ
ಧರ್ಮವೆರಡರಲೊಂದು ಶ್ರೇಯವನೀವುದದನೆನಗೆ।
ಸಮ್ಮತದಿ ಪೇಳೆನ್ನಲಾ ಹರಿ
ನಿರ್ಮಲವು ಯಿಾ ವುಭಯವಿದರೊಳು
ಕರ್ಮವೇ ಶ್ರೇಯಸ್ಕರವು ಸಂನ್ಯಾಸಕಿಮ್ಮಿಗಿಲು ॥೧॥

ಯಾವನದ್ವೇಷಿಯನಕಾಂಕ್ಷಕ
ನಾವ ದ್ವಂದ್ವಾತೀತನವ ಮಿಗೆ
ಪಾವನನು ಸಂನ್ಯಾಸಿ ಸುಖದಿಂ ಬಂಧಮುಕ್ತನಹ।
ಯಾವ ಸಾಂಖ್ಯವ ಕರ್ಮಯೋಗವ
ಭಾವದಿಂ ಬೇಕಾಗಿ ಪೇಳುವ
ನಾವನವ ಬಾಲಕನು ಯರಡರಲೊಂದೆ ಫಲವಹುದು ॥೨॥

ಆವುದದು ಸಾಂಖ್ಯರ್ಗೆ ಪ್ರಾಪ್ಯವ
ದಾವುದದ ಯೋಗಿಗಳು ಪೊಂದುವ
ರೀವುಭಯಮೊಂದೆಂದು ತಿಳಿದವನವನೆ ತಿಳಿದವನು।
ಭಾವಿಸಲು ಸಂನ್ಯಾಸ ದುಃಖವ
ನೀವುದದು ಯೋಗವದದಿಲ್ಲದೆ
ತೀವಿ ಯೋಗದಿ ಬೇಗ ಬ್ರಹ್ಮವನೊಂದುವವನು ಮೌನಿ ॥೩॥

ಯೋಗಯುಕ್ತವಿಶುದ್ಧ ಚಿತ್ತನು
ಬೇಗ ವಿಜಿತಾತ್ಮನು ಜಿತೇಂದ್ರಿಯ
ನಾಗಿ ಭೂತಾತ್ಮಾತ್ಮ ಮಾಡಿಯು ಲೇಪವಿಲ್ಲವಗೆ ।
ಈಗಲೇನೂ ಮಾಡೆನೆಂದಾ
ವಾಗಯುಕ್ತನು ತತ್ತ್ವವೇದಿಯು
ಬೇಗ ತಿಳಿವನು ಕೇಳುತೆಲ್ಲವ ಮಾಡುತವನಿರ್ದು ॥೪॥

ಇಂದ್ರಿಯಗಳಿಂದ್ರಿಯಗಳರ್ಥದಿ
ಪೊಂದಿವರ್ತಿಪುದೆಂದು ತಿಳಿದವ
ನೊಂದನೂ ತಾ ಮಾಡಿದುದನರಿಯನು ಸುಲೀನತೆಯಿಂ ॥
ಪೊಂದಿಸುತ ಬ್ರಹ್ಮದಲಿ ಕರ್ಮವ
ನೊಂದು ಕಾಲದಿ ಸಂಗವಿಲ್ಲದೆ
ಹೊಂದನವನುದಕದಲಿ ಪದ್ಮದ ಪತ್ರದಂತಿಹನು ॥೫॥

ಕಾಯ ಮನ ಬುದ್ಧಿಂದ್ರಿಯಗಳ ವಿ
ಡಾಯಿಯಿಂದಲಿ ಜ್ಞಾನಿ ಕರ್ಮವ
ಸಾಯಸದಿ ನಿಸ್ಸಂಗಿ ಮಾಳ್ಪನದಾತ್ಮ ಶುದ್ಧತೆಗೆ ।
ಹೇಯ ಕರ್ಮದ ಫಲವ ಬಿಟ್ಟುರೆ
ನೋಯದೇ ಶಾಂತಿಯನು ಪಡೆದಪ
ನಾಯಯುಕ್ತನು ಕಾಮಫಲಸಕ್ತನು ವಿಬದ್ಧನಹ ॥೬॥

ಸರ್ವಕರ್ಮಂಗಳನು ಮನದಿಂ
ನಿರ್ವಹಿಸಿ ಸುಖಮಿರ್ಪನೆನ್ನುವ
ಪರ್ವಿಮಾಡಿಸಮಾಡೆನೆನುತಲಿ ದೇಹದಲ್ಲಿ ಮಿಗೆ ।
ಉರ್ವರೆಗೆ ಪ್ರಭು ಸೃಜಿಸಕರ್ಮವ
ಸರ್ವಕರ್ತೃತ್ವಕವದಿಲ್ಲದ
ಖರ್ವ ಕರ್ಮದ ಫಲದಿ ಸಂಗಿಯ ಸಹಜ ನಡೆವುದದು ॥೭॥

ಕೊಡನದಾರಿಗೆ ಪಾಪಫಲವನು
ಕೊಡನು ಪುಣ್ಯವನಾ ವಿಭುವು ತಾ
ನಡರೆಯಜ್ಞಾನದಲಿ ಜ್ಞಾನವು ಮೋಹಿಸುತ್ತಿಹುದು ।
ಕಡುಗಿ ಜ್ಞಾನದೊಳಜ್ಞ ಭಾವವ
ದಡಗಿಸುವನಾವವನವಗೆ ತಾ
ಪಡುವುದೈ ಸುಜ್ಞಾನವಾದಿತ್ಯನವೊಲು ಪ್ರಕಾಶಿಸುತ ॥೮॥

ಅದರಲಿಹ ಸದ್ಬುದ್ಧಿ ಅದರ
ಲ್ಲೊದಗಿರುತನ್ನಿಷ್ಠೆಯಾ ಮನ
ದುದಯವವಗಿಲ್ಲವು ಪುನರ್ಭವ ಜ್ಞಾನಜಿತಪಾಪ ।
ಸದಯ ವಿದ್ಯಾ ವಿನಯವಂತನೊ
ಳಧಿಕವಹ ಗೋ ಹಸ್ತಿ ಶುನಿಯಲಿ
ಬದಗ ಶ್ವಪಚನಲೊಂದೆ ಸಮದರ್ಶನವು ಪಂಡಿತಗೆ ॥೯॥

ಈಗಲೇ ಜಿತವಹುದು ಸ್ವರ್ಗವು
ಬೇಗ ಸಾಮ್ಯಸ್ಥಿತ ಮನದವಗೆ ಜಗ
ದಾಗುಹೋಗಲಿ ಬ್ರಹ್ಮಸಮವದರಲ್ಲಿಹರ್ಗೆ ತಿಳಿಯೆ ।
ಆಗ ಪ್ರಿಯವದು ಹರ್ಷಮೊಂದನ
ದಾಗಲಪ್ರಿಯ ಚಿಂತೆಯಿಲ್ಲ ವಿ
ರಾಗಿಯಾವಗ ಬ್ರಹ್ಮದಲ್ಲಿಹ ಸ್ಥಿರಮತಿಯು ನಜಡ ॥೧೦॥

ಹೊರಗಿರುವ ವಿಷಯದಲಿ ಸಕ್ತತೆ
ಯಿರದನವ ಬ್ರಹ್ಮದಲಿ ಸುಖವನು
ನಿರುತ ತಿಳಿವನು ಬ್ರಹ್ಮಯೋಗದಿ ಸುಖವದಕ್ಷಯವು ।
ಪರಿದು ಬರುವಾ ವಿಷಯ ಭೋಗವ
ದುರುತರದ ದುಃಖಾತ್ಮಕವು ಕೇಳ್
ಭರದಲಾದ್ಯಂತಂಗಳುಳ್ಳದ ಬುಧರಪೇಕ್ಷಿಪರೆ ॥೧೧॥

ತನ್ನ ತನುವಿದ್ದಾಗಲೇ ತಾ
ನಿರ್ಣಯಿಸಿ ಸಹಿಸಲ್ಕೆ ಶಕ್ಯನು
ಯಿನ್ನು ಕಾಮಕ್ರೋಧವವಸಂಯುಕ್ತ ಸುಖಿಯು ನರ ।
ಇನ್ನದಾವನುಲಂತರದಿ ಸುಖಿ
ಯಿನ್ನು ಅಂತರ್ಜ್ಯೋತಿ ಯಾವವ
ಯಿನ್ನು ತಾ ನಂತರ ವಿರಾಮನು ಮುಕ್ತನಾಗುವನು ॥೧೨॥

ದ್ವಂದ್ವ ಸಹನಕೆ ನಿಯಮಿತಾತ್ಮಕೆ
ಯೊಂದಿ ಭೂತಂಗಳೊಳು ಹಿತರತಿ
ಯಿಂದಿರುವ ಕಿಲ್ಬಿಷರ್ಗೆ ದೊರಕುಗು ಬ್ರಹ್ಮನಿರ್ವಾಣ ।
ಬಂದ ಕಾಮ ಕ್ರೋಧ ವಿರಹಿತ
ದಿಂದ ವಿನಿಯತ ಚಿತ್ತಯೋಗಿಗೆ
ಪೊಂದುವುದು ವಿದಿತಾತ್ಮ ನಿರ್ವಾಣದ ಮಹಾಪದವು ॥೧೩॥

ಪೊರಗಿರುವ ವಿಷಯಗಳ ಸ್ಪೃಶಿಸದೆ
ಪೊರಗು ಮಾಡಿಯೆ ಭ್ರೂಯುಗಾಂತರ
ದಿರುವ ಚಕ್ಷುಸ್ಸಿಂದ ಪ್ರಾಣಾಪಾನ ಸಮಮಾಡಿ ।
ನಿರುತ ನಿಯತೇಂದ್ರಿಯ ಮನೋಮತಿ
ವರಮುನಿಯು ಮೋಕ್ಷದಲಪೇಕ್ಷಕ
ನಿರದ ಕ್ರೋಧಭಯೇಚ್ಛೆಕನು ಮುಕ್ತನು ಸದಾಕಾಲ ॥೧೪॥

ತಪದಿ ಯಜ್ಞದಿ ಭೋಕ್ತ ಲೋಕಕೆ
ನೃಪನು ಸಹೃದಯ ಸರ್ವಭೂತಕೆ
ಉಪಮಿಸಿದಡೆನ್ನದು ನಿಧಾನವ ತಿಳಿದಡವಶಾಂತ ।
ಕಪಟಿಯಿಲ್ಲದೆ ಪೇಳ್ದ ತಾನಾ
ನೃಪತಿಯನುಜಗೆ ಶ್ರೀರಮಣನೆಂ
ದಪಗತವಿಲೋಚನಗೆ ಪೇಳಿದ ಸಂಜಯನು ಮುದದಿ ॥೧೫॥

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೫

ಸಂನ್ಯಾಸಯೋಗ

ಕೃಷ್ಣನೇ! ಬಿಡುವುದುತ್ತಮವೋ? ಮಾಡುವುದುತ್ತಮವೋ? ಎಂದನು

ಅರ್ಜುನನೇ! ಎರಡೂ ದಾರಿಗಳೇ. ಬಿಡುವುದಕ್ಕಿಂತಲೂ ಮಾಡುವುದು ಉತ್ತಮ. ಬಿಡುವುದೆಂದರೇನು? ಆಶೆಯನ್ನೂ ದ್ವೇಷವನ್ನೂ ಬಿಟ್ಟರೆ ಕೆಲಸವನ್ನು ಮಾಡಿದರೂ ಮಾಡದೆ ಬಿಟ್ಟಂತೆಯೇ. ಎರಡು ದಾರಿಗಳನ್ನೂ ಮೂಢರು ಬೇರೆ ಬೇರೆಯೆಂದೆನ್ನುವರು. ಒಂದನ್ನು ಚೆನ್ನಾಗಿ ಹಿಡಿದರೆ ಎರಡರ ಪ್ರಯೋಜನವೂ ಆಗುತ್ತೆ. ಎರಡಕ್ಕೂ ಫಲವೊಂದೆ. ಬಿಟ್ಟು ಸುಖಿಸುವುದು ಕಷ್ಟ. ಕೆಲಸದಲ್ಲಿ ಜಾಣನಾಗಿ ಸುಖಿಸುವುದು ಸುಲಭ.

ಯಾವ ಕೆಲಸವನ್ನು ಮಾಡುವಾಗಲೂ ಅದರ ಸ್ವಭಾವವನ್ನು ಅರಿತು ಅಭಿಮಾನ ಹಚ್ಚಿಕೊಳ್ಳದೆ ಇರುವವನು ನೀರಿನೊಳಗಿನ ತಾವರೆಯ ಎಲೆಯಂತೆ ಕರ್ಮಲೇಪವನ್ನು ಹೊಂದನು. ಯೋಗಿಗಳ ಸಂಗವನ್ನು ಬಿಟ್ಟು ಕೆಲಸ ಮಾಡುವನು. ಮನಸ್ಸಿನಲ್ಲಿ ಅಭಿಮಾನ ಬಿಟ್ಟು ಮಾಡಿದರೆ ಲೇಪವಿಲ್ಲವು. ಸ್ವಭಾವವೇ ನಡೆಸುತ್ತೆ. ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಬೆಳಕು ಬಳಸಲ್ಪಟ್ಟಿರುವುದು. ಅವರನ್ನು ನಾಶಮಾಡಿದರೆ ಜ್ಞಾನವು ಬೆಳಗುತ್ತೆ. ಅದರಲ್ಲಿ ಲಕ್ಷ್ಯವಿಟ್ಟು ಸಾಧಿಸುವವರು ಮರಳಿ ಹುಟ್ಟುವುದಿಲ್ಲ. ಬಲ್ಲವರು ಸರ್ವತ್ರ ಸಮಬುದ್ಧಿಗಳಾಗುವರು. ಅಂಥವರೆಲ್ಲಿದ್ದರೆ ಸ್ವರ್ಗಲೋಕವಲ್ಲಿಯೇ ಇರುತ್ತೆ. ಹರ್ಷ ವಿಷಾದಗಳನ್ನು ತೊರದವನ ಸ್ವಾಭಾವಿಕ ಸುಖಕ್ಕೆ ನಾಶವಿಲ್ಲವು. ತನ್ನೊಳಗೆ ಸುಖಿಸುತ್ತಿರುವನು ಬ್ರಹ್ಮನಲ್ಲಿ ಸೇರಿ ಮುಕ್ತನಾಗುವನು.

ದ್ವೈತವನ್ನು ಬಿಟ್ಟವರು ಅದ್ವೈತಾತ್ಮದಲ್ಲಿ ಸೇರುವರು. ಬಲ್ಲವರಿಗೆ ಮೋಕ್ಷವೆಲ್ಲಿಬೇಕಾದರೂ ಇದೆ. ಪ್ರಾಣಾಯಾಮಾದಿ ಯೋಗಗಳಿಂದ ಮನಶ್ಶುದ್ಧಿಯನ್ನು ಪಡೆದು ಸರ್ವಭೂತಗಳಿಗೂ ಪ್ರಿಯವಾದ ಆತ್ಮನನ್ನು ಬಲ್ಲವನು ದುಃಖದೂರನಾಗಿ ಶಾಂತಿಯನ್ನು ಪಡೆಯುವನು.

—*—

ಅಧ್ಯಾಯ–೬
ಅಧ್ಯಾತ್ಮಯೋಗ

ನಿರುತಕರ್ಮಫಲೇಚ್ಛೆಯಿಲ್ಲದೆ
ಯಿರದೆ ಕರ್ಮದಿ ಕಾರ್ಯವೆಂದೇ
ಚರಿಸಲವ ಸಂನ್ಯಾಸಿ ಯೋಗಿಯನಗ್ನಿಯಕ್ರಿಯನು ।
ನರನೆ ಸಂನ್ಯಾಸವು ಅದಾವುದೂ
ನಿರುತಯೋಗವದೆಂದು ತಿಳಿಯೈ
ಯಿರದೆ ತಾ ನಿಸ್ಸಂಗಿಯಾಗಿಯೆ ಯೋಗಿಯಂತಹನು ॥೧॥

ಆರುರುಕ್ಷುವಿಗಕಟ ಕರ್ಮದ
ಲೋರುಗುಡಿಸದ ಯೋಗ ಕಾರಣ
ಧೀರನಾರೂಢನಿಗೆ ಶಮೆಯೇ ಕಾರಣವು ನೋಡೆ ।
ಶಾರದವೆ ತವೆಯಿಂದ್ರಿಯಾರ್ಥರು
ಸೇರಿಯಾ ಕರ್ಮದಲಿ ಯಿಹನವ
ಧೀರನಿಸ್ಸಂಕಲ್ಪ ಯೋಗಾರೂಢನೆನಿಸುವನು ॥೨॥

ಉದ್ಧರಿಸಿಕೊಳಬೇಕು ತನ್ನನು
ನಿರ್ಧರಿಸಿ ದುರ್ವಿಷಯಕೆರಗದ
ಬುದ್ಧಿಯಿಂದವೆ ಮಿತ್ರ ಶತ್ರುಗಳೆರಡು ತನಗೆ ಮತಿ ।
ಬುದ್ಧಿಮಿತ್ರವದವಗೆ ನಿಜದಲಿ
ನಿರ್ಧರಕೆ ನಿಲ್ಲದ ಕುಬುದ್ಧಿಯೆ ಶತ್ರುವದು ತನಗೆ ॥೩॥

ಮೌನಿವಿಜಿತಾತ್ಮ ಪ್ರಶಾಂತಗೆ
ತಾನೆ ಸುಗಮಾಜಿತವು ಪರದಿ ವಿ
ಧಾನ ಸಮಶೀತೋಷ್ಣದಲ್ಲವಮಾನಮಾನದಲಿ ।
ಹಿತನು ಮಿತ್ರನು ಘಾತಕನು ಮ
ತ್ತತಿಶಯರುದಾಸೀನ ದ್ವೇಷಿಯು
ಸತತ ಬಂಧುವಸಾಧು ಪಾಪಿಯಲೇಕಮತಿಯೆ ಘನ ॥೪॥

ಸತತಯೋಗಿಯು ನಿಲ್ಲಿಸಲಿಬೇ
ಕತಿಶಯದ ಮನವಾತ್ಮನಲ್ಲಿಯೆ
ಸ್ಥಿತನು ಯೇಕಾಂತದಿ ಪರಿಗ್ರಹದಾಶೆಗಳ ಬಿಟ್ಟು ।
ವಿತತವಾದ ಫಲೇಚ್ಛೆಯಿನ್ನುರೆ
ಮತಿಯೊಳಾವಗಬಿಟ್ಟು ನೀನೆಲೊ
ಗತಿಯನೋಲೈಸುವೆಯ ಸಂತತವೊದಗಿ ನೀನಿದ್ದು ॥೫॥

ಶುದ್ಧದೇಶದಲಾಸನವ ತವೆ
ನಿರ್ಧರಿಸಿ ಕುಶವಜಿನ ಚೇಲವ
ದುದ್ಧನಿಚಯವದಾಗದಂತಿರೆ ರಚಿಸಿ ಸ್ಥಿರನಾಗಿ ।
ಬುದ್ಧಿಯಲ್ಲೇಕಾಗ್ರವಾಗಲು
ನಿರ್ಧರಿಸಿಯತಚಿತ್ತದಿಂದ್ರಿಯ
ಶುದ್ಧವಾಗುತಲಾತ್ಮಸಿದ್ಧಿಗೆ ಯೋಗಯುಕ್ತನಹ ॥೬॥

ಸಮದಿ ಕಾಯಗ್ರೀವ ಶಿರವೀ
ಕ್ರಮದಿ ಸ್ಥಿರನಚಲಾತ್ಮನಾಗುತ
ವಿಮಲ ನೋಡುತ ನಾಸಿಕಾಗ್ರವ ನೋಡದೆಣ್ದೆಸೆಯ ।
ದಮನಿಸಿ ಮನವನು ಭಯವಿಲ್ಲದ
ಸಮನು ಚಿತ್ತವನೆನ್ನಲರ್ಪಿಸಿ
ಭ್ರಮೆಯದಿಲ್ಲದ ಬ್ರಹ್ಮಚರ್ಯದಿ ಯುಕ್ತನಿಹನು ಮಿಗೆ ॥೭॥

ನಿಯತ ಮಾನಸವನ್ನು ಯೋಗಿಯು
ಸುಯಶ ಕೂಡಿಸಿಯಾತ್ಮನಲ್ಲಿಯೆ
ಭಯರಹಿತನಿರ್ವಾಣ ಶಾಂತಿಯನೊಂದುವನು ಯನ್ನ ।
ನಯವಿದನೆ ಅತ್ಯಶನಶೀಲಗೆ
ನಿಯತವಶನವದಿಲ್ಲದಗೆಯನು
ನಯವು ಸುಪ್ತಗಸುಪ್ತಗೆಯು ಫಲಿಸದು ಮಹಾಯೋಗ ॥೮॥

ಯುಕ್ತದಾಹಾರವು ವಿಹಾರವು
ಯುಕ್ತಚೇಷ್ಟೆಯು ಕರ್ಮದಲ್ಲಿಯು
ಯುಕ್ತವಹಸ್ವಪ್ನಾವಬೋಧಪ್ರಾಪ್ತ ಸುಖಯೋಗ ।
ಮತ್ತೆ ದೀಪನಿವಾತದೇಶದೊ
ಳಿತ್ತರದಿಯೋಗಿಗಳ ನಿಯಮಿತ
ಚಿತ್ತವಾತ್ಮನೊಳೊಂದಿಸುವ ಯೋಗಿಗಳಿಗಿರುತಿಹದು ॥೯॥

ಯೋಗಸೇವನೆಯಿಂದ ನಿಯಮಿತ
ವಾಗಿರುವವರ ಚಿತ್ತವವಲ್ಲಿಯೆ
ತಾಗಿ ವುಪರಮಿಸುವುದು ತನ್ನನು ಕಂಡು ತುಷ್ಟನಹ ।
ಮಿಗಿಲೆನಿಪ ಸುಖವೆಲ್ಲತೀಂದ್ರಿಯ
ಬಗೆಯೆ ಬುದ್ಧಿಗ್ರಾಹ್ಯವದ ತಿಳಿ
ದಗಲಿ ಚಲಿಸುವದಿಲ್ಲವಲ್ಲಿದ್ದಮಲವಹ ಬುದ್ಧಿ ॥೧೦॥

ಇದಕಧಿಕವಹ ಲಾಭವಿಲ್ಲೆಂ
ದವನು ತಿಳಿದರರೊಳಗಿರುವನವ
ಗಧಿಕತರ ದುಃಖವುಮದಾಗೆಯು ಚಲಿಸದವನ ಮತಿ ।
ಅದನು ತಿಳಿ ಬಲುದುಃಖ ಸಂಯೋ
ಗದ ವಿಯೋಗವೆ ಯೋಗಸಂಜ್ಞಕ
ವದನು ನಿಶ್ಚಯವಾಗಿ ಯೋಕ್ತವು ನಿಶ್ಚಲಾತ್ಮತೆಯಿಂ ॥೧೧॥

ಆತ್ಮಸಂಕಲ್ಪದಲಿ ಪುಟ್ಟುವ
ನಾತ್ಮಕಾಮಾದಿಗಳ ತಾ ತ್ಯಜಿ
ಸುತ್ತೆಯಿಂದ್ರಿಯಗಳನು ಮನದಿಂ ನಿಯಮಿಸುತ ನಿಲಿಸು ।
ಸತತಧೃತಿಯಿಂ ಗ್ರಹಿಸಬಟ್ಟೀ
ವಿತತವಹ ಬುದ್ಧಿಂದ ಮೆಲ್ಲಗೆ
ಮತಿಯುತನೆಯುಪರಮಿಸಿ ತನ್ನೊಳು ಮನವ ಚಿಂತಿಸದೆ ॥೧೨॥

ಚಂಚಲದ ಮನವಾವ ಪರಿಯಿಂ
ಚಂಚಲತೆಯಂ ಬಿಟ್ಟು ನಿಲುವುದೊ
ವಂಚಿಸದೆ ಅದರಂತೆ ನಿಯಮಿಸಿ ಆತ್ಮವಶ ಮಾಡು ।
ಅಂಚಿತದ ಶಾಂತಿಯ ಮನಸ್ಕಗೆ
ವಂಚಕನದಲ್ಲದ ಸುಯೋಗಿಗೆ
ಮುಂಚಿಬಹುದಾಸುಖವು ಬ್ರಹ್ಮಾತ್ಮಕಗೆ ಕಲ್ಮಷಗೆ ॥೧೩॥

ಈ ಗತಿಯಲಾಮನವಯಂಜಿಸಿ
ದಾಗ ಯೋಗಿಯು ವಿಗತಕಲ್ಮಷ
ನಾಗಿ ಸುಖದಿಂ ಬ್ರಹ್ಮಸಾಯುಜ್ಯವನು ಪಡೆದಪನು
ಅಗಣಿತದಲ್ಲಿಹ ತನ್ನ ಕಂಡುರೆ
ವಿಗಡ ಭೂತಂಗಳನು ತನ್ನಲಿ
ಬಗೆದು ನೋಡುವ ಯೋಗಯುಕ್ತಗೆ ಸರ್ವವದು ಸಮವು॥೧೪॥

ಈಗ ಸರ್ವವು ತನ್ನೊಳೆಗೆತಂ
ನಾಗುಹೋಗನು ಪರ್ವದಲಿ ಕಂ
ಡಾಗ ನಾ ಮರೆಯಾಗೆನವನಿಗೆ ಅವನ ಬಿಟ್ಟಿರೆನು ।
ಒಗುಮಿಗೆಯ ಯಿೂ ಸರ್ವಭೂತದಿ
ತೆಗೆಯದಿರುತಿಹನೆಂದನೊಂದೇ
ಬಗೆಯಲಿರುತಿಹನಾಗಿ ಪೂಜಿಪನವನದೆಂತಿರಲಿ ॥೧೫॥

ತನ್ನವೋಲೆಲ್ಲವನು ಸಮವಾ
ಗಿನ್ನು ನೋಡುವನಾವನರ್ಜುನ
ಯಿನ್ನು ಸುಖದುಃಖದಲದಾವನು ಯೋಗಿ ಸಮ್ಮತನು ।
ಎನ್ನಲರ್ಜುನ ಯೋಗವಾವುದ
ನಿರ್ಣಯಿಸಿ ಸಾಮ್ಯತೆಯ ಪೇಳಿದೆ
ಯೆನ್ನ ಹವಣಿಲಿ ತಿಳಿಯಲಸದಳ ಸ್ಥಿರವ ಚಂಚಲದಿಂ ॥೧೬॥

ವರದ ಚಂಚಲವಲ್ಲದೇ ಮನ
ವರರೆ ಕ್ಷೋಭೆಯ ಮಾಡುವುದು ದೃಢ
ವಿರದೆ ತಡೆವುದು ಕುಂಭವಾತದಿ ಪರಿಯನಗೆ ನೋಡೆ ।
ಹರಿಯು ಮಗುಳಿಂತೆಂದನರ್ಜುನ
ವೊಲಿರದ ಪರಿನಿಶ್ಚಯವದಾದರು
ಮರೆವ ವೈರಾಗ್ಯದಲಿ ಅಭ್ಯಾಸದಲಿ ವಶವಹುದು ॥೧೭॥

ಚಿತ್ತ ಜಯವಿಲ್ಲದಗೆ ಯೋಗವು
ಮತ್ತೆ ದುಷ್ಪ್ರಾಪವುಮದೇ ಜಿತ
ಚಿತ್ತನಿಗೆ ಯತ್ನದಲಿ ಶಕ್ಯವದೆಂದು ತಿಳಿವುತಿಹೆ ।
ಮತ್ತೆ ನರನಿಂತೆಂದನೀ ಪರಿ
ಚಿತ್ತ ಜಯವಿಲ್ಲದನು ಯೋಗದಿ
ಕೆತ್ತು ಮನ ನಿಲ್ಲದನು ಪೋದನದಾವಗತಿಗವನು ॥೧೮॥

ಆವನಾಗಲಿ ಉಭಯ ಮಾರ್ಗದ
ಭಾವಮೊಂದದೆ ಭ್ರಷ್ಟನಾದವ
ನಾವನವ ಭಿನ್ನಾಭ್ರದಂದದಿ ನಾಶವಾಗುವನು ।
ಈ ವಿಧದ ಸಂಶಯವ ನೀನೆ
ದೇವಶಕ್ಯನು ಭೇಧಿಸಲು ಯಿಂ
ನಾವಗಾದರು ಸಂಶಯ ಪರಿಹರಿಸಲಳವಲ್ಲ ॥೧೯॥

ಇಲ್ಲಿ ಅಲ್ಲಿ ವಿನಾಶವವನಿಗೆ
ಸಲ್ಲದೈ ಕಲ್ಯಾಣ ಮಾರ್ಗವ
ಬಲ್ಲಿದನು ದುರ್ಗತಿಯ ಪೊಂದನು ಪಾರ್ಥ ಕೇಳೆಂದ ।
ಅಲ್ಲಿ ಪುಣ್ಯಾರ್ಜಿತದ ಲೋಕವ
ಬಲ್ಲಿದನು ತಾನೊಂದಿ ಬಹುದಿನ
ಮಲ್ಲಿ ತಾನಿರ್ದಂತೆ ಪುಟ್ಟುವ ಭಾಗ್ಯವಂತರಲೀ ॥೨೦॥

ಒದಗದಿರಲದು ಬುದ್ಧಿಯುತರಹ
ಸದಯ ಯೋಗಿಯ ಕುಲದಿ ಪುಟ್ಟುವು
ದಿದುವೆ ದುರ್ಲಭತರವು ಲೋಕದಿ ಜನ್ಮಮಿತ್ತೆರದ ।
ವೊದಗುವುದಲಾ ಬುದ್ಧಿಯೋಗವು
ಮೊದಲ ಜನ್ಮದಿ ಪಡೆದುದೆಲ್ಲವು
ಪದಿಲದಲಿ ತತ್ಸಿದ್ಧಿ ಯತ್ನದಿ ಪಡೆಯಲನುಗೈವ ॥೨೧॥

ಅವನ ವಶನಾಗಿರ್ದೊಡೆಯು ಪೂರ್ವದಿ
ಹವಣಿಸಿದ ಅಭ್ಯಾಸದಿಂದವೆ
ತವಕಿಸದೆ ಯತ್ನದಲಿ ತಾ ಪರಮಾರ್ಥಮೊಂದುವನು ।
ಮುದದೊಳಾ ಯೋಗಿಯು ಪ್ರಯತ್ನದಿ
ಸದಯ ಯೋಗದಿ ಕೂಡಲಾತಗೆ
ಒದಗಿರುವ ಕಲ್ಮಷವು ಪೋಗಿ ಪರಾಂಗತಿಯ ಪಡೆವ ॥೨೨॥

ಸುಪಥಮೆಲ್ಲ ಸುಯೋಗಿಗಳಿಗಿಂ
ದುಪರಿಮದ್ಗತದಂತರಾತ್ಮನು
ನೆಪದಲೆನ್ನನು ಭಜಿಸಲವನೇ ಯುಕ್ತತೆರನೆನಿಪ ।
ಅಪರಿಮಿತದಲಿ ನನ್ನ ಭಜಿಸಲು
ಸುಪಥದಿಂದಲಿ ಯನ್ನ ಸೇರುವೆ
ಶಪಥವನು ನೀನೊಂದಿ ಸೇರ್ಯೆಯರ್ಜುನನೆ ನೀನು ॥೨೩॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೬

ಅಧ್ಯಾತ್ಮಯೋಗ

ಅರ್ಜುನನೇ! ಕೆಲಸಕ್ಕೆ ಪ್ರಯೋಜನವನ್ನು ಬಯಸದವನೇ ಸಂನ್ಯಾಸಿಯೂ ಯೋಗಿಯೂ ಆಗಿರುವನು. ಸಂಕಲ್ಪವನ್ನು ಬಿಡದವನು ಸಂನ್ಯಾಸಿಯಲ್ಲವು. ಏರಬೇಕಾದವನಿಗೆ ಕರ್ಮವಿರಬೇಕು. ಯೋಗವನ್ನು ಏರಿದವನಿಗೆ ಶಾಂತಿಯೇ ಸಾಕು. ಸಂಕಲ್ಪಗಳಲ್ಲಿ ಸಂಬಂಧಿಸದವನೇ ಸಂನ್ಯಾಸಯೋಗವನ್ನೇರಿದವನು. ತನ್ನಿಂದಲೇ ತನ್ನನ್ನು ಕೆಡಿಸಕೊಳ್ಳಬಾರದು. ತನಗೆ ತಾನೇ ನೆಂಟನಾಗಿ ಉದ್ಧರಿಸಿಕೊಳ್ಳಬೇಕು. ಶಾಂತಚಿತ್ತನಿಗೆ ಆತ್ಮಪ್ರಕಾಶವಾಗುವುದು. ಸದಾ ಬುದ್ಧಿಯುಳ್ಳ ಯೋಗಿಯು ವಿರಕ್ತನಾಗಿ ಏಕಾಂತವಾಸದಿಂದ ಅಭ್ಯಾಸಮಾಡಿ ಆತ್ಮಸುಖವನ್ನು ಪಡೆಯುವನು. ಆಹಾರ ವಿಹಾರಗಳಲ್ಲಿ ಹೆಚ್ಚು ಕಡಿಮೆಯುಳ್ಳವನಿಗೆ ಚಿತ್ತಶುದ್ಧಿಯಾಗುವುದಿಲ್ಲ. ಆರೋಗ್ಯದಿಂದ ಬುದ್ಧಿಯನ್ನು ಪಡೆಯಬೇಕು. ದುಃಖ ನಿವೃತ್ತಿಯೇ ಯೋಗಕ್ಕೆ ಫಲವು.

ನಿಶ್ಚಯಬುದ್ಧಿಯಿಂದ ಯೋಗವನ್ನು ಸಾಧಿಸಿ ಸಂಕಲ್ಪಗಳನ್ನು ತೊರೆದು ಮನಸ್ಸನ್ನು ಮೆಲ್ಲಗೆ ಆತ್ಮನಲ್ಲಿ ಸ್ಥಿರಗೊಳಿಸಿ ವಶ ಮಾಡಿಕೊಂಡವನು ಆತ್ಮಸುಖವನ್ನು ಅನುಭವಿಸುವನು. ಸರ್ವಭೂತಗಳಲ್ಲಿಯ ಆತ್ಮವಿರುವುದು. ಆತ್ಮನಲ್ಲಿ ಸರ್ವಭೂತಗಳೂ ಇರುವವು. ಹೀಗೆ ಆತ್ಮನಾದ ನನ್ನನ್ನು ಸರ್ವತ್ರ ನೋಡುವವನು ನನ್ನಲ್ಲಿಯೇ ಇರುವನು. ಸಾಧಾರಣವಾಗಿ ತನ್ನಂತೆಯೇ ಇತರರನ್ನು ಭಾವಿಸುವ ಅಭ್ಯಾಸವು ಯೋಗಕ್ಕೆ ಮುಖ್ಯಮಾರ್ಗವಾಗಿದೆ ಎನಲು;

ಕೃಷ್ಣನೇ! ಉತ್ತಮಾಧಮಗಳನ್ನೂ ಒಳ್ಳೇದನ್ನೂ, ಕೆಟ್ಟದ್ದನ್ನೂ ಸುಖದುಃಖಗಳನ್ನೂ ಸಮನಾಗಿ ಭಾವಿಸುವಷ್ಟು ಸ್ಥಿರಬುದ್ಧಿಯು ಚಂಚಲವಾದ ಮನಸ್ಸಿನಲ್ಲಿ ಹುಟ್ಟುವುದಿಲ್ಲ. ಅದನ್ನು ನಿಲ್ಲಿಸುವುದು ಪ್ರಯಾಸವೆಂದನು.

ಅರ್ಜುನನೇ! ದಿಟವೆ, ಇಂದ್ರಿಯ ನಿಗ್ರಹವಿಲ್ಲದವನಿಗೆ ಮನೋಜಯವಾಗುವುದಿಲ್ಲ ಎಂದನು.

ಕೃಷ್ಣನೇ! ಇಂದ್ರಿಯ ನಿಗ್ರಹವನ್ನು ಅಭ್ಯಾಸ ಮಾಡುತ್ತಿದ್ದವನು ಪೂರೈಸದೆ ಬಿಟ್ಟರೂ ಸತ್ತರೂ ಅವನ ಗತಿಯೇನೆನ್ನುತ್ತಲೂ,

ಅರ್ಜುನನೇ! ಅವನು ಕೆಡುವುದಿಲ್ಲ. ಪರಲೋಕದಲ್ಲಿ ಸುಖವನ್ನು ಅನುಭವಿಸಿ ಮರಳಿ ಈ ಲೋಕದಲ್ಲಿ ಸಂಪನ್ನನಾಗಿ ಹುಟ್ಟಿ ಅಭ್ಯಾಸಕ್ಕೆ ಹೋಗುವನು. ಅಂಥವರ ಪೂರ್ವವು, ಪೂರ್ವಜನ್ಮದ ಅಭ್ಯಾಸವಾಸನೆಯು ಈ ಜನ್ಮದಲ್ಲಿ ಅನುವರ್ತಿಸಿ ಬರುವುದು. ಹೀಗೆ ಅನೇಕ ಜನ್ಮಗಳಲ್ಲಿ ಅಭ್ಯಾಸಮಾಡಿ ಯೋಗಸಿದ್ಧಿಯನ್ನು ಪಡೆಯಬೇಕು. ಯೋಗಿಯೇ ಸರ್ವಶ್ರೇಷ್ಠನು. ಅವರೊಳಗೆ ನಂಬಿಕೆಯಿಂದ ಆತ್ಮನಾದ ನನ್ನನ್ನು ಭಜಿಸುವವನು ಬಹಳ ಶ್ರೇಷ್ಠನು.

ಅಧ್ಯಾಯ-೭
ಜ್ಞಾನಯೋಗ

ಆಗಲಾ ಭಗವಂತನರ್ಜುನ
ಗಾಗಿ ಪೇಳಿದನೆನ್ನಲೇ ಮಿಗಿ
ಲಾಗಿಯಾಸಕ್ತಿಯಲಿ ಯೆನ್ನಾಶ್ರೈಸಿ ಯೋಗದಲೀ।
ಬೇಗ ಯೋಚಿಸಿ ಸಂಶಯವು ಮಿಗೆ
ತಾಗದವೆಯನ್ನರಿವೆಯದ ಮಿಗಿ
ಲಾಗಿ ಪೇಳುವೆನದನು ಕೇಳ್ಯೆ ಪಾಂಡವೋತ್ತಮನೇ ॥೧॥

ಜ್ಞಾನ ವಿಜ್ಞಾನವನಿದನುನಿನ
ಗಾನುಪೇಳ್ವೆನಶೇಷವಾಗಲು
ಯೇನದಿನ್ನೂ ಕೇಳತಕ್ಕುದದಿಲ್ಲವದ ಕೇಳ್ದು।
ಮಾನವಡಲಯುತಂಗಳಲ್ಲಿಯ
ನೂನಸಿದ್ಧಿಗದೊಬ್ಬ ವರ್ತಿಪ
ನಾ ನರೋತ್ತಮರಲ್ಲದೊಬ್ಬನೆಯೆನ್ನ ನಿಜವರಿವ ॥೨॥

ಭೂಮಿಜಲವಾತಾನಲಾಂಬರ
ವಾಮನೋಬುದ್ಧಿಯುನಹಂಕೃತಿ
ಯಿಮಹಾಯೆನ್ನಯ ಪ್ರಕೃತಿ ಕೇಳಷ್ಟವಿಧ ಭೇದ।
ನೀ ಮನದಿ ವರಪ್ರಕೃತಿಯನು ತಿಳಿ
ಮಾಮಕವು ಜೀವಸ್ವರೂಪವು
ತಾ ಮೆರೆವುದದು ಜಗವನೆಲ್ಲವವಧರಿಸಿ ಯಿ ಪ್ರಕೃತಿ ॥೩॥

ಸ್ಥಾವರಕೆ ಜಂಗಮಕೆ ಯೋನಿಯ
ದಾವುದೆನಲಿದು ನಾನಿದೆಲ್ಲಕೆ
ಜೀವಭೂತನು ಹುಟ್ಟು ಹೊಂದಾಚರಿಪ ಚೇತನನು ।
ವೋವ್ವೊಯೆನ್ನನು ಬಿಟ್ಟು ಪರತರ
ವಾವುದಿಲ್ಲವು ಕೊಂಚವಾದರು
ಭಾವಿಸಲು ಯನ್ನಲ್ಲಿ ಮಣಿಸೂತ್ರದವೋಲ್ಪ್ರೋಕ್ತವಿದು ॥೪॥

ಉದಕದಲಿ ರಸ ಸೂರ್ಯಚಂದ್ರರ
ಲೊದಗಿರುವ ತೇಜವದು ನಾನೆ
ಸದೆಯವೇದದಿ ಪ್ರಣವಯಾಕಾಶದಲಿ ಧ್ವನಿಯಾನೆ ।
ಮುದದಿ ಕೇಳ್ನರರೊಳಗೆ ಪೌರುಷ
ಉದಿಸಿದೀಗಂಧವದು ಪೃಥಿವಿಯ
ಲೊರಗಿದಾ ರವಿಚಂದ್ರನಲಿ ತೇಜವು ನಿರೀಕ್ಷಿಸಲು ॥೫॥

ಜೀವನೇ ನಾ ಸರ್ವಭೂತದಿ
ಪಾವನವೆ ತಿಳಿ ತಪಸಿಗಳಲಾ
ದೇವತಾತಪವಾನೆ ಸರ್ವಕೆ ಪಾವನವದಾದ
ಆವುದು ಸನಾತನದ ಬೀಜವು
ಪಾವನನೆ ನಾಸಾನು ಬುದ್ಧಿಯು
ಧೀವರರಲಾ ತೇಜ ತೇಜಸ್ವಿಗಳ ಜಾಲದಲಿ ॥೬॥

ಬಲಯುತರಲಾ ಬಲವು ನಾವೈ
ಒಲಿದು ಕಾಮಾದಿಗಳದಿಲ್ಲದ
ಇಳೆಯ ಭೂತದಧರ್ಮದಲ್ಲವಿರುದ್ಧ ಕಾಮವೆನೆ ।
ವೊಲವುದೆನ್ನಲ್ಲಿಂದ ಸಾತ್ವಿಕ
ಉಳಿದ ರಾಜಸ ತಾಮಸಂಗಳು
ವೊಲಿದು ನಾನದರಲ್ಲಿಹೆನು ಎನ್ನೊಳಗದಿಲ್ಲವಲ್ಲೈ ॥೭॥

ತ್ರಿಗುಣವೈಕಾರಿಕದ ಭಾವದಿ
ತಗುಲಿ ಯೀ ಜಗವೆಲ್ಲ ಮೋಹಿಸಿ
ಅಘಹರನೆಯೆನ್ನನು ತಿಳಿಯಲವನವ್ಯಯನಪರನ ।
ಅಗಣಿತದ ಗುಣಮಯದ ಯೆನ್ನಯ
ಹಗರಣದ ಮಾಯೆಯ ದುರತ್ಯಯ
ಮಿಗಿಲುಯೆನ್ನೇ ಹೊಂದುವರು ಮಾಯೆಯನು ಗೆಲುವವರು॥೮॥

ಎನ್ನನರಿಯದ ದುಷ್ಕೃತಿಗಳಾ
ದಿನ್ನುಮೂಢ ನರಾಧಮರುಗಳು
ಯೆನ್ನ ಮಾಯಾಪಹೃತ ಜ್ಞಾನರು ಅಸುರಭಾವಕರು ।
ಇನ್ನು ನಾಲ್ದೆರದಿಂದ ಭಜಿಪರು
ಮನ್ನಣೆಯಲೆನ್ನನೆವರಾರೆನೆ
ಸನ್ನುತರುಸುಕೃತಿಗಳು ಜಿಜ್ಞಾಸಾರ್ತನರ್ಥಾರ್ಥಿ ॥೯॥

ಜ್ಞಾನಿಜ್ಞಾನಿಯು ನಿತ್ಯಯುಕ್ತನು
ತಾನು ಹಿರಿದೇಕಾಗ್ರಭಕ್ತನು
ಜ್ಞಾನಿಗಳಿಗಾನತಿ ಹಿತನು ಯನಗತಿಹಿತನದವನು ।
ಈ ನಿಧಾನವ ತಿಳಿದವರು ನೆರೆ
ಮಾನನಿಧಿಗಳು ಪಿರಿಯರಂತಿರ
ಲಾನೆ ಜ್ಞಾನಿಗಳೆಂಬುದದೆ ಮಾತವವನಿಗೆನ್ನಗತಿ ॥೧೦॥

ಬಲುಭವಂಗಳ ಕೊನೆಯಲೇ ತಾ
ನೊಲಿದು ಜ್ಞಾನಿಯದಾಗಿಯನ್ನಲಿ
ಬಲಿದುಪೊಂದುವ ದುರ್ಲಭನು ಸರ್ವವದ ಹರಿಯೆಂಬ ।
ಗೆಲಿದು ನಾನಾ ಕಾಮದಿಂದಲಿ
ತೊಲಗಿದರೆಯಾಜ್ಞಾನಮೊಂದುವ
ರೊಲಿದು ಮತ್ತೆಯು ದೇವತಾಂತರಗಳ ಪ್ರಕೃತಿಯಿಂದ ॥೧೧॥

ದಾರುದಾವಾದ್ಯೈವವನು ಮಿಗೆ
ಕೋರಿ ಭಕ್ತಿಶ್ರದ್ಧೆಯಿಂದಲಿ
ಸೇರಿ ಪೂಜಿಪರವರ ಪರಿಗಲ್ಲಲ್ಲೆಯದ ಕೊಡುವೆ
ಪೂರುಷನುತಚ್ಛ್ರದ್ಧೆಯಿಂದಲಿ
ಸೇರಿಪೂಜಿಸಲಿಚ್ಛೆಗೈವರ
ದಾರವರಿಗೊಲಿದಪುದುಯನ್ನಿಂಕಾದುವನು ನಾನೆ ॥೧೨॥

ಇದರ ಫಲವದಕಂತ್ಯಮುಂಟದೆ
ಯವರವರಿಗಹುದಲ್ಪಮೇಧಸ
ರವರು ದೈವಗಳಾವುದದನರ್ಚಿಪರದಾಗುವರು ।
ತವಿಲಿಯನ್ನನ ದೇಶಭಕ್ತಿಯ
ತವಕದಿಂದಲಿ ಮಾಳ್ಪ ಭಕ್ತರು
ಆವಿರಳಾತ್ಮಕನಾದಯೆನ್ನನೆ ಪೊಂದುತಿಹರೆಂದ ॥೧೩॥

ಅವ್ಯಯವನುತ್ತಮವತೀಂದ್ರಿಯ
ಅವ್ಯಕುತಿಯಾದೆನ್ನಭಾವವ
ನಿರ್ವಹಿಸಿ ತಿಳಿಯದೆ ಕುಬುದ್ಧಿಗಳ್ಪ್ಷೆಕ್ತಿಯುತನೆನುತ ।
ಸರ್ವಗತನನು ತಿಳಿಯದವರ್ಗಳಿ
ಗಿರ್ವನಾಕಾಣಿಸೆನು ಮಾಯೆಯು
ಪರ್ವಿದಂತಿಹೆ ಮೂಢರರಿಯರು ಆಜನನವ್ಯಯನ ॥೧೪॥

ಆದುದನುನಾನರಿವೆ ಅರಿವೆನು
ಮೇದಿನಿಯಲಾಗುತ್ತಲಿರ್ಪುದ
ಸಾದರದಿ ಮುಂದಹುದಬಲ್ಲೆನುಯೆನ್ನರಿಯರಾರು ।
ಭೇದದಿಚ್ಛಾದ್ವೇಷದಿಂದಲೆ
ಆದದ್ವಂದ್ವದಮೋಹಕಿನ್ನೊಳ
ಗಾದ ಕಾರಣಸರ್ಗಮೋದುಗುಸರ್ವ ಭೂತಗಳು ॥೧೫॥

ಆರುಪುಣ್ಯಾಂ ಚರಣಶೀಲರ
ದಾರುಗತಪಾಪಿಗಳಿಗವರಿಗೆ
ಜಾರುವುದು ಯಿದ್ವಂದ್ವ ಮೋಹವು ಯೆನ್ನ ಪೂಜಿಪರು ।
ಆರು ಜನಿಮೃತಿಗಳನು ಗೆಲುವರೆ
ಸೇರಿಯನ್ನಾಶ್ರೈಸಿ ಯತಿಪರು
ಸೇರಿ ಬ್ರಹ್ಮವ ತಿಳಿದರಧ್ಯಾತ್ಮಕದ ಕರ್ಮಗಳ ॥೧೬॥

ಸಾಧಿಭೂತದಿಸಾಧಿದೈವದಿ
ಸಾಧಿಯಜ್ಞದಿಸಹಿತಲೆನ್ನ
ಬಾಧಕನ ತಿಳಿದವರುಯುಕ್ತರುಮರಣ ಕಾಲದಲೀ ।
ಸಾದರದಿ ತಿಳಿಯುವರದೆನ್ನನು
ಮೇದಿಯಲೆಂದೆನುತ ಅರ್ಜುನ
ಗಾ ದಯಾಂಬುಧಿ ಪೇಳ್ದನೆಂದೇ ಸಂಜಯನು ನುಡಿದ ॥೧೭

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೭

ಜ್ಞಾನಯೋಗ

ಅರ್ಜುನನೇ! ನನ್ನ ಸ್ವರೂಪವನ್ನು ತಿಳಿಯಲುಳ್ಳ ಬಗೆಯನ್ನು ಹೇಳುತ್ತೇನೆ. ಅದನ್ನು ತಿಳಿದ ಮೇಲೆ ಇನ್ನೇನೂ ತಿಳಿಯಬೇಕಾದ್ದಿಲ್ಲ. ತಿಳಿದುಕೊಳ್ಳುವುದಕ್ಕೆ ಸಾವಿರಾರು ಮಂದಿ ಯತ್ನಿಸಿದರೆ ಯಾರಾದರೊಬ್ಬನು ದಿಟವನ್ನು ತಿಳಿಯುತ್ತಾನೆ. ಮಣ್ಣು, ನೀರು, ಬೆಂಕಿ, ಗಾಳಿಯು ಬಯಲು ಮನಸ್ಸು, ಬುದ್ಧಿ, ಅಹಂಕಾರಗಳೆಂದು ನನ್ನ ಪ್ರಕೃತಿಯು ೮ ಬಗೆಯಾಗಿದೆ. ಮತ್ತೊಂದು ಪ್ರಕೃತಿಯು ಜೀವಾತ್ಮವಾಗಿದೆ. ಹೀಗೆ ನನ್ನ ಚಿಜ್ಜಡತ್ವ ಭಾವಗಳಿಂದ ಸರ್ವಭೂತಗಳೂ ಹುಟ್ಟಿದ್ದರಿಂದ ನನ್ನಿಂದಲೇ ಪ್ರಪಂಚವಾಯಿತು. ನನಗಿಂತಲೂ ಹೆಚ್ಚಾದ್ದೇನೂ ಇಲ್ಲವು. ನೂಲಿನಲ್ಲಿ ಮಣಿಗಳು ಪೋಣಿಸಲ್ಪಟ್ಟಿರುವಂತೆ ಸರ್ವವೂ ನನ್ನಲ್ಲಿರುವುದು. ನಾನಾದರೋ ನೀರಿನಲ್ಲಿ ರುಚಿ, ಚಂದ್ರ ಸೂರ್ಯರಲ್ಲಿ ಬೆಳಕು, ಭೂಮಿಯಲ್ಲಿ ಗಂಧ ಈ ಮೇರೆ ಸರ್ವತ್ರಸಾರವಾಗಿರುವೆನು. ಎಲ್ಲಕ್ಕೂ ನಾನೇ ಬೀಜವು. ಎಲ್ಲ ಭಾವಗಳೂ ನನ್ನಿಂದಲೇ ಆಗುವವು. ಅವುಗಳಿಗೆ ಮೇಲ್ಪಟ್ಟ ನನ್ನನ್ನು ಮಾಯಾಭಾವಗಳು ತಿಳಿಯಗೊಳಿಸವು. ನನ್ನನ್ನೇ ನಂಬಿದವರು ಮಾಯೆಯನ್ನು ದಾಟುತ್ತಾರೆ. ಪಾಪಿಗಳಾದ ಅಸುರರು ನನ್ನನ್ನು ನಂಬುವುದಿಲ್ಲ. ಪೀಡಿತರು, ಜ್ಞಾನಾರ್ಥಿಗಳು, ಪ್ರಯೋಜನಾರ್ಥಿಗಳು, ಜ್ಞಾನಿಗಳು ಹೀಗೆ ನಾಲ್ಕು ಬಗೆಯವರು. ನನ್ನನ್ನು ಪ್ರೀತಿಸುವರು. ಅವರಲ್ಲಿ ಜ್ಞಾನಿಯೇ ಉತ್ತಮನು. ನನಗವನಿಗೂ ಅವನಿಗೆ ನಾನೂ ಪ್ರಿಯನು. ನನ್ನನ್ನು ತಿಳಿದವನು ನಾನೇ ಎಂದರೆ ಎಲ್ಲರ ಆತ್ಮವೂ ನಾನೇ ಆಗಿರುವುದರಿಂದ ಅವರವರು ಸ್ವಸ್ವರೂಪ ಜ್ಞಾನವನ್ನು ಪಡೆದರೆ ಬ್ರಹ್ಮಭಾವವನ್ನು ಹೊಂದುವರು. ಇದರಿಂದ ಆತ್ಮಭೇದವಿಲ್ಲವಾಯಿತು.

ಸರ್ವವೂ ಆತ್ಮನೆಂಬ ಮಹಾತ್ಮನು ದುರ್ಲಭನು. ಕಾಮಜ್ಞಾನಿಗಳು ಸ್ವಭಾವದಿಂದ ಇತರ ದೇವತೆಗಳನ್ನು ಭಜಿಸುವರು. ಅವರಿಗೆ ಹಾಗೆ ಅದೇ ನೆಚ್ಚಿಕೆಯನ್ನು ಹುಟ್ಟಿಸಿ ಕಾಮಗಳನ್ನು ಕೊಡುವೆನು. ಆ ಫಲಕ್ಕೆ ನಾಶವುಂಟು. ಅದ್ವೈತಾತ್ಮಸ್ವರೂಪನಿಷ್ಠರೆಲ್ಲ ನಾನೇ ಆಗಿರುವುದರಿಂದ ಅವರಿಗೆ ಸ್ವರೂಪಕ್ಕಿಂತಲೂ ಬೇರೆ ಫಲವಿಲ್ಲವಾಗಿ ಅದೇ ನಿತ್ಯವಾಗಿರುವುದು. ಮಾಯಾ ಮೋಹಿತವಾದ ಲೋಕವು ಆದ್ಯಂತಗಳಿಲ್ಲದ ನನ್ನನ್ನು ಅರಿಯದು. ನಾನು ತ್ರೈಕಾಲಿಕವನ್ನೂ ಬಲ್ಲೆನು. ಸೃಷ್ಟಿಯಲ್ಲಿ ಮೂಢವಾಗಿದ್ದ ಭೂತಗಳು ಅಂತರ್ಗತ ಪುಣ್ಯದಿಂದ ದ್ವೈತಾಜ್ಞಾನವನ್ನು ಬಿಟ್ಟು ಆತ್ಮನಾದ ನನ್ನನ್ನು ಭಜಿಸುವರು. ಅಧಿಭೂತಾದಿಗಳೊಡನೆ ನನ್ನನ್ನು ಭಜಿಸುವರು. ಮರಣಕಾಲದಲ್ಲಿಯೂ ತಿಳಿಯುವರು.

—*—

ಅಧ್ಯಾಯ ೮
ಅಕ್ಷರಬ್ರಹ್ಮಯೋಗ

ಕೇಳಿದನು ಕೌಂತೇಯ ಹರಿಯನು
ಪೇಳಿದೇನೈ ಬ್ರಹ್ಮವೆಂದರೆ
ಪೇಳದೇನಧ್ಯಾತ್ಮವೆಂದರೆ ಕರ್ಮವೆಂದೆನಲು ।
ಪೇಳದೇನಧಿಭೂತವೆನಿಸುಗು
ಪೇಳದಧಿದೈವಾದಿ ಯಜ್ಞವ
ಪೇಳುಯಿೊದೇಹದಲದಾರಿಹರಂತ್ಯಕಾಲದಲಿ ॥೧॥

ನಿಯತಮಾನಸದಿಂದಲೆಂತೈ
ನಯವಿದನೆ ನೀ ತಿಳಿಯಲಿಚ್ಛಿಪೆ
ನಯದಿ ಪೇಳುವದೆನಲು ಶ್ರೀ ಹರಿಯಿಂತೆನುತ ನುಡಿದ ।
ಸುಯಶಪರವಕ್ಷರವು ಬ್ರಾಹ್ಮವು
ಅಯನವಧ್ಯಾತ್ಮವು ಸ್ವಭಾವವು
ನಿಯತ ಭೂತದ ಭಾವ ಉದ್ಭವಕರವಿಸರ್ಗವದು ॥೨॥

ಅವಿರಳದಕ್ಷರಭಾವವಧಿ ಭೂ
ತವು ಪುರುಷನಧಿದೈವವಧಿ ಯ
ಜ್ಞವು ವಿಚಾರಿಸಲಾನು ದೇಹದಿ ದೇಹಭೃದ್ವರನೆ ।
ಕವಿವ ಅಂತ್ಯದ ಕಾಲದಲಿನ
ನ್ನುವನೆ ಭಜಿಸುತ ಬಿಟ್ಟು ಕಾಯದ
ಪ್ರವಿಮಲದ ಮದ್ಭಾವಮೊಂದುದವಿಲ್ಲ ಸಂಶಯವು ॥೩॥

ಯಾವ ಯಾವುದ ಸ್ಮರಿಸಿ ಭಾವವ
ನಾವ ಬಿಡುವನು ಕಡೆಗೆ ಕಾಯವ
ತಾನದೊಂದುವನದ ಸದಾ ತದ್ಭಾವ ಭಾವಿತನು ।
ತವಿಲಿ ನೀನದರಿಂದ ನಿರುತವು
ಸವಿನಯವು ಸ್ಮರಿಸುತ್ತಲೊಂದಿಸು
ತವಕದಿಂ ಸೇರುವೆ ಸುನಿಶ್ಚಯವೆನ್ನಮತಮನದಿ ॥೪॥

ನಿರುತ ಯೋಗಾಭ್ಯಾಸ ಬಲದಿಂ
ಮೆರೆವುತೆಲ್ಲಿಯು ಪೋಗದಿಹ ಮನ
ದಿರವು ಚಿಂತನೆಯಿಂದ ಪುರುಷನ ಪೊಂದಿರುತ್ತಿಹುದು ।
ಸ್ಮರಿಸು ಉರುಕವಿಯನು ಪುರಾಣನ
ವರನಿಯಂತ್ರುವಣೋರಣೀಯನ
ನಿರುತರಕ್ಷಕನನು ಅಚಿಂತ್ಯನ ಸೂರ್ಯತೇಜಸನ ॥೫॥

ತಮಕೆ ಪರನಪ್ರಯಾಣ ಕಾಲದಿ
ವಿಮಲಮನ ಸದ್ಭಕ್ತಿಯಿಂದಲಿ
ಸುಮನಯೋಗದಿ ಪ್ರಾಣರನು ಭ್ರೂಮಧ್ಯಗತವೆನಿಸಿ ।
ಭ್ರಮಿಸಿದವೆ ಸತ್ಪರಮಪುರುಷೋ ।
ತ್ತಮನೆ ದಿವ್ಯನ ಚಂದದಿಂದಲಿ
ಅಮಮ ಪೊಂದುವನೆಂದು ಶ್ರೀಹರಿ ನುಡಿದನರ್ಜುನಗೆ ॥೬॥

ಆವುದಕ್ಷರವೆಂದು ಪೇಳ್ವರು
ತಾವುವಿಧರಾ ವೀತರಾಗರ
ದಾವಯತಿಗಳು ಪೊಗುವರಾವುದರಲ್ಲಿ ಇಚ್ಛೈಸುತ ।
ಆವುದನು ತಾವ್ ಬ್ರಹ್ಮಚರ್ಯದಿ
ತೀವಿ ಚರಿಸುವರಿಚ್ಛೆಯಿಂದಲಿ
ಸಾವಧಾನದಿ ತತ್ಪದವ ಸಂಗ್ರಹಿಸಿ ಪೇಳುವೆನು ॥೭॥

ದ್ವಾರಗಳ ಸರ್ವವನು ನಿಯಮಿಸಿ
ಸೇರುಮನವಡ್ಡೈಸಿ ಹೃದಯದಿ
ಸಾರೆ ತನ್ನಯ ಪ್ರಾಣ ಮೂರ್ಧ್ನಿಯೊಳಿಟ್ಟ ನಂತರದಿ ।
ಧಾರಣೆಯನಾಶ್ರೈಸು ಬಳಿಕಿ
ನ್ನೋರುಗುಡಿಸದೆ ಓಮೆನುತ ಮಿಗೆ
ಸಾರಿ ಯೇಕಾಕ್ಷರದ ಬ್ರಹ್ಮವನುಚ್ಚರಿಸುತೆನ್ನನು ॥೮॥

ಬಾರಿಬಾರಿಗೆ ಸ್ಮರಿಸುವಾತನು
ತೋರುವೀ ಕಾಯವನು ಬಿಟ್ಟುರೆ
ಸೇರಿ ಪೊಂದುವ ಪರಮಪದವಿಯನವನು ಕೇಳೆಂದ ।
ಸೇರಿಸದೆ ಮನವನ್ಯ ವಿಷಯದಿ
ಸಾರೆ ಸ್ಮರಿಸುವನೆನ್ನ ನಿತ್ಯವ
ದಾರವಗೆ ನಾ ಸುಲಭ ಯೋಗಿಗೆ ನಿತ್ಯಯುಕ್ತನಿಗೆ ॥೯॥

ಎನ್ನ ಹೊಂದಿಯು ತಿರುಗಿ ಜನ್ಮವ
ನಿನ್ನು ದುಃಖಾಲಯವು ಶಾಶ್ವತ
ವನ್ನು ಹೊಂದ ಮಹಾತ್ಮ ಸಂಸಿದ್ಧಿಯನು ಪಡೆದವನು ।
ಸನ್ನುತನೆ ಆ ಬ್ರಹ್ಮ ಭುವನದಿ
ಯಿನ್ನು ಬಹುದ್ಯೆ ಲೋಕವರ್ಜುನ
ಯನ್ನನೊಂದಿ ಪುನರ್ಜನನವಿಲ್ಲವಗೆ ಕೌಂತೇಯ ॥೧೦॥

ಸನ್ನುತನೆ ಆ ಬ್ರಹ್ಮಭುವನವ
ದಿನ್ನು ಲೋಕವದೆಲ್ಲ ಮಗುವಳೀ
ನಿರ್ಣಯದಿ ಯಾವರ್ತಿಯುಳ್ಳವು ಯನ್ನ ನೆರೆಪೊಂದಿ ।
ಜನ್ಮಮಗುಳಿಲ್ಲೈ ನರೋತ್ತಮ
ಇನ್ನು ಯುಗವು ಸಹಸ್ರವಾದರೆ
ಮನ್ನಿಯಮ ಬ್ರಹ್ಮನಿಗೆ ಪಗಲದು ರಾತ್ರಿಯದರಂತೆ ॥೧೧॥

ಆರು ತಿಳಿದವರವರು ತಿಳಿದವ
ರೂರುವುದು ಅವ್ಯಕ್ತದಿಂದಲಿ
ತೋರುವೀ ವ್ಯಕ್ತಿಗಳು ದಿನದಲಿ ರಾತ್ರೆಯಲ್ಲಂತೆ ।
ಸೇರುವದದವ್ಯಕ್ತದಲಿಯೇ
ತೋರುವೀ ಭೂತದ ಸಮಾಜವು
ಭಾರಿಭಾರಿಯು ತೋರಿ ಕೆಡುವುದಹರ್ನಿಶೆಗಳಲ್ಲಿ ॥೧೨॥

ಅದರಿನಿಂದವಕನ್ಯವಾಗಿಹ
ಪೊದಿದಿರುವ ಪರಭಾವ ಮೊದಲಿನ
ದದುವೆ ಸರ್ವವು ನಾಶವಾದರು ನಾಶವಿಲ್ಲದಕೆ ।
ಅದುವೆ ಅವ್ಯಕ್ತಾಕ್ಷರವು ಮೇ
ಣದುವೆ ಪರಮಾಂಗತಿಯು ಕೇಳ
ಲ್ಲೊದಗಿದರು ಮಗುಳಿತ್ತ ಬಾರರು ಅದುವೆ ಪರಮಾರ್ಥ ॥೧೩॥

ಆ ಪರಮ ಪುರುಷನನನ್ಯದ
ಈ ಪರಿಯ ಭಕ್ತಿಯಲಿ ಲಭ್ಯನು
ಆ ಪದದಿ ಭೂತಂಗಳಡಗುಗು ಅದುವೆ ಸರ್ವತ ತ ।
ಪೋಪಯೋಗಿಗಳಾವಕಾಲದಿ
ತಾ ಪರೀಕ್ಷಿಸೆ ಮಗುಳಿ ಬಾರರು
ಯಿೂ ಪರಿಯಲೇ ಮಗುಳಿ ಬರ್ಪರದಾವ ಕಾಲವೆನೆ ॥೧೪॥

ಧರೆಯೊಳಚ್ಚಿರದುತ್ತ ರಾಯನ
ದಿರವಿನಲಿ ಪೋದವರು ತಿರುಗೀ
ಧರೆಗೆ ಬಾರರು ಬ್ರಹ್ಮವೇತ್ತರು ಬ್ರಹ್ಮವನು ಪೊಂದಿ ।
ಮೆರೆವ ಧೂಮದ ದಕ್ಷಿಣಾಯನ
ದಿರವಿನಲಿ ಪೋದವರು ತಿರುಗೀ
ಧರೆಗೆ ಬರ್ಪರು ಯೋಗಿಗಳು ಮೊದಲಂತೆ ಮರುಕೊಳಿಸಿ ॥೧೫॥

ಇದುವೆ ಶುಕ್ಲದ ಕೃಷ್ಣ ಗತಿಗಳು
ವೊದಗಿ ಜಗಕಿದು ಅಧಿಕಸಮ್ಮತ
ವದರಲೇಕದಿ ಪೋಗಿಬಾರನು ಬರುವನೊಂದರಲಿ ।
ಸದಯ ಯಿೂ ಮಾರ್ಗದ್ವಯಂಗಳ
ವಿದಿತವಾಗಿಯೆ ತಿಳಿದ ಯೋಗಿಯು
ಪದಿಲವಾಗಿಹ ಮೋಹ ಪಡೆವನವನಾವನಾದಡೆಯು ॥೧೬॥

ಸರ್ವಕಾಲದೊಳದರಿನಿಂದವೆ
ಉರ್ವಿಯಲಿ ನೀ ಯೋಗದಿಂದಲಿ
ನಿರ್ವಹಿಸಿ ಯುಕ್ತಾತ್ಮನಾಗ್ಯೆ ಪಾಂಡವೋತ್ತಮನೇ ।
ಸರ್ವವೇದದಿ ಯಜ್ಞದಲಿ ಮಗು
ಉುರ್ವರೆಯ ದಾನದಲಿ ತಪದಲಿ
ಪರ್ವಿಬಹುದದ ತಿಳಿದು ಯೋಗಿಯು ಪೊಂದುವನು ಪರವ ॥೧೭॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೮

ಅಕ್ಷರ ಪರಬ್ರಹ್ಮಯೋಗ

ಕೃಷ್ಣನೇ! ಬ್ರಹ್ಮವಾವುದು? ಅಧ್ಯಾತ್ಮ, ಕರ್ಮ, ಅಧಿಭೂತ, ಅಧಿದೈವ ಇವುಗಳಾವುವು? ಸಾಯುವಾಗ ನಿಯತಾತ್ಮರು ಆತ್ಮನಾದ ನಿನ್ನನ್ನು ಹೇಗೆ ತಿಳಿಯುವರು? ಹೇಳೆಂದನು.

ಅರ್ಜುನನೇ! ನಾಶವಿಲ್ಲದ ಆತ್ಮವೇ ಬ್ರಹ್ಮವು. ಅದರ ಸ್ವಭಾವವೇ ಅಧ್ಯಾತ್ಮವು. ಸೃಷ್ಟ್ಯಾದಿವ್ಯಾಪಾರವೇ ಅದರ ಕರ್ಮವು. ಕ್ಷೀಣಿಸುವ ಸ್ವಭಾವವೇ ಅಧಿಭೂತವು. ಶರೀರದಲ್ಲಿ ಸಂಚರಿಸುವ ಪುರುಷನೇ ಅಧಿದೈವತವು. ದೇಹದಲ್ಲಿ ನಾನೇ ಅಧಿಯಜ್ಞನು. ಇಂಥಾ ನನ್ನನ್ನು ನೆನಪುಗೊಳ್ಳುತ್ತ ಶರೀರವನ್ನು ಬಿಟ್ಟವನು ನಾನೇ ಆಗುವೆನು ಸಂದೇಹವಿಲ್ಲ. ಸಾಯುವಾಗ ಮನೋಭಾವವು ಹೇಗಿದ್ದರೆ ಹಾಗೆ ಜನ್ಮವು ಬರುವುದು. ಆದ್ದರಿಂದ ಯಾವಾಗಲೂ ಬ್ರಹ್ಮಾತ್ಮಭಾವನೆ ಇರಬೇಕು. ನೀನು ನನ್ನ ನೆನಪಿನೊಡನೆ ಸರ್ವಸ್ವವನ್ನೂ ನನಗರ್ಪಿಸಿ ಯುದ್ಧಮಾಡು. ನನ್ನನ್ನೇ ಸೇರುವಿ. ಅಭ್ಯಾಸದಿಂದ ಪರಮಾತ್ಮನನ್ನು ಚಿಂತಿಸುವನು ಪರಮಾತ್ಮನನ್ನೇ ಸೇರುವನು. ಯೋಗಿಗಳು ಆತ್ಮವನ್ನೇ ಧ್ಯಾನಿಸುವರು. ಯೋಗ ಕ್ರಮದ ಸಂಗ್ರಹವೇನೆಂದರೆ, ಪ್ರಾಣಾಯಾಮದಿಂದ ಕುಂಭಿಸಿ, ಪ್ರಣವಮಂತ್ರದಿಂದ ಆತ್ಮನನ್ನು ಲಕ್ಷಿಸಿ ದ್ವೈತವನ್ನು ತೊರೆದು ಧ್ಯಾನಿಸಬೇಕು. ಅಂಥವನಿಗೆ ಆತ್ಮನಾದ ನಾನು ಸುಲಭನು. ನನ್ನಲ್ಲಿ ಸೇರಿದ ಮೇಲೆ ಮರಳಿ ಹುಟ್ಟುವುದಿಲ್ಲವು.

ಸಾವಿರ ಮಹಾಯುಗಗಳಿಗೆ ಸೃಷ್ಟಿಕರ್ತನ ಹಗಲೊಂದಾಗುವುದು. ರಾತ್ರಿಯೂ ಅಷ್ಟರದೆ. ಅವ್ಯಕ್ತನಾದ ಆತ್ಮನ ದೆಸೆಯಿಂದ ಹಗಲಿನಲ್ಲಿ ಜೀವಿಗಳು ಹುಟ್ಟುವವು. ರಾತ್ರಿಯಲ್ಲಿ ಅವ್ಯಕ್ತಾತ್ಮದೊಳಗೆ ಅಡಗುವುವು. ಅಂತಹ ಅವ್ಯಕ್ತಾತ್ಮಕ್ಕಿಂತಲೂ ವ್ಯಕ್ತಾತ್ಮವು ಉತ್ತಮವು. ಎಲ್ಲಕ್ಕೂ ನಾಶವುಂಟು. ಅದಕ್ಕೆ ನಾಶವಿಲ್ಲ. ಅದೇ ಪರಮ ಪದವು. ಆ ನನ್ನನ್ನು ಹೊಂದತಕ್ಕವರು ಬೆಳಕು ಹಗಲು ಶುಕ್ಲಪಕ್ಷ ಉತ್ತರಾಯಣಗಳಲ್ಲಿ ಸಾಯುವರು. ಹೊಗೆ ರಾತ್ರಿ ಕೃಷ್ಣಪಕ್ಷ ದಕ್ಷಿಣಾಯನಗಳಲ್ಲಿ ಸತ್ತವರು ಚಂದ್ರಲೋಕದಿಂದ ಹಿಂದಕ್ಕೆ ತಿರುಗುವರು. ಈ ದಾರಿಗಳನ್ನು ಬಲ್ಲವನು ಮೋಹಗೊಳ್ಳುವುದಿಲ್ಲ. ಆದ್ದರಿಂದ ಯಾವಾಗಲೂ ಯೋಗನಿಷ್ಠನಾದವನು ಪರಮಪದವನ್ನು ಹೊಂದುತ್ತಾನೆ.

—*—

ಅಧ್ಯಾಯ–೯
ರಾಜವಿದ್ಯಾರಾಜಗುಹ್ಯ ಯೋಗ

ಹರಿಯು ಪೇಳಿದ ಗುಹ್ಯತಮವನು
ಒರೆವೆನನಸೂಯುವಿಗೆ ಜ್ಞಾನವ
ನುರುತರದ ವಿಜ್ಞಾನ ಸಹಿತಲಿ ಯಾವುದನು ತಿಳಿದು ।
ಪರಿಹರಿಸಿಯಶುಭವನು ಮೋಕ್ಷದಿ
ಮೆರೆವೆಯದು ಗುಹ್ಯವು ಪವಿತ್ರವ
ದುರುತರದ ಪ್ರತ್ಯಕ್ಷಫಲವದು ನಾಶರಹಿತವದು ॥೧॥

ವಿದ್ಯದೊಳಗಿದು ರಾಜ್ಯವಿದ್ಯವು
ಬುದ್ಧಗುಹ್ಯದಿ ರಾಜಗುಹ್ಯವು
ನಿರ್ಧರಿಸಿ ಮಾಡಲ್ಕೆ ಸುಸುಖವಿದವ್ಯಯವು ಮಿಗಿಲು ।
ಬದ್ಧವಾಗಿಹ ದೃಷ್ಟ ಫಲವಿದು
ಶುದ್ಧ ಧರ್ಮವು ಶ್ರದ್ಧೆಯಿಲ್ಲದೆ
ಹೊದ್ದಲರಿಯದೆ ಯೆನ್ನ ಭವಭವಗಳಲಿ ಭ್ರಮಿಸುವರು ॥೨॥

ಇನ್ನು ಮಿಗಿಲವ್ಯಕ್ತರೂಪನೊ
ಳೆನ್ನೊಳಗೆ ವಿಸ್ತರಿಸಿಕೊಂಡಿಹು
ದಿನ್ನು ನಾ ಸರ್ವದಲಿ ಸರ್ವವದಿಲ್ಲವೆನ್ನೊಳಗೆ ।
ಎನ್ನ ಸಹಜದ ಯೋಗವನು ನೀ
ನಿನ್ನು ನೋಡೈ ಪಾರ್ಥ ಭೂತಗ
ಳನ್ನು ಭರಿಸಲು ಪಾಲಿಸಲು ನಾನೆನ್ನೊಳೊಗದಿಲ್ಲಲೈ ॥೩॥

ನಾನಿರೆನು ಅದರಲ್ಲಿ ಪವನನು
ತಾನದಾಕಸದಲ್ಲಿ ತುಂಬಿಯೆ
ತಾನಿರುವ ಪರಿ ಸರ್ವಭೂತಗಳೆನ್ನೊಳಿರುತಿಹವು ।
ಪೂನಿ ಭೂತಗಳನ್ನು ಪ್ರಕೃತಿಯೊ
ಳ್ತಾನೆಯಡಗುಗು ವಿಲಯಕಾಲದಿ
ತಾನೆ ಕಲ್ಪಾದಿಯಲಿಯನ್ನಿಂ ಸೃಜಿಸಿಕೊಳುತಿಹವು ॥೪॥

ಎನ್ನ ಸ್ವಾಧೀನದ ಪ್ರಕೃತಿಯಿಂ
ದಿನ್ನು ಸೃಜಿಸುವೆ ಮಗುಳಿಮಗುಳದ
ನನ್ನಿ ಪ್ರಕೃತಿಯ ವಶದಿ ಅವಶದ ಸರ್ವಭೂತವನು ।
ಸನ್ನುತನೆ ಆ ಕರ್ಮವೆಲ್ಲವ
ದೆನ್ನ ಬಂಧಿಸಲಾರದದು ನಾ
ನಿನ್ನುದಾಸೀನನು ಅಸಕ್ತನದಾವ ಕರ್ಮದಲೀ ॥೫॥

ಪ್ರಕೃತಿಯನ್ನಿಂ ವಿಶ್ವವೆಲ್ಲವ
ನಕುಟಿಲನೆ ಸೃಜಿಸುತ್ತಲಿರ್ಪುದು
ವಿಕೃತಿಯಹ ಯೀ ಜಗವು ತಾ ಪರಿವರ್ತಿಪುದು ಮರಳಿ ।
ಅಕಟ ಮನುಜಾಕಾರದೆನ್ನನು
ಪ್ರಕಟವಾಗಿಯೆ ತಿಳಿಯರಜ್ಞರು
ವಿಕರಿಸದ ಪರಭಾವವರಿಯದೆ ಲೋಕನಾಥನು ॥೬॥

ವ್ಯರ್ಥದಾಶಾ ಜ್ಞಾನಕರ್ಮರು
ಸ್ವಾರ್ಥವರಿಯದ ವಿಗತಚೇತನ
ಮರ್ತ್ತೆ ತ್ರಿಗುಣಾಶ್ರಯದ ಪ್ರಕೃತಿಯನೊಂದಿ ಮೋಹಿಪರು ।
ಸತ್ಪುರುಷರವರೆನ್ನ ಭಜಿಪರು
ಮತ್ತೆ ದೈವೀ ಪ್ರಕೃತಿಯಿಂದಲಿ
ಯತ್ತಲೊಲೆಯದ ಮನದಿ ತಿಳಿವರು ಯನ್ನನವ್ಯಯನ ॥೭॥

ಸತತ ಕೀರ್ತನೆ ದೃಢದ ವ್ರತದಿಂ
ವಿತತವಾದ ಪ್ರಣವದಿಂದಲ್ಲಿ
ಅತಿಹಿತದ ಭಕ್ತಿಯಲಿ ಯನ್ನನು ಕೂಡಿ ಪೂಜಿಪರು ।
ಹಿತರು ಕೆಲಬರು ಜ್ಞಾನಯಜ್ಞದಿ
ಸತತವೆನ್ನನು ಪೂಜಿಪರು ಯೇ
ಕತೆಯಿನಿಂ ಬೇರೆಯನುಬಹುದಾ ವಿಶ್ವತೋಮುಖನ ॥೮॥

ನಾನೆ ಶ್ರೌತಸ್ಮಾರ್ತರೂಪನು
ನಾನೆ ಔಷಧವಾ ಸ್ವಧಾತ್ಮನು
ನಾನೆ ಮಂತ್ರಾಜ್ಯ ಸ್ವರೂಪನು ನಾನೆ ಹುತವಗ್ನಿ ।
ನಾನೆ ಮಾತಾಪಿತನು ಲೋಕಕೆ
ನಾನೆ ಕರ್ಮವಿಧಾತ ತಾತನು
ನಾನೇ ವೇದ್ಯ ಪವಿತ್ರನೋಂಕಾರತ್ರಯಿೂಮಯನು ॥೯॥

ಗತಿಯು ಭರ್ತನು ಪ್ರಭುವು ಸಾಕ್ಷಿಯ
ಅತಿ ಸುಹೃತು ರಕ್ಷಕನಿವಾಸನು
ಸತತ ಪ್ರಭವ ಪ್ರಳಯ ಶಾಶ್ವತ ಬೀಜವವ್ಯಯನು ।
ಅತಿತಪಿಸುವೆನು ವೃಷ್ಟಿಸುವೆನಾ
ಮತಿಯುತನೆ ಗ್ರಹಿಸುವೆನು ಬಿಡುವೆ
ವಿತತವಮೃತನು ಮೃತ್ಯು ಸದಸತು ನಾನೆ ಕೌಂತೇಯ ॥೧೦॥

ಧರಣಿಯಲಿ ವೇದೋಕ್ತ ಕರ್ಮದಿ
ಮೆರೆವ ಯಜ್ಞದ ಸೋಮಪರು ಮಿಗೆ
ಪರಿಹರಿಸಿ ಪಾಪವನು ಸ್ವರ್ಗಗತಿಯನ್ನು ಕಾಂಕ್ಷಿಪರು ।
ಇರದವರು ಪುಣ್ಯವನು ಪಡೆದಾ
ಸುರವರೇಣ್ಯನ ಲೋಕದಲ್ಲಿಯೆ
ಭರಿತವಾಗಿಹ ದೇವಭೋಗವನನುಭವಿಸುತಿಹರು ॥೧೧॥

ಅವರು ತತ್ಫಲ ಕ್ಷೀಣರಾಗಲು
ತವಕದಲಿ ನೆರೆಮರ್ತ್ಯವನು ಪೊಂ
ದುವರು ವೇದವಿಭಾವಿತರು ತಾವ್ ಪೋಗಿ ಬರುತಿಹರು ।
ಭುವನದೊಳಗೆ ಅನನ್ಯ ಚಿಂತಕ
ರವರು ಯನ್ನನ್ನು ಪರ್ಯುಪಾಸಿಪ
ರವರು ಯುಕ್ತರು ಅವರ ಯೋಗಕ್ಷೇಮವನು ವಹಿಪೆ ॥೧೨॥

ಆರುಭಕ್ತರದನ್ಯದೈವವ
ಸಾರೆ ಶ್ರದ್ಧಾನ್ವಿತರದಾಗಿಯು
ಸೇರಿಯಜಿಪರದೆನ್ನಯಜನವನ ವಿಧಿಪೂರ್ವಕದಿ ।
ಧೀರನಾನೆ ಸರ್ವಯಜ್ಞಧಿ
ಮೀರದುಂಬುದನಧಿಪತಿಯು ಯೆ
ನ್ನಾರು ಕಾಣರು ಅದರಿನಿಂದವೆ ತಿರುಗಿ ಬರುತಿಹರು ॥೧೩॥

ದೇವತೆಗಳನು ಭಜಿಸುವವನಾ
ದೇವತೆಗಳನೆ ಸೇರ್ವನಂತೆಯ
ದಾನಪಿತೃಗಳನರ್ಚಿಸುವ ಪಿತೃಗಳನೆ ಸಾರುವನು ।
ಭಾವಿಸುವಭೂತಗಳನಾವನು
ಸಾವಧಾನದೊಳವನೆ ಸೇರುವ
ಯೀ ಭುವನದೊಳಗೆನ್ನ ಭಜಿಪರದನ್ನೆ ಸೇರುವರು ॥೧೪॥

ದಾವಪತ್ರಫಲಾಂಬುಕುಸುಮವ
ಭಾವಭಕ್ತಿಯಲೆನಗೆ ಕೊಡುತಿಹ
ಪಾವನನು ಶುದ್ಧಾತ್ಮನದನಾ ಕೊಂಬೆ ಸಂತಸದಿ ।
ಯಾವುದನು ನೀಮೊಳ್ವೆಮತ್ತೆಯ
ದಾವುದನು ನೀನುಂಬೆ ಹೋಮಿಪೆ
ಯಾವುದನು ನೀನೀವೆಯದು ಯೆನಗರ್ಪಿಸುವುದೊಲಿದು ॥೧೫॥

ಅಶುಭ ಶುಭಫಲರೂಪವಾಗಿಹ
ಅಸಮಕರ್ಮದ ಬಂಧದಿಂದಲಿ
ಸಸಿನೆ ಬಿಡಲಪ್ಪಡುವೆ ಕ್ಷಿಪ್ರದಿ ಯನ್ನ ಕೃಪೆಯಿಂದ ।
ಎಸೆವ ಸಂನ್ಯಾಸದ ಸುಯೋಗದಿ
ಸಸಿನೆ ಯುಕ್ತಾತ್ಮತೆಯನೊಂದಿಯು
ಅಸಮವಾದವಿಮುಕ್ತನಾಗಿಯೆ ಯೆನ್ನಪೊಂದುತಿಹೆ ॥೧೬॥

ಎಲ್ಲ ಭೂತದಿ ಸಮವದಾಗಿಹೆ
ಯಿಲ್ಲ ದ್ವೇಷಿಯು ಪ್ರಿಯನು ಯನಗೆಯು
ಬಲ್ಲವರು ಮಿಗೆ ಭಕ್ತಿಯಿಂದಲಿ ಭಜಿಸುತಿಹರೆನ್ನ ।
ಅಲ್ಲವರೊಳಾನಿರ್ಪೆಯನ್ನೊಳು
ಬಲ್ಲವರು ತಾವಿರ್ಪರಿಂತಿದು
ಸಲ್ಲುವುದದಾವಾಗಲಾದರು ಪಾರ್ಥ ಕೇಳೆಂದ ॥೧೭॥

ಅತಿದುರಾಚಾರಿಗಳದಾದರು
ಸತತ ಭಜಿಪರನನ್ಯಭಾವದಿ
ಸತತ ತಿಳಿ ಸಾಧುಗಳವರು ನಿಶ್ಚಿಂತರವರೆಂದ ।
ಅತಿತ್ವರದಿ ಧರ್ಮಾತ್ಮನಾಗುವ
ಮತಿಯುತನೆ ಶಾಂತಿಯನು ಪೊಂದುವ
ಸತತಭಕ್ತನು ನಾಶಪೊಂದನು ನಿಶ್ಚಯವು ಪಾರ್ಥ ॥೧೮॥

ಎನ್ನ ಮಿಗಿಲಾಶ್ರೈಸಿ ಪತಿತನು
ಇನ್ನು ಸ್ತ್ರೀಯರು ವೈಶ್ಯ ಶೂದ್ರರು
ಸನ್ನುತನೆ ಪರಗತಿಯ ಪಡೆವರು ನಿಯತ ಕೌಂತೇಯ ।
ಸನ್ನುತವೆ ಬ್ರಾಹ್ಮರು ಸುಭಕ್ತರು
ಪುಣ್ಯಯುತ ರಾಜರ್ಷಿಗಳು ಸಾ
ಕಿನ್ನು ನಿತ್ಯದ ಸುಖವ ಪೊಂದಿಯು ಸೇರುವುದು ಯನ್ನ ॥೧೯॥

ಎನ್ನಲಿಹ ಮನವಾಗಿ ಭಕ್ತಿಯ
ನಿನ್ನು ಯನ್ನನೆ ಮಾಡು ಪೂಜೆಯ
ನಿನ್ನು ಯನ್ನ ನಮಸ್ಕರಿಸು ನೀ ಯನ್ನಲಿಹ ಮನದಿ ।
ಯನ್ನನೆ ಪರಾಯಣದಿ ಭಜಿಸುತ
ಯನ್ನಪೊಂದುವೆಯನ್ನುತಲಿ ತಾ
ಮನ್ನಿಸುತ ವಸುದೇವನಂದನನೆಂದನರ್ಜುನಗೆ ॥೨೦॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೯

ರಾಜವಿದ್ಯಾ ರಾಜಗುಹ್ಯಯೋಗ

ಅರ್ಜುನನೇ! ಶಾಸ್ತ್ರಜ್ಞಾನದೊಡನೆ ಕೂಡಿದ ಗೋಪ್ಯವಾದ ಆತ್ಮಾನುಭವ ಜ್ಞಾನವನ್ನು ನಿನಗೆ ಹೇಳುತ್ತೇನೆ. ಅದನ್ನು ತಿಳಿದು ಅಶುಭದ ದೆಸೆಯಿಂದ ಮುಕ್ತನಾಗುವಿ. ಈ ರಾಜಯೋಗವನ್ನು ನೆನೆಯದವರು ಸಂಸಾರದ ಹಾದಿಯಲ್ಲಿ ಬಿದ್ದು ನನ್ನನ್ನು ಪಡೆಯದೆ ಹಿಂದಕ್ಕೆ ಹೋಗುವರು. ಅವ್ಯಕ್ತರೂಪನಾದ ನನ್ನಿಂದ ಸರ್ವ ಜಗವೂ ವ್ಯಾಪಿಸಲ್ಪಟ್ಟಿವೆ. ಎಲ್ಲ ಭೂತಗಳೂ ನನ್ನಲ್ಲಿವೆ. ಹೀಗಿದ್ದರೂ ಅವುಗಳಲ್ಲಿ ನಾನಿಲ್ಲ. ನನ್ನಲ್ಲಿ ಅವೂ ಸಿಕ್ಕಿಲ್ಲ. ಈ ನನ್ನ ಸಾಮರ್ಥ್ಯವನು ನೋಡು. ಆಕಾಶದಂತೆಯೂ ಗಾಳಿಯಂತೆಯೂ ಸರ್ವಭೂತಗಳಲ್ಲಿಯೂ ನಾನಿರುವೆನು. ಅವು ನನ್ನಲ್ಲಿವೆ. ಸಂಬಂಧಲೇಪವಿಲ್ಲವು.

ಸರ್ವಭೂತಗಳೂ ಪ್ರಳಯದಲ್ಲಿ ನನ್ನ ಪ್ರಕೃತಿಯಲ್ಲಿ ಅಡಗುವವು. ಕಲ್ಪಾದಿಯಲ್ಲಿ ಮರಳಿ ಬಿಡುವೆನು. ಅವುಗಳ ಕರ್ಮಬಂಧವು ನನಗಿಲ್ಲವು. ಏಕೆಂದರೆ ಉಪೇಕ್ಷಿಸುವನಂತೆ ಸಂಬಂಧಿಸದೇ ಇರುವೆನು. ನನ್ನ ಆಧಾರದಿಂದ ಪ್ರಕೃತಿಯು ಪ್ರಪಂಚವನ್ನು ಪರಿಣಾಮಗೊಳಿಸುತ್ತೆ. ಮೂಢರು ಮನುಷ್ಯನೆಂದು ನನ್ನನ್ನು ಭಾವಿಸುವರು. ಪರಮಾತ್ಮನೆಂದು ಅರಿಯರು. ಮಾಯಾಮೋಹಿತರು ಅಸುರರಾಗಿಹರು. ದೇವ ಪ್ರಕೃತಿಯುಳ್ಳವರು ಅಭೇದ ಬುದ್ಧಿಯಿಂದ ನನ್ನನ್ನು ಭಜಿಸುವರು. ಕೆಲವರು ತಿಳಿದು ಆರಾಧಿಸುವರು. ಒಂದು ಬಗೆಯಾಗಿಯೂ, ಹಲವು ಬಗೆಯಾಗಿಯೂ ನಾನೇ ತೋರುವೆನು. ಎಲ್ಲವೂ ನಾನೇ ಲೋಕವ್ಯಾಪಾರವೆಲ್ಲವನ್ನೂ ನಾನೇ ನಡೆಯಿಸುವೆನು. ಒಳ್ಳೆಯದೆಲ್ಲವೂ ನಾನೇ. ಕರ್ಮಯೋಗಿಗಳು ನನ್ನನ್ನು ಆರಾಧಿಸಿ ಸ್ವರ್ಗಭೋಗವನ್ನು ಪಡೆದು, ಮರಳಿ ಮರ್ತ್ಯರಲ್ಲಿ ಜನಿಸಿ ಕಾಮವನ್ನು ಬಯಸಿ, ಸಂಸಾರದಲ್ಲಿ ತಿರುಗುತ್ತಿರುವವರು.

ಯಾವಾಗಲೂ ನನ್ನನ್ನು ಉಪಾಸಿಸುವರ ಯೋಗಕ್ಷೇಮಗಳನ್ನು ನಾನು ವಹಿಸುವೆನು. ಅನ್ಯದೇವತಾಭಕ್ತರೂ ಅವಿಧಿಯಾಗಿ ನನ್ನನ್ನೇ ಭಜಿಸುವರು. ಎಲ್ಲರಿಗೂ ನಾನೇ ಪ್ರಭುವು. ಅವರು ನನ್ನ ಯಾಥಾರ್ಥ್ಯವನ್ನು ಅರಿಯದ್ದರಿಂದ ಆತ್ಮಪದ ಭ್ರಷ್ಟರಾಗುವರು.

ನಾನು ಭಕ್ತಿಪ್ರಿಯನು. ನೀನು ಸರ್ವ ವ್ಯಾಪಾರಗಳನ್ನೂ ನನಗರ್ಪಿಸು. ಅದರ ಬಂಧನದಿಂದ ಬಿಡಲ್ಪಡುವಿ. ನನಗೆಲ್ಲರೂ ಸಮರೆ. ಶತ್ರುಮಿತ್ರಾದಿ ಭೇದವಿಲ್ಲವು. ದುರಾಚಾರವುಳ್ಳವನಾದರೂ ಭೇದಬುದ್ಧಿಯಿಲ್ಲದೆ ನನ್ನನ್ನು ಭಜಿಸುವವನೇ ಧರ್ಮಾತ್ಮನು.

ನನ್ನ ಭಕ್ತರಿಗೆ ಕೇಡಿಲ್ಲವು. ಪಾಪಿಷ್ಠರು ಕೂಡ ನನ್ನನ್ನು ಆಶ್ರಯಿಸಿ ಉತ್ತಮ ಗತಿಯನ್ನು ಪಡೆಯುವರು. ಉತ್ತಮರನ್ನು ಹೇಳತಕ್ಕದ್ದೇನು? ಅಸ್ಥಿರವಾದ ಈ ಲೋಕವನ್ನು ಹೊಂದಿದ ನೀನು ನನ್ನನ್ನು ಭಜಿಸು. ನಿನ್ನ ಆತ್ಮನಾಗಿರುವ ನನ್ನನ್ನೇ ಸೇರುವಿ.

—*—

ಅಧ್ಯಾಯ–೧೦
ವಿಭೂತಿಯೋಗ

ಹರಿಯು ತಾನಿಂತೆಂದ ನರನಿಗೆ
ತಿರಿಗಿ ಕೇಳೈ ಯನ್ನ ವಾಕ್ಯವ
ಪರಮ ಹಿತನಿಗೆ ಪ್ರಿಯಗೆ ಹಿತಕಾಮ್ಯನಿಗೆ ಪೇಳುವೆನು ।
ಸುರರು ಮುನಿಗಳು ತಿಳಿಯಲರಿಯರು
ಪರಮವಾದೀಯನ್ನ ಪ್ರಭವವ
ಸುರರಿಗೆಯು ಋಷಿಗಳಿಗೆ ಪರ್ವಕೆ ಆದಿಕಾರಣನು ॥೧॥

ಯಾವಯೆನ್ನಜನನು ಅನಾದಿಯ
ಯಾವ ಲೋಕಮಹೇಶ್ವರನ ತಿಳಿ
ದಾವಗಲೆ ಸಮ್ಮೂಢ ಪಾಪಗಳಿಂದ ಪೊರಗಹನು ।
ಭೂವರನೆ ಧೀಜ್ಞಾನ ಕ್ಷಮೆ ಶಮೆ
ಭಾವಭಾವ ಭಯಾಭಯವು ಮಿಗೆ
ಸಾವಧಾನದಿ ಸುಖವು ದುಃಖವು ಸತ್ಯ ದಮೆಗಳನು ॥೨॥

ಸಮತೆ ತುಷ್ಟಿಯ ಹಿಂಸೆ ಶಮನವನು
ವಿಮಲವಶವಪಯಶವು ಹಿಂಸೆಯು
ಸುಮನವೆನ್ನಿಂ ಜೀವ ಕೋಟಿಗೆ ಬೇರೆ ಬೇರಹವು ।
ಕ್ರಮದಲೀ ಋಷಿಮನುಗಳೀ ಜಗ
ವಮಲಮಾನಸ ಜಾತಲೋಕಗ
ಳಮಮ ಯನ್ನಪ್ರಭಾವವೆಂದನು ದೇವಕೀಸುತನು ॥೩॥

ನರನೆಯೆನ್ನ ವಿಭೂತಿಯೋಗದ
ತೆರನದಾವನು ಬಲ್ಲ ನಿಜವಾ
ದುರಿತರ ವಿಕಂಪದ ಸುಯೋಗದಿ ಬೆರೆವ ನಿಶ್ಚಯವು ।
ಮೆರೆವ ಯನ್ನಿಂ ಸರ್ವಕೆಲ್ಲಕು
ವರ ಜನನವೆನ್ನಿಂದ ಸರ್ವವು
ಯಿರವೆನುತಲೆನ್ನಿಂದ ಕೂಡಿದ ಭಾವಯುತರಾಗಿ ॥೮॥

ಎನ್ನ ರೂಪಿನ ಚಿತ್ತನಿರತರು
ಯನ್ನಲರ್ಪಿಸಿಯಿರುವ ಪ್ರಾಣರು
ಯನ್ನಬೋಧೆಯನೋರ್ವರೋರ್ವರಿಗರುಹುತಿರ್ಪವರು ।
ಯನ್ನಕಥನವ ಮಾಡುತಿರುವವ
ರೆನ್ನ ಸಂತೋಷದಲಿ ಚರಿಪವ
ರೆನ್ನರೂಪದಿ ರಮಿಸುತಿಹ ಮನದಿರವಿನಲ್ಲಿಹರು ॥೯॥

ಆ ತೆರದ ಯುಕ್ತಾತ್ಮರತಿಕರ
ಪ್ರೀತಿಯಿಂದಲಿಯನ್ನ ಭಜಿಸುವ
ರಾತಗಳಿಗಾಮತಿಯ ಯೋಗವ ಕೊಡುವೆ ಪೊಂದುವರೆ ।
ಆತಗಳಿಗನುರಕ್ತಿ ಮೆರೆಯಲು
ನಾ ತಡೆಯದಜ್ಞಾನತಮವನು
ಖ್ಯಾತಿಯಿಂದಲಿ ಪೋಗಿಯನ್ನಲಿ ತೇಜಯುತರಿಹರು ॥೬॥

ಪರಮಧಾಮವು ಪರವು ಬ್ರಹ್ಮವು
ವರಪವಿತ್ರನು ಶಾಶ್ವತನು ಘನ
ಪರಮಪುರುಷನು ಆದಿದೇವನು ಆಜನು ವಿಭು ನಿನ್ನಂ ।
ಒರೆದ ಪೇಳ್ವರು ಸರ್ವರಾಗಿಹ
ಪರಮ ಋಷಿಗಳು ಅಸಿತನಾರದ
ರೊರೆದರೀ ದೇವಲನು ನಾರದನೀ ಸಹಿತಲೆನಗೆ ॥೭॥

ಸರ್ವವಿದು ನಿಜವೆಂದು ತಿಳಿದೆನು
ನಿರ್ವಹಿಸಿ ನೀ ಪೇಳ್ದುದೆಲ್ಲವ
ಪರ್ವಿರುವ ಯಿೂ ನಿನ್ನ ವ್ಯಕ್ತಿಯನಾರು ಅರಿಯರಲ್ಯೆ ।
ಸರ್ವಗತನೀ ನಿನ್ನನರಿದಡೆ
ಸರ್ವಭೂತಾಧಿಪತಿ ಕೇಶವ
ನಿರ್ವಹಿಸೆ ನೀ ಸರ್ವಭೂತಗಳಿಂದ ಭಾವಿತನು ॥೮॥

ನಿನ್ನ ದಿವ್ಯವಿಭೂತಿಗಳನೆನ
ಗಿನ್ನು ಪೇಳಲಿಬೇಕು ಯಾವೀ
ನಿನ್ನ ರೂಪುಗಳಿಂದ ವ್ಯಾಪಿಸಿ ಜಗದೊಳಿರುತಿಹೆಯೊ ॥
ಸನ್ನುತನೆ ಯಾವ್ಯಾವ ಭಾವದೊ
ಳಿನ್ನು ಯನ್ನಿಂ ಚಿಂತ್ಯನಾಗುವೆ
ಯಿನ್ನು ಯೋಗವ ನಿನ್ನ ಚಿಂತಿಸಿ ಪಡೆಯುವದಕಾಗಿ ॥೯॥

ವಿಸ್ತರದ ಯಿೂ ಆತ್ಮಯೋಗವ
ನಿಸ್ತುಲದಲಿಹ ಯಿೂ ವಿಭೂತಿಯ
ವಿಸ್ತರದ ಕೃಪೆಯಿಂದ ಸಾಲದು ಯನಗಮೃತಸಮವು ॥
ಪ್ರಸ್ತುತದಿ ನಿನಗೊರೆವೆ ಭಳಿರೇ
ವಿಸ್ತರದ ಯನ್ನಯ ವಿಭೂತಿಯ
ನಿಶ್ಚಯದ ಶ್ರೇಷ್ಠಾಂಶೆಯಾದುದ ಪೇಳಲಸದಳವು ॥೧೦॥

ಸರ್ವಭೂತದೊಳಾತ್ಮನಾಗಿಹೆ
ಸರ್ವಭೂತಗಳಾದಿಯಂತ್ಯನು
ನಿರ್ವಹಿಸಿ ಭೂತಗಳ ಮಧ್ಯದೊಳಾನೆಯಿರುತಿಹೆನು ॥
ಸರ್ವಸೂರ್ಯರೊಳಾನೆ ವಿಷ್ಣುವು
ಸರ್ವತೇಜದೊಳಾನೆ ಸೂರ್ಯನು
ನಿರ್ವಹಿಸೆ ಮರುತದಿ ಮರೀಚನು ತಾರೆಗಳೊಳಿಂದು ॥೧೧॥

ವೇದಗಳಲಾ ಸಾಮಸುರರೊಳು
ಮೋದಿಯಹ ವಾಸವನುಯಿಂದ್ರಿಯ
ಭೇದದಲಿ ಮನವಾನುಭೂತಗಳಲ್ಲಿ ಚೇತನನು ॥
ಆದಿರುದ್ರರೊಳಾನೆ ಶಂಕರ
ಮೋದಿಯಾದ ಧನೇಶರಾಕ್ಷಸ
ರಾದಿಯಾಗಿಹ ಯಕ್ಷರೊಳು ಪಾವಕರೊಳಾನಗ್ನಿ ॥೧೨॥

ವರಪುರೋಹಿತರುಗಳಲಾನೇ
ನಿರುತವಾಂಗಿರಸಾಭಿಧೇಯನು
ಪರಮಸೇನಾನಿಗಳಲಾನೇ ಸ್ಕಂದನೆನಿಸುವೆನು ॥
ಪರಪರಿಯ ಮನವುಳಿದುವಂದೇ
ಪರಿಯ ವಿಧದಲಿ ನೋಡಲಾವಗ
ಬರಿವರಿವೆ ನೀನಾಗಿ ತಿಳಿವೈ ವರ ಧನುರ್ಧರನೆ ॥೧೩॥

ಯಜ್ಞದಲಿ ಜಪರೂಪನಾ ಸ
ರ್ವಜ್ಞ ಸ್ಥಾವರದಲ್ಲಿ ಹಿಮನಗ
ಪ್ರಾಜ್ಞಪಾದಪಗಳಲಿ ಮೆರೆವಶ್ವತ್ಥವಾಗಿಹೆನು ॥
ಪ್ರಾಜ್ಞ ಚಿತ್ರರಥಾಂಕ ಕೇಳೈ
ಸುಜ್ಞಗಂಧರ್ವರೊಳು ನಾನು ಪ
ರಜ್ಞ ಸಿದ್ಧರಲಾನೆ ಕಪಿಲನು ಹಯಗಳೊಳಗಾನು ॥೧೪॥

ಮೆರೆವ ಉಚ್ಚೈಶ್ರವಸ ನಾನೇ
ಹರಿಯನಿಪೆ ಹಯಗಳಲಿ ಗಜದಲಿ
ಮೆರೆವ ಐರಾವತವು ನರರೊಳಗಾ ನರಾಧಿಪನು ॥
ಮೆರವ ಪವಿಯಾಯುಧಗಳಲಿ ನಾ
ಗುರುತರದ ಕಾಮಧುಘ ನಾನೀ
ಪರಿಯ ಗೋಗಣಗಳಲಿ ನರರಲಿ ಮನ್ಮಥನು ನಾನು ॥೧೫॥

ಪರಿವ ಸರ್ಪಗಳಲ್ಲಿ ವಾಸುಕಿ
ಉರಗಗಳಲಾ ಆದಿಶೇಷನು
ಮೆರೆವ ಜಲಚರಗಳಲಿ ನಾ ವರುಣಾಖ್ಯ ಕೌಂತೇಯ ॥
ಅರಿಯಮನು ಪಿತೃಗಳಲಿ ಸಯ್ಯಮ
ತರಲಿ ಯಮ ಪ್ರಹ್ಲಾದ ದೈತರೊ
ಳುರೆ ಕಲಯಿತೃಗಳಲಾ ಕಾಲಸಿಂಹವು ಮೃಗಗಳೊಳಗಾನು ॥೧೬॥

ಇರುವ ಪಕ್ಷಿಗಳಲ್ಲಿ ನಾನೇ
ಪರಮತಾರ್ಕ್ಷ್ಯನು ಚರಿಸುವರಲಾ
ಮರುತ ಶರಧರರೊಳಗೆ ರಾಮನು ಮೊನದಲಿ ನಕ್ರ ॥
ಹರಿವನದಿಗಳೊಳಾನೆ ಜಾಹ್ನವಿ
ಮೆರವಸರ್ಗೆಯಲಾದಿಮಧ್ಯದ
ಪರಿಯಲಾ ಕಡೆಯಲ್ಲಿ ನಾನ್ನೈ ಕೇಳ್ಧನಂಜಯನೆ ॥೧೭॥

ವಿದ್ಯದಲಿ ಅಧ್ಯಾತ್ಮವಿದ್ಯೆಯ
ಭೇದ್ಯವಾದಿಗಳಲ್ಲಿ ವಾದವು ಸಾಧ್ಯ
ದಕ್ಷರಗಳಲಕಾರವು ಸಮಸದಲಿ ದ್ವಂದ್ವವು ॥
ಅದ್ವಯನೆನಾ ಕಾಲವಕ್ಷಯ
ಬದ್ಧವು ವಿಧಾತೃಗಳಲಾನೇ
ಬುದ್ಧಿಯುತನಾ ವಿಶ್ವತೋಮುಖ ಪಾಂಡವೋತ್ತಮನೆ ॥೧೮॥

ಸರ್ವಹರಣದಿ ಮೃತ್ಯುವಾನೇ
ನಿರ್ವಹಿಸಿ ತಿಳಿ ಹುಟ್ಟಿದುದಕೆಯು
ಉರ್ವಿಯಲಿ ಹುಟ್ಟುವದಕಾ ಕೀರ್ತಿಶ್ರೀಯರುಗಳ ॥
ಪರ್ವಿಮೆರೆವೆನ್ನಯ ವಿಭೂತಿಯು
ಉರ್ವಿಯಲಿ ಮೇಧಾಧೃತಿಕ್ಷಮೆ
ಸರ್ವವಾಗಿಹುದೆಲ್ಲ ಸಾಮದಿ ಬೃಹತ್ಸಾಮ ॥೧೯॥

ಸರ್ವಛಂದದಿ ತ್ರಿಪದಮಾಸದಿ
ತೋರ್ವೆ ನಾ ಮಾರ್ಗಶಿರಮಾಗಿಯೆ
ಸರ್ವಋತುಗಳೊಳಾ ವಸಂತದ ಋತುವದಾಗಿಹೆನು ॥
ಭರದವಂಚನೆಗಳಲಿ ದ್ಯೂತವು
ಭರಿತ ತೇಜಸ್ವಿಗಳಲಾನೇ
ಪರಮತೇಜನು ನೋಡಲುದ್ಯೋಗಿಗಳೊಳುದ್ಯೋಗ ॥೨೦॥

ಸತ್ವವುಳ್ಳರೊಳಾನೆ ಸತ್ವವು
ಮತ್ತೆ ವೃಷ್ಣಿಗಳಲ್ಲಿ ಕೃಷ್ಣನು
ಸತ್ಯಯುತರಹ ಪಾಂಡವರಲಾ ಪಾರ್ಥನೇ ನಾನು ॥
ವೇತ್ತರಾಗಿಹ ಮುನಿಗಳೊಳು ನಾ
ಸತ್ಯವ್ಯಾಸನು ಕವಿಗಳೊಳು ನಾ
ಮತ್ತೆ ಉಶನಾ ಕವಿಯು ದಮಯುತರೊಳಗೆ ನಾ ದಂಡ ॥೨೧॥

ನೀತಿ ತಿಳಿಯುವದರಲಿ ಕೇಳ್ಕೆ
ಖ್ಯಾತವಾಗಿಹ ಗುಹ್ಯಗಳೊಳಾ
ರೀತಿಯಾಗಿಹ ಮೌನಜ್ಞಾನವು ಜ್ಞಾನವಂತರೊಳು ॥
ಸಾತಿಶಯಭೂತದಲಿ ಬೀಜವು
ಮಾತದೇನೆಲ್ಲದಲಿ ನಾನೇ
ಖ್ಯಾತಿಯಾದೇಕಾಂಶಯಿಂದಿರುತಿರ್ಪೆ ಸರ್ವದಲಿ ॥೨೨॥

ಕೊನೆಯದಿಲ್ಲವು ಯನ್ನದಿವ್ಯದ
ಘನವಿಭೂತಿಗಳಿಗೆ ಪರಂತಪ
ಮನದೊಳುದ್ಯೋಗಿಸಿದ ಕೊಂಚವ ಪೇಳಿದೆನು ಮುದದಿ ॥
ತಾನದಾವಾವಾ ವಿಭೂತಿಯು
ತಾನುಯನ್ನಯ ಸತ್ವ ಊರ್ಜಿತ
ತಾನು ಶ್ರೀಯುತವದುವೆ ತಿಳಿ ತೇಜೋಂಶ ಸಂಭವವು ॥೨೩॥

ಅತಿ ತರದಿ ತಿಳಿದುದರಲೇನ್ನೈ
ಮತಿಯುತನೆ ಯೇಕಾಂಶೆಯಿಂದಲಿ
ಸತತವೆಲ್ಲದಲಿಹೆನು ಜಗದಲಿ ಕೇಳ್ಧನಂಜಯನೆ
ಅತಿಶಯದಲಿಂತೆಂದು ನರನಿಗೆ
ಹಿತವನಾ ಹರಿ ಬೋಧಿಸಿದ ಕೇಳ್
ಕ್ಷಿತಿಪಯೆಂದಾ ಸಂಜಯನು ಹೇಳಿದನು ತಿಳಿಯುವೋಲು ॥೨೪॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೦

ವಿಭೂತಿಯೋಗ

ಅರ್ಜುನನೇ! ಮರಳಿಯೂ ಶ್ರೇಷ್ಠವಾದ ನನ್ನ ಮಾತನ್ನು ಕೇಳು. ನಿನಗೆ ಹಿತವನ್ನು ಹೇಳುವೆನು. ನನ್ನ ಪ್ರಭಾವವನ್ನು ದೇವತೆಗಳೂ ಅರಿಯರು. ನಾನೆಲ್ಲರಿಗೂ ಮೊದಲನೆಯವನು. ನನ್ನನ್ನು ಲೋಕೇಶ್ವರನೆಂದು ಬಲ್ಲವರು ಎಲ್ಲ ಪಾಪಗಳಿಂದಲೂ ಬಿಡಲ್ಪಡುವರು. ಮನೋವೃತ್ತಿಗಳೆಲ್ಲವೂ ನನ್ನ ದೆಸೆಯಿಂದಲೇ ಆಗುವವು. ಸೃಷ್ಟಿಕರ್ತರೆಲ್ಲರೂ ನನ್ನ ಮನೋಭಾವನೆಯಿಂದಾದವರೆ. ನನ್ನನ್ನು ಭಜಿಸುವವರಿಗೆ ಬುದ್ಧಿಯೋಗವನ್ನು ಕೊಡುವೆನು. ಹೀಗೆನ್ನುತ್ತಲೂ,

ಕೃಷ್ಣನೇ! ನೀನೇ ಪರಮಾತ್ಮನೆಂದು ಮಹರ್ಷಿಗಳೆಲ್ಲರೂ ಹೇಳಿದ್ದರು. ಈಗ ನೀನೂ ಹೇಳುವಿ. ನಾನು ದಿಟವೆಂತಲೇ ನೆಚ್ಚುವೆನೇ. ನಿನ್ನ ದಿಟವನ್ನು ಯಾರೂ ಅರಿಯರು. ನೀನೇ ಬಲ್ಲೆ. ನಿನ್ನ ಐಶ್ವರ್ಯವನ್ನು ನಾನು ಹೇಗೆ ಚಿಂತಿಸಬೇಕೋ ವಿಸ್ತರಿಸಿ ಹೇಳೆಂದನು.

ಶ್ರೀಕೃಷ್ಣನು ಅರ್ಜುನನೇ, ಎಷ್ಟೆಂದು ಹೇಳಬಹುದೇ? ಮುಖ್ಯವಾಗಿ ಕೊಂಚಕೇಳು! ಸರ್ವಭೂತಗಳ ಆತ್ಮವು ನಾನೇ; ಆದಿ ಮಧ್ಯಾಂತಗಳು ನಾನೆ; ದೇವತೆಗಳಲ್ಲಿ ವಿಷ್ಣು; ಬೆಳಕುಗಳಲ್ಲಿ ಸೂರ್ಯ: ನಕ್ಷತ್ರಗಳಲ್ಲಿ ಚಂದ್ರ; ಇಂದ್ರಿಯಗಳಲ್ಲಿ ಮನಸ್ಸು; ಭೂತಗಳಲ್ಲಿ ಜ್ಞಪ್ತಿ; ರುದ್ರರಲ್ಲಿ ಶಂಕರನು, ಗಿರಿಗಳಲ್ಲಿ ಮೇರು, ಪುರೋಹಿತರಲ್ಲಿ ಬೃಹಸ್ಪತಿ; ಸೇನಾಪತಿಗಳಲ್ಲಿ ಕುಮಾರನು; ಆಯುಧಗಳಲ್ಲಿ ವಜ್ರವು; ಶಸ್ತ್ರಧಾರಿಗಳಲ್ಲಿ ರಾಮನು; ವಿದ್ಯೆಗಳಲ್ಲಿ ವೇದಾಂತ; ಹೊಳೆಗಳಲ್ಲಿ ಗಂಗೆ; ಯಾದವರಲ್ಲಿ ಕೃಷ್ಣನು; ಪಾಂಡವರಲ್ಲಿ ಅರ್ಜುನನು; ಮುನಿಗಳಲ್ಲಿ ವ್ಯಾಸನು. ಈ ಮೇರೆ ಯಾವುದು ಶ್ರೇಷ್ಠವಾಗಿ ತೋರಿದರೆ ಅವುಗಳನ್ನು ನನ್ನ ಐಶ್ವರ್ಯ ದೇಶವೆಂದು ತಿಳಿದುಕೋ; ಪ್ರಪಂಚವೆಲ್ಲವನ್ನೂ ಒಂದಂಶದಿಂದ ವ್ಯಾಪಿಸಿರುವೆನು. ಇನ್ನು ಮೂರಂಶಗಳು ಆವೃತವಾಗಿ ಜಗದ್ವ್ಯಾಪಾರವಿಲ್ಲದಿರುವುದು.

—*—

ಅಧ್ಯಾಯ– ೧೧
ವಿಶ್ವರೂಪ ಸಂದರ್ಶನಯೋಗ

ಎನ್ನನುಗ್ರಹಕೋಸುಗವೆ ಘನ
ಪೂರ್ವವಾಗಿಹ ಪರಮಗುಹ್ಯವ
ನಿನ್ನು ಅಧ್ಯಾತ್ಮತೆಯದಾವುದೊ ನೀ ನಯದಿ ಯನಗೇ ॥
ಇನ್ನೊರೆದೆಯದರಿಂದೆ ಮೋಹವು
ಛಿನ್ನವಾಯಿತು ಭೂತಗಳಜನಿ
ಯನ್ನಿರಯ ವಿಸ್ತಾರದಿಂದಲಿ ಪೇಳ್ದೆ ಶ್ರೀಹರಿಯೆ ॥೧॥

ಇನ್ನು ಅವ್ಯಯವಾದ ನಿನ್ನಯ
ಸನ್ನುತ ಮಹಾತ್ಮತೆಯಿದು ಯೆನ
ಗಿನ್ನು ತಿಳಿಯಿತು ಅದರೊಳೇಕಾಂಶದಲಿಯಿರುತಿಹುದ ॥
ಎನ್ನ ಮತಿಯಾರೂಪನೋಡ
ಲ್ಕನ್ನಿಸುತ್ತಿದೆ ತೋರಬೇಕಾ
ನಿನ್ನ ನಿಜವಹ ವಿಶ್ವರೂಪವ ಪೂರುಷೋತ್ತಮನೆ ॥೨॥

ನೋಡಲಾನು ಸಮರ್ಥನೆಂದೇ
ಕೂಡೆ ನೀ ತಿಳಿದಿರ್ದುದಾದಡೆ
ಕೂಡೆ ತೋರಲಿಬೇಕು ಯೋಗೀಶ್ವರನೆ ಅವ್ಯಯವ
ನೋಡುವೆನು ಕಣ್ಣಾರೆ ನೀನೆಂ
ದಾಡುವಾಕ್ಯವ ಕೇಳಿ ಶ್ರೀಹರಿ
ನೋಡಿದೈ ಕುಂತಿಕುಮಾರನೆ ರೂಪುಗಳನಿದನು ॥೩॥

ಶತಸಹಸ್ರಂಗಳನು ಪಿಡಿದತು
ಲಿತದ ವರ್ಣಾಕೃತಿಯ ನಾನಾ
ವಿತತರೂಪಂಗಳನು ಆದಿತ್ಯರನು ವಸುಗಳನು ॥
ಖತಿಯಲಿಹ ರುದ್ರರನು ತಾನತಿ
ಮತಿಯುತರ ಅಶ್ವಿನಿಯರನು ಮರು
ತತಿಯೆನೆಂದಿಗು ಕಾಣದುದ ನೋಡೈಯ ಭಾರತನೆ ॥೪॥

ಎನ್ನ ದೇಹದಲೊಂದು ದೇಶದಿ
ಸನ್ನುತದಸಚರಾಚರಂಗಳ
ನಿನ್ನುಕೂಡಿದ ಜಗವದೆಲ್ಲವನಿಂದುನೀ ನೋಡೈ ॥
ಇನ್ನು ನೋಡಲಿಬೇಕು ನಾನಿಹು
ದನ್ನು ನೋಡಲು ಶಕ್ಯವಾಗದು
ಕಣ್ಣು ಕೊಡುವೆನು ನೋಡುಯೆನ್ನೈಶ್ವರದ ತನುವ ॥೫॥

ಅಂಥ ನೃಪನಿಗೆ ಸಂಜಯನು ಯಿಂ
ತೆಂದು ಪೇಳಿದನೀಪ್ರಕಾರದಿ
ಕಂದರ್ಪಪಿತ ನರಗೆ ಪೇಳಿದ ಯೋಗಿಗಳಿಗೊಡೆಯ ॥
ಮುಂದೆ ತೋರಿದನರ್ಜುನಗೆ ಮುದ
ದಿಂದ ಐಶ್ವರ್ಯ ಪರಮರೂಪವ
ನಂದನೇಕ ಸುವಕ್ತ್ರನಯನವನೇಕದರ್ಶನದ ॥೬॥

ಮಿತಿಯದಿಲ್ಲದ ದಿವ್ಯಭೂಷಣ
ವಿತತಿಯುದ್ಯದ್ದಿವ್ಯದಾಯುಧ
ವತತಿ ತರದ ಮಾಲ್ಯಾಂಬರದ ಚಂದನ ದಿವ್ಯಗಂಧವನು ॥
ಹಿತದಿ ಲೇಪಿಸಿದವನ ಸರ್ವದ
ಲತಿಶಯಾಶ್ಚರ್ಯದ ಸ್ವರೂಪನ
ಮತಿಗೆ ಗೋಚರವಾದನಂತನ ವಿಶ್ವತೋಮುಖನ ॥೭॥

ದಿವಿಯಲೊಂದೇ ಕಾಲದಲ್ಲಾ
ಪ್ರವಿಮಲದ ಸವಿತಾಸಹಸ್ರಗ
ಳವಗಡಿಸಿ ಪುಟ್ಟಿದರೆ ಪ್ರಭೆಯಂತಾ ಮಹಾತ್ಮನದು ॥
ಕವಿವ ಪ್ರಭೆಯಿಂತೆಂದು ಸಂಜಯ
ನರಗೆ ಪೇಳಿದನಲ್ಲಿಯೊಬ್ಬನೊ
ಲವಿರಳದ ಜಗ ಬಹಳವಾಗಿ ವಿಭಕ್ತವಾಗಿಹುದು ॥೮॥

ದೇವದೇವನ ಕಾಯದಲ್ಲಿಯೆ
ಭಾವಿಸುತ ತಾ ನೋಡಿ ಪಾಂಡವ
ನಾವಗಲೆ ವಿಸ್ಮಯವ ಕೂಡಿಯು ಕಲಿಧನಂಜಯನು ॥
ಭಾವಹೃಷ್ಟಿಯಲಧಿಕ ಪುಲಕಿಸು
ತಾವಗಲೆ ರೋಮಾಂಚನಾಗುತ
ದೇವನಿಗೆ ಮಿಗಿಲೆರಗಿ ನುಡಿದನು ಅಂಜಲಿಯ ಪಿಡಿದು ॥೯॥

ತಾ ನುಡಿದನರ್ಜುನನು ದೇವ ನಿ
ಧಾನಿಸಲು ನಿನ್ನಲ್ಲಿ ನೋಡುವೆ
ನಾನು ಯೊಭೂತಗಳ ಸಂಘವ ಕಮಲದಾಸನದಿಂ ॥
ಭೂವಿನುತ ಬ್ರಹ್ಮನನು ಈಶನ
ನಾನು ಋಷಿಗಳನುರಗಸಿದ್ಧರ
ಈ ನಿಧಾನದಲಪರಿಮಿತವಹ ಹಸ್ತನೇತ್ರಗಳ ॥೧೦॥

ಉದರವಕ್ತ್ರಂಗಳನು ನೋಡುವೆ
ಸದಯ ಸರ್ವಾನಂತರೂಪವ
ಉದಯಮಧ್ಯವು ಅಂತವಿಲ್ಲದ ವಿಶ್ವರೂಪವನು ॥
ಬುಧವಿನುತ ವಿಶ್ವೇಶ ನಿನ್ನಂ
ವಿದಿತವಾಗಿಯೆ ನೋಡುತಿರ್ಪೆದು
ವೊದಗಿ ಮೆರೆವ ಕಿರೀಟಿಯನು ಗದಿಚಕ್ರಿಯನು ನಿನ್ನಂ ॥೧೧॥

ಪರಮತೇಜೋರಾಶಿಯಾದನ
ಮೆರವ ಸರ್ವದಿ ದೀಪ್ತಿಮಂತನ
ಭರದ ದೀಪ್ತಾನಲನ ವಹ್ನಿಯ ಆರ್ಯಮಚ್ಯುತನ ॥
ವರಸುರಪ್ರಿಯನಪ್ರಮೇಯನ
ಭರದಿ ನೋಡಲ್ಕಾಗದನ ನಾ
ನಿರದೆ ನೋಡುವೆ ನೀನೆ ಯಕ್ಷರ ಪರಮನನು ತಿಳಿಯಲ್ ॥೧೨॥

ಪೊರೆದ ಕರ್ತನೆ ಯೆಲ್ಲ ವಿಶ್ವಕೆ
ವರನಿಧಾನ ನೀನದವ್ಯಯ
ಪರಮ ಶಾಶ್ವತ ಧರ್ಮಗೋಪ್ತನು ನೀ ಸನಾತನನು ॥
ಮೆರೆಯೆ ಸಮ್ಮತ ಪುರುಷನಾದನು
ನೆರೆಯಲಾದ್ಯಂತಗಳದಿಲ್ಲದ
ಪರಮವೀರ್ಯನನಂತಬಾಹುವನಗ್ನಿ ಸಮಮುಖನ ॥೧೩॥

ತನ್ನ ನಿಜರೂಪಿನಲಿ ವಿಶ್ವವ
ನಿನ್ನು ತಪಿಸುತ್ತಿಹ ಜಗದೊಳ
ಗುನ್ನಿಸಲು ತಾನೊಬ್ಬನೇ ತುಂಬಿಹ ರೂಪನನು ॥
ಯಿನ್ನು ನಿನ್ನದ್ಭುತದ ರೂಪವ
ನನ್ನಿ ನೋಡಿಯೆ ವಿಶ್ವವೆಲ್ಲವು
ಸನ್ನುತದಲಿಹ ಈ ತ್ರಿಲೋಕವು ವ್ಯಥಿತವಾಗುತಿದೆ ॥೧೪॥

ನಾನು ಈ ಸುರಸಂಘವೆಲ್ಲವು
ಧೀನಿಧಿಯೆ ಶರಣೊಂದುತಿರ್ಪೆವು
ತಾನೆ ಕೆಲವರು ಭಯದಿಯಂಜಲಿಬದ್ಧತೆಯನೊಂದಿ ॥
ಮಾನದಿಂದಲಿ ಸುತಿಸುತಿರ್ಪರ
ಹೀನಋಷಿಗಳು ಸಿದ್ಧಸಂಘವು
ತಾನೆ ಸ್ವಸ್ತಿಯದೆಂದು ಪುಷ್ಕಲವಾದ ಸ್ತುತಿಗಳಿನಿಂ ॥೧೫॥

ರುದ್ರರಾದಿತ್ಯರು ವಸುಗಳಾ
ಸಾಧ್ಯ ವಿಶ್ವೇಶ್ವಿನಿಗಳಾ ನಿರ
ವದ್ಯಮನು ಪಿತೃಯಕ್ಷಗಂಧರ್ವಾದಿ ಸಿದ್ಧಗಣ ॥
ಅದ್ವಯನೆವಿಸ್ಮಿತರದಾಗುತ
ಹೃದ್ಯ ನಿನ್ನನು ನೋಡುತಿರ್ದದು
ಬದ್ಧರಹ ಬಹುವಕ್ತ್ರನೇತ್ರಬಹೂರು ಹಸ್ತಗಳು ॥೧೬॥

ಉದರಗಳು ಬಹುವಿಧ ಕರಾ
ಳದ ವನದಲ್ಲಿಹ ದಂತಪಂಕ್ತಿಯು
ಪೊದಿದಿರುವ ನಿನ್ನಯ ಸ್ವರೂಪವ ನೋಡಿ ಲೋಕಾಳಿ ॥
ಸದಯ ನಾನೂ ಸಹಿತ ವ್ಯಥೆಯಲಿ
ಪುದಿದಿಹೆವು ಆಕಸವ ಸ್ಪೃಶಿಸುವ
ವದಗಿದಗಣಿತದೀಪ್ತಿ ವರ್ಣವನೇಕದಿಂ ಮಿಕ್ಕು ॥೧೭॥

ದೀಪಿಸುವ ಸುವಿಶಾಲನೇತ್ರವು
ವ್ಯಾಪಕನೆ ತೆರೆದಿರುವ ಬಾಯ್ಗಳ
ನೋ ಪರಮ ಈ ನಿನ್ನ ನೋಡಲು ವ್ಯಥಿಸುತಿದೆ ಮನವು ॥
ಶ್ರೀಪತಿಯೆ ಧೈರ್ಯವದು ನಿಲ್ಲದು
ಭಾಪು ವಿಷ್ಣುವೆ ಶಮೆಯ ಮಾಡ್ವೈ
ಓ ಪುರುಷದಂಷ್ಟ್ರದಿ ಕರಾಳವದಾದ ವದನವನು ॥೧೮॥

ಕಾಲದನಲನವೋಲು ಮೆರೆಯಲು
ತಾಳಲಾರದೆ ನೋಡಿದುದಕೆವೆ
ಕಾಣದಾದೆನು ದಿಕ್ಕುಗಳು ಕಾಣಿಸದಿವೆಯನಗೆ ॥
ಬಾಲಕಗೆ ಸುಖವೆಂತುಟಹುದು
ವಿಶಾಲಮತಿಯೆ ಪ್ರಸನ್ನನಾಗ್ವೈ
ವೋಲಗಿಪೆ ದೇವೇಶ ಸರ್ವಜಗನ್ನಿಯಾಮಕನೆ ॥೧೯॥

ನಾನು ಧೃತರಾಷ್ಟ್ರನ ಕುಮಾರರು
ಮಾನಿತರು ನೃಪಸಂಘವೆಲ್ಲವ
ಹೀನ ಭೀಷ್ಮದ್ರೋಣ ಕರ್ಣನು ಸಹಿತ ನಮ್ಮವರು ॥
ತಾನದೆಲ್ಲರು ನಿನ್ನ ಬಾಯೊಳು
ಪೂನಿ ಬೀಳುತ್ತಿರ್ಪರೆಲ್ಲರು
ಯೀ ನಿಧಾನದಿ ಕೆಲರು ಪಲ್ಸಂದಿಯಲಿ ಚೂರ್ಣಿತರು ॥೨೦॥

ಇದಿಗೊ ಕಾಣಿಸುತಿಹರು ನದಿಗಳ
ವಿದಿತ ಉದಕದ ವೇಗಗಳು ತಾ
ಸುದಧಿಯಂದದೊಳೀ ನೃಪವೀರರು ಉಜ್ವಲಿತವಾಗಿ ॥
ಒದಗಿರುವ ಮುಖಗಳಲಿ ಬೀಳ್ವರು
ಸದಯ ಅಗ್ನಿಯೊಳಾಪತಂಗವು
ಮುದಿರಿ ವೇಗದಿ ಸಾವವೊಲು ವಕ್ತ್ರಗಳ ಪೊಗುತಿಹರು ॥೨೧॥

ಜ್ವಲಿಸುತಿಹ ಪನಂಗಳಿಂದಲಿ
ಒಳಪೊಗುವ ಲೋಕಂಗಳನು ನೀ
ನಲಿದು ಭಕ್ಷಿಸುತಿರ್ಪೆ ಲೋಕಗಳೆಲ್ಲ ನಿನ್ನ ಪ್ರಭಾ ॥
ಕಲಿತವಾಗಿದೆ ನಿನ್ನ ರೌದ್ರದ
ಥಳಥಳಿಸುತಿಹ ಪ್ರಭೆಗಳಿಂದಲಿ
ಒಲಿದೆನಗೆ ಶ್ರೀವಿಷ್ಣು ಪೇಳ್ಯೆ ನೀನದಾವವನು ॥೨೨॥

ಉಗ್ರರೂಪನು ನಿನಗೆ ಶರಣ್ಯೆ
ವ್ಯಗ್ರದಿಂದಲಿ ದೇವವರನೆ ಅ
ನುಗ್ರಹಿಸು ಅಜ್ಞನನು ನಿನ್ನನು ತಿಳಿಯಲಿಚ್ಛೈಪೆನು ॥
ಮಗ್ನನಾಗಿಹೆ ಅರಿಯೆ ನಿನ್ನಯ
ಉಗ್ರವಾದ ಪ್ರವೃತ್ತಿಯನು ಸ
ಮಗ್ರವಾಗಿಯೆ ಪೇಳ್ವುದೆಂದರ್ಜುನನು ಬೇಡಿದನು ॥೨೩॥

ಅದಕೆ ಮಗುಳಿಂತೆಂದ ಶ್ರೀಹರಿ
ಸದಯನಾಗುತ ಪೇಳ್ವೆ ಕೇಳ್ವೈ
ಒದಗಿರುವ ಈ ಸರ್ವ ಲೋಕವ ಕ್ಷಯವ ಮಾಡುವರೆ ॥
ಪದಿಲದಿಂ ಕಾಲಸ್ವರೂಪನು
ಉದಯಿಸಿದೆ ಲೋಕಗಳನೆಲ್ಲವ
ಅದಯದಿಂ ಸಂಹರಿಸಲೀಗ ಪ್ರವೃತ್ತನಾದೆನೆಲಾ ॥೨೪॥

ನೀನಿವರ ಸಂಹರಿಸದಿರ್ದರು
ತಾನು ಜೀವಿಸಲಾರದೀದಳ
ವಾ ನಿಮಿತ್ತದಲೇನು ಬೇಗದಿ ಕೀರ್ತಿಯನು ಪೊಂದು ॥
ನೀನು ಯಿೂ ಸುಸಮೃದ್ಧವಾಗಿಹ
ಯಿೂ ನಿಖಿಲರಾಜ್ಯವನು ಭೋಗಿಸು
ಯಿೂ ನೃಪರಶತ್ರುಗಳ ಜಯಿಸಿಯೆ ಮೊದಲೆಯನ್ನಿಂದ ॥೨೫॥

ಹತವದಾಯ್ತು ನಿಮಿತ್ತ ಮಾತ್ರದಿ
ಮತಿಯ ತಾರ್ರೈ ಸವ್ಯಸಾಚಿಯೆ
ಅತಿಬಲರು ಯಿೂ ಭೀಷ್ಮ ಭಾರದ್ವಾಜ ಸೈಂಧವರು ॥
ಪ್ರತಪಸುತನೀ ಕರ್ಣ ಮೊದಲಾ
ದತಿಬಲರು ಯನ್ನಿಂದ ಹತರಾ
ದಿತರರನು ನೀ ಜಯಿಸು ಚಿಂತಿಸಬೇಡ ನೀ ಜಯಿಪೆ ॥೨೬॥

ಅಂಧನೃಪನೊಡನಿಂತೆನುತ ಮುದ
ದಿಂದ ಪೇಳಿದನಿಂತು ಕೇಶವ
ನೆಂದ ವಾಕ್ಯವ ಕೇಳಿ ನಡಗುತಲಂಜಲಿಯ ಪಿಡಿದು ॥
ಇಂದುವಂಶಲಲಾಮ ಕೃಷ್ಣನೊ
ಳಂದು ವಂದಿಸಿ ಗದ್ಗದದಿ ಭಯ
ದಿಂದ ತಿರುಗು ನಮಸ್ಕರಿಸುತಲಿ ಯಿಂದಿರಾವರನೋಳು ॥೨೭॥

ನಿನ್ನ ಕೀರ್ತನೆಯಿಂದ ಜಗವಿದು
ಸನ್ನುತನೆ ಸಂತೋಷಿಸುತ್ತಿದೆ
ಯಿನ್ನು ರಾಕ್ಷಸರೋಡುತಿರ್ಪರು ಕಂಡಕಂಡೆಡೆಗೆ ॥
ತನ್ನ ತನಗೆಯೆ ಸಿದ್ಧ ಸಂಘವು
ಯಿನ್ನಿರದೆ ತಾನೆರಗುತಿರ್ಪುದ
ನನ್ನಿ ನೋಡಲು ಪೇಳ್ವುದೆಲ್ಲವು ಯುಕ್ತವದು ತಿಳಿದೆ ॥೨೮॥

ಯಾಕೆ ನಿನ್ನ ನಮಸ್ಕರಿಸಿದ್ಯೆ
ಲೋಕಲೋಕೇಶನೆ ಮಹಾತ್ಮನೆ
ಆ ಕಮಲಜಾತನಿಗೆ ಗುರುವೆ ಅನಂತ ದೇವೇಶ ॥
ಜೋಕೆ ಮಿಗುವ ಜಗನ್ನಿವಾಸನೆ
ಯೇಕನಕ್ಷರ ಜಡವ ಪರನಹೆ
ಲೋಕವೆಲವು ನಿನ್ನ ವಂದಿಪದೇಕೆ ಪೋಗುವುದ್ಯೆ ॥೨೯॥

ಆದಿದೇವ ಪುರಾಣಪುರುಷನೆ
ವಾದಕೊಳ್ಳದ ನೀನು ವಿಶ್ವಕೆ
ಸಾದರದಿ ಕೇವಲ ನಿಧಾನನು ವೇದ್ಯ ನಿಜಧಾಮ ॥
ಮೋದದಿಂ ನಿನ್ನಿಂದಲಾತತ
ವಾದುದೀ ವಿಶ್ವವು ನಿಧಾನಿಸೆ
ವೋ ದಯಾನಿಧಿಯೇ ಅನಂತನೆ ವಿಶ್ವತೋಮುಖನೆ ॥೩೦॥

ಯಮನು ನೀ ವಾಯ್ವಗ್ನಿ ವರುಣನು
ನಮಿಸುವನು ಚಂದ್ರನು ಪ್ರಜಾಪತಿ
ಶಮನಪ್ರಪಿತಾಮಹನು ನೀ ನಿನಗಾನು ವಂದಿಪೆನ್ನೈ ॥
ನಮಿಸುವೆನು ನಿನ್ನಿಂದೆ ಮುಂದೆಯು
ನಮಿಸೆ ಸರ್ವದಿ ಸರ್ವರೂಪನೆ
ಅಮಿತವಿಕ್ರಮಯಿಂತಿರುವ ಸರ್ವಾತ್ಮಸರ್ವಮಯ ॥೩೧॥

ಆನು ನೀ ಸಖನೆಂದು ತಿಳಿದತಿ
ಹೀನವಾಕ್ಯದಿ ಕೃಷ್ಣ ಯಾದವ
ಯೇನೊ ಸಖ ಯಿಂತೆಂದು ತಿಳಿಯದೆ ನಿನ್ನ ಮಹಿಮೆಯನು ॥
ನಾನು ಪ್ರಣಯದೊಳಾ ಪ್ರಮಾದದೊ
ಳೇನು ಅಪಹಾಸಾರ್ಥಮಾಗಿಯು
ಮಾನಿಸದೆ ನಾಪೋದೆ ಅವಮಾನಿಸಿದೆನಿಂತೆನುತ ॥೩೨॥

ಪಲವು ವಿಧವಾಗೆಸಗಿದುದನೀ
ನೊಲಿದು ಕ್ಷಮಿಸಲಿಬೇಕು ಯೆನ್ನನು
ಸುಲಲಿತನೆ ಅಪ್ರಮೇಯ ಅನಂತಗುಣಧಾಮ ॥
ಮಲಗುವಲ್ಲಿ ವಿಹಾರದಲ್ಲಿಯು
ಸಲಿಗೆಯಲಿ ಭೋಜನ ವಿಲಾಸದಿ
ವೊಲಿಮೆಯಲ್ಲಿ ರಹಸ್ಯದಲಿ ನಾರಿಯರ ಮಧ್ಯದಲೀ ॥೩೩॥

ಈ ಚರಾಚರ ಲೋಕಕೆಲ್ಲಕು
ಯೋಚಿಸಲ್ಕೆ ಪಿತಾಮಹನು ನೀ
ನೀ ಚರಾಚರಕೆಲ್ಲ ಬಲ್ಲಿದ ನೀನೆ ಮತ್ತಿಲ್ಲ ॥
ನಾಚಿಸುವರೆಣೆಯಿಲ್ಲದ ಪ್ರತಿ
ಗೋಚರಿಸದಿಹ ಸುಪ್ರಭಾವನೆ
ನಾಚಿ ನಾ ಸಾಷ್ಟಾಂಗವಂದನೆಗೈವೆ ನಿನಗಾಗಿ ॥೩೪॥

ತಂದೆ ಮಗನನು ಸಖನು ಸಖ್ಯತೆ
ಯಿಂದ ಸಹಿಸುವವೋಲು ಪ್ರಿಯನಿಗೆ
ಯಿಂದು ಪ್ರಿಯವನು ಮಾಡಿ ಸಹಿಪುದು ಯೆನ್ನ ಕರುಣದಲಿ ॥
ಎಂದು ನೋಡದ ನಿನ್ನ ಮೋಡಿಯೆ
ಯಿಂದು ಹೃಷ್ಟಿತವಾದೆನ್ನೆ ಗೋ
ವಿಂದ ಯನ್ನಯ ಮನವು ವ್ಯಥೆಯೊಂದಿತ್ತು ನೋಡಿದರಿಂ ॥೩೫॥

ದೇವ ಮುನ್ನಿನ ರೂಪ ತೋರ್ಕೈ
ಪಾವನವದಾಗಿಹುದ ಯೆನ್ನನು
ಕಾವುದೈ ಜಗನ್ನಿವಾಸನೆ ದೇವ ದೇವೇಶ ॥
ಭೂವಿನುತ ಸುಕಿರೀಟ ಗದೆಯಿಂ
ಪಾವನ ಸುದರ್ಶನದ ಹಸ್ತದ
ಸಾವಧಾನದ ಮೂರ್ತಿಯನು ನಾ ನೋಡಲಿಚ್ಛಿಸುವೆ ॥೩೬॥

ವಿಶ್ವಮೂರ್ತಿ ಸಹಸ್ರ ಬಾಹುವೆ
ನಿಶ್ಚಯದ ಮುನ್ನಿನ ಸ್ವರೂಪದಿ
ಶಾಶ್ವತದ ನಾಲ್ಕಾದ ಹಸ್ತದ ಮೂರ್ತಿಯನು ತೋರ್ಕೈ ॥
ಈಶ್ವರನು ಯಿಂತೆಂದು ನುಡಿದನು
ನಿಶ್ಚಯವಿದೇ ನಿನ್ನ ಹಿತದಿಂ
ದರ್ಶಿಸಿದ ಯಿೂ ಪರಮರೂಪವನಾತ್ಮಯೋಗದಲಿ ॥೩೭॥

ವರ ಸುತೇಜದನಂತಮಯವಹ
ಪರಮವಿಶ್ವಾತ್ಮಕವ ನಿನಗಿಂ
ತೊರೆದು ತೋರಿದೆ ಪೂರ್ವವೆಂದಾರಿಂಗೆ ತೋರದುದ ॥
ಮೆರೆವ ಯಜ್ಞಾಧ್ಯಯನ ದಾನದಿ
ವರಕ್ರಿಯೆಗಳಿಂದುಗ್ರತಪದಿಂ
ದೊರಕದುದ ನಿನಗದನು ತೋರಿದೆ ಅರಿಯರಿನ್ನಾರು ॥೩೮॥

ಘೋರವಾದೀ ಯೆನ್ನರೂಪವ
ಸಾರಿನೀ ವ್ಯಥೆಯೊಂದದಿರು ಮಿಗೆ
ತೋರುತಿದೆ ಘನಮೂಢಭಾವವ ಧೈರ್ಯಯುತನಾಗೈ ॥
ತೋರಿಸುವೆ ಮುನ್ನಿನ ಸ್ವರೂಪವ
ವೀರನೋಡ್ಕೈಯೆಂದು ಪೇಳಿಯೆ
ತೋರಿದನು ಮುನ್ನಿನ ಸ್ವರೂಪವ ಮತ್ತೆಯರ್ಜುನಗೆ ॥೩೯॥

ಮತ್ತೆ ಭಯವನು ಬಿಡಿಸಿತಿರುಗೀ
ಯುತ್ತಮದ ಸಾಮ್ಯದ ಶರೀರವ
ನಿತ್ತೆರದಿ ಕೈಕೊಂಡು ಪಾರ್ಥನ ಭಯವ ಬಿಡಿಸಿದನು ॥
ಇತ್ತೆರದ ಸೌಮ್ಯದ ಸ್ವರೂಪವ
ಮತ್ತೆ ತಾ ಮಿಗೆ ನೋಡಿಯರ್ಜುನ
ತತ್ತರಿಸುವೀ ಮನವು ಚೇತರಿಸಿತ್ತು ಯನಗೀಗ ॥೪೦॥

ಎಂದಡೆಂದನು ಹರಿಯು ಯನ್ನೆಯ
ಯಂದಿಗೂ ಕಾಣದ ಸ್ವರೂಪವ
ನಿಂದು ನೀ ನೋಡಿದೆಯೆಲ್ಲೈ ಮೊದಲಾರು ಅರಿಯರಲ ॥
ಪೊಂದಿ ತೋರುವ ದೇವತೆಗಳಿದ
ನಿಂದು ನೀ ನೋಡಿದುದ ವೇದಗ
ಳಿಂದ ತಪಸಿನ ದಾನಯಜ್ಞದಿ ನಿನ್ನವೋಲಾರ್ಗು ॥೪೧॥

ತಾನನನ್ಯದ ಭಕ್ತಿಯಿಂದಲಿ
ಕಾಣೆ ಶಕ್ಯವು ಯೆನ್ನರೂಪವು
ತಾನೆ ತಿಳಿಯಲು ನೋಡೆ ಪೊಂದಲು ಶತ್ರುಶಿಕ್ಷಕನೆ ॥
ಯನ್ನಪರವಾಗಿಹ ಸುಕರ್ಮವು
ಯನ್ನ ಪರಮದ್ಭಕ್ತಮತಸಂ
ಪನ್ನಸಂಗವ ಬಿಟ್ಟು ಯನ್ನನೆ ಪೊಂದು ಪಾಂಡವನೆ ॥೪೨॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೧

ವಿಶ್ವರೂಪ ಸಂದರ್ಶನಯೋಗ

ಶ್ರೀಕೃಷ್ಣನೇ! ನೀನು ಹೇಳಿದ ಅಧ್ಯಾತ್ಮಯೋಗದಿಂದ ನನ್ನ ಮೋಹ ತೀರಿತು. ಪರಮೇಶ್ವರನಾದ ನಿನ್ನ ದಿವ್ಯರೂಪವನ್ನು ನೋಡುವುದಕ್ಕೆ ಬಯಸುವೆನು. ಅದು ನನಗೆ ಶಕ್ಯವಾಗಿದ್ದರೆ ತೋರಿಸೆನುತಲೂ;

ಅರ್ಜುನನೇ! ನೋಡೆಂದು, ಶ್ರೀಕೃಷನ್ನು ತೋರಿಸಿದನು. ೧೦೦-೧೦೦೦ ಹೀಗೆ ಅನಂತಗಳಾಗಿ ಹಲವು ಬಾಣಗಳಾಗಿ ಹಲವು ಆಕಾರಗಳಾಗಿ ಅನಂತರೂಪಗಳು ಕೃಷ್ಣನಲ್ಲಿ ಕಾಣಿಸಿದವು.

ಎಂದಿಗೂ ನೋಡದ ಆಶ್ಚರ್ಯಗಳೆಲ್ಲವನ್ನೂ ಸ್ಥಾವರ ಜಂಗಮಾತ್ಮಕವಾದ ಪ್ರಪಂಚವೆಲ್ಲವನ್ನು ಯಾವುದರನ್ನೂ ಬೇಕಾದರೂ ನನ್ನ ಮೈಯಲ್ಲಿ ನೋಡು. ಅದಕ್ಕೆ ಈ ಕಣ್ಣುಗಳು ತಕ್ಕುದ್ದಲ್ಲವೆಂದು ದಿವ್ಯದೃಷ್ಟಿಯನ್ನು ಕೊಟ್ಟು ಯೋಗೀಶ್ವರನಾದ ಕೃಷ್ಣನು ವಿಶ್ವರೂಪವನ್ನು ತೋರಿಸಿದನು.

ಲೆಕ್ಕವಿಲ್ಲದಷ್ಟು ಮುಖ ಬಾಯಿ ಕಣ್ಣು ಮೊದಲಾದ ಅಂಗಗಳುಳ್ಳ ಅದ್ಭುತ ಮಹಾರೂಪವೊಂದು ದಿವ್ಯಾಯುಧಗಳು, ದಿವ್ಯಾಲಂಕಾರವು ಉಳ್ಳದ್ದಾಗಿತ್ತು. ಕೋಟಿ ಸೂರ್ಯ ಪ್ರಕಾಶವಾದರೆ ಅದರ ಬೆಳಕಿಗೆ ಸಮಾನವಾಗಬಹುದು. ಅದರಲ್ಲಿ ಒಂದು ಭಾಗದೊಳಗೆ ಅನೇಕ ಭೇದವುಳ್ಳ ಈ ಪ್ರಪಂಚವೆಲ್ಲವನ್ನೂ ಅರ್ಜುನನು ನೋಡಿ ಆಶ್ಚರ್ಯಪಟ್ಟು ತಲೆಯನ್ನು ಬಗ್ಗಿಸಿ ಕೈಜೋಡಿಸಿಕೊಂಡು ಭಗವಂತನೇ! ನಿನ್ನ ಮೈಯಲ್ಲಿ ಬ್ರಹ್ಮಾದಿ ಸಕಲದೇವತೆಗಳನ್ನು ಮುನಿಗಳನ್ನೂ ಸರ್ಪಗಳನ್ನೂ ಸರ್ವ ಪ್ರಾಣಿಗಳನ್ನು ಕಂಡೆನು. ಬಹುಮುಖವಾದ ಬಾಹ್ಯ ನೇತ್ರಗಳುಳ್ಳ ಅನಂತರೂಪವಾದ ನಿನ್ನ ವಿಶ್ವರೂಪವನ್ನು ಕಂಡೆನು.

ಕಿರೀಟ ಚಕ್ರ ಗದಾದಿ ಅಲಂಕಾರದೊಡನೆ ತೇಜೋಮಯನಾಗಿ ಕಣ್ಣು ಭರಿಸಲಾರದಷ್ಟು ಬೆಳಕಾದ ನಿನ್ನನ್ನು ನೋಡುತ್ತಿದ್ದೇನೆ. ನೀನೇ ವೇದವೇದ್ಯನು, ಜಗತ್ಕಾರಣನು, ಧರ್ಮರಕ್ಷಕನು, ಸತ್ಯರೂಪನು, ಆದಿಮಧ್ಯಾಂತ್ಯರಹಿತನು, ಅನಂತಶಕ್ತಿಯುಳ್ಳವನು, ಸರ್ವವ್ಯಾಪಕನು, ಸೂರ್ಯಚಂದ್ರ ನಿನ್ನ ಕಣ್ಣುಗಳಾಗಿರುವರು. ನಿನ್ನ ಬಾಯಿಯೊಳಕ್ಕೆ ದೇವಾದಿ ಪ್ರಾಣಿಗಳು ಹೆದರಿ ಹೋಗುತ್ತಿದ್ದಾರೆ. ಎಲ್ಲರೂ ಸ್ತುತಿಸುತ್ತಿರುವರು. ನನ್ನಂತೆ ಎಲ್ಲರೂ ಹೆದರುತ್ತಿರುವರು. ನಿನ್ನನ್ನು ನೋಡಿ ತಾಳಲಾರದೆ ಅಧೈರ್ಯಗೊಂಡೆನು.

ನಿನ್ನ ಕೋರೆದಾಡೆಗಳುಳ್ಳ ವಿಸ್ತಾರವಾದ ಮುಖಗಳು ಪ್ರಳಯಾಗ್ನಿಯ ಹಾಗೆ ಬೆಳಗುತ್ತಿರುವುದನ್ನು ಕಂಡು ದಿಕ್ಕುಗಳು ತಿಳಿಯಲಿಲ್ಲವು. ಜಗದಾಧಾರನೇ! ಪ್ರಸನ್ನನಾಗು ಈ ಧೃತರಾಷ್ಟ್ರಪುತ್ರರೂ ಸರ್ವರಾಜರ ಭೀಷ್ಮದ್ರೋಣ ಕರ್ಣಾದಿಗಳ ನಮ್ಮ ಸೈನಿಕರೂ ನಿನ್ನ ಬಾಯೊಳಕ್ಕೆ ಹೋಗುತ್ತಿರುವರು. ನಿನ್ನ ಹಲ್ಲುಗಳಲ್ಲಿ ಸಿಕ್ಕಿ ಕೆಲವರ ತಲೆಗಳು ಚೂರ್ಣವಾಗಿ ಹೋದವು. ಹೊಳೆಗಳು ಕಡಲನ್ನು ಸೇರುವಂತೆ ಪ್ರಾಣಿಗಳೆಲ್ಲರೂ ನಿನ್ನ ಮುಖಗಳೊಳಕ್ಕೆ ಹೋಗುತ್ತಿರುವರು. ಎಲ್ಲರನ್ನೂ ನುಂಗಿಬಿಡುತ್ತಿರುವಿ. ರೆಕ್ಕೆ ಹುಳುಗಳು ಬೆಂಕಿಯಲ್ಲಿ ಬೀಳುವಂತೆ ಲೋಕಗಳು ನಿನ್ನ ಬಾಯೊಳಗೆ ಬಂದು ಬೀಳುತ್ತಿವೆ. ಇಷ್ಟು ಉಗ್ರರೂಪವುಳ್ಳ ನೀನಾರು ಹೇಳು. ಎನ್ನುತ್ತಲೂ;

ಭಗವಂತನು ಅರ್ಜುನನೇ! ಲೋಕ ಸಂಹಾರಕನಾದ ಕಾಲನಾಗಿರುವೆನು. ನಿನ್ನ ವಿನಾ ಸೈನ್ಯದಲ್ಲಿ ಯಾವ ವೀರರೂ ಉಳಿಯುವುದಿಲ್ಲ. ಆದ್ದರಿಂದ ನೀನು ಗೆದ್ದು ಕೀರ್ತಿಯನ್ನು ಪಡೆದು ರಾಜ್ಯವನ್ನನುಭವಿಸು. ನೀನು ನಿಮಿತ್ತ ಮಾತ್ರನಾಗು. ಭೀಷ್ಮದ್ರೋಣಾದಿಗಳೆಲ್ಲರನ್ನೂ ನಾನೇ ಕೊಂದಿರುವೆನು. ನೀನೂ ಗೆಲ್ಲು, ದುಃಖಿಸಬೇಡ. ಯುದ್ಧಮಾಡು ಗೆಲ್ಲುವಿಯೆಂದನು.

ಶ್ರೀಕೃಷ್ಣನ ಈ ವಾಕ್ಯವನ್ನು ಕೇಳಿ ಅರ್ಜುನನು ಗಡಗಡ ನಡುಗುತ್ತ ಹೆದರಿ ಬಾಯಲ್ಲಿ ಶಬ್ದ ಹೊರಡದೆ ತೊಂದರೆಪಡುತ್ತಾ ಹೇಳಿಕೊಂಡನು.

ಕೃಷ್ಣನೇ! ಯುಕ್ತವೇ ಸರಿ. ನಿನಗೆ ಯಾರು ತಾನೆ ನಮಸ್ಕರಿಸರು? ನೀನೇ ಆದಿದೇವನು. ಸಾವಿರಸಲ ನಿನಗೆ ನಮಸ್ಕಾರವು. ಸರ್ವ ಸ್ವರೂಪನೇ! ಸರ್ವ ದಿಕ್ಕುಗಳಲ್ಲಿಯೂ ನಿನಗೆ ನಮಸ್ಕಾರವು. ನೀನು ಗೆಳೆಯನೆಂದುಕೊಂಡು ಸ್ನೇಹದಿಂದ ಅಪಹಾಸ್ಯವಾಗಿ ನಾನು ಆಡಿದ ತಪ್ಪುಗಳನ್ನು ಕ್ಷಮಿಸಬೇಕೆಂದು ಸಾಷ್ಟಾಂಗ ಪ್ರಣಾಮದಿಂದ ಬೇಡಿಕೊಳ್ಳುವೆನು. ಮಕ್ಕಳ ತಪ್ಪನ್ನು ತಂದೆಯು ಕ್ಷಮಿಸುವಂತೆ ಸೈರಿಸು. ಅಪೂರ್ವವಾದ ನಿನ್ನ ರೂಪವನ್ನು ನೋಡಿ ಆಶ್ಚರ್ಯವೂ, ಸಂತೋಷವೂ, ಭಯವೂ ಉಂಟಾಗಿದೆ. ಮುನ್ನಿದ್ದ ಚಕ್ರಗದಾಪಾಣಿಯಾದ ಕಿರೀಟವುಳ್ಳ ಚತುರ್ಭುಜದ ಪ್ರಸನ್ನವಾದ ಕೃಷ್ಣರೂಪವನ್ನೇ ನೋಡಲೆಳಸುವೆನು ಎಂದನು.

ಶ್ರೀಕೃಷ್ಣನು ಅರ್ಜುನನೇ! ಈ ದಿವ್ಯ ರೂಪವನ್ನು ಯೋಗಶಕ್ತಿಯಿಂದ ನಿನಗೆ ತೋರಿಸಿದೆ. ಇತರರು ನೋಡಿದ್ದಲ್ಲವು. ನೋಡುವುದಕ್ಕೆ ಯಾರಿಗೂ ದುರ್ಲಭವು. ಹೆದರಬೇಡ. ಸೌಮ್ಯ ರೂಪವನ್ನು ನೋಡು ಎಂದು ಮುನ್ನಿನಂತೆ ಮನುಷ್ಯರೂಪದಿಂದ ಚೆಲುವ ಕೃಷ್ಣನಾಗಿ ಕಾಣಿಸುತ್ತಲೂ; ಅರ್ಜುನನ ಸ್ವಭಾವಸ್ಥಿತಿಗೆ ಬಂದನು. ಆಗ ಕೃಷ್ಣನು ಭಕ್ತಿಯುಳ್ಳವರಿಗೆ ನಾನು ದೊರೆಯುವನೇ ಹೊರತು ಅನ್ಯರಿಗೆ ಸಿಕ್ಕಲಾರೆನು. ಆದ್ದರಿಂದ ಸಂಗವನ್ನು ತೊರೆದು ವೈರವಿಲ್ಲದವನಾದೆ. ನನ್ನ ಭಕ್ತನು ಯಾರೋ ಅವನು ನನ್ನನ್ನೇ ಹೊಂದುವನೆಂದನು.

ಅಧ್ಯಾಯ–೧೨
ಭಕ್ತಿಯೋಗ

ಸತತಯುಕ್ತರದಾದ ಭಕ್ತರ
ವಿತತಿ ಯಿಗತಿ ನಿನ್ನ ಭಜಿಪರು
ವಿತತವವ್ಯಕ್ತಾಕ್ಷರಾಭ್ಯಾಸಿಗಳು ಯಿವರೊಳಗೆ ॥
ಯತಿಮನೋಹರ ಮೂರ್ತಿಯರಡರೊ
ಳತಿಶಯದ ಯೋಗಿಗಳದಾರದ
ನತಿಶಯದಿ ತಿಳಿವಂತೆ ಪೇಳುವುದೆಂದನಾ ಪಾರ್ಥ ॥೧॥

ಎಂದಡೆಂದನು ಹರಿಯು ಯ್ಯೆನ್ನಲಿ
ನಿಂದ ಮನದಿಂದಾರು ಯುಕ್ತತೆ
ಯೊಂದಿ ಶ್ರದ್ಧಾನ್ವಿತರದಾದರೆ ಯುಕ್ತತಮರವರು ॥
ಎಂದು ಯನ್ನಯ ಮತಿಗೆ ಸಮ್ಮತ
ಮುಂದೆದಾರಕ್ಷರವನಿವ್ವಿಧ
ದಿಂದ ನಿರ್ದೇಶಾವ್ಯಕುತಿಯನುಪಾಸಿಪರು ವ್ಯಾಪಕವ ॥೨॥

ಸರ್ವಗತವಚಲಧ್ರುವವ ತಾ
ನಿರ್ವಹಿಸಿಯಿಂದ್ರಿಯಗಳನು ಮಿಗೆ
ಸರ್ವದಲಿ ಪೊಗದಂತೆ ನಿಯಮಿಸಿ ಸರ್ವಸಮರಾಗಿ ॥
ಉರ್ವರೆಯಲಿಹರೆನ್ನ ಸರ್ವರು
ಸರ್ವಭೂತಂಗಳಿಗೆ ಹಿತವರು
ಪರ್ವಿಹುದು ಕ್ಲೇಶಂಗಳಕ್ಷರಸಕ್ತ ಚೇತರಿಗೆ ॥೩॥

ಕಾಯವುಳ್ಳರಿಗವ್ಯಕತಗತಿ
ಯಾಯಸವ ಮಾಡುವುದು ಮಿಗೆಯಾ
ರಾಯತದ ಕರ‍್ಮವನದೆಲ್ಲವಯನ್ನಲರ್ಪಿಸುತ ॥
ದಾಯಮಿಗಲಾನನ್ಯ ಯೋಗವಿ
ಡಾಯಿಯಿಂ ಧ್ಯಾನಿಸುತ ಭಜಿಪರು
ಆ ಯತಿಗಳನು ನಾನು ಉದ್ಧರಿಸುವೆನು ಭವದಿಂದ ॥೪॥

ಮನವನೆನ್ನೊಳಗಿಟ್ಟು ಬುದ್ಧಿಯ
ನೆನಹನೆನ್ನಲಿ ನಿಲಿಸಿದರೆಯು
ಅನಘಯೆನ್ನನೆ ಪೊಂದುವದೆ ನಿಶ್ಚಯವು ನಿನಗೆಂದ ॥
ಮನವನೆನ್ನಲಿ ಸ್ಥಿರವ ಮಾಡಲು
ನಿನಗಶಕ್ಯವದಾಡೆಯು ನೀ
ನೆನೆವುದಭ್ಯಾಸಾತ್ಮಯೋಗದಿ ಯತ್ನವನು ಮಾಡೈ ॥೫॥

ಅದಕೆ ನೀನಸಮರ್ಥನಾದಡೆ
ವಿದಿತಮತ್ಕರ‍್ಮದಲದಾದರು
ವೊದಗಿಯಿಹುದೈ ಅದರಿನಿಂ ತತ್ಸಿದ್ಧಿ ನಿನಗಹುದು ॥
ಅದಕುನೀನಸಮರ್ಥನಾದಡೆ
ಸದಯಕರ‍್ಮದಫಲದ ತ್ಯಾಗವ
ನೊದಗಿಮಾಡೈ ಅದರಿನಿಂ ತತ್ಸಿದ್ಧಿಯನು ಪಡೆವೆ ॥೬॥

ಜ್ಞಾನವಭ್ಯಾಸಕ್ಕೆ ಶ್ರೇಷ್ಠವು
ಜ್ಞಾನಕಿಂ ಧ್ಯಾನವದೆ ಶ್ರೇಷ್ಠವು
ಧ್ಯಾನಕಿನ್ನೀ ಕರ‍್ಮಫಲವನು ಬಿಡುವುದುತ್ತಮವು ॥
ಮಾನನಿಧಿಯದರಿಂದ ಶಾಂತಿಯು
ನೀನು ಬೇಗದಿ ಪಡೆದ ಸರ್ವದಿ
ಪೂನಿ ಮಾಡದೆ ದ್ವೇಷವನು ಮೈತ್ರಿಯನು ಕರುಣವನು ॥೭॥

ನಿರ್ಮಮಾಹಂಕಾರಿಯಾಗುತ
ಸಮ್ಮತದಿ ಸಮದುಃಖಕ್ಷಮೆ ಯಾ
ದೊಮ್ಮತದಿ ಸಂತುಷ್ಟಿ ಸತತವು ಪಡೆದು ವರಯೋಗಿ ॥
ಸುಮ್ಮನೇ ನಿಯತಾತ್ಮನಾಗುತ
ನೆಮ್ಮಿ ದೃಡನಿಶ್ಚಯದಿ ನೀ ನೆರೆ
ಯಮ್ಮೊಳರ್ಪಿಸಿ ಮನವ ಬುದ್ಧಿಯ ಭಕ್ತಿಯಿಂ ಕೂಡಿ ॥೮॥

ಇರುವನಾವವಮತ್ತ್ರಿಯನು ಯಾ
ರಿರವ ಕಂಡುರೆ ಲೋಕ ಹೆದರದು
ಪರತರರದ ಯಿೂ ಲೋಕದಿಂದವೆ ಭಯಪಡನದಾವ ॥
ಹರುಷಭಯವಾಮರ್ಷವನು ನಿ
ರ್ಭರದ ಉದ್ವೇಗವನು ಬಿಟ್ಟುರೆ
ಮೆರವನಾವವನವನು ಮತ್ತ್ರಿಯ ಪಾರ್ಥ ಕೇಳೆಂದ ॥೯॥

ಯಾವನನಪೇಕ್ಷಕನು ಶುಚಿಮ
ತ್ಯಾವದಕ್ಷಗತವ್ಯಥನು ಮಿಗೆ
ಯಾವವನುದಾಸೀನ ಸರ್ವಾರಂಭವನು ಬಿಡುವ ॥
ಯಾವಮದ್ಭಕ್ತನು ಅತಿಪ್ರಿಯ
ಯಾವ ಸಂತೋಷವನು ದ್ವೇಷವ
ಪಾವನನೆ ಕ್ಲೇಶವನು ಕಾಂಕ್ಷೆಯ ಬಿಡುವನಾವವನು ॥೧೦॥

ಯಾವ ಶುಭಾಶುಭವನು ತ್ಯಾಗಿಸಿ
ಪಾವನದ ಸದ್ಭಕ್ತಿಯುತನಹ
ನೀವಸುಂಧರೆಯಲ್ಲಿ ಯೆನಗವಪ್ರಿಯನು ಕೇಳೆಂದ ॥
ಯಾವ ಹಿತಶತ್ರುಗಳೊಳಗೆ ಸಮ
ವಾವನೀ ಮಾನಾವಮಾನದಿ
ಯಾವ ಸುಖದುಃಖದಲಿ ಶೀತೋಷ್ಣದಲಿ ತಾ ಸಮನು ॥೧೧॥

ಯಾವಸಂಗ ವಿವರ್ಜಿತನು ಮಗು
ಳಾವ ಸಮನಿಂದಾಸ್ತುತನು ಮ
ತ್ತಾರ ಮೌನಿಯು ತುಷ್ಟಚಿತ್ತನು ಯೆಷ್ಟುಮಾತ್ರದಲು ॥
ಯಾವನನಿಕೇತ ಸ್ಥಿರಮತಿ ಯಿ
ನ್ನಾವ ಭಕ್ತನುಮತ್ಪ್ರಿಯದ ನರ
ನಾವವರು ಧರ್ಮ್ಯಾಮೃತವಿದನು ಪೇಳ್ದಂತು ಪಾಸಿಪರು ॥೧೨॥

ಆವವರು ಶ್ರದ್ಧಾನ್ವಿತರು ಮ
ತ್ತಾವರವರೇ ಪರಮಭಕ್ತರ
ದಾವರವರತ್ಯಂತಮತ್ಪ್ರಿಯರೆನ್ನುತಲಿ ನುಡಿದ ॥
ಶ್ರೀವರನು ನರನೊಡನೆ ಕೇಳ್ವೈ
ಭೂವರನೆ ಯಂದಾಗ ಸಂಜಯ
ಸಾವಧಾನದಿ ಪೇಳ್ದನೀ ಪರಿಯಿಂದ ಸಂತಸದಿ ॥೧೩॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೨

ಭಕ್ತಿಯೋಗ

ಶ್ರೀಕೃಷ್ಣನೇ! ಭಕ್ತರು ಹೀಗೆ ನಿನ್ನನ್ನು ಧ್ಯಾನಿಸುವರು. ಕೆಲವರು ಅವ್ಯಕ್ತ ರೂಪವನ್ನು ಆರಾಧಿಸುವರು. ಸಗುಣ ನಿರ್ಗುಣಾರಾಧಕರಲ್ಲಿ ಯಾರೂ ಶ್ರೇಷ್ಠರೆನ್ನುತ್ತಲೂ; ಭಗವಂತನು ಹೇಳಿದನು.

ಅರ್ಜುನನೇ! ಶ್ರದ್ಧಾಭಕ್ತಿಯಿಂದ ಸರ್ವದಾ ಮನವನ್ನು ನನ್ನೊಳಗಿಟ್ಟು ನನ್ನನ್ನು ಆರಾಧಿಸುವವರೇ ಶ್ರೇಷ್ಠರೆಂಬುವುದು ನನ್ನ ಮತವು. ಯಾರು ಅವ್ಯಕ್ತಾತ್ಮತತ್ವನನ್ನು ನಿರ್ಗುಣೋಪಾಸಕರಾಗಿ ಇಂದ್ರಿಯ ನಿಗ್ರಹದಿಂದ ಭಜಿಸುವರೋ ಅವರೂ ನನ್ನನ್ನೇ ಹೊಂದುವರು. ಉಭಯ ಮಾರ್ಗಗಳಿಗೂ ಫಲವೊಂದೆ. ಅವ್ಯಕ್ತ ಮಾರ್ಗದಲ್ಲಿ ಪ್ರಯಾಸವು ಹೆಚ್ಚು ದೇಹಧಾರಿಗಳು ಅವ್ಯಕ್ತ ಮಾರ್ಗದಲ್ಲಿ ಬಹಳ ಕಷ್ಟಪಡುವರು. ಆದರೆ ಯಾರು ಸರ್ವ ಕರ್ಮಗಳನ್ನೂ ನನ್ನಲ್ಲಿ ಸಂನ್ಯಾಸ ಮಾಡಿ ಮತ್ಪರರಾಗಿ ಅಭೇದಯೋಗದಿಂದ ಧ್ಯಾನಿಸುವರೋ ಅವರನ್ನು ಬೇಗನೆ ಜನನ ಮರಣ ಸಂಸಾರ ಸಾಗರದಿಂದ ಎತ್ತುವೆನು.

ನನ್ನಲ್ಲಿಯೇ ಮನವಿಡು. ನನ್ನಲ್ಲಿಯೇ ಇರುವಿ, ನಿನ್ನ ಬುದ್ಧಿಗೆ ಅಷ್ಟು ಸಮಾಧಾನವನ್ನು ಹೊಂದಲು ಶಕ್ತಿಯಿಲ್ಲದಿದ್ದರೆ ಅಭ್ಯಾಸದಿಂದ ಕ್ರಮವಾಗಿ ನನ್ನನ್ನು ಅಪೇಕ್ಷಿಸು. ಅಲ್ಲಿಗೂ ಅಶಕ್ತನಾದರೆ ನನಗಾಗಿ ಕರ್ಮಗಳನ್ನು ಮಾಡು. ಅದರಲ್ಲಿಯೂ ಅಶಕ್ತನಾದರೆ ಕರ್ಮಫಲವನ್ನು ಬಿಟ್ಟು ನನ್ನ ಸಗುಣಧ್ಯಾನ ಮಾಡು. ಕ್ರಮೇಣ ಸಿದ್ಧಿಯಾಗುವುದು. ಅಭ್ಯಾಸಕ್ಕಿಂತಲೂ ಜ್ಞಾನವು, ಅದಕ್ಕಿಂತಲೂ ಧ್ಯಾನವು, ಅದಕ್ಕಿಂತಲೂ ಫಲತ್ಯಾಗವು, ಅದಕ್ಕಿಂತಲೂ ಶಾಂತಿ ಶ್ರೇಷ್ಠವಾಗಿರುವುದು. ಸಂತುಷ್ಟನಾದ ಭಕ್ತಿಯೋಗವುಳ್ಳವನು ನನ್ನ ಪ್ರಿಯನು. ಒಬ್ಬರನ್ನು ಹೆದರಿಸದೆ ಒಬ್ಬರಿಗೆ ಹೆದರದೆ, ಹರ್ಷವಿಷಾದ ಭಾಯೆ ರೋಗಗಳಿಂದ ಬಿಡಲ್ಪಟ್ಟವನೇ ನನಗೆ ಪ್ರಿಯನು. ಆಶೆಗಳನ್ನು ತೊರೆದು ಉದಾಸೀನನಾಗಿ ವ್ಯಥೆಯಿಲ್ಲದೆ ಯಾವ ಕೆಲಸವನ್ನೂ ಮಾಡದೆ ನನ್ನ ಭಕ್ತನಾಗಿ ಸುಮ್ಮನಿರುವನೇ ನನಗೆ ಪ್ರಿಯನು. ಶತ್ರುಮಿತ್ರಾದಿ ದ್ವಂದ್ವಭಾವಗಳಲ್ಲಿ ಸಮಭಾವನಾಗಿ ಯಾವುದರಿಂದಲಾದರೂ ತೃಪ್ತಿಗೊಳ್ಳುತ್ತಾ ಭಕ್ತನಾಗಿ ಎಲ್ಲಿಯಾದರೂ ಸ್ಥಿರ ಬುದ್ಧಿಯಿಂದ ಮೌನವಾಗಿರುವವನೇ ನನ್ನ ಪ್ರಿಯನು. ಇವರನ್ನು ನೆಚ್ಚುವ ನನ್ನ ಭಕ್ತರು ನನಗೆ ಬಹಳ ಪ್ರಿಯರು.

—*—

ಅಧ್ಯಾಯ–೧೩
ಪ್ರಕೃತಿ ಗುಣವಿಭೇದಯೋಗ

ಹರಿಯು ಮತ್ತಿಂತೆಂದ ಕಾಯವ
ನರನೆ ಕ್ಷೇತ್ರವಿದೆಂದು ಪೇಳ್ವರು
ಯಿರದೆಯಿದು ತಿಳಿವಾತ ಕ್ಷೇತ್ರಜ್ಞನು ವಿಚಾರಿಸಲು ॥
ವೊರೆವೆ ನಾ ಕ್ಷೇತ್ರಜ್ಞ ನಾನೇ
ಮೆರೆವ ಕಾಯಗಳೆಲ್ಲದೆಲ್ಲಿಯು
ಯಿರದೆ ತಿಳಿ ಕ್ಷೇತ್ರದ ಜ್ಞಾನವದು ಯೆನಗೆ ॥೧॥

ಸಮ್ಮತವು ತಾವ್ ಕ್ಷೇತ್ರವಾವುದು
ಪೆರ್ಮೆಯಿಂದೆಂತಿಹುದು ಅದ
ನುರೆ ನೆಮ್ಮಿದ ವಿಕಾರಂಗಳಾವುದು ಯಾರಿನಿಂದಾಯ್ತು ॥
ನಿರ್ಮಮನೆ ಕ್ಷೇತ್ರಜ್ಞನೆಂತಿಹ
ನೊಮ್ಮನದಿ ನಿ ೀಕೇಳು ನಾನುರೆ
ಪೇರ್ಮೆಯಿಂ ಪೇಳುವೆನು ಸಂಕ್ಷೇಪದಲಿ ಅದರಿರವ ॥೨॥

ಋಷಿಗಳಿಂ ಪೇಳ್ದಿಹುದು ಛಂದೋ
ವಿಸರದಿಂದದು ಬೇರೆ ಬೇರೆಯು
ಪ್ರಸರಿಸಿಹುದದು ಬ್ರಹ್ಮಸೂತ್ರದ ಪದಗಳಿಂದದುವೆ ॥
ಅಸಮಯುಕ್ತಿಗಳಿಂದ ನಿಶ್ಚಿತ
ಸಸಿನೆ ಪೇಳುವೆ ಭೂತಗಳು ಸಾ
ಯಸದಹಂಕಾರವನು ಬುದ್ಧಿಯು ಅವ್ಯಕುತವದುವೆ ॥೩॥

ಇಂದ್ರಿಯವು ಹನ್ನೊಂದು ಮಗುಳೀ
ಯಿಂದ್ರಿಯಾರ್ಥಗಳೈದು ಕೂಡಿಯೆ
ಪೊಂದಿಹುದು ಯಿಪ್ಪತ್ತುನಾಲಕು ಇಚ್ಛೆ ದ್ವೇಷ ಸುಖ ॥
ಪೊಂದಿದೀ ಚೇತನದ ಸಂಘವು
ಅಂದವಾಗಿಯೆ ಕ್ಷೇತ್ರವೆನಿಪುದಿ
ದೆಂದು ಸಂಕ್ಷೇಪದಲಿ ಸವಿಕಾರಿಯು ವುದಾಹೃತವು ॥೪॥

ಮಾನರಹಿತತ್ವವು ಅದಂಭತೆ
ತಾನಹಿಂಸೆಯು ಕ್ಷಾಂತಿಯಾರ್ಜವ
ಮಾನನಿಧಿಯಾಚಾರ್ಯ ಸೇವೆಯು ಶೌಚವಾಮನವ ॥
ತಾನು ಚಲಿಸದ ನಿಗ್ರಹವು ವಿಷ
ಯಾನುರಾಗುವದಿಲ್ಲದಿಹುದದು
ತಾನೆಯೆನಹಂಕೃತಿಯು ಜನಿಮೃತಿಯದು ಜರಾವ್ಯಾಧಿ ॥೫॥

ದೋಷ ದರುಶನ ದುಃಖ ವಿಷಯದಿ
ಆಸಕತಿ ತಾನಿಲ್ಲದಿಹುದದು
ತಾ ಸದಾ ಗೃಹ ದಾರಪುತ್ರಾದ್ಯನಭಿಷ್ವಂಗವದು ॥
ತಾ ಸದಾ ಸಮಚಿತ್ತದಿಂದಿಹು
ದೇಸುಯಿಷ್ಟಾನಿಷ್ಟಮಾದರು
ಭಾಸಿಸುವ ಯನ್ನಲ್ಲನನ್ಯದ ಯೋಗದಿಂದಿಹುದು ॥೬॥

ವೃತ್ತಿಯದು ಮತ್ತೆಲ್ಲಿ ಪೋಗದ
ಭಕ್ತಿಜನಸಂಘಟದಲರತಿ ವಿ
ವಿಕ್ತ ದೇಶದಿ ಸೇವನೆಯು ಅಧ್ಯಾತ್ಮ ಜ್ಞಾನದಲಿ ॥
ನಿತ್ಯತೆಯು ಮಿಗೆ ತತ್ವಜ್ಞಾನದ
ಲರ್ಥದರುಶನವಿದುವೆ ಜ್ಞಾನವು
ಮತ್ತದರ ಪೊರಗಾಗಿ ವರ್ತಿಪುದದುವೆ ಜ್ಞಾನ ॥೭॥

ಕೇಳು ಗೇಯವ ಪೇಳ್ವೆ ಯಾವುದ
ಕೇಳುದುದರಿಂ ಮೋಕ್ಷಮೊಂದುವೆ
ನೀನೊಲಿದು ಅದನಾದಿ ಪರಬ್ರಹ್ಮಸದಸತ್ತು ॥
ಪೇಳಕೂಡದು ಸರ್ವವಾಗಿಹ
ಮೌಳಿಪಾದಾಕ್ಷಿಯದು ಪಾಣಿಯು
ತಾಳಿಹುದು ಸರ್ವತ್ರ ಶ್ರುತಿಮುಖ ಸರ್ವಲೋಕವನು ॥೮॥

ಆವರಿಸಿಯಿಹುದದುವೆಯಿಂದ್ರಿಯ
ವಾವುದದರ ಗುಣಂಗಳಿಗೆ ಸ
ದ್ಭಾವ ಪೊರಗಾಗಿಹುದು ಸರ್ವೇಂದ್ರಿಯವಿಸರ್ಜಿತವು ॥
ಆವುದರಲಿಯು ಸಕ್ತವಾಗದು
ಆವುದದು ಸರ್ವವನು ಧರಿಸಿಹು
ದಾವುದದು ನಿರ್ಗುಣವು ಗುಣಭೋಕ್ತೃವು ಅದಾಗಿಹುದು ॥೯॥

ಭೂತಗಳ ಚರವಚರದೊಳಹೊರ
ಗಾತತವು ಸೂಕ್ಷ್ಮತ್ವದಿಂದದು
ಜ್ಞಾತವಾಗದು ದೂರವಂತಿಕವಾಗಿ ಯಿರುತಿಹುದು ॥
ಖ್ಯಾತಿಯಿಂದ ವಿಭಕ್ತಭೂತದಿ
ಸಾತಿಶಯವು ವಿಭಕ್ತದಂದದಿ
ತಾ ತಿಳಿಯಲಿಹುದದುವೆ ಭೂತವ ಪೋಷಿಸುತ್ತಿಹುದು ॥೧೦॥

ಹರಿಸುವುದು ಪುಟ್ಟಿಸುವುದದುವೇ
ವರ ರವೀಂದುಗಳಿಂದ ತೇಜವು
ಪರಮತಮಕದು ಪೊರಗು ಜ್ಞಾನವು ಜ್ಞೇಯವೆನಿಪುದದು ॥
ಭರದ ಜ್ಞಾನಿಗಗಮ್ಯವದು ಸ
ರ್ವರ ಹೃದಯವಿಷ್ಠಿತವಾದುದದು
ಮೆರೆವುದೀ ಕ್ಷೇತ್ರವು ಜ್ಞಾನವು ಜ್ಞೇಯವೆನಿಸುವುದು ॥೧೧॥

ಎನ್ನ ಭಕ್ತರುಯಿದನು ತಿಳಿದುರೆ
ಮನ್ನಿಸುತಮದ್ಭಾವಕೈದುವ
ರಿನ್ನು ಪ್ರಕೃತಿಯು ಪುರುಷರಿಬ್ಬರು ಕೇಳನಾದಿಗಳು ॥
ನರನೆ ಕೇಳು ವಿಕಾರವು ಸುಗುಣ
ವರರೆ ಯಿೊ ಪ್ರಕೃತಿಯಲಿ ಪುಟ್ಟುಗು
ಮೆರೆವ ಕಾರ್ಯಕೆ ಕಾರಣಕೆ ಕರ್ತೃತ್ವ ಪ್ರಕೃತಿಯದು ॥೧೨॥

ಭರದ ಸುಖದುಃಖಕ್ಕೆ ಕಾರಣ
ವಿರದೆ ಪುರುಷನದೆಂದು ಪೇಳ್ವರು
ಪುರುಷನಾಪ್ರಕೃತಿಸ್ಥನಾಗಿಯೆ ಪ್ರಕೃತಿಗುಣಗಳನು ॥
ಇರದೆ ಭಂಜಿಪನಿದಕೆ ಕಾರಣ
ವಿರುವುದೈ ಗುಣಸಂಗದಿಂದಲಿ
ಮೆರವ ಸದಸದ್ಯೋನಿಯಲಿ ಪುಟ್ಟುವದಕಿತ್ತೆರದಿ ॥೧೩॥

ತನುವಿನಲಿ ತಾನಿರ್ದಕತದಿಂ
ದನುಪಮನು ತಾ ಸಾಕ್ಷಿಯೆನಿಪನು
ಘನನು ತಾನನು ಮೋದಿಭರ್ತನುಭೋಕ್ತೃ ಈಶ್ವರನು ॥
ಅನಘನಾತ ಪರಮಾತ್ಮನೆನಿಸಿಯು
ಯೊನರಿ ಪುರುಷನು ಬೇರಿರುವನಿಂ
ತನುಪಮನಗುಣಸಹಿತ ಪ್ರಕೃತಿಯನರಿವ ವರುಷಗಳು ॥೧೪॥

ಧರೆಯಲೆಂತಾಚರಿಸಿದರು ತಾವ್
ಮರಳಿ ಜನ್ಮಕೆ ಬಾರರವದಿರು
ಪರಮನನು ಧ್ಯಾನದಲಿ ನೋಡುವರಿರದೆ ಆತ್ಮನನು ॥
ಹರಿತ ನಯ ಕೆಲರಾತ್ಮದಲ್ಲಿಯೇ
ಯಿರುತ ಮನದಿಂ ಕಾಣುತಿರ್ಪರು
ಧುರವಿಜಯ ಕೇಳ್ ಸಾಂಖ್ಯಯೋಗದಿ ಕೆಲರು ಕಾಣುವರು॥೧೫॥

ಕೆಲರು ಕರ್ಮದ ಯೋಗದಿಂದಲಿ
ಕೆಲವರೀ ಪರಿ ಕಾಣುವರು ಮಿಗೆ
ಕೆಲರ ಕಡೆಯಿಂ ಕೇಳಿ ಧ್ಯಾನಿಪರವರುಗಳು ಸಹಿತ ॥
ಸುಲಭಶ್ರವಣದಿ ಕೆಲರು ಮೃತ್ಯುವ
ಘಳಿಲಿನೇ ತರಿಸುವರು ಕೇಳಿರ
ಗೊಲಿದು ತಾವು ಪರಾಯಣರು ಕಾಣುವರು ಆತ್ಮನನು ॥೧೬॥

ಚರವ ಚರದಲಿ ಕೊಂಚವಾದರು
ಧರೆಯಲಾಗುವದಾವುದದು ಕೇಳ್
ಮೆರೆವುದದು ಕ್ಷೇತ್ರಜ್ಞಕ್ಷೇತ್ರದ ಕೂಟದಿಂದರಿಯೈ ॥
ಮೆರೆವ ಪರಮೇಶ್ವರನು ಸಮನಾ
ಗಿರುವ ಭೂತಗಳಲ್ಲಿ ಸರ್ವದಿ
ಪಿರಿದು ಭೂತವಿನಾಶದಿಂದಲಿ ನಾಶವಾಗನಲ ॥೧೭॥

ಇದನು ನೋಡಿದವರ್ಗಳೀ ಮ
ತ್ತದನು ಕಂಡವರೈಸೆ ಸಮವಾ
ಗಿರುತಿರುವ ಸರ್ವತ್ರ ಪರಮೇಶ್ವರ ಕಂಡವರು ॥
ಮುದದಿ ತಮ್ಮನು ತಾವೆ ನಾಶವ
ಗೊದಗಿ ಮಾಡದರವರು ಪರಮಾಂ
ಪದವಿಯಾದಪವರ್ಗರೂಪರು ತಾವೆಯಾಗುವರು ॥೧೮॥

ಮಾಡುವೀ ಕರ್ಮಗಳನೆಲ್ಲವ
ಮಾಡುತಿಹುದೈ ಪ್ರಕೃತಿಯಂದುರೆ
ನೋಡುವರು ಯಾವಾಗಲಾಗಲಕರ್ತೃವಾತ್ಮನನು ॥
ನೋಡುವರದಾವಾಗ ಬೇರಾ
ಗೀಡಿರಿವೆ ಭೂತಗಳಲೊಬ್ಬನ
ನೋಡಿದವರಾತತದ ಬ್ರಹ್ಮವನೊಂದುವರು ಮುದದಿ ॥೧೯॥

ವಾದಕೊಳ್ಳದನಾದಿ ನಿರ್ಗುಣ
ವಾದ ಪರಮಾತ್ಮಾವ್ಯಯನು ಮಿಗಿ
ಲಾದ ದೇಹದೊಳಿರ್ದಡೇನೂ ಮಾಡಲಿಪ್ಯನಹ ॥
ತೀದುಕೊಂಡಿಹ ಸೂಕ್ಷ್ಮದಾಕಸ
ವಾದಕೊಳ್ಳದಲಿಪ್ತವಾಗಿಹು
ದಾದ ಸರ್ವದಲಂತೆ ಸರ್ವದೊಳಿರ್ದು ಲೇಪಿಸದು ॥೨೦॥

ಒರ್ವನಾಗಿಹ ಸೂರ್ಯಲೋಕವ
ಸರ್ವವನು ತೇಜದಲಿ ಬೆಳಗಿಪ
ಸರ್ವಕ್ಷೇತ್ರವ ಕ್ಷೇತ್ರಿಯೊರ್ವನದಂತೆ ಬೆಳಗುವನು ॥
ನಿರ್ಭರದ ಜ್ಞಾನಾಕ್ಷಿಯಿಂದಲ
ದೊರ್ವ ಕ್ಷೇತ್ರಕ್ಷೇತ್ರಿಯರ ಮಿಗೆ
ಸರ್ವಭೂತ ಪ್ರಕೃತಿಮೋಕ್ಷವ ತಿಳಿಯು ಮುಕ್ತನಹೆ ॥೨೧॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೩

ಪ್ರಕೃತಿ ಗುಣ ವಿಭೇದಯೋಗ

ಶ್ರೀಕೃಷ್ಣನೇ! ಪ್ರಕೃತಿಯನ್ನೂ ಪುರುಷನನ್ನೂ ಕ್ಷೇತ್ರವನ್ನೂ ಕ್ಷೇತ್ರಜ್ಞನನ್ನೂ ಜ್ಞಾನವನ್ನೂ ಜ್ಞೇಯವನ್ನೂ ತಿಳಿಯಲಪೇಕ್ಷಿಸುವೆನೆನುತ್ತಲೂ;

ಎಲೈ ಅರ್ಜುನನೇ! ಈ ಶರೀರವೇ ಕ್ಷೇತ್ರವು, ಇದನ್ನು ಬಲ್ಲವನೇ ಕ್ಷೇತ್ರಜ್ಞನು. ಎಲ್ಲ ಶರೀರಗಳಲ್ಲಿಯೂ ನಾನು ಕ್ಷೇತ್ರಜ್ಞನಾಗಿದ್ದೇನೆ. (ನಾನೇ ಜೀವಾತ್ಮನಾಗಿರುವೆನು) ಕ್ಷೇತ್ರ ಕ್ಷೇತ್ರಜ್ಞರ ಜ್ಞಾನವೇ ನನ್ನ ಜ್ಞಾನವು. (ಪ್ರತ್ಯಗ್ರ ಬ್ರಹ್ಮೈಕ್ಯ ಜ್ಞಾನವೇ ಮುಕ್ತಿಸಾಧಕವಾದ (ಬ್ರಹ್ಮ ಜ್ಞಾನವು) ಕ್ಷೇತ್ರವನ್ನು ವಿವರಿಸುವೆನು.

ಮಹಾಭೂತಗಳು ಅಹಂಕಾರ ಬುದ್ಧಿ ಅವ್ಯಕ್ತಾತ್ಮ ಇಂದ್ರಿಯಗಳು ೧೧ ಪಂಚ ವಿಷಯಗಳು ಇಚ್ಛೆ, ದ್ವೇಷ ಸುಖದುಃಖ ಜ್ಞಪ್ತಿ ಧೃತಿ ಇವುಗಳ ಸಂಗವೇ ವಿಕಾರದಿಂದ ಕೂಡಿದ ಕ್ಷೇತ್ರವು (ಶರೀರವೇ ಇದು) ಗರ್ವ ಹಿಂಸಾದಿ ದೋಷಗಳಿಲ್ಲದೆ ಕ್ಷಮಾದಿಗುಣಗಳುಂಟಾಗಿ ಇಂದ್ರಿಯ ನಿಗ್ರಹದೊಡನೆ ವಿರಕ್ತನಾಗಿ ಭಕ್ತಿಯಿಂದ ಆತ್ಮವಿಚಾರ ಮಾಡಿ ಸಮಚಿತ್ತನಾಗಿರುವಿಕೆಯೇ ಜ್ಞಾನವು. ಮಿಕ್ಕದ್ದು ಅಜ್ಞಾನವು. ಅನಾದಿಯಾದ ಪರಬ್ರಹ್ಮವೇ ಜ್ಞೇಯವು (ತಿಳಿಯಲ್ಪಡತಕ್ಕದ್ದು) ಅದು ಉಂಟೆನ್ನುವುದಕ್ಕೆ ಸಾಧ್ಯವಿಲ್ಲ. ಇಲ್ಲವೆನ್ನಲಾಗದು. ಎಲ್ಲವೂ ಅದರ ಕಣ್ಣೆ. ಸರ್ವತ್ರ ಅದರ ಅಂಗಗಳೆ. ಸರ್ವವ್ಯಾಪಕವಾದ್ದು. ಇಂದ್ರಿಯಗಳಿಗೆ ಇಂದ್ರಿಯಕಾರ್ಯಗಳನ್ನು ಮಾಡುವುದು. ಎಲ್ಲವನ್ನೂ ವಹಿಸಿದ್ದು, ಯಾವುದರ ಸಂಬಂಧ ಇಲ್ಲದ್ದು. ಗುಣವಿಲ್ಲದ್ದು. ಗುಣವನ್ನನುಭವಿಸುವುದು. ಭೂತಗಳ ಹೊರಗೂ ಒಳಗೂ ಇರುವುದು ಚಲಿಸದ್ದು, ಚಲಿಸುವುದು. ಅತಿ ಸೂಕ್ಷ್ಮವಾದ್ದರಿಂದ ಹೀಗೆಂದು ತಿಳಿಯಲಸಾಧ್ಯವಾದ್ದು. ದೂರದಲ್ಲಿಯೂ ಹತ್ತಿರ ದಲ್ಲಿಯೂ ಇರುವುದು ಭೇದವಿಲ್ಲದ ಅಖಂಡ ವಸ್ತುವಾದರೂ ಪ್ರತಿಭೂತದಲ್ಲಿಯೂ ಬೇರೆ ಬೇರೆಯಾದ ಹಾಗೆ ಇರುವುದು ಅದೇ ಬೆಳಕಿಗೂ ಬೆಳಕು.

ಕತ್ತಲೆಗಾಚೆ ತಿಳಿವಳಿಕೆಯೂ ತಿಳಿಯತಕ್ಕದ್ದು ಎಲ್ಲರ ಹೃದಯದಲ್ಲಿರುವುದೂ ಅದೊಂದೇ ವಸ್ತುವು.

ನನ್ನ ಭಕ್ತನು ಇದನ್ನು ತಿಳಿದು ನನ್ನ ಭಾವವನ್ನು ಹೊಂದುವನು. (ಪ್ರಕೃತಿಗೂ ಪುರುಷನಿಗೂ ಇಬ್ಬರಿಗೂ ಆದಿಯಿಲ್ಲ. ಗುಣದೋಷ ವಿಕಾರಗಳು (ಪ್ರಕೃತಿಯಿಂದ ಹುಟ್ಟಿದವುಗಳು) ಕೆಲಸಕ್ಕೂ ಸಾಧನಕ್ಕೂ ಸ್ವತಂತ್ರತೆಗೂ ಪ್ರಕೃತಿಯೇ ಕಾರಣವು.

ಸುಖ ದುಃಖಗಳನ್ನು ಅನುಭವಿಸುವುದಕ್ಕೆ ಪುರುಷನೇ ನಿಮಿತ್ತವು. ಪುರುಷನು (ಆತ್ಮ) ಪ್ರಕೃತಿಯಲ್ಲಿದ್ದು ಪ್ರಾಕೃತ ಗುಣಗಳನ್ನು ಅನುಭವಿಸುವನು. ಉತ್ತಮಾಧಮ ಜನ್ಮಗಳಿಗೆ ಗುಣಸಂಗವೇ ಕಾರಣವು.

ಈ ದೇಹದಲ್ಲಿರುವ ಪುರುಷನೇ ಪರಮಾತ್ಮನು. ಸಾಕ್ಷಿ, ಸಮ್ಮತಿಗೊಳ್ಳುವನು, ಒಡೆಯನು, ಅನುಭವಿಸುವನು, ಪರಮೇಶ್ವರನೆಂತಲೂ ಹೇಳಲ್ಪಟ್ಟಿದ್ದಾನೆ. ಯಾವನು ಪ್ರಕೃತಿ ಪುರುಷರನ್ನೂ ಗುಣಗಳನ್ನು ಹೀಗೆ ತಿಳಿಯುತ್ತಾನೋ ಅವನು ಹೇಗಿದ್ದರೂ ಮರಳಿ ಹುಟ್ಟುವುದಿಲ್ಲ. ಕೆಲವು ಧ್ಯಾನದಿಂದಲೂ ಕೆಲವರು ಸಾಂಖ್ಯಯೋಗದಿಂದಲೂ ಕೆಲವರು ಕರ್ಮದಿಂದಲೂ ಆತ್ಮೋಪಾಸನೆ ಮಾಡುತ್ತಾರೆ.

ಹೀಗೆ ತಿಳಿಯದ ಕೆಲವರು ಕರ್ಮದಿಂದಲೂ ಆತ್ಮೋಪಾಸನೆ ಮಾಡುತ್ತಾರೆ. ಹೀಗೆ ತಿಳಿಯದ ಕೆಲವರು ಅನ್ಯರು ಹೇಳಿದಂತೆ ಕೇಳಿ ಆತ್ಮೋಪಾಸನೆ ಮಾಡುತ್ತಾರೆ. ವೇದವನ್ನು ನಂಬಿದ ಅವರೂ ಮೃತ್ಯುವನ್ನೂ ಗೆದ್ದೇ ಗೆಲ್ಲುವರು. ಸರ್ವಭೂತಗಳಲ್ಲಿಯೂ ಸಮವಾಗಿದ್ದು ಅವುಗಳು ನಷ್ಟವಾದರೂ ತಾನು ನಷ್ಟವಾಗದೇ ಇರುವ ಪರಮೇಶ್ವರನನ್ನು ತಿಳಿದವನೇ ಜ್ಞಾನಿಯು. ಆತ್ಮದೃಷ್ಟಿಯುಳ್ಳವನು. ಯಾರಿಗೂ ಹಿಂಸಕನಲ್ಲವಾಗಿ ಉತ್ತಮಗತಿಯನ್ನು ಪಡೆಯುವನು. ಎಲ್ಲಾ ಕೆಲಸಗಳೂ ಪ್ರಕೃತಿಯಿಂದ ಮಾಡಲ್ಪಡುವುದೆಂದು ತಿಳಿದವನು. ಆತ್ಮನನ್ನು ಕರ್ತನಲ್ಲವೆಂದು ತಿಳಿಯುವನು. ವ್ಯಷ್ಟಿಯನ್ನು ಸಮಷ್ಟಿಯಾಗಿ ತಿಳಿದರೆ ಆಗ ಬ್ರಹ್ಮಸ್ವರೂಪದ ತಿಳುವಳಿಕೆಯಾದೀತು. ಅನಾದಿಯಾಗಿಯೂ ಗುಣವಿಲ್ಲದ್ದಾಗಿಯೂ ಇರುವ ನಿತ್ಯವಾದ ಪರಮಾತ್ಮವಸ್ತುವು ಶರೀರದಲ್ಲಿದ್ದರೂ ಯಾವುದನ್ನೂ ಮಾಡುವುದೂ ಅಲ್ಲ. ಪುಣ್ಯಾಪಾಪಗಳದಕ್ಕೆ ಮೆತ್ತಿಕೊಳ್ಳುವುದೂ ಇಲ್ಲ. ಆಕಾಶದ ಹಾಗೆ ನಿರ್ಲಿಪ್ತವಾಗಿರುವುದು. ಸೂರ್ಯನ ಲೋಕವನ್ನು ಬೆಳಗಿಸುವಂತೆ ಕ್ಷೇತ್ರಜ್ಞನು ಕ್ಷೇತ್ರವನ್ನು ಬೆಳಗಿಸುವನು ಇವೆಲ್ಲವನ್ನೂ ಬಲ್ಲವರು ಪರಮಪದಕ್ಕೆ ಹೋಗುವರು.

—*—

ಅಧ್ಯಾಯ–೧೪

ಕ್ಷೇತ್ರಕ್ಷೇತ್ರಜ್ಞವಿಭಾಗಯೋಗ

ಶ್ರೀರಮಣನಿಂತೆಂದ ಪರವನು ನಾ
ನೊರೆವೆಯದಮಗುಳಿಸರ್ವದಿ
ಸಾರವಾದ ಜ್ಞಾನಗಳಿಗುತ್ತಮದ ಜ್ಞಾನವನು ॥
ಸಾರೆಯಾವುದ ತಿಳಿದು ಮುನಿಗಳು
ಸೇರಿದರು ತತ್ಪರಮಸಿದ್ಧಿಗೆ
ಯಾರಿದನು ಆಶ್ರೈಸಿ ಜ್ಞಾನವನೆನ್ನ ಧರ್ಮವನು ॥೧॥

ಸೇರಿದರು ಮಿಗೆ ಸೃಷ್ಟಿಯಲಿ ತಾವ್
ಬಾರರವನಿಗೆ ಪ್ರಳಯದಲ್ಲಿಯು
ಸೇರಿ ವ್ಯಥೆಯನು ಪೊಂದದವದಿರು ಕೇಳು ಕೌಂತೇಯ ॥
ಮೇರೆಯಿಲ್ಲದ ಬ್ರಹ್ಮವೆನ್ನಯ
ಮೀರದಿರುತಿಹ ಯೋನಿಯಲ್ಲಿಯೆ
ಸೇರಿಸಿದೆ ಗರ್ಭವನು ನಾ ಪ್ರತಿಫಲದ ರೂಪವನು ॥೨॥

ಅದರಿನಿಂದಲಿ ಸರ್ವಭೂತಗ
ಳುದಯವಾಗುತ್ತಿಹುದು ಭಾರತ
ವೊದಗಿರುವ ಯಿೂ ಯೋನಿಯಿಂದವೆ ವ್ಯಕ್ತಿಗಳ ಭವವು ॥
ಅರ್ಧಳಿಗೆಯಾ ಬ್ರಹ್ಮಯೋನಿಯು
ವೊದಗಿ ಬೀಜಪ್ರದನು ನಾನೆಲೊ
ಅದರಿಂ ಪಿತನಾಗಿಯಿಹೆನೆಲೊ ಕೇಳು ಕೌಂತೇಯ ॥೩॥

ಸತ್ವರಜತಮವೆಂಬಗುಣಗಳು
ಮತ್ತೆ ಪುಟ್ಟುವುದೈಸೆ ಪ್ರಕೃತಿಯ
ಸತ್ತಿನಿಂದದರಲ್ಲಿ ಯಿರುತಿಹ ದೇಹಿಯವ್ಯಯನು ॥
ಸತ್ಯಗುಣದವರಲ್ಲಿ ನಿರ್ಮಲ
ವೆತ್ತಿಹುದರಿಂದಲಿ ಪ್ರಕಾಶಕ
ನಿತ್ಯವದನಾಮಯವು ಸುಖಸಂಗದಲಿ ಸಂಗಿಪುದು ॥೪॥

ಜ್ಞಾನಸಂಗದಿ ಕೂಡಿಸುವುದೈ
ಮಾನನಿಧಿಗಾರಾತ್ಮಕವು ರಜ
ವಾನುವುದು ತೃಷ್ಣೆಯನು ತತ್ಸಂಗದಿ ಸಮುದ್ಭವವು ॥
ತಾ ನಿಬದ್ಧಿಸುತಿಹುದು ಜೀವನ
ಪೂನಿ ಕರ್ಮದ ಸಂಗದಿಂದಲಿ
ಮಾನನಿಧಿ ತಮವಾದಡಜ್ಞಾನದಲಿ ಪುಟ್ಟದುದು ॥೫॥

ಸರ್ವದೇಹಿಗಳಿಂಗೆ ಭ್ರಾಂತಿಯ
ಪರ್ವಿನಿದ್ರಾಲಸ್ಯದಿಂದಲಿ
ಸೇರ್ವವೋಲಾತನ ನಿಬದ್ಧಿಸುತಿಹುದು ಭಾರತನೆ ॥
ಸರ್ವಸುಖ ಪುಟ್ಟುವುದು ಸತ್ಯದಿ
ಪರ್ವಕರ್ಮವು ರಜವು ಪುಟ್ಟುಗು
ಪರ್ವಿತಮಜ್ಞಾನವನು ಮರಸಿಯೆ ಮೋಹಮೊಸಗುವುದು ॥೬॥

ತಮವ ರಜವನು ಕೆಡಿಸಿ ಸತ್ಯವು
ಕ್ರಮದಿ ಪುಟ್ಟುವುದೈಸೆ ರಾಜಸ
ವಮಮ ಸತ್ವವತಮಮ ಕೆಡಿಸಿಯೆ ತಮವದೆರಡರನು ॥
ವಿಮಲತೆಯು ಪುಟ್ಟುವುದು ದೇಹದ
ಲಮಮ ದ್ವಾರಗಳಿಂಗೆ ಜ್ಞಾನವು
ಸಮನಿಪುದು ಸತ್ಯದಲಿ ವೃದ್ಧಿಯ ಕೇಳು ಕೌಂತೇಯ ॥೭॥

ಲೋಭವು ಪ್ರವೃತ್ತಿಯನು ಕರ್ಮದ
ಲಾಭದಾರಂಭದಲಿ ಶಮೆ ಸ್ಪೃಹೆ
ಯೋ ಭರತಕುಲರನ್ನ ರಾಜಸ ವೃದ್ಧಿಯಿಂದಹುದು ॥
ತಾ ಭಜಿಪುದದು ಆ ಪ್ರಕಾಶವ
ತಾಬಹುದದಾ ಆ ಪ್ರವೃತ್ತಿಯು
ಕಾಬ ಮೋಹವು ಪ್ರಮಾದವು ತಾಮಸದೊಳಾಯ್ತು ॥೮॥

ಆವ ಕಾಲದಿ ಸತ್ವವೃದ್ಧಿಯು
ಆವಗವೆ ಮೃತನಾದ ಜೀವನು
ದೇವತಾ ನಿರ್ಮಲದ ಲೋಕವನೊಂದುತಿಹನ್ನೆಸೆ ॥
ಆವ ರಾಜಸ ಕಾಲದಲಿ ಮೃತ
ನಾವಕರ್ಮದ ಲೋಕಕ್ಕೈದುವ
ನಾವ ತಾಮಸದಲ್ಲಿ ಮೃತನಹ ಮೂಢಯೋನಿಯಲಿ ॥೯॥

ಸಾತ್ವಿಕನು ಸತ್ಕರ್ಮದಿಂದ ಯ
ಥಾರ್ಥ ನಿರ್ಮಲಫಲವ ಪಡೆಯುವ
ಪಾರ್ಥ ರಾಜಸ ಫಲವು ದುಃಖವು ತಾಮಸಫಲವದಜ್ಞಾನ ॥
ಸಾತ್ವಿಕದೆ ಪುಟ್ಟುವುದು ಜ್ಞಾನವು
ಸಾತ್ವಿಕವು ರಜದಿಂದ ಲೋಭ ಯ
ಥಾರ್ಥ ನೋಡೆ ಪ್ರಮಾದ ಮೋಹವು ಅಜ್ಞತೆಯು ತಮದಿ ॥೧೦॥

ಸತ್ವದಿಂದಿಹನೂರ್ಧ್ವಗತಿಕನು
ನಿತ್ಯವಾಮಧ್ಯದಲಿ ರಾಜಸ
ವ್ಯರ್ಥವಾದ ಅಧೋಗತಿಯನೊಂದುವನು ತಾಮಸಿಯು ॥
ಕರ್ತೃಗುಣಗಳದಲ್ಲದೆಯು ಮಿಗೆ
ಮತ್ತದಾರೆಂತೆಂದು ತಿಳಿಯುವ
ಮತ್ತೆ ಗುಣಗಳಿಗೆಲ್ಲ ಪರ ತಾನೆಂದು ತಿಳಿಯುತಿಹ ॥೧೧॥

ಅವನದೆನ್ನಯ ಭಾವವೊಂದುವ
ತವಕದಿಂದಲದಾವ ಗುಣಗಳ
ನವನು ಗೆಲುವನು ದೇಹದಿಂ ಪುಟ್ಟಿದುದನದನದನು ॥
ಅವಿರಳದ ಜನಿಮೃತಿಯನಾ ದುಃ
ಖವನು ಮೃತ್ಯುಜರಾದಿಗಳಿನಿಂ
ದವನು ಮುಕ್ತನದಾಗಿ ಮೋಕ್ಷವನೈದುವನು ಪಾರ್ಥ ॥೧೨॥

ಯಾವ ಚಿಹ್ನೆಯೊಳಿಹನುಗುಣಗಳ
ನೀ ವಿಧದಿ ಗೆಲಿದವನವನು ಮಗು
ಳಾವದಾಚರಿಸುವನು ಯಾವುದರಹಿರ ಗೆಲಿದನವ ॥
ನೀ ವಹಿಲದಲಿ ಪೇಳ್ವುದೈ ರಾ
ಜೀವನಾಭನೆ ಯೆನುತಲರ್ಜುನ
ಸಾವಧಾನದಿ ಕೇಳೆ ಮಗುಳಿಂತೆಂದನಾ ಹರಿಯು ॥೧೩॥

ಕೇಳು ನೀನರ್ಜುನ ಪ್ರಕಾಶವು
ಮೇಲೆ ತೋರ್ಪ ಪ್ರವೃತ್ತಿಮೋಹವು
ಮೇಲೆ ಮೇಲಡಸಿದರು ಪಗೆಗೊಳಕಾಂಕ್ಷಿಸನು ತಾನು ॥
ಕೇಳುವನುದಾಸೀನನಂತಿಹ
ಮೇಲೆ ಗುಣಗಳಲವನು ಚಲಿಸನು
ತಾಳುವನು ಗುಣವರ್ತನೆಯಿದೆಂದರಿದು ಯಿರುತಿಹನು ॥೧೪॥

ಸಮನು ಸುಖದುಃಖದಲಿ ಸ್ವಸ್ಥನು
ಸಮನುತಾಲೋಷ್ಟಾತ್ಮ ಕಾಂಚನ
ನವನು ಸಮನು ಪ್ರಿಯಾಪ್ರಿಯದಿ ಸ್ತುತಿನಿಂದೆಯಲಿ ಸಮನು ॥
ಸಮನು ತಾ ಮಾನಾವಮಾನದಿ
ಸಮನವನು ಮಿತ್ರಾರಿಪಕ್ಷದಿ
ವಿಮಲ ಸರ್ವಾರಂಭ ತ್ಯಾಗಿಯುನವ ಗುಣಾತೀತ ॥೧೫॥

ಎನ್ನ ತಾನೇಕಾಂತಭಕ್ತಿ ಪ್ರ
ಸನ್ನಯೋಗದಿ ಸೇವಿಸುತ್ತಿಹ
ನೆನ್ನವನು ಗುಣಗಳನು ಜಯಿಸಿಯೆ ಮುಕ್ತಿಯೊಂದುವನು ॥
ಯೆನ್ನಲಿ ಪ್ರತಿಷ್ಠಿತವು ಬ್ರಹ್ಮವ
ದಿನ್ನು ಅವ್ಯಯವಾದ ಮೋಕ್ಷವು
ಸನ್ನುತದ ಶಾಶ್ವತದ ಧರ್ಮವು ನಿಜವದಹ ಸುಖವು ॥೧೬॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೪

ಕ್ಷೇತ್ರಕ್ಷೇತ್ರಜ್ಞವಿಭಾಗಯೋಗ

(ಶ್ರೀಕೃಷ್ಣನು ಹೇಳುವನು) ಉತ್ತಮ ಜ್ಞಾನವನ್ನು ಮರಳಿಯೂ ಹೇಳುತ್ತೇನೆ. ಈ ಜ್ಞಾನದಿಂದ ನನ್ನೊಡನೆ ಸಮಾನ ಧರ್ಮತೆಯನ್ನು ಪಡೆದವರು ಸೃಷ್ಟಿಯಲ್ಲಿ ಹುಟ್ಟುವುದಿಲ್ಲ. (ಪ್ರಳಯದಲ್ಲಿ ವ್ಯಥಿಸುವುದಿಲ್ಲ) ಮಹತ್ತತ್ವದಲ್ಲಿ ಅವ್ಯಕ್ತನಾದ ನಾನು ಗರ್ಭವನ್ನುಂಟುಮಾಡುವೆನು. ಅದರಿಂದ ಭೂತಗಳು ಹುಟ್ಟುವವು. ಸತ್ವರಜಸ್ತಮಸ್ಸುಗಳೆಂಬ (ಪ್ರಾಕೃತಗುಣಗಳು ಮೂರು ಅವ್ಯಯಾತ್ಮನನ್ನು ದೇಹದಲ್ಲಿ ಕಟ್ಟಿಹಾಕುವವು. ಅವುಗಳಲ್ಲಿ ನಿರ್ಮಲವಾದ ಸತ್ತ್ವವು ಪ್ರಕಾಶಕವಾಗಿ ಸುಖದಿಂದಲೂ ಜ್ಞಾನದಿಂದಲೂ ಬಂಧಗೊಳಿಸುತ್ತೆ. ರಾಗಾತ್ಮಕವಾದ ರಜೋಗುಣವೂ ಆಶೆಯನ್ನುಂಟುಮಾಡಿ ಕರ್ಮಸಂಗದಿಂದ ಕಟ್ಟಿ ಹಾಕುತ್ತೆ. ಅಜ್ಞಾನದಿಂದ ಹುಟ್ಟಿದ ಮೋಹಕವಾದ ತಮೋಗುಣವು ಆಲಸ್ಯ ನಿದ್ರಾ ಪ್ರಮಾದಗಳಿಂದ ಕಟ್ಟಿಹಾಕುತ್ತೆ. ಸತ್ತ್ವದಿಂದ ಸುಖ ರಜದಿಂದ ಕರ್ಮ ತಮದಿಂದ ಪ್ರಮಾದ ಉಂಟಾಗುತ್ತೆ.

ರಾಜಸ ತಾಮಸಗಳನ್ನು ಸತ್ತ್ವ ಗೆಲ್ಲುತ್ತೆ. ಸಾತ್ತ್ವಿಕ ತಾಮಸಗಳನ್ನು ರಜಸ್ಸು ಗೆಲ್ಲುತ್ತೆ. ಸತ್ತ್ವ ರಜಸ್ಸುಗಳನ್ನು ತಮಸ್ಸು ಗೆಲ್ಲುತ್ತೆ. ಶರೀರದ ಸರ್ವದ್ವಾರಗಳಲ್ಲಿಯೂ ಜ್ಞಾನದ ಬೆಳಕು ಉಂಟಾದಾಗ ಸತ್ತ್ವ ಹೆಚ್ಚಿದೆಯೆಂದು ತಿಳಿಯಬಹುದು. ರಜಸ್ಸು ಹೆಚ್ಚಿದರೆ ಲೋಭವು ಕೆಲಸದ ಯತ್ನವು ಆಹಾರಾಪೇಕ್ಷೆಯುಂಟಾಗುತ್ತೆ. ತಮಸ್ಸು ಹೆಚ್ಚಿದರೆ ಅಜ್ಞಾನವು ಆ ಪ್ರಯತ್ನವು ಅವಧಾನ. ತಪ್ಪುವಿಕೆ ಮೋಹವುಂಟಾಗುವುವು. ಸತ್ತ್ವ ಹೆಚ್ಚಾದಾಗ ಸತ್ತವರು ಉತ್ತಮಲೋಕಗಳಿಗೂ ರಜಸ್ಸು ಹೆಚ್ಚಿದಾಗ ಸತ್ತವರು ಕರ್ಮಗಳಲ್ಲಿ ಹುಟ್ಟುವುದಕ್ಕೂ ತಮಸ್ಸು ಹೆಚ್ಚಿದಾಗ ಸತ್ತವರು ಮೂಢ ಯೋನಿಗಳಿಗೂ ಹೋಗುವರು. ಸತ್ತ್ವಕ್ಕೆ ಪುಣ್ಯವೂ ರಜಕ್ಕೆ ದುಃಖವೂ ತಮಕ್ಕೆ ಅಜ್ಞಾನವೂ ಫಲಗಳು. ಸಾತ್ವಿಕರು ಮೇಲಕ್ಕೂ ತಾಮಸರು ಕೆಳಕ್ಕೂ ಹೋಗುವರು. ಅವುಗಳಿಗೆ ಮಿಂಚಿದವನಾತ್ಮನು ಎಂದು ಆತ್ಮನಲ್ಲಿ ಕರ್ತೃತ್ವಾದಿಗಳು ಗುಣಗಳಿಂದ ಆರೋಪಿಸಲ್ಪಟ್ಟಿರುವವೆಂದು ತಿಳಿದವನು ಬ್ರಹ್ಮಭಾವವನ್ನು ಹೊಂದುವನು. ತ್ರಿಗುಣಾತೀತನು ಜನನ ಮರಣಗಳಿಂದ ಮುಕ್ತನಾಗುವನು. ಎನಲು; ಅರ್ಜುನನು ಸ್ವಾಮಿ! ಯಾವ ಗುರುತುಗಳಿಂದ ಗುಣಗಳನ್ನು ದಾಟಿದವನಾಗುವನು. ಅವನ

ಆಚಾರವೇನು? ಮೂರು ಗುಣಗಳನ್ನು ಹೇಗೆ ಅತಿಕ್ರಮಿಸುವನು? ಎನಲು ಶ್ರೀಕೃಷ್ಣನು ಹೇಳಿದನು.

ಜ್ಞಾನಾಜ್ಞಾನ ಸುಖದುಃಖಾದಿ ದ್ವಂದ್ವಗಳಲ್ಲಿ ಸಮಬುದ್ಧಿಯಾಗಿ ಆಸೆಯನ್ನು ತೊರೆದು ಪ್ರಯತ್ನವನ್ನು ಬಿಟ್ಟವನೇ ನಿರ್ಗುಣನು. ಶುದ್ಧಭಕ್ತಿಯಿಂದ ನನ್ನನ್ನು ಸೇವಿಸುವವನು (ಕರ್ಮದಿಂದ ನಿರ್ಗುಣನಾಗಿ) ಬ್ರಹ್ಮವೇ ಆಗುವನು. ಅಂಥಾ ಅದ್ವೈತವಾದ ನಿತ್ಯ ಸುಖದ ಪ್ರತಿಷ್ಠೆಯೇ ನಾನು.

—*—

ಅಧ್ಯಾಯ-೧೫

ಪುರಾಣ ಪುರುಷೋತ್ತಮ ಯೋಗ

ಹರಿಯುಮಗುಳಿಂತೆಂದನೂರ್ಧ್ವದಿ
ಮೆರೆವ ಮೂಲವು ಕೆಳಗೆ ಶಾಖೆಗ
ಳಿರುವ ಅಶ್ವತ್ಥವದಾಗಿಯೆ ನುಡಿವರವ್ಯಯವ ॥
ಬರದ ಛಂದಗಳದಕೆ ಪರ್ಣಗ
ಳಿರುವ ಯಿದನರಿದವನದಾವನು
ಪರಮವಹ ವೇದಗಳನರಿದವ ಪಾರ್ಥ ಕೇಳೆಂದ ॥೧॥

ಕೆಳಗು ಮೇಲೆಯು ಪ್ರಸರಿಸಿರುತಿಹ
ಫಲವು ಶಾಖೆಯು ಗುಣದಿ ವೃದ್ಧಿಯು
ತಿಳಿಯೆ ವಿಷಯಗಳೆಂಬ ಪಲ್ಲವ ಅಡಿಯಲುನುಮೇಲು ॥
ಬಳಸಿ ವ್ಯಾಪಿಸಿಯಿಹುದು ಕರ್ಮದ
ಬಳಕೆಯನು ಬಂದಿಗಳು ಕೇಳ್ವೆ
ಬಳಿಕ ಮಾನುಷಲೋಕದಲಿ ಮೆರೆಯುತ್ತಲಿರುತಿಹುದು ॥೨॥

ರೂಪಮೊಂದುವದಲ್ಲವಿದು ಕೆಡ
ದಾ ಪರಿಯೆ ಮೊದಲಿಲ್ಲ ಯಿರುವುದ
ಕೋಪುದಲ್ಲವು ಪರಿಯದಶ್ವತ್ಥವಿದು ಮತ್ತು ॥
ಭೂಪ ತಿಳಿಸು ವಿರೂಢಮೂಲವು
ತಾ ಪ್ರಯತ್ನದಿ ದೃಢವದಾಗಿಹ
ಭಾವಸಂಗದ ಶಸ್ತ್ರದಿಂದಲಿ ಛೇದಿಸಿಯೆ ಬಳಿಕ ॥೩॥

ಅರಿಯಬೇಕಾ ಯಡೆಯನೆಲ್ಲಿಗೆ
ತೆರಳಿದರು ಮಾರ್ಕೊಳಿಸಿ ಬಾರರು
ನರನೆ ಆದ್ಯಂಪುರುಷನವನಿಂ ಪ್ರಕೃತಿ ಜನಿಸುವುದು ॥
ಅರಿಯ ದೇವದ ಪರಪುರಾಣಿಯ
ತೆರಳುವುದು ಅದರಿಂದ ಸಂಸೃತಿ
ಮೆರೆಯುತಿರ್ಪುದು ತತ್ಪ್ರಕೃತಿ ಪರವದ ಪೊಂದಬೇಕೈಸೆ ॥೪॥

ಅದನು ಕೇಳ್ ನಿರ್ಮಾನಮೋಹರು
ವೊದಗಿದೀ ದೋಷವನು ಗೆಲಿದವ
ರದುಭುತದ ಅಧ್ಯಾತ್ಮನಿಷ್ಠರು ವಿಜಿತಕಾಮಿಗಳು ॥
ಸದವರೀ ಸುಖದುಃಖರೂಪದಿ
ವೊದಗಿದಾ ದ್ವಂದ್ವವನು ಗೆಲುವರು
ಸದಯ ಮೂಢರದಲ್ಲದರು ತತ್ಪದವ ಪೊಂದುವರು ॥೫॥

ಎನ್ನ ನಿಜಧಾಮವನು ನೀ ತಿಳಿ
ಯಿನ್ನು ಸೂರ್ಯನು ಬೆಳಗಲಿಲ್ಲದ
ನನ್ನಿಯಿಂದಗ್ನಿಯನು ಚಂದ್ರಮ ತೇಜಿಪರದಲ್ಲ ॥
ನನ್ನ ನಿಜಧಾಮವನು ಪೊಕ್ಕವ
ರಿನ್ನು ಬಾರರು ಮರಳಿ ಅದುವೆ
ಯೆನ್ನ ನಿಜವದನರಿಯೆ ನೀ ತಿಳಿಯೆಂದನರ್ಜುನಗೆ ॥೬॥

ಭುವನದಲಿ ತನ್ನಂತೆಯಿಂದಿಹ
ನಿವಹವಾದೀ ಜೀವ ಕೋಟಿಯ
ನವಿರಳದ ಪ್ರಕೃತಿಸ್ಥವಾಗಿಹ ಮನದಿ ಆರಾರ ॥
ಕವಿವ ಯಿಂದ್ರಿಯ ನಿಕರವೇಯದು
ತವಿಲಿಕರ್ಷಿಸುತಿಹವು ಯದರಿಂ
ದವಿರಳದ ತನ್ನಲ್ಲಿ ಶಾರದವೊಲು ಮರುಕೊಳಿಸಿ ॥೭॥

ಕರ್ಮವಶದಿಂ ದೇಹದುದ್ಭವ
ವಕರ್ಮವಶದಿಂ ದೇಹಕೆಡವುದು
ನಿರ್ಮಲನು ಯಿರುತಿಹನು ಗಂಧ ವುಪವನನಂದದಲಿ ॥
ನಿರ್ಮಲನೆ ಶ್ರೋತ್ರವುನು ನೇತ್ರವು
ಪೇರ್ಮೆಪಡದಿಹ ಸ್ಪರ್ಶರಸನವು
ಸಮ್ಮತದ ಪ್ರಾಣವನಧಿಷ್ಠಿಸಿ ಮನವು ವಿಷಯಗಳ ॥೮॥

ಗ್ರಹಿಸುವುದು ಕೇಳ್ ಪೋದರೆಯು ತಾ
ವಹಿಸಿ ದೇಹದೊಳುಣುತಲಿರ್ದರು
ಸಹಸಿಗುಣದಿಂ ಕೂಡಿದುದರಿಂ ಕಾಣರರಿಯದರು ॥
ಮಹಿಯೊಳಗೆ ತಾವ್ ಕಾಣುತಿರ್ಪರು
ಗ್ರಹಿಸಿ ದಿವ್ಯದ ಜ್ಞಾನನೇತ್ರದ
ನೆನಹ ಮಾಯಾಶೌರ್ಯಮೆಂತುಟೊ ಪೇಳಲಳವಲ್ಲ ॥೯॥

ಯತ್ನದಿಂ ಯೋಗಿಗಳು ಕೆಲರೀ
ನಿತ್ಯನನು ತಾವ್ ಕಾಣುತಿರ್ಪರು
ಯತ್ನದಿಂ ಕೂಡಿದರಚೇತರು ಯನ್ನ ಕಾಣರಲ ॥
ಮತ್ತದಾದಿತ್ಯನಲಿ ಪೊಂದಿದ
ಮೊತ್ತವಾದ ಸುತೇಜಮೆಂತು ಜ
ಗತ್ತನೆಲ್ಲವ ಬೆಳಗುತಿರ್ಪುದು ಅಗ್ನಿ ಚಂದ್ರರಲಿ ॥೧೦॥

ಬೆಳಗುತಿರ್ಪಾ ತೇಜವೆನ್ನದು
ಯಿಳೆಯಲಾವೇಶಿಯು ಭೂತಂ
ಗಳನು ನಾನೇ ಧರಿಸುವೆನು ಪರಮೋಜದಿಂದದನು ॥
ಬೆಳೆವುತಿಹ ಓಷಧಿಯನೆಲ್ಲವ
ತಳೆದು ಪೋಷಿಸುತಿರ್ಪೆ ನಾನ್ಯೆ
ಯಿಳೆಯಲಿ ವರರಸಾತ್ಮಕನು ತಾನಾದ ಚಂದ್ರನಹೆ ॥೧೧॥

ನಾನು ವೈಶ್ವಾನರನದಾಗಿಯೆ
ಪ್ರಾಣಿಗಳ ದೇಹವನದಾಶ್ರಿಸಿ
ಪ್ರಾಣಪಾನಾದಿ ಯುಕ್ತನಾಗಿಯೆ ಪಚಿಪೆನನ್ನವನು ॥
ನಾನು ಸರ್ವ ಹೃದಿಸ್ಥನಾಗುವೆ
ಯೇನದೇನನ್ನಿಂದ ಸ್ಮೃತಿಯನು
ಜ್ಞಾನವು ನಪೋಹನವು ಮೊದಲಾದವನು ಮಾಳ್ಪೆನಲ ॥೧೨॥

ಸರ್ವವೇದಗಳಿಂದಲಾನೇ
ಉರ್ವಿಯಲಿ ವೇದ್ಯನುಮದಾಗಿಹೆ
ಸರ್ವವೇದಾಂತಿಗಳಿಗಾನೆ ಪ್ರವರ್ತಕನು ಗುರುವು ॥
ಉರ್ವಿಯಲ್ಲಿ ಪುರುಷರಿಬ್ಬರು
ಪರ್ವಿಕ್ಷರವಕ್ಷರರು ಅದರೊಳ
ಖರ್ವಕ್ಷರವೇ ಸರ್ವಭೂತವು ಕೂಟನಕ್ಷರನು ॥೧೩॥

ಅನ್ಯನಾಗಿಹ ಪುರುಷನುತ್ತಮ
ನೆನ್ನುವರು ಪರಮಾತ್ಮನೆನುತೆ ಪ್ರ
ಸನ್ನನೀಶ್ವರ ಮೂರು ಲೋಕವ ಭರಿಸುವವ್ಯಯನು ॥
ಯಿನ್ನು ಕ್ಷರಕೆ ಅತೀತ ನಾನೇ
ಸನ್ನುತಾಕ್ಷರಕುತ್ತಮನು ನಾ
ನಿನ್ನನದರಿನಿಂ ಲೋಕವೇದ ಪ್ರಥಿತನಾಗಿರ್ದು ॥೧೪॥

ಮೆರವ ಪುರುಷೋತ್ತಮನದೆನ್ನನು
ಯಿರುವ ಸಮ್ಮೂಢತೆಯಲರಿವನು
ಅರರೆ ಭಾರತ ಸರ್ವಭಾವದಿ ಭಜಿಸುವವನು ಯನ್ನಂ ॥
ನರನೆ ಸರ್ವವ ತಿಳಿದನವನ್ನೆ
ವೊರೆದೆ ಯಿದ ಗುಹ್ಯಂತಮ ಶಾಸ್ತ್ರವ
ನಿರುತ ತಿಳಿದಾನು ಮತಿಯುತನೆ ಕೃತಕೃತ್ಯ ಕೌಂತೇಯ॥೧೫॥

—*—

ಅಧ್ಯಾಯ ೧೫

ಪುರಾಣ ಪುರುಷೋತ್ತಮಯೋಗ

ಭಗವಂತನು ಹೇಳುವನು : ಬೇರು ಮೇಲೆ ರೆಂಬೆ ಕೆಳಗೆ ವೇದಗಳೇ ಎಲೆಗಳು. ಹೀಗಿರುವ ಅರಳಿಯ ಮರವನ್ನು ಬಲ್ಲವನೇ ವೇದವನ್ನು ಬಲ್ಲವನು (ಶರೀರವು) ಅಸಂಗ ಭಾವನೆಯೆಂಬ ಆಯುಧದಿಂದ ಈ ಮರವನ್ನು ಕಡಿದು ಅದರ ಮೇಲೆ ಹುಡುಕಬೇಕು. ಅಲ್ಲಿಗೆ ಹೋದವರು ಹಿಂದಕ್ಕೆ ಬರುವುದಿಲ್ಲ. ಜ್ಞಾನಿಗಳು ಅಲ್ಲಿಗೆ ಹೋಗುವರು. ಸೂರ್ಯ ಚಂದ್ರಾದಿಗಳು ಅದನ್ನು ಬೆಳಗಿಸಲಾರರು. ಅದೇ ಸ್ವಯಂ ಪ್ರಕಾಶವಾಗಿರುವ ನನ್ನ ಬೆಳಕು. ಆ ನನ್ನ ಬೆಳಕಿನಂಶವೇ ಜೀವಾತ್ಮನಾಗಿ ಇಂದ್ರಿಯಗಳನ್ನೂ, ಮನಸ್ಸನ್ನೂ ಎಳೆಯುವನು. ಗಾಳಿಯು ಗಂಧವನ್ನು ವಹಿಸುವಂತೆ ಶರೀರವನ್ನು ವಹಿಸುವರು. ವಿಷಯಗಳನ್ನು ಸೇವಿಸುವನು. ಹೀಗೆ ದೇಹದಲ್ಲಿ ವ್ಯಾಪಾರವನ್ನು ಮಾಡುತ್ತಿರುವ ಆತ್ಮನನ್ನು ಮೂಢರರಿಯರು. ಜ್ಞಾನದ ಕಣ್ಣುಳ್ಳವರು ನೋಡುವರು. ಯೋಗಿಗಳು ಪ್ರಯತ್ನಮಾಡಿ ತಮ್ಮೊಳಗೆ ಕಾಣುವರು. ಯೋಗವಿಲ್ಲ ದವರು ಪ್ರಯತ್ನಮಾಡಿದರೂ ಕಾಣರು. ಸೂರ್ಯಚಂದ್ರಾಗ್ನಿಗಳಲ್ಲಿರುವ ಬೆಳಕು ನನ್ನದು. ಜಗದ್ವ್ಯಾಪಾರವನ್ನು ನಾನೇ ನಿರ್ವಹಿಸುವೆನು. ಎಲ್ಲರ ಹೃದಯಗಳಲ್ಲಿಯೂ ಇರುವೆನು. ಅರಹುಮರಹು ನನ್ನಿಂದಲೇ ವೇದಶಾಸ್ತ್ರಗಳಿಂದ ನಾನೇ ತಿಳಿಯಲ್ಪಡತಕ್ಕವನು ಕ್ಷರಾಕ್ಷರ ಪುರುಷರಿಬ್ಬರು ಸರ್ವಭೂತಗಳೂ ಕ್ಷರರು. ವಿಕಾರವಿಲ್ಲದವನಕ್ಷರನು. ಪರಮಾತ್ಮನು ಬೇರೆಯಾಗಿ ಮೂರು ಲೋಕಗಳನ್ನೂ ಭರಿಸುವ ಪರಮೇಶ್ವರನಾಗಿರುವನು. ಇವೇ ಜಡ ಚಿದೀಶ್ವರ ವಸ್ತುತ್ರಯವು. ಕ್ಷರಾಕ್ಷರಗಳನ್ನು ಮಿಂಚಿದವನಾದ್ದರಿಂದ ಪುರುಷೋತ್ತಮನೆಂದು ಪ್ರಖ್ಯಾತಿಗೊಂಡಿರುವೆನು. ನನ್ನನ್ನು ಹೀಗೆ ಬಲ್ಲವನು ಎಲ್ಲವನ್ನೂ ಬಲ್ಲವನಾಗಿ ನನ್ನನ್ನು ಭಜಿಸುವನು ಧನ್ಯನಾಗುವನು.

—*—

ಅಧ್ಯಾಯ–೧೬

ದೈವಾಸುರ ಸಂಪದ್ವಿಭಾಗಯೋಗ

ಶ್ರೀವರನು ಮಗುಳೆಂದನಭಯವು
ಪಾವನನೆ ಘನಸತ್ತ್ವ ಶುದ್ಧಿಯು
ಭಾವದಿಂ ತಿಳಿ ಜ್ಞಾನಯೋಗ ವ್ಯವಸ್ಥಿತಿಯು ದಾನ ॥
ಕೇವಲದ ದಮೆ ಯಜ್ಞವಾರ್ಜವ
ಸಾವಧಾನದ ಬ್ರಹ್ಮಯಜ್ಞರು ಕೇ
ವಲದ ತಪವಾ ಅಹಿಂಸೆಯು ಸತ್ಯವಕ್ರೋಧ ॥೧॥

ಶಾಂತಿ ತ್ಯಾಗವ ಪೈಶುನವು ದಯೆ
ಯಿಂತೆಸೆವೆ ಭೂತದಲಿ ಮಾರ್ದವ
ಸಂತತವ ಲೋಲುಪ್ತ ಹ್ರೀಯು ಅಚಾಪಲತೆ ತೇಜ ॥
ಸಂತಸದಿ ಕೇಳೆ ಕ್ಷಮೆಯು ಧೃತಿಯು
ಅಂತರದ ಬಾಹ್ಯದ ವಿಶುದ್ಧತೆ
ಸಂತತಾ ದ್ರೋಹಾತಿಮಾನತೆ ಷಡ್ವಿಂಶವಿದುವೆ ॥೨॥

ದೈವಸಂಪದದಲ್ಲಿ ಪುಟ್ಟಿದ
ದಾವನಾಗಲಿ ಅವನಿಗೊದಗುಗು
ಸಾವಧಾನದಿ ಕೇಳು ದಂಭವು ದರ್ಪವತಿಮಾನ
ಪಾವನನೆ ಕ್ರೋಧವನು ಪೌರುಷ
ವಾವನಜ್ಞಾನದಲಿ ಪುಟ್ಟಿದ
ಭಾವ ರಾಕ್ಷಸಸಂಪದವು ಕೇಳ್ಪಾಂಡವೋತ್ತಮನೆ ॥೩॥

ದೇವ ಸಂಪದದಿಂದ ಮೋಕ್ಷವು
ಪಾವನನೆ ಆಸುರದಿ ಬಂಧನ
ಯಿೂ ವಸುಧೆಯಲಿ ದೈವಸಂಪದದಿ ಜನನ
ದ್ವೈವಿಧದಲೀ ಭೂತಸರ್ಗವು
ದೈವವಾಸುರವೆಂಬುವವು ಮಿಗೆ
ದೈವ ವಿಸ್ತರದಿಂದ ಪೇಳಿದೆ ಆಸುರವ ಪೇಳ್ವೆ ॥೪॥

ಧರ್ಮ ಪ್ರವೃತ್ತಿಯ ನಿವೃತ್ತಿಯ
ಮರ್ಮವನು ಅಸುರರು ತಿಳಿಯರು
ದುರ್ಮದನೆ ಶೌಚವನು ಆಚಾರವನು ಸತ್ಯವನು
ಒಮ್ಮನದಿ ಪೊಂದುವರದಲ್ಲವು
ನಿರ್ಮಮವು ಅಸತ್ಯವನು ಲೋಕಕೆ
ಧರ್ಮವು ಅನೀಶ್ವರತೆಯಿಂತಿದು ಜಗವದೆಲ್ಲವನು ॥೫॥

ಸ್ತ್ರೀ ಪುರುಷ ಸಂಯೋಗದಿಂದುವೆ
ವ್ಯಾಪಿಸಿಹುದೆನ್ನುವುದು ಕಾಮವೆ
ಪೋಪುವುದು ಪುಟ್ಟುವದಕೆಂಬುದು ಸಹಜವವರಿಂಗೆ ॥
ಈ ಪರಿಯ ಸೃಷ್ಟಿಯನು ಪೊಂದಿಯೆ
ತಾ ಪರಿಕಿಸಲು ಮಲಿನಚಿತ್ತತೆ
ಈ ಪರಿಯಲೇ ಅಲ್ಪಬುದ್ಧಿಯನ್ಯೆದಿ ಪುಟ್ಟುವರು ॥೬॥

ಲೋಕಕಹಿತರು ಉಗ್ರಕರ್ಮರು
ಜೋಕೆ ಮಿಗೆ ನಾಶವನು ಪಡುವರು
ಭೀಕರರು ದುಷ್ಪೂರ ಕಾಮರು ದಂಭಮಾನ ಮದ
ಸ್ವೀಕರಣೆಯುಳ್ಳವರು ಮೋಹದಿ
ಲೋಕದಲಸದ್ಗ್ರಹವ ಗ್ರಹಿಸಿಯೆ
ತಾ ಕೆಡುವರಶುಚಿವ್ರತರು ತಾವ್ ನಡೆವರಿಂತೈಸೆ ॥೭॥

ಪ್ರಲಯದಲ್ಲಪರಿಮಿತ ಚಿಂತೆಯ
ತಿಳಿಮನಕುಪಾಶ್ರೈಸಿ ಕಾಮದ
ಬಳಕೆಯಿಂ ಕೇವಲವದಾಗಿಯೆ ನಿಶ್ಚಯಿಸಿಯವರು
ಇಳಿಯಲಾಶಾಪಾಶಗಳಿನಿಂ
ತಳೆದು ಬದ್ಧರದಾಗಿ ಕೆಡುತಲಿ
ಬಳಿಕ ಕಾಮಕ್ರೋಧಪರರಾಗುಳಿವರಿಚ್ಛೆಸುತ ॥೮॥

ಕಾಮಭೋಗಕ್ಕೋಸುಗವೆ ತಾ
ನೇಮ ಬಿಟ್ಟಾರ್ಜಿಸಿಯೆ ಧನವನು
ತಾಮಸದಿ ಯಿದು ಲಬ್ಧವಾಯಿತು ಯಿನ್ನುಪಾರ್ಜಿಸುವೆ ॥
ಪಾಮರರು ಯಿಹುದಿಷ್ಟೆನುತ್ತಲಿ
ನೇಮವಿಲ್ಲದ ಧನವ ಗಳಿಸುವೆ
ಈ ಮಹಿಯೊಳೆನ್ನಿಂದ ಶತ್ರುಗಳಳಿದರಿನ್ನಳಿವರ್ ॥೯॥

ಎನ್ನ ಕೈಯಿಂದೆನುತ ಈಶ್ವರ
ನಿನ್ನು ನಾನೆನ್ನುತಲಿ ಭೋಗವ
ದೆನ್ನದೇ ಸಿದ್ಧಾತ್ಮ ಬಲ್ಲಿದ ಸುಖಿಯು ನಾನೆಂಬ
ಎನ್ನದೇ ಆಢ್ಯತ್ವ ಬಹುಜನ
ವಿನ್ನೆನಗೆಯಿಹುದೆಂದು ಯೆನಗೆಯು
ಸನ್ನುತನೆ ಸಮವಾರದೆಂಬರು ನಾನೆ ಹಿರಿಯನಲ ॥೧೦॥

ನಾನೆ ದಾತನು ಸಂತಸವು ನಾ
ನಾನುವೆನುಯೆಂದೆನುತ ಅಜ್ಞತೆ
ಯಾ ನಿರ್ಮೋಹಿಪನಾಗಿ ಭ್ರಾಂತಿಯ ಪೂನಿ ಮೋಹದಲಿ
ತಾನು ಕಾಮದ ಭೋಗದಲ್ಲಿಯೆ
ಯೇನುಯರಿಯದೆ ಸಕ್ತನಾಗುತ
ಹೀನವಾದವ ನರಕದಲಿ ತಾ ಬಿದ್ದು ಅಳುತಿಹನು ॥೧೧॥

ತನ್ನ ಹೊಗಳಿಕೊಳ್ಳುತ್ತ ಸ್ತಬ್ಧನು
ಇನ್ನು ಧನಮದ ಮಾನದಿಂ ಬೆರೆ
ದಿನ್ನು ಹೆಸರಿಗೆ ಯಜ್ಞಗಳ ಮಾಡುತ ವಿಧಿಯಿಂದ
ಇನ್ನಹಂಕೃತಿ ದರ್ಪಬಲ ಸಂ
ಭಿನ್ನ ಕಾಮಕ್ರೋಧದಿಂ ಬೆರೆ
ದನ್ಯ ದೇಹದಿ ತನ್ನೊಳಿಹ ಯನ್ನನು ಪರೀಕ್ಷಿಸದೆ ॥೧೨॥

ದ್ವೇಷಿಸುತಲಿರುತಿಹ ಅಸೂಯಕ
ದೈಸುವನು ಮನುಜಾಧಮರ ನಾ
ಘಾಸಿಪೆನು ಸಂಸಾರದಲ್ಲಿಯೆ ಅಸುರಯೋನಿಯಲಿ ॥
ದೋಸಿಗಳನಾಸುರದ ಯೋನಿಯ
ಲೇಸು ಜನ್ಮಗಳಾದರೆಯು ತಾವ್
ಘಾಸಿ ಬಡುವರು ಯನ್ನನರಿಯದೆ ಅಧಮಗತಿಯೊಳಗೆ ॥೧೩॥

ತ್ರಿವಿಧ ನರಕದ ದ್ವಾರ ತಮ್ಮನು
ಕವಿಸಿ ನಾಶವ ಮಾಳ್ಪಡೆಯು ಕೇಳ್
ಸುವಿಮಲನೆ ಕಾಮವು ಕ್ರೋಧವು ಲೋಭವದರಿಂದ
ಇವನು ಮೂರನು ತ್ಯಜಿಸಬೇಕೈ
ತವಕದಲಿ ಅದರಿಂದ ಆಗುವು
ದವಿರಳದ ಶ್ರೇಯಸ್ಸು ಯದರಿಂದ ಮೋಕ್ಷ ಹೊಂದುವನು॥೧೪॥

ಯಾರು ವಿಧಿಯನು ಬಿಟ್ಟು ಕಾಮಕೆ
ಸೇರುವರು ಸಿದ್ಧಿಪುದು ಅವರಿಗೆ
ಮೇರೆಯಿಲ್ಲದ ಸುಖವು ಪರಗತಿ ಅವರಿನಿಂ ಶಾಸ್ತ್ರ ॥
ಮೀರಿದ ಪ್ರಮಾಣವದೆ ಕಾರ್ಯಾ
ಕಾರಿಯಕೆ ಮೆರೆವೀ ವ್ಯವಸ್ಥೆಯು
ಸೇರಿಯದರಿಂ ವಿಧಿಯ ಕರ್ಮವ ನಡೆಸುವುದೆ ಮತವು ॥೧೫॥

—*—

ಅಧ್ಯಾಯ ೧೬

ದೈವಾಸುರ ಸಂಪದ್ವಿಭಾಗಯೋಗ

ಭಗವಂತನು ಹೇಳಿದನು: ಅಭಯವು ಸತ್ತ್ವಗುಣವು ಜ್ಞಾನವು, ಅಹಿಂಸೆ ಸತ್ಯವು, ಶಾಂತಿ, ದಯೆ, ಶೌಚ ಮುಂತಾದ ಸುಗುಣಗಳಿಂದ ದೈವಸಂಪತ್ತುಳ್ಳವರೆಂತಲೂ ಗರ್ವ, ಸಿಟ್ಟು, ಅಜ್ಞಾನ ಮುಂತಾದ ದುರ್ಗುಣಗಳಿಂದ ಅಸುರಸಂಪತ್ತುಳ್ಳವರೆಂತಲೂ ತಿಳಿಯಲ್ಪಡತಕ್ಕದ್ದು. ದೈವಸಂಪತ್ತು ಮೋಕ್ಷಕ್ಕೂ, ಅಸುರಸಂಪತ್ತು ಬಂಧನಕ್ಕೂ ನಿಮಿತ್ತಗಳು. ದೈವ ಸಂಪತ್ತುಳ್ಳ ನೀನು ಅಳಬೇಕಾದ್ದಿಲ್ಲ.

ಅಸುರರು ಪ್ರವೃತ್ತಿ ನಿವೃತ್ತಿ ಧರ್ಮಗಳನ್ನರಿಯರು. ಅವರಿಗೆ ಸತ್ಯ ಶೌಚಾಚಾರಗಳಿಲ್ಲ. ಜಗತ್ತಿನಲ್ಲಿ ಸತ್ಯವೇ ಇಲ್ಲ; ಜಗತ್ತಿಗೆ ಸ್ಥಿತಿಯೇ ಇಲ್ಲ. ಜಗತ್ತಿಗೆ ಈಶ್ವರನೇ ಇಲ್ಲವೆಂದು ಹೇಳುತ್ತ ಅಲ್ಪಬುದ್ಧಿಗಳಾಗಿ ಉಗ್ರಕರ್ಮಗಳನ್ನು ಮಾಡುತ್ತಾ ದಂಭ ಗರ್ವಾದಿ ದುರ್ಗುಣಗಳಿಂದ ಕೂಡಿ ಆಶಾಪಾಶಬದ್ಧರಾಗಿ ಕಾಮಚಿಂತೆಗೊಂಡು ಅರ್ಥಾರ್ಜನ ಪರರಾಗಿ ಇವನನ್ನು ಕೊಂದೆನು. ಅವನನ್ನು ಕೊಲ್ಲುತ್ತೇನೆ. ನಾನು ಸುಖಿ. ಈ ಮೇರೆ ಕರ್ತೃತ್ವಾಭಿಮಾನವನ್ನು ಪಡೆದು ಕಾಮಭೋಗಭ್ರಾಂತರಾಗಿ ದಂಭ ಯಜ್ಞಗಳನ್ನು ಮಾಡಿ ನನ್ನಲ್ಲಿ ದ್ವೇಷಗೊಳ್ಳುವರೇ ಅಸುರರು.

ಕ್ರೂರರಾದ ಅಸುರರನ್ನು ಯಾವಾಗಲೂ ಅಸುರ ಜನ್ಮಗಳಲ್ಲಿಯೇ ಹಾಕುವೆನು. ಅವರು ಯಾವಾಗಲೂ ಮೂಢರಾಗಿ ನನ್ನನ್ನು ಪಡೆಯದೆ ಅಧಮಗತಿಗೆ ಹೋಗುವರು. ಕಾಮಕ್ರೋಧ ಲೋಭಗಳು ನರಕದ ಬಾಗಿಲುಗಳು. ಅವುಗಳನ್ನು ಬಿಟ್ಟವನಿಗೆ ಶ್ರೇಯಸ್ಸುಂಟು. ಶಾಸ್ತ್ರ ವಿಧಿಯನ್ನು ಬಿಟ್ಟು ಸ್ವೇಚ್ಛೆಯಾಗಿ ನಡೆಯುವವನಿಗೆ ಉತ್ತಮ ಗತಿಯಿಲ್ಲ. ಕಾರ್ಯಾಕಾರ್ಯಗಳನ್ನು ನಿರ್ಣಯಿಸುವುದಕ್ಕೆ ಶಾಸ್ತ್ರವೇ ಪ್ರಮಾಣವು. ಶಾಸ್ತ್ರೋಕ್ತಕರ್ಮವನ್ನೇ ತಿಳಿದು ಮಾಡಬೇಕು.

—*—

ಅಧ್ಯಾಯ-೧೭

ಸಂನ್ಯಾಸಾದಿ ತತ್ತ್ವಗುಣನಿರ್ಣಯ ಯೋಗ

ಹರಿಗೆ ನರನಿಂತೆಂದ ಯಾರಾ
ದರುನು ಶಾಸ್ತ್ರದ ವಿಧಿಯ ಮೀರಿಯೆ
ಪರಮಶ್ರದ್ಧಾನ್ವಿತರದಾಗಿಯು ಯಜಿಪರವರುಗಳ
ಪರಮನಿಷ್ಠೆಯು ದೇವಸತ್ತ್ವವೊ
ಯಿರುವ ರಜವೋ ತಮವೊ ಪೇಳೆಂ
ದರೆಯು ಶ್ರೀಹರಿ ಮಗುಳೆ ಪೇಳಿದನೆಂದ ಸಂಜಯನು ॥೧॥

ಕೇಳು ಫಲುಗುಣ ಶ್ರದ್ಧೆ ತ್ರಿವಿಧವು
ಪೇಳುವೆನು ಮನುಜರ್ಗೆ ಸಹಜವು
ಮೇಲೆ ಸಾತ್ತ್ವಿಕ ರಾಜಸವು ತಾಮಸವಿದೆಂದು ॥
ಮೇಲೆ ಜನಿಪುದು ಶ್ರದ್ಧೆ ಸಾತ್ತ್ವಿಕ
ದೋಲು ಸರ್ವಜನಂಗಳಿಗೆ ಅದು
ಪೋಲುವದು ತಚ್ಛ್ರದ್ಧೆಯೆನೆ ಜೀವರ್ಗಳದರನುವ ॥೨॥

ಸಾತ್ತ್ವಿಕರು ದೇವತೆಗಳ ಯಜಿಪರು
ತತ್ತ್ವವಿದು ರಾಜಸರು ಯಕ್ಷರ
ಮತ್ತೆ ತಾಮಸ ಜನರು ಭೂತಪ್ರೇತಗಳನೊಲಿದು
ಶಾಸ್ತ್ರವಿಹಿತವದಲ್ಲದಿಹ ತಪ
ವತ್ಯಧಿಕವಾಗೆಸಗಿ ತಪಿಪರು
ಮತ್ತೆ ಕಾಮದ ರಾಗಬಲದಿಂ ದಂಭಹಂಕೃತರು ॥೩॥

ಕೃಶವ ಮಾಳ್ಪರು ದೇಹದಲ್ಲಿಹ
ವಿಶದ ಭೂತಗಳನ್ನು ಚೇತಸ
ರೆಸೆವ ಅಂತರ್ಯಾಮಿ ಯೆನ್ನನು ಅಸುರ ನಿಶ್ಚಯರು
ಅಶನವದು ಮತ್ತೆರನದಾಗುವು
ದೆಸೆವ ಯಜ್ಞತಪಂಗಳನು ಮಿಗೆ
ಸಸಿನೆ ಮಾಳ್ಪೀ ತಪದ ದಾನದಭೇದವನು ಕೇಳ್ಳೈ ॥೪॥

ಆಯುಸತ್ವವು ಬಲವರೋಗತೆ
ದಾಯಮಿಗೆ ಸುಖ ಪ್ರೀತಿವರ್ಧನ
ದಾಯತಿಗೆಯಹ ಸ್ನಿಗ್ಧರಸವುನು ಸ್ಥಿರವು ಹೃದ್ಯವಹ ॥
ಆಯವಾದಶನವರು ಸಾತ್ವಿಕ
ಶ್ರೀಯುತನೆ ಕಟ್ವಾಮ್ಲ ಲವಣವು
ಸಾಯಸದ ಅತ್ಯುಷ್ಣ ತೀಕ್ಷ್ಣದ ರೂಕ್ಷದಾಹವಹ ॥೫॥

ಅಶನವದು ರಾಜಸರಿಗಿಷ್ಟವು
ವೊಸಗು ದೋಷಾಮಯದ ದುಃಖವ
ಪಸಿನೆ ಕೇಳ್ಳೈ ಯಾತಯಾಮವು ಗತರಸವು ಪೂತಿ
ರಸವಿಹೀನದ ಪರ್ಯುಷಿತವದು
ಯಸೆಯದುಚ್ಛಿಷ್ಟವು ಅಮೇಧ್ಯದ
ಅಶನವೈ ತಾಮಸರಿಗಿಷ್ಟವು ಕೇಳು ಕೌಂತೇಯ ॥೬॥

ಫಲದಲಿಚ್ಛೆಯದಿಲ್ಲದೇ ತಾ
ನೊಲಿದು ವಿಧಿಯೆಂದರಿದು ನಿಶ್ಚಲ
ದಲಿಯೆ ಮಾಡಿದ ಯಜ್ಞವದು ಸಾತ್ವಿಕವು ಕೇಳೆಂದ
ಒಲಿದು ಫಲಿದಲಿ ಮನದಲಿಚ್ಛಿಸಿ
ಬಳಿಕ ದಂಭಾರ್ಥದಲಿ ಮಾಡಿದ
ಕಲಿಯ ಜನವದು ತಾನೆ ರಾಜಸ ಕೇಳು ಕೌಂತೇಯ ॥೭॥

ವಿಧಿವಿಹೀನದ ಸೃಷ್ಟದನ್ನವು
ವೊದಗದಾ ಮಂತ್ರಕವ ದಕ್ಷಿಣೆ
ಸದಯ ಶ್ರದ್ಧಾಹೀನಯಜ್ಞವು ತಾಮಸವು ನೋಡಾ ॥
ಮುದದಿ ದೇವದ್ವಿಜರು ಗುರುಗಳಿ
ಗೊದವಿ ಪ್ರಾಜ್ಞರ ಪೂಜೆ ಶೌಚವು
ಪದಿಲದಾರ್ಜವ ಬ್ರಹ್ಮಚರ್ಯವಹಿಂಸೆ ಕಾಯದಲೀ ॥೮॥

ಒದಗಿ ಮಾಡಿದ ತಪವು ಕೇಳೈ
ಮುದದನುದ್ವೇಗಕರ ವಾಕ್ಯವು
ಸದಯ ಸತ್ಯವು ಪ್ರಿಯವು ಹಿತವು ಸುವೇದದಭ್ಯಾಸ ॥
ಇದುವೆ ವಾಙ್ಮಯ ತಪವು ಶ್ರದ್ಧೆಯ
ನೊದಗಿ ಮಾಡಿದ ತಪವು ತ್ರಿವಿಧವು
ಹೃದಯದಲಿ ಫಲಕಾಂಕ್ಷೆಯಿಲ್ಲದು ಅದುವೆ ಸಾತ್ವಿಕವು ॥೯॥

ದಂಭದಿಂ ಸತ್ಕಾರಕೋಸುಗ
ತಾಂಬಯಸಿ ಮಾಡಿದ ತಪಸ್ಯವ
ನಂಬುವರು ರಾಜಸವದಾಗಿಯೆ ಪಾರ್ಥ ಕೇಳೆಂದ ॥
ಮುಂಬರಿವ ಅವಿವೇಕವಾಗ್ರಹ
ದಿಂ ಬಲಿದು ದೇಹವನು ದಂಡಿಸಿ
ತಾಂ ಬಯಸಿ ಅನ್ಯರ ವಿನಾಶದ ತಪವು ತಾಮಸವು ॥೧೦॥

ಕೊಡಲು ತಕ್ಕುದಿದೆಂದು ಉಪಕೃತಿ
ಪಡೆಯದವೆ ಕೊಡುವೀಸು ದಾನವು
ಪಡೆದು ದೇಶವ ಕಾಲ ಪಾತ್ರವನದುವೆ ಸಾತ್ತ್ವಿಕವು ॥
ಪಡೆವನವರಿಂ ಫಲವನೆನ್ನುತ
ತೊಡುವ ಫಲದುದ್ದಿಶ್ಯಮಾಗಿಯೆ
ವೊಡನೆ ಚಿತ್ತಕ್ಷೋಭೆಯಿಂ ಕೊಡಲದುವೆ ರಾಜಸವು ॥೧೧॥

ದೇಶಕಾಲವಪಾತ್ರವನು ಹಾ
ರೈಸದೇ ಸತ್ಕಾರವಿಲ್ಲದೆ
ತಾ ಸದಾ ಕೊಡುತಿರ್ಪ ದಾನವೆ ತಾಮಸವು ನೋಡೆ ॥
ಭಾಸಿಸುವ ಪರಮಾತ್ಮ ತ್ರಿಪದದಿ
ವಾಸಿ ಮಿಗೆ ಯಜ್ಞದಲಿ ವೇದದಿ
ತಾ ಸದಾ ಬ್ರಾಹ್ಮರುಗಳಿಂದಲು ಸ್ತುತವು ಅದರಿಂದೆ ॥೧೨॥

ಪ್ರಣವ ಪೂರ್ವಕಮಾಗಿ ಯಿವರಿಂ
ದೆಣಿಕೆ ಮೀರಿದ ಯಜ್ಞದಾನವು
ಅನಘ ತಪವದು ಬ್ರಹ್ಮವಾದಿಗಳಿಂದ ವಿಧಿಯೆಂದು
ಅನುಸರಿಸಿ ಪೇಳಿಹುದು ಸತತವು
ಅನಘ ಅದರಿಂದಲ್ಲಿ ಸತತವು
ಯೆಣಿಸಿ ನೋಡಲು ಮೋಕ್ಷಕಾಂಕ್ಷಿತರಿಂದ ಪ್ರೋಕ್ತವಿದು ॥೧೩॥

ಮನುಜರಿಂ ಸತ್ಸಾಧು ಭಾವದಿ
ಯೆಣಿಸಿ ಕೂಡಿಸಿ ಕೊಂಬುದೈಸಲೆ
ಅನಘ ಕರ್ಮಗಳಲ್ಲಿ ಸಚ್ಛಬ್ದವು ನಿಯಾಮಕವು
ಯೆಣಿಸೆ ತಪಯಜ್ಞದಲಿ ದಾನದಿ
ತನಗೆ ಪೇಳಿಹುದೈಸೆ ಸತ್ತೆಂ
ದನಘ ಕರ್ಮವು ಅದರನರ್ಥಿಸುತಿಹುದು ಯೆಲ್ಲವನು ॥೧೪॥

ಶ್ರದ್ಧೆಯಿಲ್ಲದ ಹೋಮದಾನವು
ಬುದ್ಧರಹ ತಪ ಮಾಡಿದೆಲ್ಲವು
ಶುದ್ಧವಲ್ಲವು ಅದರ ಕೂಡದೆ ಯಿದ್ದ ದೆಸೆಯಿಂದ ॥
ಬದ್ಧವಿದು ಕೌಂತೇಯ ಯೆಂದೇ
ನಿರ್ಧರಿಸಿ ಪೇಳಿದನು ಶ್ರೀ ಹರಿ
ಬುದ್ಧಿಯಿದು ಕೇಳೆಂದು ಸಂಜಯನೊರೆದನರಸಂಗೆ ॥೧೫॥

—*—

ಅಧ್ಯಾಯ ೧೭

ಸಂನ್ಯಾಸಾದಿ ತತ್ತ್ವಗುಣನಿರ್ಣಯ ಯೋಗ

ಅರ್ಜುನನು ಬೇಸರಗೊಂಡನು: ಶಾಸ್ತ್ರವಿಧಿಯನ್ನು ಬಿಟ್ಟು ಅಶ್ರದ್ಧೆಯಿಂದ ಕರ್ಮವನ್ನು ಆಚರಿಸುವವರ ನಿಷ್ಠೆ ಸಾತ್ತ್ವಿಕವೊ, ರಾಜಸವೊ, ತಾಮಸವೊ?

ಭಗವಂತನುತ್ತರ ಹೇಳಿದನು:– ಅವರವರ ಸ್ವಭಾವಕ್ಕೆ ತಕ್ಕಂತೆ ಅವರವರ ನಂಬಿಕೆ ಇರುತ್ತೆ. ಅದೇ ಶ್ರದ್ಧೆ. ಅದರಿಂದ ಅವರ ಗುಣ ತಿಳಿಯುವುದು. ಸಾತ್ತ್ವಿಕರು ದೇವತೆಗಳನ್ನು ರಾಜಸರು ಯಕ್ಷರಾಕ್ಷಸರನ್ನು ತಾಮಸರು ಭೂತಪ್ರೇತಗಣಗಳನ್ನು ಪೂಜಿಸುವರು.

ಶಾಸ್ತ್ರವಿಧಿಯಿಲ್ಲದೆ ಕಾಮರಾಗ ಬಲದಿಂದ ಗರ್ವಿಸಿ ಆತ್ಮಕ್ಲೇಶಗೊಂಡು ತಪಿಸುವುದು ಅಸುರನಿಶ್ಚಯದವರು. ಸಾತ್ತ್ವಿಕರಿಗೆ ರಸವುಳ್ಳ ಆಯುರ್ಬಲಾರೋಗ್ಯ ವರ್ಧಕಗಳಾದ ಯೋಗ್ಯಾಹಾರಗಳಲ್ಲಿ ಪ್ರೀತಿಯಿರುತ್ತೆ. ರಾಜಸರಿಗೆ ರೋಗದುಃಖ ಪ್ರದಗಳಾದ ಹುಳಿ, ಉಪ್ಪು, ಖಾರ ಮುಂತಾದವುಗಳು ಇಷ್ಟಗಳಾಗಿರುವವು. ಹಳಸಿದ್ದು, ಕೊಳೆತದ್ದು, ಎಂಜಲು ಅಮೇಧ್ಯ ಮುಂತಾದ್ದು ತಾಮಸರಿಗೆ ಪ್ರಿಯವು. ಫಲಾಪೇಕ್ಷೆಯಿಲ್ಲದೆ ಶಾಸ್ತ್ರವಿಧಿ ಇರುವುದರಿಂದ ಮಾಡಬೇಕೆಂದು ಸಮಾಧಾನದೊಡನೆ ಮಾಡಿದ ಯಜ್ಞವು ಸಾತ್ತ್ವಿಕವು. ಫಲ ಬೇಕೆಂದು ಡಂಭಾರ್ಥವಾಗಿ ಮಾಡಿದ್ದು ರಾಜಸವು. ವಿಧ್ಯುಕ್ತನಾಗದೆ ಮಂತ್ರದಕ್ಷಿಣಾದಿ ಲೋಪದಿಂದ ನಡೆಯುವ ಯಜ್ಞ ತಾಮಸವು. ದೇವ ಬ್ರಾಹ್ಮಣ ಗುರುಪೂಜೆ ಶೌಚಾಚಾರ ಬ್ರಹ್ಮಚರ್ಯವ್ರತ, ಅಹಿಂಸೆ ಇದು ಕಾಯಕತಪಸ್ಸು, ಹೆರವರಿಗೆ ಸಂಕಟವಾಗದೆ ದಿಟವಾಗಿಯೂ ಪ್ರಿಯವಾಗಿಯೂ ಇರುವ ಮಾತು, ವೇದ ಮಂತ್ರಪಠಣವೂ ವಾಚಕ ತಪಸ್ಸು, ಚಿತ್ತನೈರ್ಮಲ್ಯವು, ಮನೋನಿಗ್ರಹ ಸಾಮ್ಯತ್ವ ಭಾವಶುದ್ಧಿ ಇದು ಮಾನಸಿಕ ತಪಸ್ಸು.

ದೇಶಕಾಲ ಪಾತ್ರಗಳನ್ನರಿತು ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಕೊಡಬೇಕೆಂದು ಕೊಟ್ಟಿದ್ದು ಸಾತ್ತ್ವಿಕದಾನವು.

ಪ್ರತ್ಯುಪಕಾರವನ್ನು ಬಯಸಿಯಾಗಲಿ ಬೇರೆ ಪ್ರಯೋಜನಗಳನ್ನು ಉದ್ದೇಶಿಸಿಯಾಗಲಿ ಕೊಡುವಿಕೆ ರಾಜಸದಾನವು. ಅಯೋಗ್ಯ ದೇಶ ಕಾಲಗಳಲ್ಲಿ ಅಯೋಗ್ಯನಿಗೆ ಸತ್ಕಾರವಿಲ್ಲದೆ ಅಜ್ಞಾನದಿಂದ ಕೊಡುವಿಕೆಯು ತಾಮಸದಾನವು. ಸಕಲ ಶಬ್ದಗಳೂ ಆತ್ಮನನ್ನು ಲಕ್ಷಿಸುವವಾದರೂ ಓಂ ತತೆ ಸತ್ ಈ ಮೂರು ಶಬ್ದಗಳೂ ಬ್ರಹ್ಮವಸ್ತುವನ್ನು ನಿರ್ದೇಶಿಸುವುವು.

ಅವುಗಳಿಂದ ಮುನ್ನೆ ಬ್ರಾಹ್ಮಣರೂ ವೇದಗಳೂ ಯಜ್ಞಗಳೂ ಉಂಟಾಗಿರುವುವು. ಆದ್ದರಿಂದ ಬ್ರಹ್ಮವಾದಿಗಳು ಓಂಕಾರವನ್ನು ಹೇಳಿ ಯಜ್ಞಾದಿ ಕರ್ಮಗಳನ್ನು ಮಾಡುವರು. ಮೋಹಾರ್ಥಿಗಳು ತತ್ (ಅದು)ನಿಂದು ಫಲವನ್ನೆಳಸದೇ ಸತ್ಕರ್ಮಗಳನ್ನು ಮಾಡುವರು. ಒಳ್ಳಿತು, ಚನ್ನ, ಪ್ರಶಸ್ತವು ಆದ ಕರ್ಮದಲ್ಲಿ ಸತ್ ಎಂಬ ಶಬ್ದವು ಯುಕ್ತವಾಗಿರುವುದು. ಅಶ್ರದ್ಧೆಯಿಂದ ಮಾಡಿದ್ದು ಅಸತ್ಕರ್ಮವು ಅದು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಉಪಯೋಗಿಸುವುದಲ್ಲ.

–*–

ಅಧ್ಯಾಯ–೧೮
ಮೋಕ್ಷ ಸಂನ್ಯಾಸಯೋಗ

ಹರಿಯೊಡನೆ ಮಗುಳೆಂದನರ್ಜುನ
ಪರಮ ಸಂನ್ಯಾಸವನು ತ್ಯಾಗವ
ನೊರೆವುದೈ ತತ್ತ್ವವನು ತಿಳಿಯಲಿ ಬೇಕು ಶ್ರೀಹರಿಯೆ ॥
ಹರಿಯು ನರಗಿಂತೆಂದ ಕಾಮ್ಯದ
ಭರದ ಕರ್ಮದ ನ್ಯಾಸವಿದುವೆ
ವರಕವಿಗಳಿಂತೆಂಬರದ ಸಂನ್ಯಾಸವೆಂದೆನುತ ॥೧॥

ಸರ್ವಕರ್ಮದ ಫಲದ ತ್ಯಾಗವೆ
ಉರ್ವರೆಯಲಿದು ತ್ಯಾಗವೆಂಬರು
ಸರ್ವವನು ತಿಳಿದಿಹ ವಿಚಕ್ಷಣರಿದನೆ ಕೌಂತೇಯ ॥
ಸರ್ವದೋಷವ ಬಿಡುವ ತೆರದಿಂ
ದುರ್ವಿಯಲಿ ಕರ್ಮವನು ಬಿಡುವುದೆ
ನಿರ್ವಹಣವೆನ್ನುವರು ಕೆಲರತಿಮತಿಯುತರು ವೊಲಿದು ॥೨॥

ಕೆಲರು ಯಜ್ಞದ ದಾನ ತಪವೆಂ
ಬಲಘು ಕರ್ಮವ ಮಾಡಬೇಕೆಂ
ದೊಲಿದು ಪೇಳ್ವರು ನಿಶ್ಚಯವ ನೀ ಕೇಳು ಕೌಂತೇಯ ॥
ಇಳೆಯೊಳೊಲಿವೀ ತ್ಯಾಗವಾದರೆ
ತಿಳಿಯೆ ಮುತ್ತೆರನಾಗಿ ಪೇಳ್ವರು
ಸುಲಲಿತವು ತಪ ಯಜ್ಞದಾನವು ಬಿಡಲು ಕೂಡದದ ॥೩॥

ವಿದಿತರಿಗೆ ಯಜ್ಞವನುದಾನವು
ಪಲವು ತೆರವಿವು ಪಾವನವು ಯೆಂ
ದಲಘು ಮತಿಗಳು ಪೇಳ್ವರದರಿಂ ನಿಶ್ಚಯಿಸಿ ಪೇಳ್ವೆ ॥
ವೊದಗುವೀ ಕರ್ಮಗಳ ಸಂಗವ
ಸದಯ ಫಲಗಳ ಬಿಟ್ಟು ಮಾಳ್ಪುದೆ
ವಿದಿತ ಉತ್ತಮವೆಂದು ಯೆನ್ನಯ ನಿಶ್ಚಯವು ಪಾರ್ಥ ॥೪॥

ನಿಯತ ಕರ್ಮವ ಬಿಡಲಿಕೂಡದು
ಸುಯಶಮೋಹದಿ ತ್ಯಜಿಸಿದರೆ ಅದು
ಭಯದ ತಾಮಸ ತ್ಯಾಗವೆಂಬರು ಕೇಳು ಪಾಂಡವನೆ ॥
ಭಯದಿ ದುಃಖವಿದೆಂದು ಕರ್ಮವ
ನಯವಿದನೆ ತಾ ಸಂನ್ಯಸಿಸಿದರೆ
ನಿಯತ ರಾಜಸ ತ್ಯಾಗ ತ್ಯಾಗದ ಫಲವನೀಯದಲೈ ॥೫॥

ಕಾರ್ಯವೆಂದುರೆ ಕರ್ಮಗಳ ತಾ
ನುರ್ವಿಯಲಿ ಫಲಗಳನು ಕೋರದೆ
ನಿರ್ವಹಣವೆಂದಾಚರಿಸೆ ಸಾತ್ವಿಕವು ಸಂಮತವು ॥
ಅಲ್ಲದನು ಮಾಡಿದನ ಕರ್ಮದೊ
ಳಿಲ್ಲ ದ್ವೇಷವುವೊಳ್ಳಿದನು ತಾ
ಬಲ್ಲು ಮಾಡಿದ ಕರ್ಮದಿಂದದೆ ಸಂತಸವದಿಲ್ಲ ॥೬॥

ಎಲ್ಲ ಸತ್ವ ತ್ಯಾಗಿಯವನಹ
ವೊಳ್ಳಿತಹ ಮೇಧಾವಿ ಸಂಶಯ
ವಿಲ್ಲದವನವ ದೇಹಿಗಳಿಗಿದು ಕರ್ಮವೆಲ್ಲವನು ॥
ನಿಲ್ಲದೇ ಬಿಡೆಯದರಿನಿಂ ಫಲ
ವೆಲ್ಲವದುವೇ ತ್ಯಾಗವೆನಿಪುದು
ನಿಲ್ಲದಾರಿಷ್ಟೇಷ್ಟ ಮಿಶ್ರದ ಕರ್ಮಫಲ ಮೂರು ॥೭॥

ಫಲವ ಬಯಸುವರಾರವರ್ಗೆಯು
ತಿಳಿ ತ್ರಿವಿಧ ಕರ್ಮವದು ಪೊಂದುಗು
ತಿಳಿದು ಬಿಟ್ಟಿಹ ಸಂನ್ಯಸಿಗಳಿಗೆ ಯಿಲ್ಲ ತ್ರಿವಿಧ ಫಲ ॥
ತಿಳಿವುದೈ ಯಿವು ಐದು ಕಾರಣ
ವೊಲಿದು ಕರ್ಮದ ಸಿದ್ಧಿಗೋಸುಗ
ವೊಲಿದ ಸಾಂಖ್ಯದ ಯೋಗಸಿದ್ಧಾಂತದ ವಿಭೇದವನು ॥೮॥

ಮೆರೆವಧಿಷ್ಠಾನವನು ಕರ್ತೃವು
ಯಿರದೆ ಕರಣವು ಬೇರೆ ಬೇರದು
ನರವರನೆ ಬಹುವಿಧದ ಚೇಷ್ಟೆಯು ದೈವವದ ಕೂಡಿ ॥
ಇರುವುದೈ ಐದಾಗಿ ಕೇಳೈ
ಶರೀರ ವಾಙ್ಮನದಿಂದ ಯತ್ನೀ
ಕರಿಸಿದುದ ಐದು ಕಾರಣ ನ್ಯಾಯಕನ್ಯಯಕೆ ॥೯॥

ಕೇವಲವು ತಾ ಕರ್ತನೆಂದೇ
ಭಾವಿಸಿಯೆ ನೋಡುವನು ದುರ್ಮತಿ
ಸಾವಧಾನದಿ ಬುದ್ಧಿಯಿಲ್ಲದೆ ಪಡೆಯನದನವನು ॥
ಯಾರ ನಿರಹಮ್ಮಿನ ಸ್ವಭಾವನೊ
ಯಾವನದು ನಿರ್ಲೇಪ ಬುದ್ಧಿಯೋ
ಕೇವಲವು ಲೋಕಗಳ ಕೊಂದರು ಕೊಲ್ಲ ಸಂಗಿಗನು ॥೧೦॥

ಕರ್ಮವಾಶ್ರೈಸುವುದು ಮೂರನು
ನಿರ್ಮಲನೆ ಜ್ಞಾನವನು ಜ್ಞೇಯವು
ನಿರ್ಮದನೆ ಜ್ಞಾತನು ಕರುಣವು ಕರ್ಮಕರ್ತೃವಿವು ॥
ಕರ್ಮಸಂಗ್ರಹಜ್ಞಾನ ಕರ್ಮವು
ಕರ್ಮಕರ್ತನು ಮೂರುಗುಣವೀ
ಧರ್ಮಭೇದದಿ ಕಾರ್ಯಭೇದವ ಕೇಳು ನೀನದನು ॥೧೧॥

ಸರ್ವಭೂತದೊಳೇಕಭಾವದ
ಅವ್ಯಯನ ತಾನಾವ ಕಾಂಬನೊ
ನಿರ್ವಹಿಸಿ ಅವಿಭಕ್ತನನು ಬೇರಾದ ಭೂತಗಳೊಳ್ ॥
ಸರ್ವ ಸಮ ಸಾತ್ವಿಕನವನ ತಿಳಿ
ಪರ್ವಿ ಬೇರಾಗರಿವ ಭೂತದ
ಸರ್ವರೊಳು ರಾಜಸದ ಜ್ಞಾನವು ತಿಳಿವುದೈ ಯಿಂತು ॥೧೨॥

ಕಾರ್ಯರೂಪದ ಪ್ರತುಮೆ ಮೊದಲಹ
ದುರ್ವಿಯೊಳಗೊಂದರಲೆ ಪೂರ್ಣನು
ನಿರ್ವಹದ ಕಾರ್ಯದಲಿ ಸಕ್ತನು ತತ್ವದರ್ಥವನು ॥
ನಿರ್ವಹಿಸಿ ಅರಿಯದನು ಅಲ್ಪವ
ದುರ್ವಿಯಲಿ ತಾಮಸದವೆಂಬರು
ಕಾರ್ಯಲಿಚ್ಛೆಯಹಂಕರಣದಿಂ ಆಯಸದಿ ಮಾಳ್ಪ ॥೧೩॥

ಕರ್ಮವದೆ ರಾಜಸವು ಕ್ಷಯವನು
ಪರ್ವಿದನು ಬಂಧವನು ಹಿಂಸಾ
ಕಾರ್ಯವೆಂದರಿಯಿದವೆ ಪೌರುಷ ಮೋಹದಿಂ ಮಾಳ್ಪ ॥
ಕರ್ಮವದುವೇ ತಾಮಸವು ತಿಳಿ
ಸುಮ್ಮನೇ ತಾ ಮುಕ್ತ ಸಂಗದಿ
ಹೆಮ್ಮೆಯಿಲ್ಲದೆ ಧೃತಿಯಂ ಉತ್ಸಹಗೂಡಿ ಸಿದ್ಧಿಯಲಿ ॥೧೪॥

ನಿರ್ಮಲದ ಸಿದ್ಧಿಯಲಿ ಸಮವಹ
ಕರ್ಮಿ ಸಾತ್ವಿಕನವನುರಾಗಿಯು
ಕರ್ಮಫಲದಿಚ್ಛೆಯಲಿ ಲುಬ್ಧತೆಯಿಂದೆ ಹಿಂಸಿಸುತ ॥
ಮರ್ಮವರಿಯದೆ ಹರ್ಷ ಶೋಕದಿ
ಪೆರ್ಮೆ ಪಡೆವುದೆ ರಾಜಸವು ತಿಳಿ
ಧರ್ಮವಿದಯುಕ್ತತೆಯೇ ಪ್ರಾಕೃತ ಸ್ತಬ್ಧ ಶಠನಲಸ ॥೧೫॥

ನಿರಪರಾಧಿ ಪರಾವಮಾನಿಯು
ನುರುವಿಷಾದಿಯು ದೀರ್ಘಸೂತ್ರಿಯು
ಮೆರೆವ ಕರ್ತನು ತಾಮಸಿಯು ನೀ ಕೇಳು ಕೌಂತೇಯ ॥
ವೊರೆದು ಪೇಳುವೆ ಬುದ್ಧಿಭೇದವ
ನುರುಧೃತಿಯ ಭೇದವನು ಮೆರೆವು
ತ್ತಿರುವ ಗುಣದಿಂ ತ್ರಿವಿಧವದು ಕೇಳೆ ಪೇಳುವೆನು ಮುದದಿಂದ॥೧೬॥

ಭೇದದಿಂದಶೇಷವನು ನೀ
ನೋ ಧನಂಜಯ ಪ್ರವೃತಿ ನಿವೃತಿಯ
ಆದರಿಸಿದಪೆ ಕಾರ್ಯ ಕಾರ್ಯದಿ ಬಂಧ ಮೋಕ್ಷವನು ॥
ಮೋದದಿಂದಾವಮತಿ ತಿಳಿವುದು
ಸಾದರದಲಾ ಬುದ್ಧಿ ಸಾತ್ವಿಕ
ಮಾದುದದು ತಾ ಧರ್ಮಧರ್ಮದ ಕಾರ್ಯ ಕಾರ್ಯದಲಿ ॥೧೭॥

ತಾನೆಥಾರ್ಥವನರಿಯದದುವೆ
ಮಾನನಿಧಿ ರಾಜನವ ಧರ್ಮದಿ
ತಾನು ತಿಳಿವುದು ಧರ್ಮವೆನುತಲಿ ಅಜ್ಞತೆಯನಿಂದ ॥
ತಾನಿದೀಗಿಂತೆಂದು ಸರ್ವದೊ
ಳಾನಿ ವಿಪರೀತಾರ್ಥವನು ಅದು
ತಾನೆ ತಾಮಸ ಬುದ್ಧಿ ಕೇಳೈ ಪಾಂಡವೋತ್ತಮನೆ ॥೧೮॥

ಯಾವ ಬುದ್ಧಿಯು ಧೈರ್ಯದಿಂದಲಿ
ಸೇರಿಸುವ ಯೇಕಾಗ್ರ ಯೋಗದಿ
ಕೇವಲವು ಮನಪ್ರಾಣಯಿಂದ್ರಿಯ ಕ್ರಿಯೆಗಳನು ತಾನು ॥
ಸಾವಧಾನದಿ ಧರಿಸುವುದೊ ಅದು
ಪಾವನದ ಸಾತ್ತ್ವಿಕದ ಧೃತಿ ಮ
ತ್ತಾವ ಬುದ್ಧಿಯು ಧರ್ಮ ಕಾಮಾರ್ಥಗಳ ಫಲಗಳನು ॥೧೯॥

ಕೋರಿ ಧರಿಸುವ ಧೃತಿಯು ರಾಜಸ
ಸಾರಿಸ್ವಪ್ನವ ಭಯವು ಶೋಕವು
ಮೀರುವ ವಿಷಾದವನು ಧರಿಸಿದ ಧೃತಿಯೆ ತಾಮಸವು ॥
ಸೇರಿಸುವ ಸುಖಮತ್ತರನು ಕೇಳ್
ಸಾರೆ ಅಭ್ಯಾಸದಲಿ ರಮಿಸುವ
ಪಾರ ಬುದ್ಧಿಯೆ ದುಃಖದಂತ್ಯವ ಸೇರುತಿಹುದೈಸೆ ॥೨೦॥

ಮೊದಲು ವಿಷಪರಿಣಾಮದಲ್ಲಿಯೆ
ವೊದಗುವುದು ತಾನಮೃತ ಸಾಮ್ಯವ
ದದುವೆ ಸಾತ್ವಿಕಸುಖವು ಬುದ್ಧಿ ಪ್ರಸಾದವಾತ್ಮನಲಿ ॥
ವೊದಗಿಹುದು ಸಾತ್ವಿಕದ ಸುಖವದು
ಪುದಿದು ವಿಷಯೇಂದ್ರಿಯದ ಸಂಗದಿ
ಮೊದಲಮೃತ ಕಡೆಯಲ್ಲಿ ವಿಷವದು ರಾಜಸದ ಸುಖವು ॥೨೧॥

ಮೊದಲಿನಲಿ ಕಡೆಯಲ್ಲಿ ಮೋಹಕ
ವೊದಗಿ ನಿದ್ರಾಲಸ್ಯದಲ್ಲಿಯು
ಪುದಿದು ಯೇಳುವುದದು ಪ್ರಮಾದದಿ ಸುಖವು ತಾಮಸವು ॥
ವೊದಗಿದೀ ತಾಮಸದ ಗುಣವಿದು
ಪದುಳದಿಂದರಿಯೈಯ ನೀನಿದು [॥೨೨॥
ಮೊದಲೆ ಬಿಡುಯಿದರಿಂದ ನಿನಗೆಯು ಸುಖವು ದೊರೆಯುವುದು

ಪ್ರಕೃತಿ ಸಂಭವವಾದ ಗುಣದಿಂ
ವಿಕಸಿಸದ ಸತ್ವವುಮದಿಲ್ಲವು
ಸಕಲ ಭೂಮಂಡಲದ ಜನದಲಿ ದಿವಿಯ ಸುರರೊಳಗೆ ॥
ಸಕಲ ವರ್ಣದ ಕರ್ಮಗಳು ತಾವ್
ಪ್ರಕಟಿಸಿಹುದೈ ಬೇರೆ ಬೇರೆಯು
ವಿಕಸಿಸುವ ಸಹಜದ ಗುಣಂಗಳಿನಿಂದ ನೀ ತಿಳಿಯೈ ॥೨೩॥

ಶಮವು ದಮವು ನುತ ತಪವು ಶೌಚವು
ವಿಮಲಕ್ಷಾಂತಿಯು ಆರ್ಜವವು ತಿಳಿ
ಭ್ರಮಿಸದಿಹ ವಿಜ್ಞಾನ ಜ್ಞಾನವು ಆಸ್ತಿಕ್ಯವದುವೆ ॥
ಸುಮನ ಬ್ರಾಹ್ಮ್ಯದ ಕರ್ಮಸಹಜವು
ಕ್ರಮದಿ ಶೌರ್ಯವು ತೇಜಧೃತಿಯು ಸು
ಸಮವು ದಾರ್ಕ್ಷ್ಯವು ಯುದ್ಧದಲ್ಲಿ ಪಲಾಯನವು ಮಿಗೆಯು ॥೨೪॥

ದಾನದೀಶ್ವರ ಭಾವ ಕ್ಷಾತ್ರಕೆ
ಮಾನಿತದ ಘನತರ ಸ್ವಭಾವವು
ತಾನು ಕೃಷಿ ವಾಣಿಜ್ಯ ಗೋರಕ್ಷಣವು ವೈಶ್ಯನದು ॥
ಮಾನನಿಧಿ ನಿಜದಿಂದ ತಿಳಿ ಯಿದು
ಮಾನಿತನು ಯಿದನರಿತು ನಡೆವನೆ
ತಾನು ವೈಶ್ಯನು ಯೆಂದು ಅಚ್ಯುತ ಪೇಳಿದರ್ಜುನಗೆ ॥೨೫॥

ಮೂರು ವರ್ಣದ ಸೇವೆ ಶೂದ್ರನಿ
ಗೋರುಗುಡಿಸದ ಸಹಜ ಭಾವವು
ಬೇರೆ ಬೇರೆವರವರು ತಮ ತಮ ಕರ್ಮಗಳಿನಿಂದ ॥
ಸೇರುವರು ತತ್ಸಿದ್ಧಿಗಳನದ
ನಾರಯಿದು ನಾನೊರೆವೆ ಕೇಳ್ಯೆ
ಆರು ತಮ್ಮಯ ಕರ್ಮಗಳ ಮಿಗೆಯಾಚರಿಸಿದವರು ॥೨೬॥

ಸಾರೆಯರಿನೀ ಪ್ರವೃತಿ ಭೂತಕೆ
ಮೀರಿದರಿನಿಂ ಸರ್ವವಿದು ತತ
ಸೇರಿ ತಮ್ಮಯ ಕರ್ಮದಿಂದರ್ಚಿಸಿಯೆ ಪಡೆದಪರು ॥
ಸಾರೆ ರಚಿಸಿದ ಪರರ ಧರ್ಮಕೆ
ಮೀರುತಿಹುದು ಸ್ವಧರ್ಮವಿಗುಣತೆ
ಯೂರಿದರು ಅದರಿಂ ಸ್ವಭಾವದ ಕರ್ಮವನು ರಚಿಸೆ ॥೨೭॥

ಸೇರರ್‍ರೈ ಕಿಲ್ಬಿಷವನದರಿಂ
ಸೇರಿ ತಮ್ಮಯ ಸಹಜ ಕರ್ಮವ
ಪಾರದೋಷದಿ ಕೂಡಿದರು ಬಿಡದಹುದದಲ್ಲವಲ್ಲೈ ॥
ಮೀರಿ ಸರ್ವಾರಂಭದೋಷದಿ
ಸಾರೆಧೂಮರದಗ್ನಿಯಂದದಿ
ಸೇರಿಯಾವೃತವಾಗಿಹುದು ಕೇಳಯ್ಯ ಕೌಂತೇಯ ॥೨೮॥

ಆಸಕತಿ ಬುದ್ಧಿಯೊಳಗಿಲ್ಲದೆ
ರೋಸಿ ಸರ್ವವ ಜಯಿಸಿ ಮನದೊಳು
ಘಾಸಿಸುವ ಯಿಚ್ಛೆಯನು ಬಿಟ್ಟುರೆಯಿರಲು ಕೌಂತೇಯ ॥
ಭಾಷಿಸುವ ನೈಷ್ಕರ್ಮ್ಯ ಸಿದ್ಧಿಯ
ನೈಸುವನು ತಾ ಪಡೆಯೆ ಸಂನ್ಯಸ
ದಾ ಶಕುತಿಯಂ ಪಡೆವನೈ ನೀ ಕೇಳು ಪಾಂಡವನೆ ॥೨೯॥

ಸಿದ್ಧಿಯನು ಪಡೆದವನು ಬ್ರಹ್ಮವ
ಹೊದ್ದುವನೊ ಯೆಂತದರ ರೀತಿಯೆ
ನಿರ್ಧರಿಸಿ ಕೊಂಚದಲಿ ಪೇಳುವೆ ಜ್ಞಾನನಿಷ್ಠೆಯನು ॥
ಬುದ್ಧಿ ನಿರ್ಮಲದಿಂದ ಕೂಡಿಯು
ಬದ್ಧಧೃತಿಯಿಂ ಮನವ ನಿಯಮಿಸಿ
ಶಬ್ದ ಮೊದಲಹ ವಿಷಯ ರಾಗ ದ್ವೇಷಗಳ ಬಿಟ್ಟು ॥೩೦॥

ವಿಜನದೆಡೆಯಂ ಸೇರಿ ನಿಯಮದಿ
ಭುಜಿಸಿಯನ್ನವ ನಿಯತ ತ್ರಿಕರಣ
ಸುಜನ ನಿತ್ಯವು ಧ್ಯಾನ ಯೋಗದಿ ವಿರತಿಯನು ಪಡೆದು
ಭಜಿಸದೆಯಹಂಕಾರ ಬಲವನು
ತ್ಯಜಿಪ ಕಾಮಕ್ರೋಧಗ್ರಾಹ್ಯವ
ಸುಜನ ನಿರ್ಮಮ ಶಾಂತ ಬ್ರಹ್ಮವು ತಾನೆಯಾಗಿಹನು ॥೩೧॥

ಬ್ರಹ್ಮವಾದ ಪ್ರಸನ್ನ ಚಿತ್ತನು
ವೊಮ್ಮನದಿ ಚಿಂತಿಸನು ಕಾಂಕ್ಷಿಸಿ
ಸಮ್ಮತನು ಸರ್ವಾತ್ಮ ಭಕ್ತಿಯ ಪರವ ನೋಡುವನು ॥
ನೆಮ್ಮಿ ಭಕ್ತಿಯಲೆನ್ನ ತಿಳಿವನು
ಸಮ್ಮತದಿ ಸುಯಥಾರ್ಥದಲ್ಲಿಯೆ
ಒಮ್ಮನದಲೇ ತಿಳಿದು ನೊಂದುವ ಮೇಲೆಯನ್ನುವನೆ ॥೩೨॥

ಸರ್ವ ಕರ್ಮಂಗಳ ಸದಾ ತಾ
ನಿರ್ವಹಿಸಿ ಮಾಡಲು ಮದಾಶ್ರಿತ
ಉರ್ವಿಯಲಿ ಯೆನ್ನಯ ಪ್ರಸಾದದಿ ಪಡೆವನವ್ಯಯವ ॥
ಸರ್ವ ಕರ್ಮವ ಮನದಿಯೆನ್ನಲಿ
ನಿರ್ವಹಿಸಿಲರ್ಪಿಸಿಯೆ ಮತ್ಸರ
ನಿರ್ಮಲನೆ ಮಚ್ಚಿತ್ತನಾಗ್ಯೆಯಧಿಕ ಯೋಗದಲಿ ॥೩೩॥

ಎನ್ನ ಚಿತ್ತದಿ ಸರ್ವದುರ್ಗಮ
ವನ್ನು ಕರುಣದಿ ತರಿಪ ಹಮ್ಮಿಂ
ಯೆನ್ನ ವಾಕ್ಯವ ಕೇಳದಿರೆ ಪುರುಷಾರ್ಥ ಭ್ರಷ್ಟನಹೆ ॥
ಇನ್ನಹಂಕಾರವನದಾಶ್ರಿಸಿ
ಸನ್ನ ಯುದ್ಧವ ತ್ಯಜಿಸಲಿಚ್ಛಿಸೆ
ನಿನ್ನ ನಿಶ್ಚಯ ಮಿಥ್ಯ ತಾನೇ ಮಾಡಿಪಳು ಪ್ರಕೃತಿ ॥೩೪॥

ಸಹಜ ಕರ್ಮದಿ ಬದ್ಧನಾಗಿಯೆ
ವಿಹಿತ ಕರ್ಮವ ಬಿಡಲದಿಚ್ಛಿಪೆ
ಸಹಸಕರ್ಮವೆ ಮಾಡಿಸುವುದ್ಯೆ ಮಾಳ್ಪುದೆಲ್ಲವನು ॥
ಅಹಹ ಈಶ್ವರ ಸರ್ವಭೂತದಿ
ವಿಹಿತದಿಂದಿರುತಿರ್ದುದು ಭ್ರಮಿಪನು
ಸಹಸದಿಂದೆ ಸೂತ್ರಿಕನು ಬೊಂಬೆಗಳಂತೆ ನಡಸುವನು ॥೩೫॥

ಸರ್ವಭಾವದಲವನನೇ ನೀ
ಸರ್ವದಾ ಶರಣೊಂದು ಭಾರತ
ಸೇರ್ವೆಯವನ ಪ್ರಸಾದದಿಂ ಶಾಂತಿಯನು ವರಗತಿಯ ॥
ನಿರ್ವಹಿಸಿ ಗುಹ್ಯದಲಿ ಗುಹ್ಯವ
ಸರ್ವ ಜ್ಞಾನವನೊರೆದೆ ನಿನಗೈ
ಸರ್ವವಾಲೋಚಿಸಿಯೆ ಮಾಡೈ ಯಾವದಿಚ್ಛಿಪೆಯೊ ॥೩೬॥

ತಿರುಗಿ ಗುಹ್ಯದ ತಮವ ಕೇಳೈ
ಪರಮವಚನವನೆನ್ನದನು ನೀ
ಪರಮ ಹಿತನೆನಗಾದರೆಯು ಪೇಳುವೆನು ಹಿತಕರವ ॥
ಸ್ಥಿರವ ಮಾಡೈ ಮನವನೆನ್ನಲಿ
ಪರಮ ಭಕ್ತಿಯ ಮಾಡು ಯನ್ನಲಿ
ತಿರುಗಿ ಯಜಿಸೈ ಯನ್ನ ಪ್ರಣಯದಿ ಮನವ ನೀ ಮಾಡೈ ॥೩೭॥

ಎನ್ನ ನೇಮಿಗೆ ಸೇರ್ವೆ ನೀನೆಲೊ
ಯಿನ್ನು ಸತ್ಯವಿದೆಂದು ತಿಳಿವುದು
ಸನ್ನುತನೆ ನೀ ಪ್ರಿಯನದಾಗಲು ಯಿಹುದ ಪೇಳಿದೆನು ॥
ಇನ್ನು ಸರ್ವದ ಧರ್ಮವನು ಬಿ
ಟ್ಟೆನ್ನನೊಬ್ಬನ ಶರಣು ಹೊಂದೈ
ಇನ್ನು ಶೋಕವ ಪರಿಹರಿಪೆ ನಾ ಸಕಲ ಪಾಪಗಳನು ॥೩೮॥

ಪರಿವೆಯಿದನ ತಪಸ್ವಿಗಳಿಗೆಯು
ವುರು ಸುಭಕ್ತರದಲ್ಲದವರಿಗು
ನರ ಅಶುಶ್ರೂಷರಿಗು ಯನ್ನಲಸೂಯಯುಕ್ತರಿಗು ॥
ಒರೆಯದಿರು ಯಾವಾಗಲಾದರು
ಪರಮಗುಹ್ಯವು ಯಿದನು ಯೆನ್ನಯ
ಪರಮ ಭಕ್ತರುಗಳಿಗೆ ತಿಳುಹಿದರವರು ಭಕ್ತಿಯನು ॥೩೯॥

ಮಾಡಿ ಯನ್ನಲಿ ಪೂರ್ಣವಾಗಿಯೆ
ಕೂಡುವರು ಯನ್ನಲಿ ಸಂಶಯ
ಬೇಡ ಮನುಜರೊಳಾರು ಯಿಲ್ಲವು ಪ್ರಿಯತಮರು ಯನಗೆ ॥
ನೋಡಿದರೆ ಮುಂದಾದರೆನಗೆಯು
ಯೊಡಿರುವ ಪ್ರಿಯತಮರಿರರು ಯಿ
ನ್ನಾಡಲೇತಕೆ ಭುವನದೊಳು ಕೌಂತೇಯ ಕೇಳೆಂದ ॥೪೦॥

ಆದಡೆಮ್ಮಿಬ್ಬರ ಸುಧರ್ಮ್ಯದ
ವಾದವನು ಅಧ್ಯಯನ ಮಾಡುವ
ಮೋದದಿಂದಲಿ ಜ್ಞಾನ ಯಜ್ಞದಿ ಯಿಷ್ಟನೆನಗವನು ॥
ಸಾದರದೊಳೆಂತೆಂಬ ಮತಿಯಾ
ರಾದಡೆನ್ನೆನಸೂಯಕರು ಶ್ರದ್ಧೆಯ
ಲೋದಿದರು ಕೇಳಿದರು ಮುಕ್ತರು ಪುಣ್ಯಲೋಕಿಗಳು ॥೪೧॥

ಪಾರ್ಥಮನದೇಕಾಗ್ರದಿಂದಲಿ
ಸ್ವಾರ್ಥದಲಿ ನೀ ಕೇಳಿದೆಯ ಮೊದ
ಲಿದ್ದ ಅಜ್ಞಾನವದು ಮೋಹವು ನಾಶವಾಯ್ತೇನ್ನೈ ॥
ಲಬ್ದವಾಯ್ತ್ಯೈ ಸ್ಮೃತಿಯು ಮೋಹವು
ಯಿದ್ದುದದು ಸ್ಪಷ್ಟದಲಿ ನಶ್ಯವು
ಬದ್ಧವಾಗಿಹ ತ್ವತ್ಪ್ರಸಾದದಿ ಯೆನಗೆ ಅಚ್ಯುತನೆ ॥೪೨॥

ಯುದ್ಧಕೀಗಲೆ ಯೆದ್ದೆನ್ನೈ ಯನ
ಗಿರ್ದ ಸಂದೇಗವೆಲ್ಲ ಹೋಯಿತು
ಶುದ್ಧವಾಗಿಯೆ ನಿನ್ನ ವಾಕ್ಯದವೋಲು ಚರಿಸುವೆನು ॥
ಯುದ್ಧದಲಿ ಯಿದನರಿತು ಸಂಜಯ
ನಿರ್ಧರಿಸಿ ನೃಪಗೆಂದ ಕೇಳೈ
ಬದ್ಧನಾದೆ ಮಹಾತ್ಮರಾಗಿಹ ಕೃಷ್ಣ ಪಾಂಡವರ ॥೪೩॥

ಈ ಮಹಾದ್ಭುತ ರೋಮ ಹರ್ಷದ
ಲೋಮಹಾತ್ಮನೆ ವ್ಯಾಸ ಕೃಪೆಯಿಂ
ದೀ ಮಹಿಯಲೆನಗಾಯ್ತು ಶ್ರವಣವು ಪರಮಗುಹ್ಯವಿದು ॥
ಈ ಮಹಾಯೋಗೀಶ ಕೃಷ್ಣನ
ಸಾಮಯುಕ್ತದಿ ತಾನೆ ಪೇಳಿದ
ನಾ ಮುದದಿ ಕೇಳಿದುದ ಸ್ಮರಿಸಿಯೆ ಹೃಷ್ಟನಾದೆ ಮಿಗೆ ॥೪೪॥

ಅದ್ಭುತದ ಶ್ರೀಹರಿಯ ರೂಪವ
ಹೊದ್ದಿ ಮನದಿಂ ಸ್ಮರಿಸುತಲಿ ಮಿಗೆ
ಬದ್ಧವಿದು ವಿಸ್ಮಯವದಾಯಿತು ಮುದವ ತಾಳುಪೆನು ॥
ಬದ್ಧವಿದು ಯೋಗೀಶ ಕೃಷ್ಣನು
ಇದ್ದನೆಲ್ಲಿ ಧನುರ್ಧರನು ನರ
ಹೊದ್ದುವುದದಲ್ಲಲ್ಲಿ ವಿಜಯವು ಶ್ರೀವಿಭೂತಿಯನು ॥೪೫॥

—*—

ಗೀತಾರ್ಥ ಪ್ರಕಾಶಿಕೆ

ಅಧ್ಯಾಯ ೧೮

ಮೋಕ್ಷ ಸಂನ್ಯಾಸಯೋಗ

ಅರ್ಜುನನು ಬೇಸರಗೊಂಡನು: ಸಂನ್ಯಾಸದ ಮತ್ತು ತ್ಯಾಗದ ತತ್ತ್ವವನ್ನು ತಿಳಿಯಲಪೇಕ್ಷಿಸುವೆನೆಂತಲೂ; ಭಗವಂತನು ಹೇಳಿದನು.

ಕಾಮ್ಯಕರ್ಮಗಳನ್ನು ಬಿಡುವುದು ಸಂನ್ಯಾಸವೆನ್ನುವರು. ಕರ್ಮದ ಫಲವನ್ನು ಬಿಡುವಿಕೆಯನ್ನು ತ್ಯಾಗವೆನ್ನುವರು. ದೋಷವುಳ್ಳ ಕರ್ಮವನ್ನು ಬಿಡಬೇಕೆಂದು ಕೆಲವರೆನ್ನುವರು. ಯಜ್ಞದಾನ ತಪ ಕರ್ಮಗಳನ್ನು ಬಿಡಕೂಡದೆಂದು ಕೆಲವರೆನ್ನುವರು. ನನ್ನ ನಿಶ್ಚಯವನ್ನು ಕೇಳು:

ಬಿಡುವಿಕೆಯಲ್ಲಿ ಮೂರು ಬಗೆಯುಂಟು. ಯಜ್ಞದಾನ ತಪಸ್ಸುಗಳನ್ನು ಬಿಡಬಾರದು. ಮಾಡಬೇಕು. ಅವುಗಳಿಂದ ಬುದ್ಧಿಯುಂಟೇ ಫಲಸಂಗವನ್ನು ಬಿಟ್ಟು ಮಾಡಬೇಕು. ನಿತ್ಯ ಕರ್ಮವನ್ನು ಬಿಡಕೂಡದು. ಮೋಹದಿಂದ ಬಿಡೋಣವೇ ತಾಮಸ ಸಂನ್ಯಾಸವು. ಶ್ರಮಪಡಲಾರದೆ ಕರ್ಮವನ್ನು ಬಿಟ್ಟವನಿಗೆ ಸಂನ್ಯಾಸ ಫಲವಿಲ್ಲವು. ನಿತ್ಯ ಕರ್ಮವನ್ನು ಮಾತ್ರ ಮಾಡಬೇಕೆಂದು ಫಲಸಂಗವನ್ನು ಬಿಟ್ಟು ಮಾಡುತ್ತಿರೋಣವೇ ಸಾತ್ತ್ವಿಕ ತ್ಯಾಗವು. ತ್ಯಾಗಿಯಾದವನು ಸಾತ್ತ್ವಿಕನಾಗಿ ಸಂಶಯವನ್ನು ಉಳಿದು ಅಕ್ಷೇಮಿಕರ್ಮವನ್ನು ದ್ವೇಷಿಸುವುದೂ ಇಲ್ಲ. ಕ್ಷೇಮ ಕರ್ಮದಲ್ಲಿ ಆಸಕ್ತನಾಗುವುದೂ ಇಲ್ಲ. ಉದಾಸೀನನಾಗುವನು.

ದೇಹವಿರುವತನಕ ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಇರುವಿಕೆ ಅಸಾಧ್ಯವು. ಆದ್ದರಿಂದ ಫಲವನ್ನು ಮಾತ್ರ ಬಿಟ್ಟವನೇ ತ್ಯಾಗಿ. ತ್ಯಾಗಿಗಳಿಗೆ ಸತ್ತಮೇಲೆ ಇಷ್ಟಾನಿಷ್ಟ ಮಿಶ್ರಫಲಗಳು ಆಗುವುದುಂಟು. ಸಂನ್ಯಾಸಿಗಳಿಗಿಲ್ಲವು.

ಕರ್ಮಸಿದ್ಧಿಗೆ ಕಾರಣಗಳು ಐದು ಇವೆ. ಅಧಿಷ್ಠಾನವು (ಆಶ್ರಯವು), ಕರ್ತ (ಆತ್ಮನು ಜೀವ) ಹಲವು ಬಗೆಯಾದ ಕರಣವು (ಇಂದ್ರಿಯಾದಿ ಸಾಧನವು), ಹಲವು ಬಗೆಯಾದ ಚೇಷ್ಟೆ (ಕ್ರಿಯೆ), ಐದನೆಯದು ದೈವ (ಅದೃಷ್ಟ) ಮನುಷ್ಯನು ಮನೋವಾಕ್ಕಾಯಗಳಿಂದ ಮಾಡುವ ನ್ಯಾಯಾನ್ಯಾಯ ಕರ್ಮಗಳೆಲ್ಲಕ್ಕೂ ಈಗ ಹೇಳಿದ ಐದು ಕಾರಣಗಳೂ ಇರುತ್ತವೆ.

ಹೀಗಿರುವುದರಿಂದ ಆತ್ಮನೊಬ್ಬನೇ ಕರ್ತನೆಂಬುವದು ಅರಿತವರಲ್ಲ. ಯಾವವನು ಅಭಿಮಾನ ಹಚ್ಚಿಕೊಳ್ಳುವುದಿಲ್ಲವೋ ಅವನು ಕೊಂದರೂ ಕೊಲ್ಲದವನಾದ್ದರಿಂದ

ಅವನಿಗೆ ಕೊಲೆಯ ಪಾತಕ ಬಂಧನವಿಲ್ಲವು. ತಿಳುವಳಿಕೆ, ತಿಳಿಯತಕ್ಕದ್ದು, ತಿಳಿಯುವನು ಹೀಗೆ ತ್ರಿಪುಟಿಯುಳ್ಳದ್ದು ಕರ್ಮವಿಧಿಯು.

ಮಾಡುವಿಕೆ, ಸಾಧಕವು, ಮಾಡುವವನು ಹೀಗೆ ಕರ್ಮ ಸಂಗ್ರಹವು ಮೂರು ಬಗೆಯುಳ್ಳದ್ದು. ಸರ್ವಭೂತಗಳಲ್ಲಿಯೂ ಅಖಂಡ್ಯೆಕರಸನಾಗಿರುವ ಅದ್ವೈತ ಭಾವವನ್ನು ತಿಳಿಯುವಿಕೆ ಸಾತ್ತ್ವಿಕ ಜ್ಞಾನವು. ಸರ್ವಭೂತಗಳಲ್ಲಿಯೂ ಬೇರೆ ಬೇರೆಯಾದ ನಾನಾ ಭಾವಗಳನ್ನು ಅರಿತುಕೊಳ್ಳುವಿಕೆ ರಾಜಸ ಜ್ಞಾನವು. ಕಾರಣವಿಲ್ಲದ ಯಥಾರ್ಥವಿಲ್ಲದ ಅಲ್ಪಭ್ರಾಂತಿಯು ತಾಮಸಜ್ಞಾನವು. ಆದರೆ ಆಗಲಿ ಆಗದಿದ್ದರೆ ಹೋಗಲಿ ಎಂದು ಸಂಗವನ್ನು ಬಿಟ್ಟು ಅಹಂಕಾರವಿಲ್ಲದೆ ಮಾಡುವ ಕರ್ತನೇ ಸಾತ್ತ್ವಿಕನು. ಆದರೆ ಸುಖ ಆಗದಿದ್ದರೆ ದುಃಖವೆಂಬ ಲೋಭದಿಂದ ಮಾಡುವವನು ರಾಜಸನು. ಅಯುಕ್ತವಾಗಿ ದುಃಖದಿಂದ ಮಾಡುವ ಮೂಢನೇ ತಾಮಸನು.

ಪ್ರವೃತ್ತಿ ನಿವೃತ್ತಿ ಮಾರ್ಗಗಳನ್ನೂ ಕಾರ್ಯಾಕಾರ್ಯಗಳನ್ನೂ ಬಂಧ ಮೋಕ್ಷಗಳನ್ನೂ ವಿವೇಕಿಸುವುದು ಸಾತ್ತ್ವಿಕ ಬುದ್ಧಿ. ಧರ್ಮಾಧರ್ಮಗಳನ್ನು ಯಥಾರ್ಥವಾಗಿ ವಿವೇಕಿಸಲಾರದ್ದು ರಾಜಸಬುದ್ಧಿ. ಅಧರ್ಮವನ್ನು ಧರ್ಮವೆಂದು ಭ್ರಾಂತಿಗೊಳ್ಳುವ ವಿಪರೀತ ಜ್ಞಾನವೇ ತಾಮಸಬುದ್ಧಿ.

ಪ್ರಾಣೇಂದ್ರಿಯ ಮನಸ್ಸುಗಳನ್ನೂ ಧರಿಸಲುಳ್ಳದ್ದು ಸಾತ್ತ್ವಿಕ ಧೃತಿ ಧರ್ಮಾರ್ಥ ಕಾಮ ಫಲಗಳನ್ನು ಧರಿಸಲುಳ್ಳದ್ದು ರಾಜಸಧೃತಿ. ಕನಸು, ಅಂಜಿಕೆ ದುಃಖ ಮದ ಇವುಗಳನ್ನು ಬಿಡದೇ ಇರುವುದು ತಾಮಸಧೃತಿ.

ಅಭ್ಯಾಸ ಕ್ರಮದಿಂದ ರುಚಿಹುಟ್ಟಿ ಕಡೆಗೆ ದುಃಖವನ್ನು ತೀರಿಸಲುಳ್ಳದ್ದೂ ಆದಿಯಲ್ಲಿ ವಿಷದ ಹಾಗಿದ್ದು ಕೊನೆಗೆ ಅಮೃತದ ಹಾಗೆ ಪರಿಣಮಿಸುವುದೂ ಆಗಿರುವುದೇ ಸಾತ್ತ್ವಿಕಸುಖವು. ಇಂದ್ರಿಯವಿಷಯಭೋಗದಿಂದ ಆದಿಯಲ್ಲಿ ಅಮೃತದ ಹಾಗೆ ತೋರಿ ಕಡೆಗೆ ವಿಷದ ಹಾಗೆ ಪರಿಣಮಿಸುವುದು ರಾಜಸಸುಖವು. ಆದ್ಯಂತಗಳಲ್ಲಿಯ ಆತ್ಮವನ್ನು ಮೋಸಗೊಳಿಸುವ ನಿದ್ರಾದಿಗಳಿಂದ ಹುಟ್ಟಿದ್ದು ತಾಮಸ ಸುಖವು. ಈ ತ್ರಿಗುಣಗಳಿಂದ ಬಿಡಲ್ಪಟ್ಟ ಪ್ರಾಣಿ ಮೂರುಲೋಕಗಳೊಳಗಾಗಿ ಇಲ್ಲ.

ಮನಶ್ಶುದ್ಧಿ, ಇಂದ್ರಿಯನಿಗ್ರಹ, ಶೌಚಾಚಾರ, ಸೈರಣೆ, ಋಜುವೃತ್ತಿ, ಅನುಭವಜ್ಞಾನ, ಶಾಸ್ತ್ರಜ್ಞಾನ ದೈವವಿದೆಯೆಂಬ ನಂಬಿಕೆ ಇದು ಬ್ರಹ್ಮಜಾತಿಯ ಸ್ವಭಾವ ಕರ್ಮವು. ಶೂರತ್ವ, ಬಲ, ಧೈರ್ಯ, ಸಾಮರ್ಥ್ಯ, ಯುದ್ಧದಲ್ಲಿ ಹಿಮ್ಮೆಟ್ಟದಿರುವಿಕೆ, ಔದಾರ್ಯ , ಐಶ್ವರ್ಯ ಇದು ಕ್ಷತ್ರಿಯ ಜಾತಿಯ ಸ್ವಭಾವ ಕರ್ಮವು. ಕೃಷಿಕರ್ಮ, ಪಶುಪಾಲನೆ ಕರ್ಮ, ವರ್ತಕತನ ಇದು ವೈಶ್ಯ ಜಾತಿಯ ಸ್ವಭಾವ ಕರ್ಮವು. ಉತ್ತಮರನ್ನು ಸೇವಿಸುವುದೇ ಶೂದ್ರರಿಗೆ ಸ್ವಭಾವ ಕರ್ಮವು.

ತನ್ನ ಕರ್ಮದಲ್ಲಿ ಆಸಕ್ತನಾದವನು ಸಿದ್ಧಿಯನ್ನು ಪಡೆಯುವನು. ಗುಣ ಕಡಿಮೆಯಾದರೂ ತನ್ನ ಧರ್ಮವನ್ನು ಚೆನ್ನಾಗಿ ಅನುಷ್ಠಿಸಿದರೆ ಅದೇ ತನಗೆ

ಗುಣಾಧಿಕವಾಗುತ್ತೆ. ಪರಧರ್ಮವು ಸ್ವೀಕಾರಕ್ಕೆ ಯೋಗ್ಯವಲ್ಲವು. ಸ್ವಭಾವಕ್ಕೆ ಗೊತ್ತಾಗಿರುವ ಕರ್ಮವನ್ನು ಮಾಡುವವನು ಪಾಪಿಯಾಗುವುದಿಲ್ಲ. ಸಹಜ ಕರ್ಮದಲ್ಲಿ ದೋಷವಿದ್ದರೂ ಬಿಡಬಾರದು. ಬೆಂಕಿಯಲ್ಲಿ ಹೊಗೆ ಇರುವಂತೆ ಸರ್ವ ಪ್ರಯತ್ನಗಳಲ್ಲಿಯೂ ದೋಷಗಳಿರುವವು. ಆದ್ದರಿಂದಲೇ ಯಾವುದರಲ್ಲಿಯೂ ಆಶೆಯಿಲ್ಲದ ಜಿತೇಂದ್ರಿಯನಾದ ಸಂನ್ಯಾಸಿಯು ಕರ್ಮವನ್ನು ಬಿಟ್ಟು ಬ್ರಹ್ಮನಾಗುವನು.

ಅರ್ಜುನನೇ! ಉತ್ಕೃಷ್ಟವಾದ ಜ್ಞಾನದ ಬಗೆಯನ್ನು ಹೇಳುತ್ತೇನೆ. ಶುದ್ಧಬುದ್ಧಿಯಾಗಿ ಧೈರ್ಯದಿಂದ ಮನಸ್ಸನ್ನು ಹಿಡಿದು ನಿಲ್ಲಿಸಿ ಬಾಹ್ಯವಿಷಯಗಳಾದ ಶಬ್ದಾದಿಗಳಿಗೆ ಸಿಲುಕದೆ ರಾಗದ್ವೇಷಗಳನ್ನು ಅಟ್ಟಿ ಏಕಾಂತ ಸ್ಥಳದಲ್ಲಿ ಲಘುಭೋಜನನಾಗಿ ಮನೋವಾಕ್ಕಾಯಗಳನ್ನು ನಿಯಮದಲ್ಲಿಟ್ಟುಕೊಂಡು ವಿರಕ್ತನಾಗಿ ಆತ್ಮಸ್ವರೂಪವನ್ನು ಧ್ಯಾನಿಸುತ್ತ ಗರ್ವಾಹಂಕಾರಗಳನ್ನೂ ಕಾಮಕ್ರೋಧಗಳನ್ನೂ ಬಿಟ್ಟು ಶಾಂತನಾದವನು ಬ್ರಹ್ಮಸಾಯುಜ್ಯವನ್ನು ಪಡೆಯುವನು. ಪ್ರತ್ಯಗ್ಬ್ರಹ್ಮೈಕ್ಯವನ್ನು ಪಡೆದ ಬ್ರಹ್ಮಭೂತನು ನಿರ್ಮಲಚಿತ್ತನಾದ್ದರಿಂದ ಯಾವುದನ್ನೂ ಬಯಸುವುದಿಲ್ಲ. ಶೋಕಿಸುವುದೂ ಇಲ್ಲ. ಸರ್ವಭೂತಸಮನಾಗಿ ನನ್ನ ಭಕ್ತಿಯಿಂದ ನನ್ನಲ್ಲಿ ಸೇರುವನು.

ನನ್ನನ್ನು ಆಶ್ರಯಿಸಿ ಕೆಲಸಗಳನ್ನು ಮಾಡುವವನು ಕೂಡ ನನ್ನ ಪರಮಪದವನ್ನು ನನ್ನ ಪ್ರಸಾದದಿಂದ ಪಡೆಯುವನು. ಆದ್ದರಿಂದ ನನ್ನಲ್ಲಿ ಮನಸ್ಸುಳ್ಳವನಾಗು. ನನ್ನ ಅನುಗ್ರಹದಿಂದ ದುಃಖಸಂಕಟಗಳನ್ನು ಕಡೆಹಾಯುವಿ.

ಇನ್ನು ಅಹಂಕಾರದಿಂದ ನನ್ನ ಮಾತನ್ನು ಕೇಳದೆ ಹೋದರೆ ನಾಶವಾಗುತ್ತೀಯೆ. ನಾನು ಯುದ್ಧ ಮಾಡುವುದಿಲ್ಲವೆಂದು ಹೆಮ್ಮೆಗೊಳ್ಳುವಿಯೋ? ನಿನ್ನ ಉದ್ಯೋಗವು ವ್ಯರ್ಥವಾಗುವುದು. ನಿನ್ನ ಸ್ವಭಾವವೆನಿಸುವ ನನ್ನ ಮಾಯೆ ನಿನ್ನನ್ನು ಪ್ರೇರಿಸುವುದು. ಅವರವರ ಕರ್ಮವು ಬೇಡವೆಂದರೂ ಮಾಡಿಸಿಬಿಡುತ್ತೆ.

ಅರ್ಜುನನೇ! ಸರ್ವಭೂತಗಳ ಹೃದಯದಲ್ಲಿಯೂ ಪರಮೇಶ್ವರನು ಇದ್ದಾನೆ. ಕರ್ಮ ಯಂತ್ರವನ್ನು ಹತ್ತಿ ಇರುವ ಸರ್ವಭೂತಗಳನ್ನೂ ತಿರುಗಿಸುತ್ತಿರುವನು. ಸರ್ವಭಾವಗಳಿಂದಲೂ ಅವನ್ನೇ ರಕ್ಷಕನೆಂದರಿತು ಸೇರು. ಅವನ ಅನುಗ್ರಹದಿಂದ ಉತ್ಕೃಷ್ಟವಾದ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದಹೋಗುತ್ತೀಯೆ. ಇಂತೆಂದು ಗೋಪ್ಯವಾದ ಜ್ಞಾನವು ನನ್ನಿಂದ ಹೇಳಲ್ಪಟ್ಟಿದೆ.

ಎಲ್ಲವನ್ನೂ ವಿಚಾರಿಸಿಕೊಂಡು ಬೇಕಾದ ಹಾಗೆ ಮಾಡಿಕೋ. ಬಹಳ ಗೋಪ್ಯವಾದ ಮೂರು ಮತ್ತೊಂದುಂಟು. ಕೇಳು, ನನ್ನಲ್ಲಿ ಮನಸ್ಸುಳ್ಳವನಾಗಿ ನನ್ನ ಭಕ್ತನಾಗಿ ನನ್ನನ್ನು ಪೂಜಿಸುವನಾಗಿ ನನಗೆ ನಮಸ್ಕಾರ ಮಾಡು. ನನ್ನನ್ನೇ ಹೊಂದುವಿ. ನೀನು ನನಗೆ ಪ್ರಿಯನಾಗಿದ್ದೀಯೆ. ಇದು ಯಥಾರ್ಥವೆಂದು ಪ್ರತಿಜ್ಞೆ ಮಾಡಿ ನಿನಗೆ ಹೇಳುವೆನು. ಎಲ್ಲ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ರಕ್ಷಕನೆಂದು ಸೇರು.

ನಾನು ನಿನ್ನನ್ನು ಎಲ್ಲ ಪಾಪಗಳ ದೆಸೆಯಿಂದಲೂ ಭಕ್ತನಲ್ಲದವನಿಗೂ ಸೇವೆಮಾಡದವನಿಗೂ ನನ್ನಲ್ಲಿ ಹೊಟ್ಟೆಕಿಚ್ಚುಪಡುವವನಿಗೂ ಹೇಳಬೇಡ.

ಯಾವನು ಗೋಪ್ಯವಾದ ಇವುಗಳನ್ನು ನನ್ನ ಭಕ್ತರಿಗೆ ಹೇಳುತ್ತಾನೆಯೋ ಅವನು ನನ್ನಲ್ಲಿ ಹೆಚ್ಚು ಭಕ್ತಿಯನ್ನು ಮಾಡಿ ನನ್ನನ್ನೇ ಸೇರುವನು. ಅವನಿಗಿಂತಲೂ ನನಗೆ ಪ್ರಿಯರಿಲ್ಲವು.

ಈ ನಮ್ಮ ಸಂವಾದವಾದ ಗೀತಾಶಾಸ್ತ್ರವನ್ನು ಓದಿ ತಿಳಿಯುವರು ಜ್ಞಾನಯಜ್ಞದಿಂದ ನನ್ನನ್ನು ಪೂಜಿಸಿದಂತಾಗುವುದು. ಭಕ್ತಿಯಿಂದ ಕೇಳಿದವರಿಗೂ ಪುಣ್ಯಲೋಕಗಳುಂಟು. ಅರ್ಜುನನೇ! ನೀನು ಏಕಾಗ್ರಚಿತ್ತದಿಂದ ಕೇಳಿದೆಯಾ; ನಿನ್ನ ಅಜ್ಞಾನ ಹೋಯಿತೇ? ಎಂದನು.

ಆಗ ಅರ್ಜುನನು, ಸ್ವಾಮಿ! ನನ್ನ ಅಜ್ಞಾನ ಹೋಯಿತು. ನಿನ್ನ ಅನುಗ್ರಹದಿಂದ ಜ್ಞಾನ ಉಂಟಾಯಿತು. ಸಂದೇಹವಿಲ್ಲದೇ ಇರುವೆನು. ನೀನು ಹೇಳಿದ್ದನ್ನು ಮಾಡುವೆನು ಎಂದನು.

ಧೃತರಾಷ್ಟ್ರನೇ! ವ್ಯಾಸಪ್ರಸಾದದಿಂದ ಕೃಷ್ಣಾರ್ಜುನ ಈ ಸಂವಾದವನ್ನು ಕೇಳಿದೆನು. ಯೋಗೀಶ್ವರನಾದ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ತಾನೇ ಹೇಳಿದ ಅದ್ಭುತವನ್ನು ನೆನಪಿಸಿಕೊಂಡು ಬಾರಿಬಾರಿಯೂ ಸಂತೋಷಿಸುವೆನು. ಅತ್ಯದ್ಭುತವಾದ ಕೃಷ್ಣನ ರೂಪವನ್ನು ಸ್ಮರಿಸಿ ನನ್ನ ಆಶ್ಚರ್ಯವು ಹೆಚ್ಚಾಗಿದೆ. ಮರಳಿ ಮರಳಿಯೂ ಸಂತೋಷಿಸುವೆನು. ಯೋಗೀಶ್ವರನಾದ ಕೃಷ್ಣನೂ, ಬಿಲ್ಲನ್ನು ಧರಿಸಿದ ಅರ್ಜುನನೂ ಎಲ್ಲಿರುವರೋ ಅಲ್ಲಿ ಲಕ್ಷ್ಮಿಯು, ಜಯವು, ಐಶ್ವರ್ಯವೂ, ನೀತಿಯೂ ಸ್ಥಿರವಾಗಿರುವುದೆಂಬುವುದು ನಿಶ್ಚಯವಾದ ನನ್ನ ನಂಬಿಕೆಯು.

—*—

ಕುಮಾರವ್ಯಾಸನ ಕನ್ನಡ ಭಗವದ್ಗೀತೆ

(ಮೂಲ ಮತ್ತು ಕನ್ನಡ ಅನುವಾದ)

ಕುಮಾರವ್ಯಾಸನ ಕನ್ನಡ ಭಗವದ್ಗೀತೆ

(ಅನುವಾದ : ಪ್ರೊ. ಜಿ.ಅಶ್ವತ್ಥನಾರಾಯಣ)

ಭೀಷ್ಮ ಪರ್ವ

ಸಂಧಿ ೩

ಸೂ. ರಾಯದನುಜಘರಟ್ಟ ಪಾಂಡವ
ರಾಯಜಂಗಮಜೀವ ನಿರ್ಜಿತ
ಮಾಯ ನಿಜವನು ತೋಟಿ ಪಾರ್ಥನನೊಲಿದು ಬೋಧಿಸಿದ ॥

ಸೂಚನೆ : ಅಸುರರಾಜರನ್ನು ನಾಶ ಮಾಡುವವನೂ ಪಾಂಡವರ ಜೊತೆಗೇ ಇರುವಂತಹ ಅವರ ಪ್ರಾಣಸ್ವರೂಪನೂ, ಮಾಯೆಯನ್ನು ಗೆದ್ದವನೂ ಆದ ಶ್ರೀಕೃಷ್ಣನು ಅರ್ಜುನನಿಗೆ ತನ್ನ ನಿಜಸ್ವರೂಪ ತೋರಿ ಪ್ರೀತಿಯಿಂದ ಗೀತೋಪದೇಶವನ್ನು ಮಾಡಿದನು.

ಹಳಚಲನುವಾಯ್ತುಭಯಸೇನಾ
ಜಲಧಿ ಕಳಕಳ ಮಿಗಲು ಮಾರುತಿ
ಮೊಳಗಿದನು ಪೌಂಡ್ರಕವ ಭೂಪನನಂತವಿಜಯವನು
ಇಳೆ ಹಿಳಿಯೆ ಮಣಿಪುಷ್ಪಕದ ನಿ
ರ್ಮಲ ಸುಘೋಷದೊಳಮಮ ಕೋಳಾ
ಹಳಿಸಿದುದು ಸಹದೇವ ನಕುಲರು ಸಮರಕನುವಾಯ್ತು ॥೧॥

೧. ಎರಡೂ ಕಡೆಯ ಸೈನ್ಯಗಳು ಹೋರಾಡಲು ಅಣಿಯಾದವು. ಸೇನೆಗಳ ಘೋಷಣೆಗಳ ಗದ್ದಲ ಹೆಚ್ಚಾಗಲು ಭೀಮಸೇನನು ಪೌಂಡ್ರಕ ಎಂಬ ಹೆಸರಿನ ಶಂಖವನ್ನು ಊದಿದನು. ಧರ್ಮರಾಜನು ಅನಂತವಿಜಯವೆಂಬ ಶಂಖವನ್ನು, ಸಹದೇವ ಮಣಿಪುಷ್ಪಕವನ್ನು, ನಕುಲ ಸುಘೋಷವೆಂಬ ಶಂಖವನ್ನು, ಭೂಮಿ ಒಡೆಯುವ ಹಾಗೆ ಧ್ವನಿಮಾಡಿದರು. ಆಗ ಯುದ್ಧ ಪ್ರಾರಂಭಿಸಲು ಸೇನೆಗಳು ಸಜ್ಜುಗೊಂಡವು.

ಕೇಳು ಜನಮೇಜಯ ಧರಿತ್ರೀ
ಪಾಳ ಹಿಮಕರಕುಲಲಲಾಮರು
ಕಾಳೆಗಕೆ ಕೈದಟ್ಟಿ ಹರಿದುದು ಕಳನ ಚೌಕದಲಿ
ಆಳು ಗಜಬಜಿಸಿತ್ತು ರಾವುತ
ರೋಳಿ ಸೇರಿತು ಸರಸದಲಿ ದೆ
ಖ್ಖಾಳಿಸಿದುದಿಭರಥನಿಕಾಯದ ಬೆರಳ ಬೊಬ್ಬೆಯಲಿ ॥೧ಅ॥

೧ ಅ. ಚಂದ್ರವಂಶದ ರಾಜಶ್ರೇಷ್ಠರೆಲ್ಲ ರಣರಂಗದ ಸ್ಥಳದಲ್ಲಿ ಯುದ್ಧ ಮಾಡಲು ಕೈತಟ್ಟುತ್ತಾ ಸಂಭ್ರಮದಿಂದ ಸಾಗಿದರು. ಕಾಲಾಳುಗಳು ಗಜಿಬಿಜಿ ಮಾಡುತ್ತಿದ್ದರು. ಉತ್ಸಾಹದಲ್ಲಿ ಕುದುರೆ ಸವಾರರ ಸಮೂಹ ಸಂದಣಿಸಿತು. ಆನೆ ಮತ್ತು ರಥ ಪಡೆಗಳ ಮಾವುತರ ಮತ್ತು ಸಾರಥಿಗಳ ಸಂಜ್ಞೆಗಳ ಹಾಹಾಕಾರದಲ್ಲಿ ಸೇನೆಗಳು ಸಂಭ್ರಮಗೊಂಡವು.

ಹಿಂಡೊಡೆದು ಮುಂಗುಡಿಯ ತಾ ಕಯಿ
ಕೊಂಡು ದೂವಾಳಿಯಲಿ ರಥವನು
ಮಂಡಳಿಸಿ ಕೆಲ್ಲಯಿಸಿ ಲುಳಿಯಲಿ ಲಲಿತಪೇರಯವ
ಚಂಡಗತಿಚಾಳನೆಯಲುಬ್ಬಟೆ
ಗೊಂಡಿಸದೆ ವೇಡೆಯವ ಕೊಳ್ಳದೆ
ಗಾಂಡಿವಿಯ ಕೈಮನದ ಲಾಗನು ಪಡೆದನಸುರಾರಿ ॥೧ ಆ॥

೧ ಆ. ಸೇನೆಯನ್ನು ಭೇದಿಸಿ ಸೇನಾ ಮುಂಭಾಗವನ್ನು ಆಕ್ರಮಿಸಿ ರಥವನ್ನು ವೇಗವಾಗಿ ತೆಗೆದುಕೊಂಡು ಸಾಗಿ, ಮೃದು ಪದಗತಿಯನ್ನು ಚುರುಕಿನಲ್ಲಿ ಕೆರಳಿಸುತ್ತ ಹಾಗೆ ತೀವ್ರಗತಿಯ ಓಟದಲ್ಲಿ ಕುದುರೆಗಳನ್ನು ಆವೇಶಗೊಳಿಸದೆ ಸುತ್ತುವರಿಸದೆ ಕೃಷ್ಣನು ಅರ್ಜುನನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ಕೌಶಲವನ್ನು ಬಳಸಿಕೊಳ್ಳಲು ಸಿದ್ಧನಾದನು.

ಮುರವಿಜಯ ನಿಜಪಾಂಚಜನ್ಯವ
ನಿರದೆ ಫಲುಗುಣ ದೇವದತ್ತ
ಸ್ಫುರಿತರವವನು ರಚಿಸಿದರು ಮೂಲೋಕ ಮೈಮಱೆಯೆ
ತುರಗವನು ಬೋಳಯಿಸಿ ವಾಘೆಯ
ತಿರುಹಿ ಚಮ್ಮಟಿಗೆಯಲಿ ತೇಜಿಯ
ಬರಿಯ ಬೆದಱಿಸಿ ಕೃಷ್ಣ ಪಾರ್ಥನ ರಥವ ಲುಳಿವಡೆದ ॥೨॥

೨. ಕೃಷ್ಣನು ತನ್ನ ಪಾಂಚಜನ್ಯ ಶಂಖದಿಂದ, ಅರ್ಜುನನು ದೇವದತ್ತ ಶಂಖದಿಂದ ಮೂರು ಲೋಕಗಳು ಪರವಶವಾಗುವಂತೆ ಅದ್ಭುತ ಧ್ವನಿಯನ್ನು ಉಂಟು ಮಾಡಿದರು. ಕುದುರೆಗಳನ್ನು ಮೈದಡವಿ/ಚಪ್ಪರಿಸಿ ಲಗಾಮುಗಳನ್ನು ತಿರುವಿ ಚಾವಟಿಯಿಂದ ಪಕ್ಕೆಯನ್ನು ತಿವಿದು ಬೆದರಿಸಿ ಕೃಷ್ಣನು ಅರ್ಜುನನ ರಥವನ್ನು ವೇಗವಾಗಿ ಚಲಿಸಿದನು.

ಚಟುಳ ಹಯಖುರ ಖಂಡಿತೋರ್ವೀ
ನಿಟಿಲ ನಿರ್ಗತ ಬಹಳ ಧೂಳೀ
ಪಟಲ ಧೂಸರ ಸಕಲ ಜಗದಸುರಾರಿ ನಲವಿನಲಿ
ಪಟುಗತಿಯ ಗರುವಾಯಿಯಲಿ ಸಂ
ಘಟಿಸಿ ಹಯವನು ಸುಳಿಸಿದನು ಚೌ
ಪಟ ದೊಳೊಯ್ಯಾರಿಸುತ ಬೋಳಯಿಸಿದನು ಕಂಧರವ ॥೩॥

೩. ಕುದುರೆಗಳ ಗೊರಸಿನ ವೇಗದಿಂದ ಮೇಲೆದ್ದ ಧೂಳು ಸಕಲ ಜಗದಲ್ಲಿಯೂ ವ್ಯಾಪಿಸಿರುವಂತೆ ಮಾಡಿದ ಕೃಷ್ಣನು ಕುದುರೆಗಳ ಕುತ್ತಿಗೆಯನ್ನು ನೇವರಿಸಿ ಅವನ್ನು ಚುರುಕಾಗಿ ನಡೆಯಲು ಹುರಿದುಂಬಿಸಿ, ಬೆಡಗಿನಿಂದ ಎರಡೂ ಸೈನ್ಯಗಳು ಕೂಡುವ ಸ್ಥಳಕ್ಕೆ ಮುನ್ನಡೆಸಿದನು.

ಗತಿಗೆ ಕುಣಿದವು ನಾಸಿಕದ ಹೂಂ
ಕೃತಿಯ ಫೇನೋನ್ನತಿಯ ಬಳಿಯವ
ಗತಿಯ ಕಬ್ಬಿಯ ಕೊಂಡಿಗಳ ಘಣಘಣಿತ ನಿಸ್ವನದ
ವಿತತ ಸೃಕ್ವದ ಲೋಳಿಗಳ ಸಂ
ಸೃತ ಜಠರಜ ಸ್ವೇದಜಲ ಲಾ
ಲಿತ ಹಯಾವಳಿ ಕಳನ ಗೆಲಿದವು ಹರಿಯ ನೇಮದಲಿ ॥೪॥

೪. ವೇಗಕ್ಕೆ ಅನುಗುಣವಾಗಿ ಕುದುರೆಗಳು ಕುಣಿಯುತ್ತಾ ನಡೆದವು. ಮೂಗಿನ ಹೂಂಕಾರದಿಂದುಂಟಾದ ಅಧಿಕ ನೊರೆ ಯಿಂದ, ಬಾಯಿಯಿಂದ ಕೆಳಗಿಳಿದ ಕಡಿವಾಣದ ಕೊಂಡಿಗಳು ಘಣಘಣ ಧ್ವನಿ ಮಾಡುತ್ತಿರಲು ಕಟವಾಯಿಯಿಂದ ಅಧಿಕ ಲೋಳೆ, ಹೊಟ್ಟೆಯ ಮೇಲಿನಿಂದ ಬೆವರು ಇಳಿಯುತ್ತಿರಲು, ಕುದುರೆಗಳು ಕೃಷ್ಣನ ಅಪ್ಪಣೆಯಂತೆ ರಣರಂಗದಲ್ಲಿ ನಿಂತುಕೊಂಡವು.

ನಿಲಿಸಿದನು ಫಲುಗುಣನ ರಥವನು
ತಳಪಟದೊಳೇನೈ ಮಹಾರಥ
ರಳವಿಗೊಡ್ಡಿದೆ ನಿನ್ನೊಳುಂಟೇ ಕೈಮನದ ಕಡುಹು
ಲುಳಿಯ ಬಿಲುವಿದ್ಯಾಚಮತ್ಕೃತಿ
ಯಳವು ಗರುಡಿಯೊಳಲ್ಲದೀ ರಿಪು
ಬಲಕೆ ತೋಱಿಸಬಹುದೆ ಹೇಳೆಂದರ್ಜುನನ ಜಱಿದ ॥೫॥

೫. ಕೃಷ್ಣನು ಅರ್ಜುನನ ರಥವನ್ನು ತಂದು ಉಭಯಸೇನೆಗಳ ನಡುವೆ ರಣರಂಗದ ಬಯಲಿನಲ್ಲಿ ನಿಲ್ಲಿಸಿದನು. "ಏನಯ್ಯಾ ಅರ್ಜುನ ಮಹಾರಥರಾದ ವೀರರ ಸಾಮರ್ಥ್ಯಕ್ಕೆ ನಿನ್ನನ್ನು ಒಡ್ಡಿಕೊಂಡೆ. ಅವರನ್ನು ಎದುರಿಸುವ, ಪರಾಕ್ರಮ ತೋರಿಸುವ ಸಾಮರ್ಥ್ಯ ನಿನ್ನಲ್ಲಿ ಇದೆಯೇ? ಗರುಡಿ ಮನೆಯಲ್ಲಿ ಬಲುಕೈ ಚಳಕದ ಬಿಲ್ವಿದ್ಯೆಯ ಚಮತ್ಕಾರ ಪ್ರದರ್ಶಿಸುವ ಸಾಮರ್ಥ್ಯವನ್ನು ಇಲ್ಲಿ ಈ ಶತ್ರು ಸೇನೆಯ ಎದುರು ಪ್ರದರ್ಶಿಸಲು ಸಾಧ್ಯವೆ?" ಎಂದು ಅರ್ಜುನನನ್ನು ಛೇಡಿಸಿದನು.

ಸಹಸವೇನದು ಜೀಯ ನೆಱಿದಿ
ರ್ದಹಿತಬಲವೆನಗಾವ ಘನ ಬಿ
ನ್ನಹವ ಕೇಳೈ ಕೃಷ್ಣ ಕೌರವರಾಯರೊಡ್ಡಿನಲಿ
ಬಹಳ ಬಲಜೀವರಾರು ಸೇನಾನಿ
ವಹದಲಿ ನಾಯಕರ ವಿವರಿಸ
ಬಹರೆ ಬೆಸಸೆನೆ ಕೃಷ್ಣ ನುಡಿದನು ನಗೆಯ ಮೊಳೆ ಮಿನುಗೆ ॥೬॥

೬. ಅದೇನು ಮಹಾ ಸಾಹಸವೇ? ಇಲ್ಲಿ ಸಂದಣಿಸಿರುವ ಶತ್ರು ಸೇನೆ ನನಗೆ ಯಾವ ಲೆಕ್ಕ? ಏನು ಮಹಾದೊಡ್ಡದು? ಕೃಷ್ಣ, ನನ್ನ ನಿವೇದನೆಯನ್ನು ಸ್ವಲ್ಪ ಆಲಿಸು. ಕೌರವರ ಸೇನೆಯಲ್ಲಿ ಬಹಳ ಬಲಶಾಲಿಗಳಾಗಿರುವವರು ಯಾರಿದ್ದಾರೆ? ಸೇನಾ ಸಮೂಹದಲ್ಲಿ ಸಮರ್ಥ ನಾಯಕರನ್ನು ಹೆಸರಿಸಬಲ್ಲೆಯಾದರೆ ತಿಳಿಸು ಎಂದು ಕೇಳಿದಾಗ, ಕೃಷ್ಣನು ಮುಗುಳ್ನಗುತ್ತ , ಅರ್ಜುನನಿಗೆ ಹೇಳಿದನು.

ಆದಡರ್ಜುನ ನೋಡು ಸೈನ್ಯ ಮ
ಹೋದಧಿಯ ಮಧ್ಯದಲಿ ಮೆಱಿವವ
ನಾ ದುರಂತಪರಾಕ್ರಮನು ಗಂಗಾಕುಮಾರಕನು
ಕಾದಲರಿದಪನಖಿಲಬಲ ವಿಭು
ವಾದನಿವನತಿಬಲನು ಕಾಲನ ಸಾಧಿಸಿದ
ಛಲದಂಕಮಲ್ಲನು ಭೀಷ್ಮ ನೋಡೆಂದ ॥೭॥

೭. "ಹಾಗಿದ್ದರೆ ಅರ್ಜುನ, ಕೌರವ ಸೇನೆಯತ್ತ ನೋಡು, ಸೇನಾಸಾಗರದ ನಡುವೆ ಶತ್ರುಗಳನ್ನು ಆಘಾತಗೊಳಿಸುವ ಸಾಹಸಿಯಾದ ಭೀಷ್ಮನು ವಿರಾಜಿಸುತ್ತಿರುವವನು. ಇವನು ಯುದ್ಧ ಪರಿಣತನಾದವನು, ಸಮಸ್ತ ಸೇನೆಗೆ ಒಡೆಯನಾಗಿದ್ದಾನೆ. ಮಹಾ ಪರಾಕ್ರಮಶಾಲಿ. ಇಚ್ಛಾಮರಣಿಯಾದ ಛಲದಂಕ 'ಮಲ್ಲ' ನೋಡು" ಎಂದನು.

ಮಿಸುಪ ತುದಿವೆರಳಂಬುಗೊಲೆಗೇ
ಜೆಸಿದ ಬಿಲು ಮಣಿಮಯದ ಗದ್ದುಗೆ
ರಸುಮೆಗಳ ಜೋಡಿನಲಿ ಹೊಂದೇರಿನ ವಿಡಾಯಿಯಲಿ
ಮಸೆಗಣೆಯ ಬತ್ತಳಿಕೆ ತಿಗುರೇ
ಜೆಸಿದ ಮೈ ಕತ್ತುರಿಯ ತಿಲಕದ
ನೊಸಲಿನಾತನ ನೋಡು ಗರುಡಿಯ ಜಾಣ ದ್ರೋಣನನು ॥೮॥

೮. "ಬಿಲ್ಲಿಗೆ ಹೂಡಿದ ಬಾಣವನ್ನು ತುದಿಬೆರಳಿನಲ್ಲಿ ಹಿಡಿದು ಕೊಂಡಿರುವ, ರತ್ನಮಯ ಆಸನದಲ್ಲಿ ಕುಳಿತಿರುವ, ಕಾಂತಿಯುಕ್ತ ವಾದ ಕವಚಗಳನ್ನು ಧರಿಸಿರುವ, ಹರಿತವಾದ ಬಾಣಗಳಿರುವ ಬತ್ತಳಿಕೆಯನ್ನು ಹೊಂದಿರುವ, ಸುಗಂಧ ದ್ರವ್ಯ ಪೂಸಿದ ಶರೀರವುಳ್ಳವನಾಗಿ ಕಸ್ತೂರಿ ತಿಲಕವನ್ನು ಹಣೆಯಲ್ಲಿ ಧರಿಸಿರುವ, ಚಿನ್ನದ ರಥದಲ್ಲಿ ಮೆರೆಯುತ್ತಲಿರುವ ಶಸ್ತ್ರಾಸ್ತ್ರ ವಿದ್ಯಾ ಆಚಾರ್ಯನಾದ ದ್ರೋಣನನ್ನು ನೋಡು."

ರಾಯನಾತನ ಬಳಿಯಲಾ ಕ
ರ್ಣಾಯತಾಸ್ತ್ರರು ಕಾರ್ಮುಕದ ಸ್ವಾ
ಧ್ಯಾಯಸಿದ್ಧರು ಹತ್ತುಸಾವಿರ ಮಕುಟವರ್ಧನರು
ಸಾಯಲಂಜದ ಸಿತಗರದೆ ತ
ನ್ನಾಯತದೊಳಪ್ರತಿಮ ರೌದ್ರದ
ನಾಯಕರ ನೆರವಿಯೊಳು ಶಲ್ಯನೃಪಾಲ ನೋಡೆಂದ ॥೯॥

೯. "ಅಲ್ಲಿ ನೋಡು ದುರ್ಯೋಧನ. ಆತನ ಬಳಿಯಲ್ಲೇ ಬಿಲ್ಲಿಗೆ ಬಾಣವನ್ನು ಹೂಡಿ ಸಿದ್ಧರಾಗಿರುವ ಬಿಲ್ವಿದ್ಯಾ ಪಾರಂಗತ ರನ್ನು, ಸ್ವಯಂ ಕಲಿಕೆಯಲ್ಲಿ ಪರಿಣತರಾದವರನ್ನು, ಸಾವಿಗೆ ಅಂಜದಿರುವ ಶೂರರಿದ್ದಾರೆ. ಅಂತಹ ಹತ್ತು ಸಾವಿರ ಮಂದಿ ಬಲಿಷ್ಠ ರಾಜರುಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವ ಶಲ್ಯನು ಆ ರೌದ್ರನಾಯಕರ ನಡುವೆ ಇದ್ದಾನೆ ನೋಡು" ಎಂದನು.

ಗಣನೆಗೈದದ ಹೆಗಲ ಹಿರಿಯು
ಬ್ಬಣದ ಕನಕದ ಝಗೆಯ ತಲೆಗ
ಡ್ಡಣೆಯ ನೇಣಿನ ಹೊಗರ ಮೋಱಿಯ ಕೆಂಪಿನಾಲಿಗಳ
ಮಣಿಮಯದ ತೇರುಗಳಲಾ ಸಂ
ದಣಿಯವರು ಮಾದ್ರೇಶನದು ಫಲು
ಗುಣ ನಿರೀಕ್ಷಿಸುದಿತ್ತಲೊಂದಕ್ಷೋಹಿಣೀ ಬಲವ ॥೧೦॥

೧೦. "ಲೆಕ್ಕಕ್ಕೆ ಸಿಕ್ಕದ, ಹೆಗಲ ಮೇಲೆ ದೊಡ್ಡ ಆಯುಧಗಳನ್ನು ಹೊತ್ತಿರುವ, ಚಿನ್ನದ ನಿಲುವಂಗಿ, ಶಿರಸ್ತ್ರಾಣಗಳನ್ನು ಹೊಂದಿ, ಕವಚಗಳಲ್ಲಿದ್ದ ಕಾಂತಿಯುಕ್ತ ಸರಪಳಿಗಳಿಂದ ಕೂಡಿ, ಕೆಂಡ ಕಾರುತ್ತಿರುವ ಕಣ್ಣುಗಳನ್ನು ಹೊಂದಿರುವ (ಉರಿ) ಮುಖವುಳ್ಳವ ರಾಗಿ ಗುಂಪು ಗುಂಪಾದ ರಥಗಳಲ್ಲಿ ಗುಂಪು ಕೂಡಿರುವ ಅವರೆಲ್ಲರೂ ಮಾದ್ರೇಶನ ಕಡೆಯವರು, ಇತ್ತ ಸೇರಿರುವ ಒಂದು ಅಕ್ಷೋಹಿಣಿ, ಸೇನೆಯನ್ನು ಗಮನಿಸು, ಅರ್ಜುನ".

ಕಳಶ ಸಿಂಧನ ಥಟ್ಟು ಸಮ್ಮುಖ
ದಳವಿಯಲಿ ವಿಕ್ರಮ ದವಾಗ್ನಿಯ
ಝಳದೊಳುಱಿ ಕಾಹೇಱಿದಾಲಿಯ ಬಿಗಿದ ಹುಬ್ಬುಗಳ
ಹಿಳುಕನವುಕಿದ ತುದಿವೆರಳ ನಡು
ಗಳದ ಕಪ್ಪಿನ ನೊಸಲ ನಯನದ
ಬಲುಭುಜನ ನೋಡಾತನಶ್ವತ್ಥಾಮ ನಿಸ್ಸೀಮ ॥೧೧॥

೧೧. "ದ್ರೋಣನ ಸೇನಾ ಸಮೂಹದ ಎದುರಿಗೆ ಸಾಹಸದ ಕಾಳ್ಗಿಚ್ಚಿನ ಉರಿಯಲ್ಲಿ ಕಾವೇರಿ ಕೆಂಪಾದ ಕಣ್ಣು ಗುಡ್ಡೆಗಳಿಂದಲೂ, ಗಂಟಿಕ್ಕಿದ ಹುಬ್ಬುಗಳಿಂದಲೂ, ಬಾಣದ ಹಿಳುಕುಗಳನ್ನು ಅವುಕಿ ಹಿಡಿದ ತುದಿ ಬೆರಳುಗಳಿಂದಲೂ, ನಡುಕುತ್ತಿಗೆಯಲ್ಲಿ ಒಪ್ಪುವ ಕಪ್ಪಿನಿಂದಲೂ, ಹಣೆಯಲ್ಲಿ ಕೆಂಪಾದ ಕಣ್ಣಿನಿಂದಲೂ ಬಲಿಷ್ಠವಾದ ಭುಜಗಳಿಂದಲೂ ಮೆರೆಯುತ್ತಿರುವವನೇ ಎದುರಿಲ್ಲದ ಅಶ್ವತ್ಥಾಮ. ಅವನನ್ನು ನೋಡು."

ಈತನೊಡ್ಡಿನ ಸಾರೆ ಸಂಗರ
ಕಾತು ಕೊಂಡದೆ ಕೃಪನ ದಳಸಂ
ಘಾತವೊಂದಕ್ಷೋಣಿ ಸುಭಟರ ಸಾಲ ಮಧ್ಯದಲಿ
ಆತ ಗೌತಮನವನ ಬಳಿಯಲ
ಭೀತ ಬಾಹ್ಲಿಕ ವಿಂಧ್ಯರದೆ ವಿ
ಖ್ಯಾತರೊಂದಕ್ಷೋಣಿ ಕೌರವ ಸೈನ್ಯಶರಧಿಯಲಿ ॥೧೨॥

೧೨. "ಈತನ ಸೈನ್ಯದ ಬಳಿಯಲ್ಲೇ ಯುದ್ಧಕ್ಕಾಗಿ ಕೃಪನ ಒಂದಕ್ಷೋಹಿಣಿ ಸೇನಾ ಸಮೂಹವು ಇದೆ. ಆ ಸುಭಟರ ಸಾಲಿನ ಮಧ್ಯದಲ್ಲಿ ಇರುವಾತನೇ ಕೃಪ. ಆತನ ಬಳಿಯಲ್ಲಿ ನಿರ್ಭೀತರಾದ ಬಾಹ್ಲಿಕರು, ವಿಂಧ್ಯರು ಇದ್ದಾರೆ. ಅವರ ಪ್ರಖ್ಯಾತ ವಾದ ಒಂದು ಅಕ್ಷೋಹಿಣಿ ಸೈನ್ಯ, ಕೌರವ ಸೇನಾ ಸಮೂಹದ ಜೊತೆಯಿದೆ."

ಈತ ಮಾಳವನೀತ ಕೊಂಕಣ
ನೀತ ಗುಜ್ಜರನೀತ ಬರ್ಬರ
ನೀತ ಕೋಸಲನೀತ ಖೇಟಕನೀತ ಹಮ್ಮೀರ
ಈತ ಕೇರಳನೀತ ಸಿಂಹಳ
ನೀತ ಬೋಟಕನೀತ ಚೀನಕ
ನೀತ ಮಾಗಧನೀತ ದ್ರಾವಿಡನೀತ ಗೌಳನೃಪ ॥೧೩॥

೧೩. "ಇವನು ಮಾಳವದೇಶದವನು. ಇವನು ಕೊಂಕಣ ದೇಶದವನು. ಇವನು ಗುಜರಾತಿ ದೇಶದವನು. ಇವನು ಬರ್ಬರ ದೇಶದವನು. ಇವನು ಕೋಸಲ ದೇಶದವನು. ಇವನು ಖೇಟಕ ದೇಶದವನು. ಇವನು ಹಮ್ಮೀರ ದೇಶದವನು. ಇವನು ಕೇರಳ ದೇಶದವನು. ಇವನು ಸಿಂಹಳ ದೇಶದವನು. ಇವನು ಬೋಟಕ ದೇಶದವನು. ಇವನು ಚೀನಾದೇಶದವನು. ಇವನು ಮಾಗಧ ದೇಶದವನು. ಇವನು ದ್ರಾವಿಡ (ದಕ್ಷಿಣ ದೇಶದ) ದೇಶದವನು. ಇವನು ಗೌಳ (ಬಂಗಾಳದ)ದೇಶದವನು."

ಆಳುಗೆಲಸಕೆ ಕೆಲಬರರಸನ
ಖೇಳಮೇಳಕೆ ಕೆಲರು ಕೆಲಬರು
ಬಾಲೆಯರ ಕೊಳುಕೊಡೆಯ ಬಳಗದ ಬಂಧುಕೃತ್ಯದಲಿ
ತೋಳ ಬಲುಹೊರೆಗಲಸಿ ಕೆಲಬರು
ಮೇಲೆ ನಮ್ಮಯ ಹಗೆಗೆ ಕೆಲಬರು
ಕಾಳಗದ ಕಾರ್ಮುಕನೃಪಾಲರ ನೆರವಿಯದೆಯೆಂದ ॥೧೪॥

೧೪. "ಕೆಲವರು ಸೇವೆಗಾಗಿ ಬಂದಿದ್ದಾರೆ. ಅರಸನ ಸ್ನೇಹ ಬಾಂಧವ್ಯ ನಿಮಿತ್ತ ಕೆಲವರು ಬಂದಿದ್ದಾರೆ. ಕೆಲವರು ಹೆಣ್ಣು ಮಕ್ಕಳನ್ನು ಕೊಟ್ಟು ಅಥವಾ ತೆಗೆದುಕೊಂಡು ಬಂಧುತ್ವ ಬೆಳೆಸಿದವರು ಬಂದಿದ್ದಾರೆ. ಕೆಲವರು ತಮ್ಮ ತೋಳ್ಬಲ ಬೆಳಸಿಕೊಂಡು

ಸುಮ್ಮನಿರಲು ಬೇಸರವಾಗಿ ಯುದ್ಧ ಮಾಡಲು ಬಂದಿದ್ದಾರೆ. ಅಲ್ಲದೆ ನಮ್ಮ ಮೇಲಿನ ದ್ವೇಷದ ಕಾರಣದಿಂದ ಅವರ ಕಡೆ ಸೇರಿ ಯುದ್ಧ ಮಾಡಲು ಬಂದಿದ್ದಾರೆ. ಒಟ್ಟಿನಲ್ಲಿ ಕೆಲವು ಬಿಲ್ವಿದ್ಯೆಯಲ್ಲಿ ನಿಷ್ಣಾತರಿದ್ದಾರೆ." ಎಂದನು.

ತಳಿತ ಪಲ್ಲವ ಸತ್ತಿಗೆಯ ಹೊಳೆ
ಹೊಳೆವ ಮೌಳಿಯ ರತುನ ಲಹರಿಯ
ಚಲಿಸಿ ಚಿಮ್ಮುವ ಚಮರಿ ಸೀಗುರಿಗಳ ವಿಡಾಯಿಯಲಿ
ಹಲಗೆಯಲಿ ತೆತ್ತಿಸಿದ ಹಾವಿನ
ಹಳವಿಗೆಯ ಹೊಂದೇರ ನೃಪಮಂ
ಡಳಿಯ ಮಧ್ಯದೊಳಾತ ದುರ್ಯೋಧನ ಮಹೀಪಾಲ ॥೧೫॥

೧೫. "ಹರಡಿರುವ ಬೆಳ್ಗೊಡೆ, ರತ್ನಗಳ ಸಮೂಹದಿಂದ ಪ್ರಕಾಶಿಸುತ್ತಿರುವ ಕಿರೀಟ, ಅತ್ತ ಇತ್ತ ಮೇಲೆ ಕೆಳಗೆ ಚಲಿಸುತ್ತ ಚಿಮ್ಮುತ್ತಿರುವ ಚಾಮರ ಸೀಗುರಿಗಳ ವೈಭವದಿಂದ ಕೂಡಿ, ಮೇಲ್ಭಾಗದ ಫಲಕದಲ್ಲಿ ಹೊಂದಿಸಿರುವ ಹಾವಿನ ಧ್ವಜವನ್ನುಳ್ಳ ಚಿನ್ನದ ರಥದಲ್ಲಿ, ರಾಜ ಪರಿವಾರದ ಮಧ್ಯದಲ್ಲಿ ಇರುವಾತನೇ ದುರ್ಯೋಧನ ಮಹಾರಾಜ."

ಅಳಲಿದುರಗನ ನೆರವಿ ಟೊಪ್ಪಿಗೆ
ಗಳೆದ ಸಾಳ್ವನ ಹಿಂಡು ಹಸಿದ
ವ್ವಳಿಪ ಸಿಂಹದ ಹಂತಿ ಕುಪಿತ ಕೃತಾಂತನೊಡ್ಡವಣೆ
ಕೊಲೆಗೆಲಸಕುಬ್ಬೆದ್ದ ರುದ್ರನ
ಬಲವಿದೆನೆ ಹರಹರ ಮಹಾರಥ
ರಳವಿಗೊಟ್ಟಿದೆ ನೋಡು ದುರ್ಯೋಧನ ಸಹೋದರರ ॥೧೬॥

೧೬. "ಏಟು ತಿಂದ ಸರ್ಪಗಳ ಸಮೂಹದಂತೆ, ತಲೆಕವಚ ಕಳಚಿ ಗಾಯಗೊಂಡ ಗಿಡುಗನ ಹಿಂಡಿನಂತೆ, ಹಸಿದು ಆಕ್ರಮಿಸುವ ಸಿಂಹಗಳ ಗುಂಪಿನಂತೆ. ಕ್ರೋಧಗೊಂಡ ಯಮನ ಪರಿವಾರದಂತೆ, ಕೊಲೆಗೆಲಸಕ್ಕೆ ಆವೇಶ ತಾಳಿದ ರುದ್ರನ ಸೇನೆಯೋ ಇದು ಎನ್ನುವಂತೆ ಹರಹರ! ಮಹಾರಥರಾದ ದುರ್ಯೋಧನನ ಸಹೋದರರು ಯುದ್ಧಕ್ಕೆ ಸಿದ್ಧರಾಗಿ ನಿಂತಿದ್ದಾರೆ ನೋಡು."

ಉಳಿಯ ಮಿಂಚಿನ ಮಂದೆ ಸುಗತಿಯ
ಝುಳಕದನಿಲನ ಥಟ್ಟು ಬೀದಿಯ
ಬಳಿಗೆ ಪುರುಷಾಮೃಗದ ಗಾವಳಿಯೆನೆ ವಿಲಾಸದಲಿ
ಹೊಳೆವ ಚಮರಿಯ ಸುತ್ತು ಝುಲ್ಲಿಯ

ನೆಲಕುಗಿವ ಜೋಡುಗಳ ತೇಜಿಯ
ದಳವ ನೋಡೈ ಪಾರ್ಥ ಬಳಸಿದೆ ಕಲಿಜಯದ್ರಥನ ॥೧೭॥

೧೭. "ಬಲುಚುರುಕಿನಿಂದ ಚಲಿಸುವ ಮಿಂಚಿನ ಪರಿವಾರ ವೋ, ಸರಾಗದಲ್ಲಿ ಪ್ರವಾಹದಂತೆ ಸಾಗುವ ಗಾಳಿಯ ಸಮೂಹ ವೋ ಬೀದಿಯಲ್ಲಿ ಸಂಚರಿಸುವ ಪುರುಷಾಮೃಗದ ಗುಂಪೋ ಎನ್ನುವಂತೆ ವಿಲಾಸದಲಿ ಶೋಭಿಸುತ್ತಿರುವ ಚಾಮರಗಳ ದುಂಡು ಗೊಂಚಲುಗಳಂತೆ, ನೆಲಕ್ಕೆ ಜೋತು ಬೀಳುತ್ತಿರುವ ಅಂಗರಕ್ಷೆ ಗಳನ್ನು (ಜೀನುಗಳನ್ನು)ಒಳಗೊಂಡ ಅಶ್ವದಳದ ಪಡೆಯು ವೀರ ಜಯದ್ರಥನನ್ನು ಸುತ್ತುವರಿದಿರುವುದನ್ನು, ಅರ್ಜುನ, ಗಮನಿಸು."

ತೋರದಲಿ ಕುಲಗಿರಿಯ ಸತ್ವದ
ಸಾರದಲಿ ವಜ್ರವನು ದನಿಯಲಿ
ಕಾರ ಬಱಸಿಡಿಲಂದವಿದನುಗಿದೊಂದುಮಾಡಿದನು
ವಾರಿಜೋದ್ಭವನೆನಲು ಝೂಡಿಯ
ಭಾರಿ ಱಿಂಚೆಯ ಕೈಯ ಖಡ್ಗದ
ವಾರಣದ ಮಧ್ಯದಲಿಹನು ಭಗದತ್ತ ನೋಡೆಂದ ॥೧೮॥

೧೮. "ಗಾತ್ರದಲ್ಲಿ ಮಂದರ ಪರ್ವತವನ್ನು, ಶಕ್ತಿಯಲ್ಲಿ ವಜ್ರಾಯುಧವನ್ನು, ಶಬ್ದದಲ್ಲಿ ಮಳೆಗಾಲದ ಬರಸಿಡಿಲ ಶಕ್ತಿಯ ವಿನ್ಯಾಸವನ್ನು ತೆಗೆದು ಒಂದುಗೂಡಿಸಿ ಬ್ರಹ್ಮ ಇದನ್ನು ಸೃಷ್ಟಿ ಮಾಡಿದನೋ ಎಂಬಂತೆ ದಟ್ಟವಾದ ಭಾರಿ ರಕ್ಷಾ ಕವಚಗಳನ್ನು ಹೊಂದಿರುವ ಸೊಂಡಿಲಿನಲ್ಲಿ ಖಡ್ಗವನ್ನು ಹಿಡಿದಿರುವ ಆನೆಯ ಬೆನ್ನಿನ ಮೇಲೆ ಭಗದತ್ತನು ಇದ್ದಾನೆ ವೀಕ್ಷಿಸು" ಎಂದನು.

ಹೊಗರೊಗುವ ಸೂನಿಗೆಯ ಸುಪತಾ
ಕೆಗಳ ಸಿಂಧದ ಹೊಳೆವ ಹೊಂಗಂ
ಬುಗೆಯ ಹೂಡಿದ ಹಯದ ಸೂತರ ಗಳದ ಗರ್ಜನೆಯ
ಅಗಿವ ಚೀತ್ಕಾರದ ಭಡಾಳದ
ವಿಗಡ ರಥಿಕರ ರಹಿಯ ರಥವಾ
ಜಿಗಳ ನೋಡೈ ಪಾರ್ಥ ಭೂರಿಶ್ರವನ ಸೈನ್ಯವಿದು ॥೧೯॥

೧೯. "ಪ್ರಕಾಶವನ್ನು ಹೊರಸೂಸುತ್ತಿರುವ ಕತ್ತಿಗಳು, ಕೈಬಾವುಟ, ದಂಡ ಮತ್ತು ಧ್ವಜಗಳು, (ರಥದಲ್ಲಿನ ಕಾಂತಿಯುಕ್ತವಾದ) ಚಿನ್ನದ ಕಂಬುಗೆ, ಹೂಡಿದ ಕುದುರೆಗಳ ಮತ್ತು ಸಾರಥಿಗಳ, ಗರ್ಜನೆಯನ್ನು, ಅವಕ್ಕೆ ಕಟ್ಟಿದ ಕುದುರೆಗಳ ಮತ್ತು ಗಂಟಲು ಹರಿವಂತೆ ಕೂಗುತ್ತಿದ್ದ ರಥಿಕರ ಚೀತ್ಕಾರಗಳು, ರಥಗಳು ಚಲಿಸುತ್ತಿರುವ ಸದ್ದು,

ಇವುಗಳಿಂದ ಕೂಡಿದ ಶೂರರಾದ ರಥಿಕರನ್ನೂ ಅತಿವೇಗದ ರಥಾಶ್ವಗಳನ್ನು ನೋಡು." ಇದು ಭೂರಿಶ್ರವನ ಸೇನೆ.

ಹಲಗೆ ಕಡಿತಲೆ ಹರಿಗೆ ಖಂಡೆಯ
ಹೊಳೆವ ಮಡ್ಡು ಕಠಾರಿ ಡೊಂಕಣಿ
ಬಿಲು ಸರಳು ತೋಡಿಟ್ಟಿ ಮುದ್ಗರ ಪಿಂಡಿವಾಳ ಚಯ
ತಲೆಯ ನೇಣಿನ ಕೈಯ ಚೌರಿಯ
ಲುಳಿಯ ಜೋಡಿನ ಕಟಿಯ ಗಂಟೆಯ
ದಳವನೀಕ್ಷಿಸು ಪಾರ್ಥ ದುಶ್ಶಾಸನನ ಪಯದಳವ ॥೨೦॥

೨೦. "ಹಲಗೆ, ಕಡಿತಲೆ, ಗುರಾಣಿ, ಖಡ್ಗ, ಒಂದು ಬಗೆಯ ಕಠಾರಿ, ಚಿಕ್ಕ ಕತ್ತಿ, ಭರ್ಜಿ, ಬಿಲ್ಲು ಬಾಣ, ಉದ್ದನೆ ಈಟಿ, ಗದೆ, ಕವಣೆ ಸಮೂಹ, ತಲೆಗಳನ್ನು ನೇಣು ಹಾಕುವ ಹಗ್ಗಗಳನ್ನು ಹಿಡಿದು, ಕೈಯಲ್ಲಿ ಚಾಮರ ಹಿಡಿದ, ಥಳಿಥಳಿಸುವ ಅಂಗ ಕವಚ ಧರಿಸಿದ, ಸೊಂಟಕ್ಕೆ ಗಂಟೆ ಕಟ್ಟಿದ ಈ ಸೇನೆ ದುಶ್ಶಾಸನನ ಪದಾತಿದಳ" ಗಮನಿಸು ಪಾರ್ಥ ಎಂದನು.

ವೀರನಭಿಮನ್ಯುವಿನವೊಲು ರಣ
ಧೀರನಾತನ ನೋಡು ಕರ್ಣಕು
ಮಾರಕರು ವೃಷಸೇನನಗ್ಗದ ಚಿತ್ರಸೇನಕರು
ಚಾರುಲಕ್ಷಣರವರು ನೂಱು ಕು
ಮಾರರದೆ ದುರ್ಯೋಧನಾತ್ಮಜ
ರಾರುವನು ಕೈಕೊಳ್ಳರವದಿರು ಸುಬಲ ನಂದನರು ॥೨೧॥

೨೧. "ವೀರ ಅಭಿಮನ್ಯುವಿನಂತೆ ರಣಶೂರನಾದ ಈತನನ್ನು ನೋಡು, ಇವನೇ ವೃಷಸೇನ, ಇವನ ಬಳಿ ಇರುವವನು ಶ್ರೇಷ್ಠನಾದ ಚಿತ್ರಸೇನಕ. ಇವರಿಬ್ಬರು ಕರ್ಣನ ಮಕ್ಕಳು. ಸುಂದರರಾದವರು ನೂರು ಜನ ರಾಜಕುಮಾರರು ಇದ್ದಾರಲ್ಲ, ಅವರೆ ದುರ್ಯೋಧನನ ಮಕ್ಕಳು. ಅಲ್ಲಿರುವವರು ಸುಬಲನ ಮಕ್ಕಳು. ಅವರು ಯಾರನ್ನೂ ಲೆಕ್ಕಿಸುವುದಿಲ್ಲ."

ರಾಯನಣುಗರ ಗಂಡ ಕೌರವ
ರಾಯದಳಶೃಂಗಾರ ಮಲೆವರಿ
ರಾಯಮರ್ದನನೆಂಬ ಬಿರುದಿನಲುಲಿವ ಕಹಳೆಗಳ
ಜೀಯ ಜಯಜಯಯೆಂಬ ಪಂಡಿತ

ಗಾಯಕರ ಮಧ್ಯದಲಿ ಬೆರಳಲಿ
ಸಾಯಕವ ತಿರುಹುವನು ತಾ ಕಲಿಕರ್ಣ ನೋಡೆಂದ ॥೨೨॥

೨೨. "ರಾಜನ ಪ್ರೀತಿಗೆ ಪಾತ್ರನಾದ ಶೂರ, ದುರ್ಯೋಧನನ ಸೇನೆಗೆ ಭೂಷಣ ಪ್ರಾಯ ಎಂಬ ಹೊಗಳಿಕೆಯ ಜೊತೆಗೆ ಪ್ರತಿಭಟಿಸುವ ಶತ್ರುಗಳ ನಾಶಕ, ಎಂಬ ಪ್ರಶಸ್ತಿಗಳನ್ನು ಕಹಳೆಗಳು ಘೋಷಿಸುತ್ತಿರಲು, ಜೀಯ ಜಯ ಜಯ ಎಂದು ಪಂಡಿತರು ಗಾಯಕರು ಹೊಗಳುತ್ತಿರಲು ಅವರ ನಡುವೆ ಬೆರಳಲ್ಲಿ ಬಾಣವನ್ನು ತಿರುಗಿಸುತ್ತಿರುವ ವೀರ ಕರ್ಣನು ನಿಂತಿದ್ದಾನೆ ನೋಡು" ಎಂದನು.

ಕರಿಘಟೆಯ ಕುಋುವದಲಿ ಹಯಮೋ
ಹರದ ತೆರೆಮಾಲೆಯಲಿ ಬಲುರ್ಝು
ಲ್ಲರಿಯ ಬುದ್ಬುದ ತತಿಯಲಸ್ತ್ರದ ಕಿಡಿಯ ವಡಬನಲಿ
ಬಿರುದರಾಯರ ರತುನರಾಜಿಯ
ಲರಿಬಲಾರ್ಣವ ಗಜಬಿ ಮಿಗಿಲ
ಳ್ಗಿಜೆಯುತದೆ ಬಹುವಿಧದ ವಾದ್ಯವಿಡಾಯ ರಭಸದಲಿ ॥೨೩॥

೨೩. ಮದ್ದಾನೆಗಳೇ ನಡುಗಡ್ಡೆಯಾಗಿ, ಅಶ್ವದಳಗಳೇ ಅಲೆಗಳ ಮಾಲಿಕೆಯಾಗಿ, ಬೆಳ್ಗೊಡೆಗಳೇ ನೀರಿನ ಗುಳ್ಳೆಗಳಾಗಿ, ಬಾಣ ಗಳಿಂದುಂಟಾಗುವ ಕಿಡಿಗಳೇ ವಡಬಾಗ್ನಿಯಾಗಿ ಬಿರುದಾಂಕಿತ ರಾದ ರಾಜರುಗಳೇ ರತ್ನ ಸಮೂಹವಾಗಿ ಕೂಡಿದ ಶತ್ರುಸೇನೆ ಎಂಬ ಸಾಗರವು, ನಾನಾ ವಿಧವಾದ ವಾದ್ಯಗಳು ರಭಸದಿಂದ ಶಬ್ದ ಮಾಡುತ್ತಿದ್ದವು.

ಆಳಮಯವಖಿಳೋರ್ವಿ ಪದಹತ
ಧೂಳಿಮಯವಾಕಾಶ ರಥತುರ
ಗಾಳಿಮಯ ದಿಗುಜಾಲವೇನೆಂಬೆನು ಮಹಾದ್ಭುತವ
ಕಾಳೆಗಕೆ ನೀನಲ್ಲದವನಿಯೊ
ಳಾಳ ಕಾಣೆನು ಪಾರ್ಥ ಸಾಕಿ
ನ್ನೇಳು ಬಾಣವ ತೂಗು ಮಾತಾಡಿಸು ಮಹಾಧನುವ ॥೨೪॥

೨೪. ಕಾಲಾಳುಗಳಿಂದ ಇಡೀ ಭೂಮಂಡಲ ಆವೃತವಾಗಿತ್ತು. ಪದಾತಿಗಳ ಪಾದಗಳ ತುಳಿತದಿಂದ ಮೇಲೆದ್ದ ಧೂಳಿ ಆಕಾಶವನ್ನು ಆವರಿಸಿತ್ತು. ರಥಸೇನೆ ತುರಗಸೇನೆಗಳು ದಿಕ್ಕುಗಳನ್ನೆಲ್ಲ ಆವರಿಸಿತ್ತು. ಆ ಅದ್ಭುತ ನೋಟವನ್ನು ಏನೆಂದು ವರ್ಣಿಸಲಿ. "ಈ ಕಾಳಗಕ್ಕೆ ಸ್ಪರ್ಧಿಸಲು ಭೂಮಂಡಲದಲ್ಲಿ ನಿನ್ನ ವಿನಾ ಬೇರೆ ಶೂರನನ್ನು ನಾನು ಕಂಡಿಲ್ಲ. ಅರ್ಜುನ, ಇನ್ನು ಸುಮ್ಮನಿದ್ದುದು ಸಾಕು ಎದ್ದೇಳು.

ಬಾಣವನ್ನು ಹೆದೆಯೇರಿಸಿ ಹೂಡು, ಮಹಾಧನುಸ್ಸನ್ನು ಮಾತಾಡಿಸು (ಲೀಲಾಜಾಲವಾಗಿ ಬಳಸು)" ಎಂದು ಕೃಷ್ಣನು ಅರ್ಜುನನಿಗೆ ಸೂಚಿಸಿದನು.

ಎಲೆ ಧನಂಜಯ ಹಗೆಯ ಹೆಚ್ಚಿದ
ಹಳುವವಿದೆಲಾ ವಜ್ರಿಸುತ ನಿ
ನ್ನಳವಿಯಲಿ ತಜುಬಿದೆ ಸುಯೋಧನ ಸೈನ್ಯ ಗಿರಿನಿಕರ
ಎಲೆ ಸಮೀರಜನನುಜ ರಿಪುಬಲ
ವಿಲಯ ಮೇಘ ನಿಕಾಯವಿದೆ ಭುಜ
ಬಲವ ತೋಱೈ ತಂದೆ ನೋಡುವೆನೆಂದನಸುರಾರಿ ॥೨೫॥

೨೫. "ಎಲೈ ಅರಣ್ಯಕ್ಕೆ ಅಗ್ನಿಯಂತಿರುವ ಧನಂಜಯ, ಅಪಾರವಾದ ಶತ್ರುಗಳು ಇರುವ ಅರಣ್ಯವಿದೆ. ಎಲೈ ಗಿರಿಗಳ ವಿನಾಶಕ್ಕೆ ಕಾರಣನಾದ ಇಂದ್ರನ ಮಗನೇ ನಿನ್ನ ಕಣ್ಣಳತೆಯಲ್ಲೇ ದುರ್ಯೋಧನನ ಸೈನ್ಯವೆಂಬ ಗಿರಿಸಾಲು ಎದುರಿಗೆ ಬಂದು ನಿಂತಿದೆ. ವಾಯುಪುತ್ರನಾದ ಭೀಮನ ಸೋದರನೆ, ಶತ್ರುಸೇನೆಯೆಂಬ ಪ್ರಳಯಕಾಲದ ಮೋಡ ಸಮೂಹವನ್ನು ಚೆದುರಿಸಲು ನಿನಗೆ ಮಾತ್ರ ಸಾಧ್ಯ. ನಿನ್ನ ಪರಾಕ್ರಮವನ್ನು ಪ್ರದರ್ಶಿಸು, ನೋಡುತ್ತೇನೆ." ಎಂಬುದಾಗಿ ಕೃಷ್ಣನು ಹೇಳಿದನು.

ಮೆಟ್ಟಿ ನೋಡಿದನಹಿತ ರಾಯರ
ಥಟ್ಟುಗಳ ತೆರಳಿಕೆಯನುತ್ಸಹ
ಗೆಟ್ಟು ಫಲುಗುಣ ಸೆಡೆದು ಮನದಲಿ ನೊಂದು ತಲೆವಾಗಿ
ಕೆಟ್ಟ ಕಾಯದ ಸುಖಕಳುಪಿ ಒಡ
ಹುಟ್ಟಿದರ ಕೈಯಾರ ಕೊಂದರೆ
ಮುಟ್ಟದೇ ಕಡುಪಾಪ ಘನಪರಿತಾಪ ತನಗೆಂದ ॥೨೬॥

೨೬. ಅರ್ಜುನನು ಶತ್ರುರಾಜರ ಸೈನ್ಯವನ್ನು ತುದಿಗಾಲ ಮೇಲೆ ನಿಂತು ನೋಡಿದನು. ಆಗ ಉತ್ಸಾಹ ಕುಂದಿ ಹಿಂಜರಿಕೆ ಯುಂಟಾಗಿ, ಮನಸ್ಸಿನಲ್ಲಿ ದುಃಖಿಸಿ, ತಲೆತಗ್ಗಿಸಿ, ನಶ್ವರ ದೇಹಸುಖ ಕ್ಕೆ ಆಶಿಸಿ ಒಡಹುಟ್ಟಿದವರನ್ನು ಕೈಯಾರೆ ಕೊಂದರೆ ಘೋರಪಾಪ, ಮಹಾಸಂತಾಪ ನನಗೆ ತಟ್ಟದಿರುವುದೇ? ಎಂದು ಚಿಂತಿಸಿದನು.

ಕೆಲಬರೊಡಹುಟ್ಟಿದರು ಗುರುಗಳು
ಕೆಲರು ಕೆಲಬರು ಮಾವ ಮೈದುನ
ನಳಿಯ ಮಗ ಹಿರಿಯಯ್ಯ ಮುತ್ತಯ ಮೊಮ್ಮನೆನಿಸುವರು
ಕಳದೊಳಿನಿಬರ ಕೊಂದು ಶಿವಶಿವ
ಕೆಲವು ದಿವಸದ ಸಿರಿಗೆ ಸೋಲಿದು
ಮುಳುಗುವೆನೆ ಭವಸಿಂಧುವಿನೊಳಾನೆನುತ ಮನಮುರಿದ ॥೨೭॥

೨೭. ಈ ಶತ್ರು ಸೇನೆಯಲ್ಲಿರುವವರಲ್ಲಿ ಕೆಲವರು ಒಡಹುಟ್ಟಿದ ಸೋದರರು, ಕೆಲವರು ವಿದ್ಯೆ ಕಲಿಸಿದ ಗುರುಗಳು, ಕೆಲವರು ಮಾವ, ಮೈದುನ, ಅಳಿಯ, ಮಗ, ಹಿರಿಯಯ್ಯ ಮುತ್ತಯ್ಯ ಮೊಮ್ಮಗ ಸಂಬಂಧವುಳ್ಳವರು. ನಶ್ವರದ ರಾಜ್ಯದ ಐಶ್ವರ್ಯಕ್ಕಾಗಿ ಮನಸೋತು, ರಣರಂಗದಲ್ಲಿ ಇವರನ್ನೆಲ್ಲ ಕೊಂದು ಸಂಸಾರ ಸಾಗರದಲ್ಲಿ ನಾನು ಮತ್ತೆ ಮತ್ತೆ ಹುಟ್ಟುತ್ತಾ ಸಾಯುತ್ತಿರಬೇಕೇ ಎಂದು ಚಿಂತಾಕ್ರಾಂತನಾದನು.

ಇದಿರುಗಾಣದೆ ಕೊಲೆಗೆ ನಿರ್ಬಂ
ಧದಲಿ ಬೆಸಸುವ ಕೃಷ್ಣನಕಟಾ
ಮದಮುಖನೊ ದುರ್ಬೋಧಕನೊ ವಂಚಕನೊ ಘಾತಕನೊ
ಯದುಗಳನ್ವಯದೊಳಗೆ ಕರುಣಾ
ಸ್ಪದರು ಜನಿಸರಲಾ ಮುರಾರಿಯ
ಹೃದಯ ಬೆಟ್ಟಿತೆನುತ್ತ ಫಲುಗುಣ ತೂಗಿದನು ಶಿರವ ॥೨೮॥

೨೮. ಮುಂದಾಗುವ ಪರಿಣಾಮವನ್ನು ಚಿಂತಿಸದೆ (ದೂರದೃಷ್ಟಿ ಇಲ್ಲದೆ) ಇವರನ್ನೆಲ್ಲ ಕೊಲ್ಲಲು ಬಲವಂತದಲ್ಲಿ ಅಪ್ಪಣೆ ಮಾಡುತ್ತಿರುವ ಕೃಷ್ಣನು, ಅಯ್ಯೋ ಇವನು ಗರ್ವಿಷ್ಠನೋ ದುರುಪದೇಶಕನೋ ಮೋಸಗಾರನೋ ಕೊಲೆಗಾರನೋ ಏನೆಂದು ಹೇಳಲಿ! ಯದುವಂಶದೊಳಗೆ ಕರುಣಾಳುಗಳು ಯಾರೂ ಜನಿಸಿಲ್ಲವಲ್ಲಾ! ಕೃಷ್ಣನ ಹೃದಯ ಕಠಿಣವಾಗಿದೆ (ಕಲ್ಲಾಗಿದೆ) ಎಂದು ಅರ್ಜುನ ಅಚ್ಚರಿಗೊಂಡನು.

ನರಕಕರ್ಮವ ಮಾಡಿ ಇಹದೊಳು
ದುರಿತ ಭಾಜನನಾಗಿ ಕಡೆಯಲಿ
ಪರಕೆ ಬಾಹಿರನಾಗಿ ನಾನಾಯೋನಿಯೊಳು ಸುಳಿದು
ಹೊರಳುವನುವನು ಕೃಷ್ಣದೇವನು
ಕರುಣಿಸಿದನೇ ಹಿತವನೇ ಹರ
ಹರ ಮಹಾದೇವೊಂದು ಬೋಳಕೆ ಬದುಕಿದೆನುಯೆಂದ ॥೨೯॥

೨೯. "ಭೂಲೋಕದಲ್ಲಿ ಪಾಪಕರ್ಮವನ್ನು ಮಾಡಿ, ದುಷ್ಟ ಕಾರ್ಯನಿರತನಾಗಿ, ಕೊನೆಯಲ್ಲಿ ಮೋಕ್ಷಕ್ಕೆ ದೂರನಾಗಿ, ನಾನಾ ಜನ್ಮಗಳಲ್ಲಿ ಬಂದು ಒದ್ದಾಡುವ ಗತಿಯನ್ನು ಕೃಷ್ಣನು ಉಂಟು ಮಾಡಿದನಲ್ಲಾ. ಇವನು ನನ್ನ ಹಿತವನ್ನುಂಟು ಮಾಡುವವನೇ? ಅಯ್ಯೋ, ಶಿವಶಿವ ಒಂದು (ಬಂಧುಗಳು, ಗುರುಹಿರಿಯರನ್ನು ಕೊಲ್ಲುವ) ಗಂಡಾಂತರದಿಂದ ಪಾರಾದೆ" ಎಂದನು.

ಮುಳಿಯಲಾಗದು ಕೃಷ್ಣ ನಿಮ್ಮನು
ತಿಳುಹಲಾನು ಸಮರ್ಥನೇ ಕುಲ
ಕೊಲೆಗೆ ಕೊಕ್ಕರಿಸಿದೆನು ನನೆದೆನು ಕರುಣ ವಾರಿಯಲಿ
ಬಲುಹನೀ ಮುಖದಲ್ಲಿ ತೋಱುವ
ಡಳುಕಿದೆನು ಸಾಮ್ರಾಜ್ಯಸಂಪ
ತ್ತಿಳೆಯ ಸಕಲಭ್ರಾಂತಿ ಬೀತುದು ದೇವ ಕೇಳೆಂದ ॥೩೦॥

೩೦. "ಕೃಷ್ಣನೇ ಕೋಪಿಸಿಕೊಳ್ಳಬೇಡ. ನಿಮಗೆ ತಿಳಿಯ ಹೇಳಲು ನನಗೆ ಶಕ್ತಿಯಿಲ್ಲ. ವಂಶನಾಶ ಮಾಡಲು ಹೇಸಿಕೆ ಯಾಗುತ್ತಿದೆ. ಕಾರುಣ್ಯ ಭಾವದಲ್ಲಿ ಮಿಂದಿದ್ದೇನೆ. ಈ ರೀತಿಯಲ್ಲಿ ಸಾಹಸವನ್ನು ತೋರಲು ಅಂಜಿಕೆಯಾಗುತ್ತಿದೆ. ಸಾಮ್ರಾಜ್ಯದ ಸಂಪತ್ತು, ಮತ್ತು ರಾಜ್ಯದ ಕುರಿತ ಎಲ್ಲ ಭ್ರಾಂತಿಗಳೂ ದೂರ ವಾಗಿವೆ." ಎಂದನು.

ಎಡಹಿದರೆ ರುಜೆಯಾಗಿಯಾಪ
ತ್ತಡಸಿದರೆ ಮೇಣಾವ ತೆಱದಿಂ
ದೊಡಲುವಿಡಿದರೆ ಮರಣ ತಪ್ಪದು ಸುರರಿಗೊಳಗಾಗಿ
ಕೆಡುವ ಕಾಯವ ನಚ್ಚಿ ಬಂಧುಗ
ಳೊಡನೆ ವೈರವ ಮಸೆದು ನರಕಕೆ
ಕೆಡೆವೆನೇ ತಾನೆನುತ ರಥದೊಳು ಬಿಲ್ಲನಿಳುಹಿದನು ॥೩೧॥

೩೧. "ಮುಗ್ಗರಿಸಿದರೆ, ರೋಗ ಬಂದರೆ, ಗಂಡಾಂತರ ಒದಗಿದರೆ ಅಥವಾ ದೇಹ ಧರಿಸಿದ ಮೇಲೆ ಇನ್ನಾವ ರೀತಿ ಯಲ್ಲಾಗಲಿ ಮರಣ ತಪ್ಪಿದ್ದಲ್ಲ. ದೇವತೆಗಳೂ ಸೇರಿದಂತೆ ಯಾರಿಗೂ ಸಾವು ತಪ್ಪಿದ್ದಲ್ಲ. ನಶ್ವರವಾದ ಶರೀರವನ್ನು ನಂಬಿ ಬಂಧುಗಳೊಡನೆ ದ್ವೇಷ ಸಾಧಿಸಿ ನರಕಕ್ಕೆ ನಾನು ಬೀಳಲೇ?" ಎನ್ನುತ್ತ ರಥದಲ್ಲಿ ಬಿಲ್ಲನ್ನು ಕೆಳಗಿಟ್ಟನು.

ಕರಗಲಂತಃಕರಣ ಚಿಂತಾ
ತುರನು ಸಂಗ್ರಾಮದ ವಿರಕ್ತಿಯೊ
ಳಿರಲು ಕಂಡನು ಕಮಲನಾಭನು ನಗುತ ಮನದೊಳಗೆ
ತರಳನಿವನದ್ವೈತಕಲೆಯಲಿ
ಪರಿಣತನು ತಾನಲ್ಲ ನೆವದಿಂ
ನರನ ಬೋಧಿಸಬೇಕೆನುತ ನುಡಿಸಿದನು ಫಲುಗುಣನ ॥೩೨॥

೩೨. ಮನಸ್ಸು ಕರಗಲು ಯುದ್ಧ ಮಾಡಲು ಮನಸ್ಸಿಲ್ಲದೇ ವೈರಾಗ್ಯದಿಂದ ಅರ್ಜುನನು ಚಿಂತಾಮಗ್ನನಾಗಿ ಇರಲು, ಕೃಷ್ಣನು ಮನಸ್ಸಿನಲ್ಲೇ ಅವನ ಅಜ್ಞಾನಕ್ಕಾಗಿ ನಕ್ಕನು. ಅದ್ವೈತ ಸಿದ್ಧಾಂತದಲ್ಲಿ ಏನೂ ಅರಿಯದ ಬಾಲಕನಾಗಿದ್ದಾನೆ. ಇವನಿಗೆ ಇದನ್ನು ಯಾವುದಾದರೂ ನೆವದಲ್ಲಿ ವಿವರಿಸಬೇಕು ಎಂದು ಮಾತನಾಡಿ ಸಿದನು.

ಏನು ಫಲುಗುಣ ಸಮರದಲಿ ದು
ಮ್ಮಾನವಾವುದು ಹದನು ಶೌರ್‍ಯಕೆ
ಹಾನಿಯಲ್ಲಾ ತ್ರಿಜಗಚೌಪಟಮಲ್ಲ ನೀನೆನಿಪ
ಮಾನಗರ್ವವು ಮುಟಿಯದೇ ರಿಪು
ಸೇನೆ ನಗದೇ ತೆತ್ತ ಸಮರವ
ನೀನುಪೇಕ್ಷಿಸಿ ನೋಡಲಹುದೇ ಬಿಲ್ಲ ಹಿಡಿಯೆಂದ ॥೩೩॥

೩೩. "ಏನು ಅರ್ಜುನಾ, ಯುದ್ಧ ಮಾಡಲು ಚಿಂತೆಗೆ ಕಾರಣವೇನಿದೆ? ಈ ರೀತಿಯ ಮನಃಸ್ಥಿತಿ ನಿನ್ನ ಪರಾಕ್ರಮಕ್ಕೆ ಧಕ್ಕೆ ತರುವುದಿಲ್ಲವೇ? ನೀನು ಮೂರು ಲೋಕದಲ್ಲಿ ವೀರ, ಮಹಾ ಪರಾಕ್ರಮಿ ಎಂಬ ಗೌರವ ಪ್ರತಿಷ್ಠೆ ಅಳಿಯುವುದಿಲ್ಲವೇ? ನೀನೇ ಹೂಡಿದ ಯುದ್ಧವನ್ನು ನೀನು ತಿರಸ್ಕಾರದಿಂದ ನೋಡಲು, ಶತ್ರು ಪಕ್ಷದವರು ಹಾಸ್ಯ ಮಾಡುವುದಿಲ್ಲವೇ? ಆದುದರಿಂದ ಬಿಲ್ಲನ್ನು ಹಿಡಿದು ಯುದ್ಧಕ್ಕೆ ತೊಡಗು" ಎಂದನು ಕೃಷ್ಣ.

ಆವ ನಿನ್ನಯ ಕ್ಷತ್ರಧರ್ಮವ
ಭಾವಿಸಿದೆ ಮೇಣಾವ ಶಶಿವಂ
ಶಾವಳಿಯ ನೆಮ್ಮುಗೆಯ ನೆಗಳಿದೆ ತೆತ್ತ ಕಾಳೆಗಕೆ
ಆವ ನಿನ್ನಗ್ಗಳಿಕೆಗುಚಿತವ
ತೀವಿ ಬಳಸಿದೆ ಕದನಮುಖದಲಿ
ಹೇವ ವೀರರೊಳಿಲ್ಲಲಾ ವಿಸ್ಮಯವಿದಕಟೆಂದ ॥೩೪॥

೩೪. "ನಿನ್ನ ಕ್ಷತ್ರಿಯ ಧರ್ಮ ಯಾವುದೆಂದು ತಿಳಿದಿರುವೆ? ಅಥವಾ ಒದಗಿರುವ ಯುದ್ಧದಲ್ಲಿ ಚಂದ್ರವಂಶದವರು ಅವಲಂಬಿಸಿದ ಯಾವ ಧರ್ಮವನ್ನು ಕೈಗೊಂಡೆ ? ನಿನ್ನ ದೊಡ್ಡಸ್ತಿಕೆಗೆ ತಕ್ಕಂತೆ ಯಾವ ಸೂಕ್ತವಾದ ಕ್ರಮವನ್ನು ಪೂರ್ಣವಾಗಿ ಕೈಗೊಂಡೆ? ಯುದ್ಧ ಪ್ರಸಂಗದಲ್ಲಿ ವೀರರೆದುರಿನಲ್ಲಿ ನಿನಗೆ ನಾಚಿಕೆ ಇಲ್ಲವಲ್ಲಾ. ಇದು ಹಾ! ಅಚ್ಚರಿಯ ಸಂಗತಿ!" ಎಂದನು ಕೃಷ್ಣ.

ಅಲಗಿನೊರಸೊರಸಿಲ್ಲ ಕೈಮೈ
ಗಳಲಿ ಮುಳುಗಿದ ಬಾಣವಿಲ್ಲ
ಗ್ಗಳಿಸಿ ನೊಸಲಲಿ ಮುಱಿದ ಭಲ್ಲೆಯವಿಲ್ಲ ನೋಡುವರೆ
ಕಲಹದಲಿ ಪಡಿಮುಖದ ಘಾಯದ
ಚಲರಕುತದೊಱವಿಲ್ಲ ನೀ ಮು
ನ್ನಳುಕಿ ಕೈದುವ ಹಾಯ್ಕಿದೈ ಸರಿಯಲ್ಲ ನಿನಗೆಂದ ॥೩೫॥

೩೫. "ಆಯುಧಗಳ ತಿಕ್ಕಾಟವಿಲ್ಲ, ಕೈಮೈಗಳಲ್ಲಿ ನಾಟಿದ ಬಾಣಗಳಿಲ್ಲ. ಪರೀಕ್ಷಿಸಿ ನೋಡಿದರೆ, ಜೋರಾಗಿ ತಾಗಿ ಹಣೆಯಲ್ಲಿ ನಾಟಿದ ಈಟಿಯ ಮೊನೆಗಳಿಲ್ಲ. ಹೋರಾಟ ನಡೆಸಿ ಶತ್ರುಪಕ್ಷದವರಿಂದ ಆದ ಪೆಟ್ಟಿನಿಂದ ಹರಿದ ರಕುತದ ಒರತೆಯಿಲ್ಲ. ನೀನು ಯುದ್ಧ ಮಾಡುವ ಮೊದಲೇ ಹೆದರಿ ಶಸ್ತ್ರವನ್ನು ಬಿಸಾಡಿದೆ, ಇದು ನಿನಗೆ ತಕ್ಕುದ್ದಲ್ಲ" ಎಂದು ಕೃಷ್ಣನು ಹೇಳಿದನು.

ತರುಣಿಯರ ಮುಂದಸ್ತ್ರಶಸ್ತ್ರವ
ತಿರುಹಬಹುದುಬ್ಬೇಳಬಹುದ
ಬ್ಬರಿಸಬಹುದೆನಗಾರು ಸರಿ ನಾ ಧೀರನೆನಬಹುದು
ಕರಿತುರಂಗದ ಬಹಳಶಸ್ತ್ರೋ
ತ್ಕರ ಕೃಪಾಣದ ಹರಹಿನಲಿ ಮೊಗ
ದಿರುಹದಿಹ ಕಲಿಯಾರು ಕುಂತೀಸೂನು ಕೇಳೆಂದ ॥೩೬॥

೩೬. "ಯುವತಿಯರ ಎದುರಿನಲ್ಲಿ ಶಸ್ತ್ರಾಸ್ತ್ರಗಳನ್ನು ಝಳಪಿಸಬಹುದು, ಗರ್ವಿಸಬಹುದು, ಗರ್ಜಿಸಬಹುದು. ನನಗೆ ಶೌರ್ಯದಲ್ಲಿ ಸಮ ಯಾರಿದ್ದಾರೆ? ನಾನೇ ಅಸಮಾನವೀರ ಎಂದು ಕೊಚ್ಚಿ ಕೊಳ್ಳಬಹುದು, ಆನೆ, ಕುದುರೆ ಕತ್ತಿ ಮೊದಲಾದ ನಾನಾ ಶಸ್ತ್ರಾವಳಿಗಳ ಕಠಾರಿಗಳ ಸಮೂಹ ಹರಡಿರುವ ರಣದಿಂದ ಹಿಮ್ಮೆಟ್ಟದಿರುವ ಕಲಿಗಳು ಯಾರಿದ್ದಾರೆ ಅರ್ಜುನ, ಹೇಳು" ಎಂದು ಕೃಷ್ಣನು ಹೇಳಿದನು.

ಬಂಧುಹನನಕೆ ಮನದರಲು ಭವ
ವಿಂಧ್ಯದಲಿ ಬೆಳ್ಳಾಗಿ ರೌರವ
ಸಿಂಧುವಿನೊಳೋಲಾಡದಿಹನೇ ಪರಮಪಾತಕನು
ಸಂಧಿಯಲಿ ನಮ್ಮವನಿ ಖಣಸಂ
ಬಂಧವುಂಟೇ ಬರಸಲಿ ರಣದಭಿ
ಸಂಧಿ ಸಾಕಿನ್ನೆನುತ ಫಲುಗುಣ ಶಿರವ ಬಾಗಿದನು ॥೩೭॥

೩೭. ಬಂಧುಗಳ ಹತ್ಯೆಗೆ ಮನಸ್ಸು ಮಾಡಿದರೆ ಸಂಸಾರವೆಂಬ ವಿಂಧ್ಯಾಟವಿಯಲ್ಲಿ ಅವಿವೇಕಿಯಾಗಿ ಆ ಪರಮಪಾತಕನುವ ಘೋರ ನರಕವೆಂಬ ಸಾಗರದಲ್ಲಿ ಓಲಾಡದೇ ಇರುತ್ತಾನೆಯೇ? ರಾಜ್ಯ ಬರುವ ಋಣ ನಮ್ಮ ಪಾಲಿಗಿದ್ದರೆ ಸಂಧಿ ಮೂಲಕ ಸಿಗಲಿ, ಯುದ್ಧದ ಸಂಕಲ್ಪ ಇನ್ನು ಸಾಕು ಎಂದು ಅರ್ಜುನನು ತಲೆಬಾಗಿ ಕುಳಿತನು.

ಎಲವೊ ಫಲುಗುಣ ನುಡಿದ ಭಾಷೆಯ
ಸಲಿಸಿ ಕಾನನದೊಳಗೆ ತೊಟ್ಟನೆ
ತೊಳಲಿ ಹದಿಮೂಱಬುದ ಬಂದಾಪತ್ತನನುಭವಿಸಿ
ನೆಲನ ಭಾಗವ ಬೇಡಿ ಸಂಧಿಗೆ
ಕಳುಹಿದರೆ ಕೌರವನು ನೂಕಿಸಿ
ಕಳೆದ ನಿಮಗಿನ್ನಾವ ಹೊಲ್ಲೆಹವೆಂದನಸುರಾರಿ ॥೩೮॥

೩೮. ಕೃಷ್ಣನು, "ಅರ್ಜುನ, ಆಡಿದ ಮಾತಿಗೆ ತಪ್ಪದೆ ನಡೆದು, ಅಡವಿಯಲ್ಲಿ ಅಲೆದಲೆದು ಬಳಲಿ ಹದಿಮೂರು ವರುಷಗಳ ಕಾಲ ಒದಗಿ ಬಂದ ಕಷ್ಟಗಳನ್ನು ಅನುಭವಿಸಿ, ರಾಜ್ಯದಲ್ಲಿ ಬರಬೇಕಾದ ಭಾಗವನ್ನು ಕೊಡಿ ಎಂದು ಕೇಳಿ, ಸಂಧಿಗೆ ನನ್ನನ್ನು ಕಳಿಸಿಕೊಟ್ಟರೆ ಕೌರವ ಸಭೆಯಿಂದ ತಳ್ಳಿಸಿ ಕಳಿಸಿದ, ಇಷ್ಟೆಲ್ಲ ಆದ ಮೇಲೂ ನಿಮಗೆ ಯುದ್ಧ ಮಾಡಲು ಏನಡ್ಡಿ ಇದೆ" ಎಂದನು.

ಎವಗೆ ನೀನುತ್ತರನ ಕಥೆವೇ
ಳುವೆ ನಗುವೆಯಾತನಿಗೆ ನೀನೀ
ಬವರದೊಳು ಗುರುವಾದೆ ಲೋಗರ ನಿಂದೆ ತನಗಹುದು
ಲವಲವಿಕೆಯಲಿ ಕಾದಬೇಕೆ
ಮ್ಮವನಿಯನು ಕೈಕೊಳಲುಬೇಕೆಂ
ಬವಗಡೆಯತನವೆತ್ತಲಡಗಿತು ಪಾರ್ಥ ಹೇಳೆಂದ ॥೩೯॥

೩೯. "ನನಗೆ ನೀನು ಆಗಾಗ ಉತ್ತರ ಕುಮಾರನ ಪೌರುಷದ ಕಥೆಯನ್ನು ಹೇಳುತ್ತಿದ್ದೆ, ನಗುತ್ತಿದ್ದೆ. ಅವನಂತೆ ವರ್ತಿಸಿ ಅವನಿಗೆ ನೀನು ಈ ಸಮರದಲ್ಲಿ ಗುರುವಾಗುತ್ತಿರುವೆ. (ಅವನಿಗಿಂತ ಮಹಾ ಹೇಡಿ ಆಗುತ್ತಿರುವೆ) ನೀನು ಹೀಗೆ ಮಾಡುವುದರಿಂದ ಲೋಕನಿಂದೆ (ಜನಾಪವಾದ) ತಟ್ಟುತ್ತದೆ. ಆದ್ದರಿಂದ ಉತ್ಸಾಹ ದಿಂದ ನೀನೀಗ ಹೋರಾಡಬೇಕು, ನಮ್ಮ ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂಬ ನಿನ್ನ ಪರಾಕ್ರಮ ಎಲ್ಲಿ ಮರೆಯಾಯಿತು, ಅರ್ಜುನ, ಹೇಳು" ಎಂದನು ಕೃಷ್ಣ.

ಬಲುಹ ನೀ ನೋಡುವರೆ ಪರಮಂ
ಡಳಿಕರನು ತಂದೊಡ್ಡು ಬಳಿಕೆ
ನ್ನಳವನೀಕ್ಷಿಸು ಸೆಡೆದೆನಾದಡೆ ನಿಮ್ಮ ಮೈದುನನೆ
ಕೊಲುವೆನೆಂತೈ ಭೀಷ್ಮರನು ಮನ
ವಳುಕದೆಂತೈ ತಪ್ಪುವೆನು ಗುರು
ಗಳಿಗೆ ಕೃಪಗುರುಸುತರನಿಜೆವುದಿದಾವ ನಯವೆಂದ ॥೪೦॥

೪೦. ಅರ್ಜುನನು ಕೃಷ್ಣನಿಗೆ "ನನ್ನ ಶೌರ್ಯವನ್ನು ನೀ ಕಾಣಬೇಕಾದರೆ ಶತ್ರು ರಾಜರ ಮುಂದೆ ನನ್ನ ನಿಲ್ಲಿಸು, ಅನಂತರ ನನ್ನ ಸಾಮರ್ಥ್ಯವನ್ನು ಪರೀಕ್ಷಿಸು. ನಾನೇನಾದರೂ ಹಿಮ್ಮೆಟ್ಟಿದರೆ ನಾನು ನಿನ್ನ, ಮೈದುನನಲ್ಲ. ಭೀಷ್ಮರನ್ನು ಹೇಗೆ ತಾನೆ ಕೊಲ್ಲಲಿ? ದ್ರೋಣರ ವಿಚಾರದಲ್ಲಿ ಹೇಗೆ ತಪ್ಪು ದಾರಿ ಹಿಡಿಯಲಿ? ಕೃಪಾಚಾರ್ಯರನ್ನು, ಅಶ್ವತ್ಥಾಮನನ್ನು ಘಾತಿಸುವುದು ಯಾವ ರಾಜನೀತಿ ಹೇಳು" ಎಂದನು.

ಹೊಳೆದು ಹೋಹೈಶ್ವರ್ಯಕೋಸುಗ
ತಲೆಯ ಮಾಜಿಯಧರ್ಮ ಕೋಟಿಯ
ಗಳಿಸಿ ಬಳಿಕಾ ಫಲವನಲಸದೆ ಭವಭವಂಗಳಲಿ
ತೊಳಲಿ ಬಳಲುವ ಜೀವಭಾವದೊ
ಳುಳಿವುದಾವುದು ಲಾಗು ಮೂಢರ
ಬಳಕೆಗಾವಂಜುವೆವು ಸಮರಕೆ ಶರಣು ಶರಣೆಂದ ॥೪೧॥

೪೧. "ಮಿಂಚಿನಂತೆ ಹೊಳೆದು ಮಾಯವಾಗುವ ನಶ್ವರ ಸಿರಿಗಾಗಿ ತನ್ನ ತಲೆಯನ್ನೇ ಮಾರಿಕೊಂಡು, ಅಧರ್ಮ ಕೋಟಿಯನ್ನು ಗಳಿಸಿ, ಆನಂತರ ಆ ಪಾಪಫಲವನ್ನು ಅಸಹ್ಯಪಡದೆ ಅನುಭವಿಸಲು ಜನ್ಮ ಜನ್ಮಾಂತರಗಳಲ್ಲಿ ತೊಳಲಿ ಬಳಲುವ ಬದುಕಿನಲ್ಲಿ ಉಳಿಯುವುದಾದರೂ ಏನು ಚೆನ್ನ ? ಜ್ಞಾನಿಯಂತೆ ನಾನು ನಡೆಯುವುದಿಲ್ಲ. ಯುದ್ಧ ಮಾಡುವುದಕ್ಕೆ ದೊಡ್ಡ ನಮಸ್ಕಾರ" ಎಂದನು.

ಲಾಲಿಸದೆ ಕುಲಛಲವ ನೀತಿಯ
ಪಾಲಿಸದೆ ಕೊಲೆಗಡುಕತನದೊಳು
ಮೇಲುಗಾಣದೆ ಬಂಧುಗಳ ಗುರುಗಳ ಸಹೋದರರ
ಕೋಲ ಮೊನೆಯಲಿ ಕೊಂದು ನೆತ್ತರ
ಗೂಳನುಂಬವೊಲಖಿಳ ರಾಜ್ಯದ
ಮೇಲೆ ಸೊಗಸುವ ಸಿರಿಯನೊಲ್ಲೆನು ಕೊಲುವನಲ್ಲೆಂದ ॥೪೨॥

೪೨. "ವಂಶದ ಪ್ರತಿಷ್ಠೆಯನ್ನು ಗಮನಿಸದೆ, ಕೊಲ್ಲುವ ಪ್ರವೃತ್ತಿಯಲ್ಲಿ ಮುಂದಿನ ಶ್ರೇಯಸ್ಸನ್ನು ಚಿಂತಿಸದೆ, ಬಂಧುಗಳನ್ನು ಗುರುಗಳನ್ನು ಗೌರವಿಸದೆ, ಅಣ್ಣ ತಮ್ಮಂದಿರನ್ನು ಬಾಣಗಳಿಂದ ಕೊಂದು, ರಕ್ತವನ್ನು ಕಲಸಿದ ಅನ್ನವನ್ನು ತಿಂದಂತೆ, ಸಮಸ್ತ ರಾಜ್ಯವನ್ನು ಪಡೆದು ಮೆರೆಯುವ ಐಶ್ವರ್ಯದ ಭಾಗ್ಯವನ್ನು ನಾನೊಲ್ಲೆ. ನಾನು ಕೊಲ್ಲುವವನಲ್ಲ." ಎಂದು ಅರ್ಜುನನು ಹೇಳಿದನು.

ಆರನೈ ನೀ ಕೊಲುವೆ ನಿನ್ನಿಂ
ದಾರು ಸಾವರು ದೇಹವನೊ ನಿಜ
ಧೀರನಾತ್ಮನ ಕೊಲುವೆಯೋ ದಿಟ ನಿನ್ನ ಬಗೆಯೇನು
ಚಾರುದೇಹಕೆ ಭೂತನಿಕರಕೆ
ವೈರವಿಲ್ಲುಳಿದಂತೆ ವಿಗತವಿ
ಕಾರನಚಲನಗಮ್ಯನದ್ವಯನಾತ್ಮ ನೋಡೆಂದ ॥೪೩॥

೪೩. "ಯಾರನ್ನು ನೀ ಕೊಲ್ಲುವೆ ? ನಿನ್ನಿಂದ ಸಾಯುವವರು ಯಾರು? ನಿಜವಾಗಿ ದೇಹವನ್ನು ನಾಶಮಾಡುವೆಯೋ? ಅಥವಾ ಧೀರನಾದ ಆತ್ಮವನ್ನು ನಾಶ ಮಾಡುವೆಯೋ? ನಿಜಕ್ಕೂ ನಿನ್ನ ಮನಸ್ಸಿನಲ್ಲಿರುವುದೇನು ? ಈ ಸುಂದರ ದೇಹಕ್ಕೆ ಮತ್ತು ಪಂಚ ಭೂತಗಳಿಗೆ ಏನೇನೂ ದ್ವೇಷವಿಲ್ಲ. ಈ ವಿಷಯ ಹೊರತಾಗಿ ಯಾವ ಮಾರ್ಪಾಡೂ ಇಲ್ಲದಿರುವ ಆತ್ಮನು, ಯಾರಿಗೂ ದಾಟಲು ಸಾಧ್ಯವಾಗದವನು, ಎರಡಲ್ಲದವನು ತಿಳಿ" ಎಂದನು ಕೃಷ್ಣ.

ತನುವಳಿದ ಬಳಿಕಿನಲಿ ತನು ಸಂ
ಜನಿಸುಗೆಂಬುದು ಭವವ ಬಳಸುವ
ತನುವಿನಲಿ ಕೌಮಾರ ಯೌವನ ವಾರ್ಧಿಕಂಗಳಲಿ
ತನು ವಿಕಾರಿಸುವದು ಸುಕರ್ಮದ
ವಿನುತ ದುಷ್ಕೃತವೆನಿಪ ಹುಸಿ ಕ
ಲ್ಪನೆ ಶರೀರಕ್ಕಲ್ಲದಾತ್ಮಂಗಿಲ್ಲ ಕೇಳೆಂದ ॥೪೪॥

೪೪. "ದೇಹ ಅಳಿದು ಹೋದ ಮೇಲೆ ಮತ್ತೆ ಬೇರೆ ದೇಹ ಹುಟ್ಟಿ ಬರುತ್ತದೆ ಎಂಬುದು ನಿಜ. ಜನ್ಮಾಂತರಗಳಲ್ಲಿ ಹುಟ್ಟಿಗೆ ಒಳಗಾಗುವ ದೇಹದಲ್ಲಿ ಬಾಲ್ಯ, ಯೌವನ ತಾರುಣ್ಯ ವಾರ್ಧಕ್ಯ(ಮುಪ್ಪಿನಲ್ಲಿ)ಗಳಲ್ಲಿ ದೇಹ ಬದಲಾವಣೆ ಹೊಂದುತ್ತದೆ. ಶ್ರೇಷ್ಠ ಸತ್ಕರ್ಮಗಳು, ಪಾಪದ ದುಷ್ಕರ್ಮಗಳು ಎಂಬ ಹುಸಿ ಕಲ್ಪನೆಗಳು ದೇಹಕ್ಕೆ ಅನ್ವಯಿಸುತ್ತವೆಯೇ ಹೊರತು ಆತ್ಮನಿಗಿಲ್ಲ, ನನ್ನ ಮಾತನ್ನು ನಂಬು" ಎಂದನು ಕೃಷ್ಣ.

ಅಳಿವನಲ್ಲುದಯಿಸುವನಲ್ಲ
ಗ್ಗಳಿಸುವವನಲ್ಲಡಗುವವನ
ಲ್ಲಳಿವ ದೇಹದ ಬಗೆಗೆ ಹೊಣೆಯೇ ಸಚ್ಚಿದಾತ್ಮಕನು
ಕಳಚಿದಡೆ ಕಳಚುವುದು ಕಾಯವಿ
ದುಳಿದಡುಳಿವುದು ಚಿನುಮಯಂಗೀ
ಕಳಕಳದ ಕಾಲಾಟ ಕೊಳ್ಳದು ಪಾರ್ಥ ಕೇಳೆಂದ ॥೪೫॥

೪೫. "ಈ ಆತ್ಮ ಸಾಯುವವನಲ್ಲ ಹುಟ್ಟುವವನೂ ಅಲ್ಲ. ಕುಗ್ಗುವವನು ಅಲ್ಲ, ವೃದ್ಧಿಸುವವನೂ ಅಲ್ಲ, ನಶ್ವರವಾದ ನಶಿಸುವ ದೇಹದ ರೀತಿನೀತಿಗಳಿಗೆ ಚಿನ್ಮಯರೂಪಿ ಪರಮಾತ್ಮ ಜವಾಬು ದಾರನೇ ? ಈ ದೇಹವನ್ನು ಆತ್ಮನು ಬಿಟ್ಟು ಹೊರಡಬೇಕಾದರೆ ಬಿಡುತ್ತಾನೆ. ದೇಹದಲ್ಲಿ ಇರಬೇಕಾದರೆ ಇರುತ್ತಾನೆ. ಪರಮಾತ್ಮನಿಗೆ ಜನ್ಮಾಂತರದ ಹುಟ್ಟು ಸಾವಿನ ಸಂಬಂಧದ ಜಂಜಾಟ ಇರುವು ದಿಲ್ಲ ಅರ್ಜುನನೆ ಕೇಳು" ಎಂದನು ಕೃಷ್ಣ.

ನಿನಗೆ ಸಾವವನಲ್ಲ ನಿನ್ನಂ
ಬಿನಲಿ ನೋವವನಲ್ಲ ದಿಟ ನೀ
ಮುನಿದು ಗಗನಕ್ಕಲಗನುಗಿದಡೆ ಗಗನವಳುಕುವುದೇ
ತನುವಿನೀ ಗುಣಧರ್ಮ ಕರ್ಮದ
ಹೊನಲು ಹೊಗುವುದೆ ನಿತ್ಯನಿರ್ಮಲ
ಚಿನುಮಯಾತ್ಮನನೆಲೆ ವೃಥಾಹಂಕಾರವೇಕೆಂದ ॥೪೬॥

೪೬. "ಈ ಆತ್ಮನು ನಿನ್ನಿಂದ ಸಾಯುವವನಲ್ಲ. ನಿನ್ನ ಬಾಣದ ಪೆಟ್ಟಿನಿಂದ ನೋವನ್ನು ಅನುಭವಿಸುವವನಲ್ಲ. ಇದು ನಿಜ. ನೀನು ಕೋಪಗೊಂಡು ಆಕಾಶಕ್ಕೆ ಕತ್ತಿಯಿಂದ ತಿವಿದರೆ ಆಕಾಶವು ಹೆದರುವುದೇ ? ದೇಹದ ಗುಣಲಕ್ಷಣಗಳಾದ ಕರ್ಮದ ಪ್ರವಾಹ ಆತ್ಮನನ್ನು ಪ್ರವೇಶಿಸುತ್ತದೆಯೇ ? ಇಲ್ಲ ಎಂದ ಮೇಲೆ ಸುಮ್ಮನೆ ನಿನಗೆ ಈ ಅಹಂಕಾರ ಏಕೆ ?" ಎಂದನು.

ಆದಡೆಲೆ ಮುರವೈರಿ ಕೇಳಿದಿ
ರಾದ ಬಾಂಧವರನಿಬರನು
ಕಾದಿ ಕೊಂದನು ಪಾರ್ಥ ಪಾತಕನೆನ್ನದೇ ಲೋಕ
ಈ ದುರಂತಕ್ಕೇನುಗತಿಯಪ
ವಾದವಾವಂಗಾದುದಾತನ
ವೈದಿಕನು ಇಹಪರಕೆ ಬಾಹಿರನೆಂದನಾ ಪಾರ್ಥ ॥೪೭॥

೪೭. "ಹಾಗಿದ್ದರೆ ಕೃಷ್ಣ, ನನ್ನ ಮಾತನ್ನು ಕೇಳು. ಈ ಅರ್ಜುನ ಪ್ರತಿಭಟಿಸಿದ ಬಂಧುಗಳನ್ನೆಲ್ಲಾ ಹೋರಾಡಿ ಕೊಂದು ಹಾಕಿದನು ಪಾಪಿ ಎಂದು ಜನರು ಕರೆಯುವುದಿಲ್ಲವೇ? ಈ ಅನಾಹುತಕ್ಕೆ ಯಾರು ಹೊಣೆ ? ಈ ಅಪಕೀರ್ತಿ ಯಾರಿಗೆ ಬರುತ್ತದೆಯೋ ಅವನೇ ಅವೈದಿಕ (ವೇದ ಬಾಹಿರನು, ಉಭಯ ಲೋಕ ಭ್ರಷ್ಟ). ಇಲ್ಲಿಯೂ ಸಲ್ಲದವನು ಅಲ್ಲಿಯೂ ಸಲ್ಲದವನು," ಎಂದು ಅರ್ಜುನನು ಹೇಳಿದನು.

ಮರುಳೆ ಫಲುಗುಣ ಕೇಳು ಸೂರ್ಯನ
ಕಿರಣ ಹೊಲೆಯನ ಚರಿಸಿದರೆ ಹೊಲೆ
ಹೊರುವುದೇ ಸ್ನಾನದಲಿ ವಿಧಿಸಲು ಬಹುದೆ ನೋಡಿದನ
ಪರಮತತ್ತ್ವಜ್ಞಾನನಿಷ್ಠನ
ಚರಿತವೇ ಸುಚರಿತ್ರವಾತಂ
ಗಿರದು ಕೇಳು ಸುಕರ್ಮದುಷ್ಕರ್ಮಾದಿ ಗುಣಲೇಪ ॥೪೮॥

೪೮. "ಭ್ರಾಂತನಾದ ಅರ್ಜುನನೇ ಕೇಳು, ಸೂರ್ಯನ ಕಿರಣಗಳು ಅಸ್ಪೃಶ್ಯನಾದವನ ಮೇಲೆ (ಹೀನಕುಲದವನ ಮೇಲೆ) ಬಿದ್ದರೆ ಅದಕ್ಕೆ ಮಲಿನತೆ ಉಂಟಾಗುತ್ತದೆಯೇ? ಈ ಕಿರಣಗಳನ್ನು ನೋಡಿದವನಿಗೆ (ಅದೇ ಕಿರಣಗಳು ಮೈಮೇಲೆ ಬಿದ್ದ ಸ್ಪೃಶ್ಯನಿಗೆ) ಪ್ರಾಯಶ್ಚಿತ್ತವಾಗಿ ಸ್ನಾನ ಮಾಡಲು ಅಪ್ಪಣೆ ಮಾಡುತ್ತಾರೆಯೇ? ಶ್ರೇಷ್ಠ ತತ್ವಜ್ಞಾನಿ ಆದವನ ನಡೆವಳಿಕೆಯೇ ಸದಾಚಾರ. ಅಂಥ ಸುಜ್ಞಾನಿಗೆ ಪುಣ್ಯ ಪಾಪಗಳೇ ಮೊದಲಾದ ಗುಣಲಕ್ಷಣಗಳು ತಗುಲುವುದಿಲ್ಲ ತಿಳಿ" ಎಂದನು ಕೃಷ್ಣ.

ಕೊಂದೆ ನಾನೆನಗಾಯ್ತು ಪಾತಕ
ವೆಂದು ಮನದಲಿ ಮಱುಗುವಾತನ
ಬಂದಿಯಲಿ ಹೊಣೆಗೊಂಬವಾಹಂಕಾರ ಮಮಕಾರ
ಕಂದು ಕಲೆ ತನಗೆತ್ತಣದು ನಿ
ರ್ದ್ವಂದ್ವಕನು ಮೃತಜಾತ ತಾನ
ಲ್ಲೆಂದು ಕಂಡರವಂಗೆ ಪಾಪವಿಲೇಪವಿಲ್ಲೆಂದ ॥೪೯॥

೪೯. "ಕೊಂದವನು ನಾನು, ನನಗೆ ಪಾಪ ಬಂದಿತು, ಎಂದು ಮನಸ್ಸಿನಲ್ಲಿ ದುಃಖಿಸುವ, ಮದ ಮೋಹಗಳಿಗೆ ಒಳಗಾಗುವ ವ್ಯಕ್ತಿಯಲ್ಲಿನ ಅಹಂಕಾರ, ಮಮಕಾರಗಳೇ ಅದಕ್ಕೆ ಹೊಣೆಯಾಗುತ್ತವೆ. ಕಂದು ಕಲೆಗಳು ತನಗೆಲ್ಲಿಯದು? ನಾನು ದ್ವಂದ್ವವಿಲ್ಲದವನು, ಜನನ–ಮರಣ ತನಗಿಲ್ಲ ಎಂದು ತಿಳಿದರೆ ಅಂಥವನಿಗೆ ಯಾವ ಪಾಪ ಸ್ಪರ್ಶವೂ ಇಲ್ಲ" ಎಂದು ಕೃಷ್ಣನು ತಿಳಿಸಿದನು.

ಹರಿಯೆ ಚಿತ್ತಯಿಸೈಯಹಿಂಸಾ
ಪರಮಧರ್ಮವು ಎಂಬ ವಾಕ್ಯದ
ಸರಣಿ ಸಾರೋದ್ಧಾರವಲ್ಲಾ ಸಕಲದರುಶನಕೆ
ನೆರವಿಯಿನಿಬರ ತನ್ನವರ ಕೊರ
ಳರಿತದಲಿ ಕೊಕ್ಕರಿಸದಿರ್ದಡೆ
ನರಕದೊಳು ನೂಱೊಂದು ಕುಲ ಮುಳುಗಾಡದಿರದೆಂದ ॥೫೦॥

೫೦. ಕೃಷ್ಣನೇ ಆಲಿಸು, " 'ಅಹಿಂಸಾ ಪರಮೋಧರ್ಮಃ' (ಅಹಿಂಸೆಯೇ ಶ್ರೇಷ್ಠ ಧರ್ಮ) ಎಂಬ ಸೂಕ್ತಿಯಂತೆ ಸಮಸ್ತ ಧರ್ಮ ತತ್ವಗಳ ಮುಖ್ಯ ತತ್ವಸಾರವಾಗಿದೆ ಅಲ್ಲವೇ? ಆದರೆ, ನೆರೆದಿರುವ ಇಷ್ಟೊಂದು ಜನರ, ಆಪ್ತರ ಕೊಲೆಗೆ ಹೇಸದಿದ್ದರೆ ನನ್ನ ನೂರೊಂದು ತಲೆಮಾರುಗಳು ನರಕದಲ್ಲಿ ಬಿದ್ದು ಒದ್ದಾಡದೆ ಇರುವುದಿಲ್ಲ" ಎಂದು ಅರ್ಜುನನು ಹೇಳಿದನು.

ನಿರುತವರ್ಜುನ ಕೇಳಹಿಂಸಾ
ಪರಮಧರ್ಮದ ತತ್ಸ್ವರೂಪವ
ನೊರೆವೆನಾಲಿಸು ಸಚ್ಚಿದಾನಂದೈಕಘನವೆನಿಪ
ನಿರುಪಮಾತ್ಮನ ನಿಲವನಱಿಯದೆ
ನರಕಿ ಜಡನಾಜೀವವೆಂಬೀ
ತರಳತನವೇ ಹಿಂಸೆಯಱಿವಡಹಿಂಸೆ ಕೇಳೆಂದ ॥೫೧॥

೫೧. "ಶ್ರೇಷ್ಠವಾದ ಅಹಿಂಸೆಯೇ ಶ್ರೇಷ್ಠಧರ್ಮ ಎಂಬುದರ ನಿಜರೂಪವನ್ನು ಹೇಳುತ್ತೇನೆ, ದೃಢಮನಸ್ಸಿನಿಂದ ಕೇಳು ಅರ್ಜುನ, ಸತ್ಯಸ್ವರೂಪಿಯೂ, ಚಿನ್ಮಯನೂ, ಏಕೈಕನೂ ಆದ, ಆತ್ಮನ ಸ್ವರೂಪವನ್ನು ತಿಳಿಯದೆ ಜೀವಾತ್ಮನು ಜಡಸ್ವರೂಪನು ಎಂದು ತಿಳಿಯುವ ಬಾಲಿಶತನವೇ ಹಿಂಸೆ (ಜೀವಾತ್ಮನೂ ಪರಮಾತ್ಮನೇ ಎಂಬುದನ್ನು ನೀನು ತಿಳಿದಿಲ್ಲ ಎಂಬುದು ಭಾವ) ಈ ಬಾಲಿಶತನವನ್ನು ತೊರೆದು ಸತ್ಯವನ್ನು ತಿಳಿದರೆ ಅದೇ ಅಹಿಂಸೆ" ಎಂದನು.

ನೆರವಿ ಬೇಱಿಕೊಂದಿಲ್ಲ ಭೂತದ
ಹರಹು ಕರಣೇಂದ್ರಿಯದ ಸಂದಣಿ
ಮರುತ ಪಂಚಕ ಬುದ್ಧಿ ಕರ್ಮೇಂದ್ರಿಯದ ಕಾಲೆಣಿಕೆ
ನೆರೆಯಲೊಂದಾಗಿಹುದು ಕಲ್ಪನೆ
ಹರೆದು ಜೀವಭ್ರಾಂತಿ ಬೀತಡೆ
ಪರಮ ತಾನಿಹನಲ್ಲಿ ಕೊಲುವರೆ ಸಾವನಲ್ಲೆಂದ ॥೫೨॥

೫೨. "ಈ ಸೈನ್ಯ ಬೇರೆ ಯಾವುದೂ ಅಲ್ಲ. ಪಂಚಭೂತಗಳ ಸಾತ್ವಿಕಾಂಶದಿಂದ ಕೂಡಿದ ಐದು ಇಂದ್ರಿಯಗಳು ಐದು ವಾಯುಗಳು (ಮರುತಪಂಚಕ) ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ವಿಷಯಗಳು (ಒಂದಾಗಿ ಸೇರಿ ಸೂಕ್ಷ್ಮ ದೇಹವಾಗಿದೆ) ಆದರೆ, ಜೀವಾತ್ಮನನ್ನು ಆವರಿಸಿದ ಮಾಯೆ ಹೋದರೆ ಅಲ್ಲಿ ಶುದ್ಧ ಪರಬ್ರಹ್ಮನು ಇರುತ್ತಾನೆ. ಅವನನ್ನು ಕೊಲ್ಲಲು ಆಗುವುದಿಲ್ಲ ಅವನು ಸಾಯುವನೂ ಅಲ್ಲ" ಎಂದನು.

ಕರ್ಮವೇ ಹೂಡುವುದು ತನುವನು
ಕರ್ಮವೇ ಸಲಹುವುದು ಕಡೆಯಲಿ
ಕರ್ಮವೇ ಕಳಚುವುದು ಜೀವಭ್ರಮೆಯ ಬಾಹಿರರ
ಕರ್ಮ ತಾನೇನಾದಡಾಗಲಿ
ನಿರ್ಮಮತೆಯಲಿ ಮಾಡಿ ನಮ್ಮಲಿ
ನಿರ್ಮಿಸಲು ಕಲಿಪಾರ್ಥ ನೀ ನಿರ್ಲೇಪನಹೆಯೆಂದ ॥೫೩॥

೫೩. "ಕರ್ಮದಿಂದಲೇ ದೇಹ ಜನ್ಮ ತಾಳುತ್ತದೆ. ಕರ್ಮವೇ ದೇಹವನ್ನು ಸಲಹುತ್ತದೆ. ಕಡೆಯಲ್ಲಿ ಕರ್ಮವೇ ಜೀವಾತ್ಮನೇ ಬೇರೆಯೆಂದು ತಿಳಿಯುವ ಭ್ರಮಾಧೀನರಾದ ನೀತಿಬಾಹಿರರನ್ನು ಕಳಚಿ ಹಾಕುತ್ತದೆ. (ಅವರಲ್ಲಿ ಅದ್ವೈತಭಾವವನ್ನು ಮೂಡಿಸುತ್ತದೆ) ಆದ್ದರಿಂದ ಕರ್ಮ ಯಾವುದೇ ಆಗಲಿ, ಅದನ್ನು ನಿರ್ಮಮತೆ ಯಿಂದ (ಫಲಾಪೇಕ್ಷೆ ಇಲ್ಲದೆ) ಮಾಡಿ ಅದನ್ನು ನನ್ನಲ್ಲಿ ಅರ್ಪಿಸಿದರೆ ನೀನು ನಿರ್ಲೇಪನಾಗುತ್ತೀಯೆ. (ನಿನಗೆ ಪಾಪವು ಅಂಟುವುದಿಲ್ಲ.)" ಎಂದು ಹೇಳಿದನು.

ಅಸುರರಿಪು ಕೇಳಾದಿಯಲಿ ಸಂ
ಚಿಸಿದ ಕರ್ಮವು ಜೀವರನು ಬಂ
ಧಿಸಲು ತದ್ಗುಣದೋಷ ಕರ್ತೃವನೇಕೆ ತಾಗುವುದು
ಪಸರಿಸಿತಲಾ ಸ್ಮಾರ್ತ ಮಾರ್ಗ
ಪ್ರಸರ ಕೊಂದಡೆ ಪಾಪ ಪಾವನ
ವೆಸಗೆ ಪುಣ್ಯವೆನಿಪ್ಪ ಏವರಕ್ಕೇನು ನೆಲೆಯೆಂದ ॥೫೪॥

೫೪. ಕೃಷ್ಣನೇ ಕೇಳು, "ಹಿಂದಿನ ಜನ್ಮಗಳಲ್ಲಿ ಗಳಿಸಿದ ಕರ್ಮವು ಜೀವಾತ್ಮನನ್ನು ಬಂಧಿಸಿರುವುದಾದರೆ ಆ ಪಾಪಪುಣ್ಯಗಳು (ಗುಣ ದೋಷಗಳು) ಕರ್ತೃವನ್ನು (ಆತ್ಮನನ್ನು) ಏಕೆ ಬಂಧಿಸುತ್ತವೆ ? ಕೊಲ್ಲುವ ಕಾರ್ಯ ಮಾಡಿದರೆ ಪಾಪ, ಶುಭ ಕಾರ್ಯ ಮಾಡಿದರೆ ಪುಣ್ಯ ಎಂದು ಸ್ಮೃತಿಗಳಲ್ಲಿ ಹೇಳಿದ ಪ್ರಸಿದ್ಧ ಎನಿಸುವ ವಿಚಾರಗಳಿಗೆ ಏನು ಬೆಲೆಯಿದೆ" ಎಂದು ಅರ್ಜುನನು ಹೇಳಿದನು..

ಸುಕೃತ ದುಷ್ಕೃತವೆಂಬವೇ ಬಾ
ಧಕವು ಜೀವರಿಗೀಯಹಂಕೃತಿ
ವಿಕಳತೆಗೆ ತಾ ಬೀಜ ಜನ್ಮದ ಚುಟ್ಟುಮುರಿಗಳಿಗೆ
ಸಕಲಕರ್ತೃತ್ವಾದಿ ಭೋಕ್ತೃ
ತ್ವಕವಿದಾತ್ಮಂಗಿಲ್ಲ ಪಿತ್ತಾ
ಧಿಕನು ತಿರುಗುತ ಲೋಕ ತಿರುಗುವುದೆಂಬ ತೆಱನಂತೆ ॥೫೫॥

೫೫. "ಜೀವಿಗಳಿಗೆ ಪುಣ್ಯಕಾರ್ಯ – ಪಾಪಕಾರ್ಯಗಳೆಂಬ ಭಾವನೆಯೇ ವಿಘ್ನಕಾರಿಯಾದುದು. ಜನ್ಮಾಂತರಗಳ ಜೂಟಾಟಕ್ಕೆ ಈ ಅಹಂಕಾರ ಗುಣ ಅರೆಕೊರೆಗಳಿಗೆ ಕಾರಣವಾಗುತ್ತದೆ. ಸಮಸ್ತ ಕರ್ಮಗಳ ಮಾಡುವಿಕೆ ಮೊದಲಾದ ಕರ್ಮಗಳ ಫಲವನ್ನು ಅನುಭವಿಸುವಿಕೆ ಆತ್ಮನಿಗೆ ಇರುವುದಿಲ್ಲ. ಪಿತ್ತ ಏರಿದವನಿಗೆ ತಲೆ ಸುತ್ತು ಬಂದಾಗ ಇಡೀ ಜಗತ್ತು ತಿರುಗುತ್ತಿದೆ ಎಂದು ಭ್ರಮಿಸಿದ ತೆರನಂತೆ ಇದು."

ಮರುಳೆ ಫಲುಗುಣ ಕೇಳು ಸಚರಾ
ಚರವೆನಿಪ ಜಗವೆನ್ನ ಲೀಲಾ
ಚರಿತದಲಿ ತೋಱುವುದು ಹರೆವುದು ನನ್ನ ನೇಮದಲಿ
ನಿರುತ ನೀ ಕೇಳುವರೆ ತಿರ್ಯಕ್
ನರಸುರಾದಿಗಳೆಂಬ ಸಚರಾ
ಚರವಿದಾನಲ್ಲದೆ ವಿಚಾರಿಸಲನ್ಯವಿಲ್ಲೆಂದ ॥೫೬॥

೫೬. "ಹುಚ್ಚು ಅರ್ಜುನನೇ ಕೇಳು, ಸ್ಥಾವರ ಜಂಗಮ ವಾಗಿರುವ ಜಗತ್ತೆಲ್ಲಾ ನನ್ನ ಲೀಲಾ ವಿನೋದದ ಅಂಗವಾಗಿ, ನನ್ನ ಅಪ್ಪಣೆಯಂತೆ ಸೃಷ್ಟಿಯಾಗುತ್ತದೆ, ಅಂತೆಯೇ ನಾಶವಾಗುತ್ತದೆ (ಮರೆಯಾಗುತ್ತದೆ). ಸತ್ಯಸ್ಥಿತಿಯನ್ನು ನೀನು ಕೇಳುವುದಾದರೆ ಪ್ರಾಣಿವರ್ಗ ಮನುಷ್ಯವರ್ಗ ದೇವವರ್ಗ ಮೊದಲಾದ ಸಮಸ್ತ ಸ್ಥಾವರ ಜಂಗಮ ಜಗತ್ತು ನಾನೇ ಆಗಿದ್ದೇನೆ. ವಿಚಾರ ಮಾಡಿ ನೋಡಿದರೆ ನಾನೇ ಹೊರತು ಬೇರೊಂದಿಲ್ಲ."

ಜಗದೊಳಾನೇ ಚರಿಸುವೆನು ತ
ಜ್ಜಗವಿದೆಲ್ಲವು ನನ್ನ ಮಾಯೆಯೊ
ಳೊಗೆದು ತೋಱಿಸಿ ಸುಳಿಸೆ ಸುಳಿವುದು ಹಿಡಿಯಲಡಗುವುದು
ಮಗುವುತನದೊಳು ಕೂಡಿ ಮೆಱೆವುದು
ಜಗವದಲ್ಲದೆ ನಿಜವ ಬೆರಸುವ
ವಿಗಡರಿಗೆ ಪರತತ್ವ ಚಿನುಮಯರೂಪ ತಾನೆಂದ ॥೫೭॥

೫೭. "ಸಮಸ್ತ ಲೋಕವನ್ನು ನಾನೇ ವ್ಯಾಪಿಸಿದ್ದೇನೆ. ಈ ಜಗತ್ತೆಲ್ಲ ನನ್ನ ಮಾಯೆಯಿಂದ ಜನಿಸಿದಲ್ಲಿ ಜನಿಸಿ, ಸುಳಿಸಿದಲ್ಲಿ ಸುಳಿಯುತ್ತದೆ. (ಹರಡುತ್ತದೆ) ನಾನು ಹಿಡಿದರೆ ನನ್ನ ಹಿಡಿಯಲ್ಲಿ ಅಡಗುತ್ತದೆ. ಮುಗ್ಧಭಾವದಲ್ಲಿ ಕೂಡಿದಾಗ ಈ ಜಗತ್ತು ವಿಜೃಂಭಿ ಸುತ್ತದೆ. ಸತ್ಯಾನ್ವೇಷಣೆ ಮಾಡಿ ನನ್ನನ್ನು ಸೇರುವ ಸಾಹಸಿಗಳಿಗೆ ಪರತತ್ವದ ಚಿನ್ಮಯ ರೂಪ ನಾನೇ ಆಗಿರುತ್ತೇನೆ."

ಬೀಸಿದರೆ ಸಿಲುಕುವರು ಮಾಯಾ
ಪಾಶದೊಳಹಂಕಾರಿಗಳು ತ
ದ್ದೇಶಕಾಲಕ್ರಿಯೆಗಳಲಿ ನಿರ್ವಾಹವನು ಬೆದಕಿ
ಬೇಸಱುವರಂತಿರಲಿ ಮಾಯಾ
ವೈಸಿಕದ ಸಮ್ಮೋಹನದ ಕಾ
ಳಾಸವಱಿವವರೆನ್ನನಱಿವರು ಪಾರ್ಥ ಕೇಳೆಂದ ॥೫೮॥

೫೮. "ನಾನು ಮಾಯಾಪಾಶವನ್ನು ಹರಡಿದರೆ ಅದರಲ್ಲಿ ಅಹಂಕಾರಿಗಳು (ಗರ್ವಿಗಳು) ಸಿಕ್ಕ ಹಾಕಿಕೊಳ್ಳುತ್ತಾರೆ. ಆಯಾ ದೇಶ ಕಾಲ ವರ್ತಮಾನಗಳಲ್ಲಿ ನನ್ನ ಪಾಲನೆಯ ಕಾರ್ಯವನ್ನು ಪರಿಕಿಸಿ ಆಯಾಸಗೊಳ್ಳುತ್ತಾರೆ. ಆ ವಿಚಾರ ಒತ್ತಟ್ಟಿಗಿರಲಿ. ಮಾಯಾಜಾಲ ವಿದ್ಯೆಯ ಆಕರ್ಷಣೆಯ ನೃತ್ಯಗತಿಯನ್ನು ಅರಿತವರು ನನ್ನ ಯಥಾರ್ಥ ಸ್ವರೂಪವನ್ನು ತಿಳಿಯುತ್ತಾರೆ. ಪಾರ್ಥ" ಎಂದನು ಕೃಷ್ಣ.

ಏಕನಾತ್ಮನನಂತನಚಲನ
ಶೋಕನದ್ವಯನಮಲನಭವನ
ಲೋಕನಿಸ್ಪೃಹನಮಿತನಕ್ರಿಯನಹತನಭ್ರಮನು
ಲೋಕಗತಿ ಮಾಯಾವಿಲಾಸ ವಿ
ವೇಕಿಗಳಿಗಿದು ಬಯಲು ಫಲುಗುಣ
ಸಾಕು ಗರ್ವವ ಬೀಳುಕೊಡು ಸೆಳೆ ಶರವ ಹಿಡಿ ಧನುವ ॥೫೯॥

೫೯. "ಶ್ರೇಷ್ಠನಾದ ಆತ್ಮನು ಒಬ್ಬನೇ. ಅಂತವಿಲ್ಲದವನು ದುಃಖರಹಿತನು, ಎರಡಲ್ಲದವನು, ಪವಿತ್ರ, ಜನ್ಮರಹಿತ, ಯಾವ ಲೋಕವನ್ನೂ ಆಸೆಪಡದವನು, ಆಸೆ ಇಲ್ಲದವನು, ಅಪಾರನು, ಯಾವ ಕ್ರಿಯೆಯನ್ನು ಮಾಡದವನು, ಸಾವಿಗೆ ಗುರಿಯಾಗದವನು, ಭ್ರಮೆಯಿಲ್ಲದವನು. ಲೋಕದ ಸ್ವರೂಪವೆಲ್ಲವು ಮಾಯೆಯ ವಿಲಾಸ ಎಂಬ ಅರಿವುಳ್ಳ ಜ್ಞಾನಿಗಳಿಗೆ ಇದು ಕೇವಲ ಶೂನ್ಯ. ಆದ್ದರಿಂದ ಅರ್ಜುನನೇ, ನಿನ್ನ ಅಹಂ ಅನ್ನು ದೂರ ಮಾಡು, ಬತ್ತಳಿಕೆಯಿಂದ ಬಾಣ ತೆಗೆ, ಬಿಲ್ಲು ಹಿಡಿ, ಗುರಿ ಹೂಡು ಎಂದರೆ ಯುದ್ಧಕ್ಕೆ ಸಜ್ಜಾಗು" ಎಂದನು.

ಜಡನಲಾ ನರನೇಸ ತಿಳುಹಲು
ಬಿಡ ವಿಕಾರವನೆಂದು ಖಾತಿಯ
ಹಿಡಿಯಲಾಗದು ಸಲುಗೆಗಂಜಿಕೆಯೇಕೆ ಬಿನ್ನಹವು
ಬಿಡು ಜಗೌಘಾನೀಕ ನಿಮ್ಮಡಿ
ಯೊಡಲೊಳಗಣಿತವಿಹವು ಗಡ ಮಿಗೆ
ನುಡಿಯಲಮ್ಮೆನು ತತ್ಸ್ವರೂಪವ ತೋಱಬೇಕೆಂದ ॥೬೦॥

೬೦. "ಕೃಷ್ಣ, ಎಷ್ಟು ಹೇಳಿದರೂ ಈ ಅರ್ಜುನನು ಆಲಸ್ಯ ಭಾವವನ್ನು ಬಿಡಲಾರದವನು, ಇವನು ಮೂಢನೇ ಸರಿ ಎಂದು ನನ್ನ ಮೇಲೆ ಕೋಪ ಮಾಡಿಕೊಳ್ಳಲಾಗದು. ನಿನ್ನೊಡನೆ ಸಲಿಗೆಗೆ ಹೆದರಿಕೆ ಏಕೆ! ನನ್ನ ಕೋರಿಕೆಯಿದು– ಸಮಸ್ತ ಜಗತ್ತುಗಳ ಪರಿವಾರವೇ ನಿಮ್ಮ ಒಡಲಲ್ಲಿ ಅಡಗಿದೆ. ಅವು ಅನಂತವಾಗಿವೆ. ಹೆಚ್ಚಿಗೆ ಹೇಳಲು ಶಕ್ತನಲ್ಲ. ನಿಮ್ಮ ನಿಜ ಸ್ವರೂಪವನ್ನು ತೋರಿಸಬೇಕು" ಎಂದು ಅರ್ಜುನನು ಹೇಳಿದನು.

ಈ ದಿವಿಜರೀ ಚಂದ್ರಸೂರಿಯ
ರೀ ದಿಶಾವಳಿಯೀ ಗಗನವೀ
ಮೇದಿನೀತಳವೀ ಸಮೀರಣನೀ ಜಲಾನಲರು
ಈ ದನುಜರೀ ಮನುಜರೀ ನೀ
ನಾದಿಯಾಗಿಹ ಹರಹು ನಿನ್ನ ವಿ
ನೋದರೂಪಿನ ನಿಱುಗೆಯನು ನೀ ತೋಱಬೇಕೆಂದ ॥೬೧॥

೬೧. "ಈ ದೇವತೆಗಳು, ಈ ಚಂದ್ರ ಸೂರ್ಯರು, ಈ ದಿಕ್ಕುಗಳು, ಈ ಆಕಾಶ, ಈ ಭೂಮಂಡಲ, ಈ ಮಾರುತ, ಈ ನೀರು, ಬೆಂಕಿ, ಈ ರಾಕ್ಷಸರು (ಅಸುರರು) ಈ ಮಾನವರು ಇವರಿಗೆಲ್ಲ ಕಾರಣ ಪುರುಷನಾಗಿರುವ ನಿನ್ನ ವ್ಯಾಪ್ತಿಯ ಮತ್ತು ನಿನ್ನ ಲೀಲಾ ವಿನೋದ ಸ್ವರೂಪದ ಒಳವಿನ್ಯಾಸವನ್ನು ನೀನು ತೋರಿಸಬೇಕು" ಎಂದನು.

ಹರೆದು ಮೋಹಿಸುವೀ ಚರಾಚರ
ನೆರೆದು ನಿಮ್ಮಯ ರೋಮಕೂಪದ
ಹೊರೆಯೊಳಗೆ ಹೊಳೆದಾಡುತಿಹುದೆಂಬಗ್ಗಳಿಕೆಗಳಿಗೆ
ಹುರುಳೆನಿಪ ಹೇರಾಳದಂಗದ
ಸಿರಿಯ ತೋಱೈ ಕೃಷ್ಣ ನಿರ್ಮಲ
ಪರಮತತ್ವವನೊಲ್ಲೆ ನಿಮ್ಮಯ ಭಕ್ತಿ ಸಾಕೆಂದ ॥೬೨॥

೬೨. ಅರ್ಜುನನು "ವ್ಯಾಪಿಸಿ ಹೊಳೆದು ಆಕರ್ಷಿಸುವ ಈ ಚರಾಚರಗಳು, ನಿಮ್ಮ ರೋಮ ಕೂಪದ ಸಮೀಪದಲ್ಲಿ ಹೊಳೆ ದಾಡುತ್ತಿರುವುದು ಎಂಬ ಹಿರಿಮೆಗೆ ನೆಲೆಯಾಗಿರುವ, ಅಪಾರವಾದ ಶಾರೀರಕ ವೈಭವದ ಸಿರಿಯನ್ನು ತೋರಿಸು. ಕೃಷ್ಣನೆ, ನಿರಾಕಾರವಾದ ಶುದ್ಧ ಅಧ್ಯಾತ್ಮ ತತ್ವ ಬೇಡ. ನಿನ್ನ ಸಾಕಾರ ರೂಪವಾದ ಭಕ್ತಿ ನನಗೆ ದೊರೆತರೆ ಅಷ್ಟೆ ಸಾಕು" ಎಂದನು.

ದಾಸನಾನೆನಗಮಲಮೂರ್ತಿವಿ
ಲಾಸವನು ತೋಱುವುದು ಸಲಹುವು
ದೈಸಱವನ್ನೈ ತಾನು ಸಮ್ಯಗ್‌ಜ್ಞಾನಭಾಜನಕೆ
ಮೀಸಲಳಿಯದ ಮಿಕ್ಕ ಬಯಕೆಯ
ಪಾಶ ತಾಗದ ನಿನ್ನ ಲೀಲೆಯ
ಭಾಸುರ ಶ್ರೀಮೂರ್ತಿಯನು ಮೈದೋಱಬೇಕೆಂದ ॥೬೩॥

೬೩. "ನಿನಗೆ ನಾನು ಭಕ್ತ. ನನಗೆ ನಿನ್ನ ಶ್ರೇಷ್ಠ ಸ್ವರೂಪದ ಲೀಲೆಯನ್ನು ತೋರಿಸಿ ಕಾಪಾಡುವುದು. ಪರಿಪೂರ್ಣ ಜ್ಞಾನ ತಿಳಿಯಲು ನಾನು ಎಷ್ಟರವನು? ಪರಿಪೂರ್ಣ ಜ್ಞಾನ ತಿಳಿಯಲು ಪವಿತ್ರತೆಗೆ ಭಂಗಬಾರದ ಲೋಕದ ಇತರ ಸಾಂಸಾರಿಕ ಆಸೆಗಳ ಬಂಧನಕ್ಕೆ ಒಳಗಾಗದ ನಿನ್ನ ಜಾಜ್ವಲ್ಯಮಾನ ಮಂಗಳ ಸ್ವರೂಪವನ್ನು ತೋರಿಸಬೇಕು" ಎಂದು ಅರ್ಜುನನು ಹೇಳಿದನು.

ಆದಡರ್ಜುನ ನೋಡೆನುತ ಕಮ
ಲೋದರನು ಕೈಕೊಂಡನಗ್ಗದ
ನಾದಿಪುರುಷ ಶ್ರೀನಿಜವ ವಿಶ್ವಾತ್ಮಕಾಕೃತಿಯ
ವಾದಿಸುವ ಷಟ್ತರ್ಕಗಿರ್ಕದ
ಭೇದ ಕೊಳ್ಳದ ಸಕಲ ಲೋಕದ
ಬೀದಿ ವಿಸಟಂಬರಿವ ವಿಮಲ ವಿರಾಟ ರೂಪವನು ॥೬೪॥

೬೪. "ಹಾಗಾದರೆ, ಅರ್ಜುನ, ನೋಡು" ಎನ್ನುತ್ತ ಶ್ರೇಷ್ಠ, ಆದಿರಹಿತ, ಮಹಿಮಾನ್ವಿತ ಪುರುಷನಾದ ಕೃಷ್ಣನು, ಮಂಗಳಕರ ವಾದ ಸತ್ಯ ಸ್ವರೂಪವನ್ನು, ಸಕಲ ವಿಶ್ವಗಳನ್ನು ಒಳಗೊಂಡ ಬ್ರಹ್ಮಾಂಡ ನಾಯಕನ ವಿರಾಟ್ ಸ್ವರೂಪವನ್ನು ಸತ್ಯಾನ್ವೇಷಣೆಗಾಗಿ ಚರ್ಚಿಸುವ ಸಾಂಖ್ಯ, ಯೋಗ, ನ್ಯಾಯ ವೈಶೇಷಿಕ, ಮೀಮಾಂಸ, ವೇದಾಂತವೆಂಬ ಆರು ಶಾಸ್ತ್ರಗಳ ವಾದಸರಣಿಯ ವಿಭೇದಕ್ಕೆ ಒಳಗಾಗದ (ಗ್ರಹಿಸಲಾಗದ್ದು) ಎಲ್ಲ ಲೋಕಗಳಲ್ಲೂ ಅಡೆತಡೆ ಯಿಲ್ಲದೆ ಸ್ವಚ್ಛಂದವಾಗಿ ವಿಹರಿಸುವ (ಸರ್ವಾಂತರ್ಯಾಮಿ ಯಾದ) ನಿರ್ಮಲ ವಿಶ್ವರೂಪವನ್ನು ಧರಿಸಿದನು.

ಬಿಳಿದು ಕರಿದೆಂಬಾಱು ವರ್ಣದ
ಹೊಲಬು ಹೊದ್ದದ ಸೂರ್ಯಕೋಟಿಯ
ಹೊಳಹು ನಖದೀಧಿತಿಯ ಹೋಲದ ನಿಜದ ಹೊಸಪರಿಯ
ಅಳವಿನಳತೆಯ ಜಗದ ವಾರ್ತೆಯ
ಸುಳಿವು ಸೋಂಕದ ಸಕಲ ಲೋಕ
ಪ್ರಳಯ ಕಾರಣ ತೆಗೆದನಗ್ಗದ ವಿಶ್ವರೂಪವನು ॥೬೫॥

೬೫. ಬಿಳಿ, ಕಪ್ಪು, ಹಳದಿ, ಹಸುರು, ಕೆಂಪು, ನೀಲಿ ಎಂಬ ಆರು ಬಣ್ಣಗಳಿಂದ ಕೂಡಿದ ತನ್ನ ನೆಲೆಯನ್ನು ಕಾಣಿಸದ ಕೋಟಿ ಸೂರ್ಯನ ತೇಜಸ್ಸು, ಆತನ ಉಗುರಿನ ಕಾಂತಿಗೆ ಸರಿಗಟ್ಟುತ್ತಿರಲಿಲ್ಲ. ಅವನ ತೇಜಸ್ಸು ನಿಜವಾಗಿ ಹೊಸರೀತಿಯದೇ ಆಗಿತ್ತು. ತನ್ನ ಸಾಮರ್ಥ್ಯದ ಪ್ರಮಾಣವನ್ನು ಅಳತೆಗೆಟುಕಿಸದ, ತನ್ನ ಲೀಲಾ ವಿಲಾಸವನ್ನೂ ಜಗತ್ತಿನ ವ್ಯಾಪಾರದ ಸುಳಿವಿಗೆ ಸಿಲುಕಿಸದ ಸಮಸ್ತ ಲೋಕಗಳ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಕರ್ತನಾದ ಕೃಷ್ಣನು ತನ್ನ ಶ್ರೇಷ್ಠ ವಿಶ್ವರೂಪವನ್ನು ಹೊರಕಾಣಿಸಿದನು.

ಕಾಣರುಳಿದವರೀತನೊಬ್ಬನ
ಕಾಣಿಕೆಗೆ ಕೌತುಕವ ಕಱೆದನು
ಶೋಣಿತಾಮಲಬಹಳತೇಜದ ಹೊದಱ ಹೊಯಿಲಿನಲಿ
ಕಾಣಲಱಿಯವನಂತವೇದ
ಶ್ರೇಣಿ ಶಿವಶಿವ ರಾಯ ಪಾರ್ಥನ
ಜಾಣತನವೆಂತುಟೊ ವಿರೂಪನ ರೂಪ ಸೆಱೆವಿಡಿದ ॥೬೬॥

೬೬. ಉಳಿದವರು ಯಾರೂ ಕಾಣಲಾಗದಂತೆ, ಅರ್ಜುನ ನೊಬ್ಬನಿಗೆ ಕುತೂಹಲ ತಣಿಸುವಂತೆ, ಕೆಂಪಾದ ನಿರ್ಮಲವಾದ ಅಪಾರ ತೇಜೋರಾಶಿಯನ್ನು ಹರಡಿ, ಅಚ್ಚರಿಯ ನೋಟವನ್ನು ತೋರಿಸಿದನು. ಅನಂತ ಕೋಟಿ ವೇದ ಸಮೂಹಗಳು ಆ ಪರಮಾತ್ಮನ ರೂಪವನ್ನು ತಿಳಿಯಲಾರವು. ಅಂಥ ರೂಪರಹಿತ ನಾದವನನ್ನು ಸಾಕಾರ ರೂಪದಲ್ಲಿ ಕಾಣಿಸಿಕೊಳ್ಳುವಂತೆ ಮಾಡಿದ ಅರ್ಜುನನ ಕೌಶಲವನ್ನು ಎಷ್ಟೆಂದು ಹೇಳೋಣ !

ಉಬ್ಬಿದನು ಹರುಷದಲಿ ಕಂಗಳ
ಗಬ್ಬ ಮುಱಿದುದು ಮದದ ನಿಗುರಿನ
ಹಬ್ಬುಗೆಯ ಹೊಲಬಳಿಯೆ ನಾಲಗೆಯುಡುಗೆ ಹೆಡತಲೆಗೆ
ಸಬ್ಬಗತನೈ ಶಿವಶಿವಾ ಬಲು
ಮಬ್ಬಿನಲಿ ಮುಂದಱಿಯದೆನ್ನಯ
ಕೊಬ್ಬನೇವಣ್ಣಿಸುವೆನೆನುತಡಿಗಡಿಗೆ ಬೆಱಗಾದ ॥೬೭॥

೬೭. ವಿಶ್ವರೂಪ ಕಂಡ ಕಣ್ಣುಗಳಲ್ಲಿ ಸಂತೋಷ ಉಕ್ಕಿ, ಅರ್ಜುನನು ಹಿಗ್ಗಿದನು. ಅವನ ಕಣ್ಣುಗಳಲ್ಲಿದ್ದ ಅಹಂಕಾರದ ನೋಟ. ಗರ್ವ ನಾಶವಾಯಿತು. ಅವನ ಮದದ ಹಬ್ಬುಗೆ ದಿಕ್ಕೆಟ್ಟಿತು. ನಾಲಗೆ ತಲೆಯ ಹಿಂಭಾಗಕ್ಕೆ ಸೇರಿಕೊಂಡು ಬಿಟ್ಟಿತು. (ಮಾತು ಬಾರದಾಯಿತು.) ಸರ್ವಗತನು ನೀನು (ಎಲ್ಲರಲ್ಲೂ ಅಡಗಿರುವ ಸರ್ವಾಂತರ್ಯಾಮಿ) ಅಯ್ಯೋ, ಕೇವಲ ಅಜ್ಞಾನದಲ್ಲಿ ಮುಂದೇನು ಎಂದು ತಿಳಿಯದೆ ಇದ್ದ ನನ್ನ ಅಹಂಕಾರವನ್ನು ಏನೆಂದು ಬಣ್ಣಿಸಲಿ ಎನ್ನುತ್ತ ಕೃಷ್ಣನ ವಿಶ್ವರೂಪ ಕಾಣುತ್ತ ಪದೇ ಪದೇ ಅಚ್ಚರಿಗೊಳ್ಳುತ್ತಿದ್ದನು.

ಇದೆ ನಿರಂಜನತತ್ವ ಸಾಮ್ರಾ
ಜ್ಯದ ಸಘಾಟಿಕೆ ನಾವು ಕಡು ಮೂ
ರ್ಖದಲಿ ಮೈಮಱೆದೆವು ಶರೀರದ ಬಂಧುಕೃತ್ಯದಲಿ
ಯದುಗಳನ್ವಯದಾತ ನಮಗೊ
ಳ್ಳಿದನು ಸೋದರಭಾವನೆಂದೇ
ಮದಮುಖದಿ ಕಡುಗೇಡ ಕೆಟ್ಟೆನು ಶಿವಶಿವಾಯೆಂದ ॥೬೮॥

೬೮. "ಇದೇ ಪರಮಾತ್ಮ ತತ್ವ ಸಾಮ್ರಾಜ್ಯದ ಮಹಿಮೆ (ಅತಿಶಯತೆ) ನಾವು ಅತಿದಡ್ಡತನದಿಂದ, ದೇಹ ಮೋಹದ ಬಂಧು ಪ್ರೇಮದಲ್ಲಿ ಎಚ್ಚರ ತಪ್ಪಿದೆವು. ಯದುವಂಶದಲ್ಲಿ ಜನಿಸಿದ ಕೃಷ್ಣನು ನಮ್ಮ ಪಾಲಿಗೆ ಹಿತಕಾರಿ, ಸೋದರ ಭಾವನು ಎಂಬುದಾಗಿ ತಿಳಿದು ಗರ್ವಿಷ್ಟನಾಗಿ ಅತಿದುಷ್ಟ ಕಾರ್ಯ ಮಾಡಿ ಕೆಟ್ಟೆ. ಶಿವಶಿವಾ" ಎಂದನು ಅರ್ಜುನ.

ಪರುಷ ಕಲ್ಲೆಂದಳುಕಿ ಸುರತರು
ಮರನು ತೆಗೆಯೆಂದಮರಧೇನುವ
ಪರರ ಮನೆಯಲಿ ಮಾಱಿ ಚಿಂತಾಮಣಿಗೆ ಕೈದುಡುಕಿ
ಹರಳು ಟೆಕ್ಕೆಯಿದೆಂಬ ಪಾಪಿಗೆ
ಪರಮಗುರು ನಾನಾದೆನೈ ಮುರ
ಹರನ ಮೈದುನನೆಂದು ಗರ್ವಿಸಿ ಕೆಟ್ಟೆನಕಟೆಂದ ॥೬೯॥

೬೯. "ಪರುಷ ಮಣಿಯನ್ನು ಸಾಮಾನ್ಯ ಕಲ್ಲೆಂದು ಉಪೇಕ್ಷಿಸಿ, ಕಲ್ಪವೃಕ್ಷವನ್ನು ಸಾಧಾರಣ ಮರವೆಂದು ತಿರಸ್ಕರಿಸಿ, ಕಾಮಧೇನು ವನ್ನು ಸಾಮಾನ್ಯ ಗೋವೆಂದು ಕಂಡವರಿಗೆ ಮಾರಿ, ಚಿಂತಾಮಣಿ ಎಂಬ ಇಷ್ಟಾರ್ಥ ಸಿದ್ಧಿಯ ಮಣಿಯನ್ನು ವಿಚಾರ ಮಾಡದೆ ಇದು ಕಲ್ಲಿನ ಚೂರು, ಗಾಜಿನ ಮಣಿ ಎಂದು ಭಾವಿಸುವ, ಪಾಪಿಗಳಲ್ಲಿ ಪರಮ ಪಾಪಿ ನಾನಾದೆ. ಕೃಷ್ಣನ ಮೈದುನ (ನಂಟನು) ಎಂಬ ಅಹಂಕಾರದಿಂದ ಅಯ್ಯೋ ಕೆಟ್ಟೆ" ಎಂದುಕೊಂಡನು ಅರ್ಜುನ.

ನೊರಜು ತಾನೆತ್ತಲು ಮಹತ್ವದ
ಗಿರಿಯದೆತ್ತಲು ಮಿಂಚುಬುಳುವಿನ
ಕಿರಣವೆತ್ತಲು ಹೊಳಹಿದೆತ್ತಲು ಕೋಟಿ ಸೂರಿಯರ
ನರಮೃಗಾಧಮನೆತ್ತಲುನ್ನತ
ಪರಮತತ್ವವಿದೆತ್ತಲಕಟಾ
ಮರುಳು ನನ್ನವಗುಣವದಾವುದ ಕಡೆಗೆ ಹಲುಬುವೆನು ॥೭೦॥

೭೦. ಸಣ್ಣ ಕೀಟ ನಾನೆಲ್ಲಿ? ದೊಡ್ಡ ಪರ್ವತವಾದ ಅವನೆಲ್ಲಿ? ಮಿಣುಕು ಹುಳುವಿನ ಅಲ್ಪಕಾಂತಿ ಎತ್ತ ? ಕೋಟಿಸೂರ್ಯರ ಪ್ರಕಾಶ ಅದೆತ್ತ ? ನರ ಪ್ರಾಣಿಗಳಲ್ಲೇ ನೀಚನಾದವನು ನಾನೆಲ್ಲಿ? ಅತಿ ಶ್ರೇಷ್ಠ ಪರಮಾತ್ಮ ಸ್ವರೂಪಿ ಆದ ಆತನೆಲ್ಲಿ? ಅಯ್ಯೋ ನನ್ನ ದುರ್ಗುಣಗಳಲ್ಲಿ ಯಾವಗುಣಕ್ಕಾಗಿ ಚಿಂತಿಸಲಿ?

ಮೇಳ ಗಡ ನಮಗೀತನಲಿ ಭೂ
ಪಾಲಕರು ಗಡ ನಾವು ಸಾರಥಿ
ಯಾಳು ಗಡ ಹರಿ ನಾವು ವೀರರು ಗಡ ವಿಚಿತ್ರವಲ
ಮೇಲುಗಾಣದ ಪಾರ್ಥನೆಂಬೀ
ಕಾಳುಮೂಳನ ವಿಧಿಯನೇಪರಿ
ವೇಳುವೆನು ಹರಯೆನುತ ಕಂಗಳನೆವೆಗಳಲಿ ಬಿಗಿದ ॥೭೧॥

೭೧. ಸಾಮಾನ್ಯರಾದ ನಮಗೆ ಇವನ ಸ್ನೇಹವೇ? ನಾವು ರಾಜರಂತೆ ! ಕೃಷ್ಣ ನಮ್ಮ ಸೇವಕನಾದ ಸಾರಥಿ ಅಂತೆ ! ನಾವು ಕ್ಷತ್ರಿಯರೂ ಶೂರರು ಅಂತೆ ! ಇದು ವಿಚಿತ್ರವಲ್ಲವೇ ? ಸತ್ಯ ಸಂಗತಿ ತಿಳಿಯದ ಅರ್ಜುನನೆಂಬ ಈ ಹೀನ ಮಾನವನಾದ ನನ್ನ ಹಣೆಯಬರಹವನ್ನು ಯಾವ ರೀತಿಯಲ್ಲಿ ಹೇಳಿಕೊಳ್ಳಲಿ ಅಯ್ಯೋ ದೇವರೇ! ಎನ್ನುತ್ತ ಕಣ್ಣ ರೆಪ್ಪೆಗಳನ್ನು ಮುಚ್ಚಿಕೊಂಡನು.

ಅಡಿಗಡಿಗೆ ಕಣ್ದೆಱೆದು ಮುಚ್ಚುವ
ನಡಿಗಡಿಗೆ ಮೈಬೆದಱೆ ಬೆಱಗಹ
ನಡಿಗಡಿಗೆ ಮೆಯ್ಯೊಲೆವನುಬ್ಬಿದ ರೋಮಪುಳಕದಲಿ
ಅಡಿಗಡಿಗೆ ಮನ ನಲಿದು ಹೊಂಗುವ
ನಡಿಗಡಿಗೆ ಭಯಗೊಂಡು ಕರಗುವ
ನೊಡಲನವನಿಗೆ ಹರಹಿ ನಿಡುದೋಳುಗಳ ನೀಡಿದನು ॥೭೨॥

೭೨. ಮತ್ತೆ ಮತ್ತೆ ಕಣ್ಣು ಬಿಡುವನು ಮತ್ತೆ ಕಣ್ಣು ಮುಚ್ಚುವನು. ಪದೇ ಪದೇ ಮೈಬೆವರಿ ಅಚ್ಚರಿ ಹೊಂದುವನು. ಪುನಃ ಪುನಃ ಅಧಿಕ ರೋಮಾಂಚನದಲ್ಲಿ ತೂಗಾಡುವನು. ಬಾರಿ ಬಾರಿಗೂ ಮನಸ್ಸಿನಲ್ಲಿ ಹರ್ಷ ಉಕ್ಕಿ ಉಬ್ಬುವನು. ಇನ್ನೊಮ್ಮೆ ಮತ್ತೊಮ್ಮೆ ಭಯದಿಂದ ಕರಗಿಹೋಗುವನು. ವಿಹ್ವಲನಾಗಿ ದೇಹವನ್ನು ಭೂಮಿಗೆ ಚಾಚಿ ಎರಡು ಉದ್ದನೆ ತೋಳುಗಳನ್ನು ಚಾಚಿ ಒರಗಿದನು.

ಮುರಹರ ತ್ರಾಯಸ್ವ ಕರುಣಾ
ಕರ ಪರಿತ್ರಾಯಸ್ವ ಲಕ್ಷ್ಮೀ
ವರ ಪರಿತ್ರಾಯಸ್ವ ದನುಜಾಂತಕ ಪರಿತ್ರಾಹಿ
ಚರಣಭಜಕ ಕುಟುಂಬಕನೆ ಘನ
ದುರಿತ ವಿಪಿನ ಕೃಶಾನುವೇ ಭವ
ಹರ ನಿರೀಕ್ಷಿಸು ರಕ್ಷಿಸೆನ್ನನೆನುತ್ತ ಹೊರಳಿದನು ॥೭೩॥

೭೩. "ಮುರಾರಿಯೇ ರಕ್ಷಿಸು, ದಯಾಮಯನೆ ಕಾಪಾಡು, ಲಕ್ಷ್ಮೀಪತಿಯೆ ಸಲಹು, ರಾಕ್ಷಸ ಸಂಹಾರಕನೇ ಕಾಪಾಡು, ನಿನ್ನ ಪಾದ ಸೇವನೆ ಮಾಡುವ ಭಕ್ತರ ಕುಟುಂಬಕನೇ, ಘೋರ ಪಾಪಗಳೆಂಬ ಕಾಡಿಗೆ ದಾವಾಗ್ನಿ ಆದವನೇ, ಸಂಸಾರ ನಾಶಕನೇ ನನ್ನತ್ತ ನೋಡು, ನನ್ನನ್ನು ಕಾಪಾಡು" ಎನ್ನುತ್ತ ಅರ್ಜುನನು ಕೃಷ್ಣನ ಪಾದಗಳ ಮೇಲೆ ಹೊರಳಿದನು.

ದೇವ ಭಕ್ತಜನಾರ್ತಪಾಲಕ
ದೇವ ಬಹಳಕೃಪಾಮಹಾರ್ಣವ
ದೇವ ಸರ್ವೇಶ್ವರ ಸದಾತ್ಮಕ ಸಕಲ ನಿಷ್ಕಳನೆ
ಸೇವಕರಲಾರೈವರೇ ಸುಗು
ಣಾವಗುಣವನು ನಿಮ್ಮ ಭೃತ್ಯನ
ಭಾವ ಬೆಚ್ಚಿತು ವಿಶ್ವರೂಪವ ಬೀಳುಕೊಡಿಯೆಂದ ॥೭೪॥

೭೪. "ಭಕ್ತ ಜನರ ದುಃಖನಿವಾರಕನಾದ ದೇವನೆ, ಮಹಾ ಕಾರುಣ್ಯಸಾಗರನಾದ ದೇವನೆ, ಸಮಸ್ತ ದೇವಾಧಿ ದೇವತೆಗಳ ಒಡೆಯನೆ, ಸರ್ವಾತ್ಮವಾದವನೆ (ಸತ್‌ಸ್ವರೂಪಿಯೂ ಆತ್ಮ ರೂಪಿಯೂ ಆದವನೆ) ವಿಶ್ವದ ಎಲ್ಲ ಭಾಗಗಳನ್ನೂ ಒಳಗೊಂಡು ಸುಗುಣ ರೂಪನಾದವನೆ, ನಿರ್ಗುಣರೂಪಿ ಆದ ನೀನು ಸುಗುಣ ಅವಗುಣಗಳನ್ನು ಸೇವಕರಲ್ಲಿ ಅರಸುತ್ತೀಯಾ ನಿನ್ನ ಸೇವಕನಾದ ನನ್ನ ಮನ ದಿಗ್ಭ್ರಮೆಗೊಂಡಿದೆ. ನಿನ್ನ ವಿಶ್ವರೂಪವನ್ನು ಮರೆಮಾಡು" ಎಂದನು ಅರ್ಜುನ.

ಲೋಕವಜೆಯಲನಂತವೇದವು
ಮೂಕನಾದವು ಜೀಯ ಜಡನವಿ
ವೇಕಿ ಮಾನವ ಮಶಕವಿದು ನಿಮ್ಮಳತೆಗೈದುವುದೇ
ಸಾಕಿಕೊಳ್ಳೈ ಕೃಷ್ಣ ನೋಡಲು
ನೂಕದೆನ್ನೆವೆ ಸೀವುತಿವೆ ಕರು
ಣಾಕರನೆ ಕೈಗಾವುದೈ ಕೃಪೆಮಾಡಬೇಕೆಂದ ॥೭೫॥

೭೫. "ಸ್ವಾಮಿಯೆ ಜಗತ್ತಿಗೆ ತಿಳಿದಿರುವಂತೆ ನಿನ್ನನ್ನು ವೇದ ಕೋಟಿಗಳು ಹೊಗಳಿ ಹಾಡಿ ಸಾಕಾಗಿ ಮೌನವಾದವು. (ವೇದಾತೀತ ನೀನು) ಜಡನಾದ ಅವಿವೇಕಿಯಾದ ಮಾನವನೆಂಬ ಕ್ಷುದ್ರಜೀವಿ ಆದ ನಾನು ನಿಮ್ಮನ್ನು ಅರ್ಥ ಮಾಡಿಕೊಳ್ಳಲು ಶಕ್ಯವೆ ? ನನ್ನನ್ನು ಸಲಹಿಕೊ ಕೃಷ್ಣ, ನಿನ್ನ ವಿಶ್ವರೂಪ ನೋಡಲು ಸಾಧ್ಯವಾಗದು. ನನ್ನ ಮಾತನ್ನು ಪರಿಗಣಿಸು. ನನ್ನ ಕಣ್ಣು ರೆಪ್ಪೆಗಳು ಸೀದು ಹೋಗುತ್ತಿವೆ, ದಯಾಮಯನೆ ರಕ್ಷಿಸಬೇಕು, ಅನುಗ್ರಹಿಸಬೇಕು" ಎಂದನು ಅರ್ಜುನ.

ಎಳನಗೆಯ ಸಿರಿಮೊಗದ ಚೆಲುವಿನ
ಹೊಳೆಹೊಳೆವ ನಿಟ್ಟೆಸಳುಗಂಗಳ
ತೊಳಪ ಕದಪಿನ ಮಿಸುಪ ಕಾಂತಿಯ ಮಕರ ಕುಂಡಲದ
ಲಲಿತಕಂಠದ ಕೌಸ್ತುಭೋರ
ಸ್ಥಳದ ನಿಡುದೋಳುಗಳ ಕೋಮಲ
ತಳಿತ ಪೀತಾಂಬರದ ಮುನ್ನಿನ ರೂಪ ತೋಱಿಂದ ॥೭೬॥

೭೬. "ಮುಗುಳು ನಗೆಯ, ಸುಂದರ ವದನದ, ಚೆಲುವಾದ ಕಾಂತಿಯುಕ್ತವಾದ ಉದ್ದನೆಯ ಕಮಲದೆಸಳುಗಳಂಥ ಕಣ್ಣುಗಳುಳ್ಳ, ಪೊಳೆವ ಕೆನ್ನೆಯ, ಜ್ವಲಿಸುವ ಮಕರಕುಂಡಲವೆಂಬ ಕಿವಿಯಾ ಭರಣದ, ಸುಂದರವಾದ ಕೊರಳ, ಎದೆಯ ಮೇಲೆ ಶೋಭಿಸುವ ಕೌಸ್ತುಭ ರತ್ನದ, ಉದ್ದನೆಯ ತೋಳುಗಳ ಕೋಮಲವಾದ ಲಲಿತ ಪೀತಾಂಬರವನ್ನು ಉಟ್ಟ ನಿನ್ನ ಮೊದಲಿನ ಸ್ವರೂಪ ತೋರಿಸು" ಎಂದು ಕೃಷ್ಣನನ್ನು ಅರ್ಜುನ ಕೇಳಿಕೊಂಡನು.

ಅಳಕ ನಿಚಯದ ಕುಂಭಿನೊಸಲಿನ
ತಳಿತೆವೆಯ ನಿಡುಹುಬ್ಬುಗಳ ಕೋ
ಮಲ ಸುಮುಕ್ತಾಫಲಕೆ ಸೆಣಸುವ ದಂತಪಂಕ್ತಿಗಳ
ಲಲಿತಚುಬುಕದ ಚಾರುತರ ಕೆಂ
ದಳದ ಸುಳಿನಾಭಿಯ ಸವರ್ತುಳ
ವಿಳಸಿತೋರುದ್ವಯದ ಮುನ್ನಿನ ರೂಪ ತೋಱಿಂದ ॥೭೭॥

೭೭. "ಗುಂಪಾದ ಮುಂಗುರುಳಿನ, ಆನೆಯ ಮಸ್ತಕದಂಥ ಹಣೆಯ, ಕಣ್ಣು ರೆಪ್ಪೆಗಳ ಪಲ್ಲವಿಸಿದ ಕೂದಲಿನ, ವಿಶಾಲವಾದ ಹುಬ್ಬುಗಳ, ಮುತ್ತಿನ ಸಾಲುಗಳೊಡನೆ ಸ್ಪರ್ಧಿಸುವ ಹಲ್ಲಿನ ಸಾಲುಗಳ, ಮನೋಹರ ಗಲ್ಲದ, ಸುಂದರವಾದ ತಾವರೆ ಎಸಳಿನಂಥ ಸುಳಿ ಆಕಾರದ ಹೊಕ್ಕಳಿನ, ದುಂಡಾಗಿ ಚೆನ್ನಾಗಿರುವ ತೊಡೆಗಳಿಂದ ಕೂಡಿದ ನಿನ್ನ ಮೊದಲ ಸ್ವರೂಪವನ್ನು ತೋರಿಸು" ಎಂದನು.

ಪರಮಚಿನುಮಯ ನೀನು ಕರ್ಮದ
ಸರಣಿಯೆನ್ನದು ನೀ ಚರಾಚರ
ಭರಿತ ಭಾರಿಯ ವಿಶ್ವಮಯನವ್ಯಕ್ತನದ್ವಯನು
ನರನ ಮತಿಯಿದು ಮಂದಮತಿ ಗೋ
ಚರಿಸಲಱಿವುದೆ ದೇವ ಕರುಣಿಸು
ಕರುಣಿಸೈ ಮೈದೋಱು ತನ್ನೊಡನಾಡಿತನದನುವ ॥೭೮॥

೭೮. "ದಿವ್ಯಜ್ಞಾನ ಸ್ವರೂಪಿ ನೀನು, ಜನ್ಮಾಂತರಗಳನ್ನು ತಳೆಯುವ ಕರ್ಮ ಪರಂಪರೆ ನನ್ನದು, ನೀನು ಚೇತನಾಚೇತನಗಳನ್ನು ಆವರಿಸಿರುವ ಸಮಸ್ತ ಜಗತ್ತನ್ನು ಧರಿಸಿರುವವನು, ನಿರಾಕಾರನು, ಅದ್ವೈತನು, ಈ ಅರ್ಜುನನ ಬುದ್ಧಿ ಮಂದವಾದುದು. ದೇವ ನಿನ್ನನ್ನು ಕಾಣಲು ನನಗೆ ಶಕ್ಯವೇ ? ಅನುಗ್ರಹಿಸು, ಕೃಪೆ ಮಾಡು ನನ್ನ ಸ್ನೇಹದ ಒಡನಾಟದಲ್ಲಿದ್ದ ಸ್ವರೂಪದಲ್ಲೇ ಕಾಣಿಸಿಕೋ" ಎಂದು ಪ್ರಾರ್ಥಿಸಿದನು.

ನಳಿನನಾಭ ಮುಕುಂದ ಮಂಗಳ
ನಿಳಯ ಭಕ್ತವ್ಯಸನಿ ದೈತ್ಯ
ಪ್ರಳಯ ಪಾವಕ ಭಕ್ತವತ್ಸಲ ಭಕ್ತ ಸುರಧೇನು
ಲಲಿತಮೇಘಶ್ಯಾಮ ಸೇವಕ
ಸುಲಭ ಶೌರಿ ಮುರಾರಿ ಭಕ್ತಾ
ವಳಿ ಕುಟುಂಬಕ ಕೃಷ್ಣ ಕೇಶವ ಕರುಣಿಸೆನಗೆಂದ ॥೭೯॥

೭೯. "ಪದ್ಮನಾಭ, ಮುರಾರಿ, ಶುಭನಿವಾಸ, ಭಕ್ತಾಸಕ್ತ, ಭಕ್ತರ ಇಷ್ಟಾರ್ಥ ನೆರವೇರಿಸುವ ಕಾಮಧೇನು, ರಾಕ್ಷಸರನ್ನು ಪ್ರಹರಿಸುವ ಪ್ರಳಯಾಗ್ನಿ, ಭಕ್ತಾಭಿಮಾನಿ, ಚೆಲುವ, ಮೇಘದಂತೆ ಶ್ಯಾಮವರ್ಣದವನು, ಭಕ್ತ ಪ್ರಿಯ, ಶ್ರೀ ಕೃಷ್ಣ, ಮುರಧ್ವಂಸಿ, ಭಕ್ತ ಸಮೂಹದ ಸಂಸಾರಿ, ಕೃಷ್ಣ, ಕೇಶವಾ, ಅನುಗ್ರಹಿಸು" ಎಂದನು.

ಪರಮಪುಣ್ಯಶ್ಲೋಕ ಪಾವನ
ಚರಿತ ಚಾರುವಿಲಾಸ ನಿರ್ಮಲ
ವರಕಥನಲೀಲಾ ಪ್ರಯುಕ್ತ ಪ್ರಕಟಭುವನಶತ
ನಿರವಯವ ನಿರ್ದ್ವಂದ್ವ ನಿಸ್ಪೃಹ
ನಿರುಪಮಿತ ನಿರ್ಮಾಯ ಕರುಣಾ
ಕರ ಮಹಾತ್ಮ ಮನೋಜವಿಗ್ರಹ ಕರುಣಿಸೆನಗೆಂದ ॥೮೦॥

೮೦. "ಶ್ರೇಷ್ಠ ಪುಣ್ಯನಾಮಕನೆ, ಮಂಗಳ ಚರಿತ್ರನೆ, ಸುಂದರಲೀಲಾ ವಿಹಾರಿ, ಪರಿಶುದ್ಧ ಪವಿತ್ರ ಚಾರಿತ್ರ್ಯವುಳ್ಳವನೆ, ನಿನ್ನ ಲೀಲಾ ವಿನೋದದ ಫಲವಾಗಿ ಕಾಣಿಸಿಕೊಂಡ ಶತಭುವನಗಳನ್ನು ಒಳಗೊಂಡವನೆ, ನಿರಾಕಾರಿ, ದ್ವಂದ್ವಾತೀತ, ನಿರ್ಭೀತ, ಅಸಮಾನ, ಮಾಯಾರಹಿತ, ದಯಾಮಯ, ಮಹಾತ್ಮ, ಮನ್ಮಥಾಕಾರ ಎನಗೆ ಅನುಗ್ರಹಿಸು" ಎಂದನು.

ದೇವ ಲಕ್ಷ್ಮೀಕಾಂತ ವರರಾ
ಜೀವಲೋಚನ ಭೂತಭಾವನ
ರಾವಣಾಂತಕ ಗೋಪವೇಷ ವಿಲಾಸ ಜಯವಾಸ
ದೇವಕೀನಂದನ ಯಶೋದಾ
ದೇವಿಯುನ್ನತಪುಣ್ಯಫಲ ತಲೆ
ಗಾವುದೈ ತರುವಲಿಗೆ ತೋಱೆೈ ಮುನ್ನಿನಾಕೃತಿಯ ॥೮೧॥

೮೧. "ಲಕ್ಷ್ಮೀಲೋಲನಾದ ಪರಮಾತ್ಮನೆ, ಸುಂದರ ಕಮಲನಯನನೇ, ಸಕಲ ಜೀವಿಗಳೂ ತಾನೇ ಆಗಿರುವವನೆ, ರಾವಣ ಸಂಹಾರಿಯಾದ ರಾಮನೆ, ಗೊಲ್ಲರ ವೇಷಧಾರಿಯಾಗಿ ವಿಹರಿಸಿದವನೆ, ಜಯಲಕ್ಷ್ಮಿಯ ನೆಲೆಯಾದವನೆ, ದೇವಕೀಪುತ್ರ, ಯಶೋದಾ ದೇವಿಯ ಶ್ರೇಷ್ಠ ಪುಣ್ಯದ ಫಲವಾಗಿ ಜನಿಸಿದವನೆ, ನನ್ನನ್ನು ರಕ್ಷಿಸು. ಬಾಲಕನಾದ ನನಗೆ ನಿನ್ನ ಮೊದಲಿನ ರೂಪವನ್ನು ತೋರಿಸು."

ನಿಗಮನಿಕರವ ಸೆಳೆವ ತಿರುಗುವ
ನಗಕೆ ಬೆನ್ನನು ಕೊಡುವ ಜಲನಿಧಿ
ಮಗುಚೆ ಮಹಿಯನು ಮೊಗೆವ ಮಗುವಿನ ನುಡಿಗೆ ಮೈಗೊಡುವ
ಗಗನಕಂಘ್ರಿಯನಿಡುವ ತಾಯ
ಕ್ಕೆಗಳಿಗಕ್ಕೆಯ ತೋರ್ಪ ರಾಣಿಯ
ಸೊಗಸ ಸಲಿಸುವ ಕೃಪೆಯನೆನ್ನಲಿ ತೋಱಬೇಕೆಂದ ॥೮೨॥

೮೨. "ವೇದ ಸಮೂಹಗಳನ್ನು ರಕ್ಷಿಸುವ (ಮತ್ಸ್ಯಾವತಾರಿ), ಸಮುದ್ರಮಥನದ ಸಂದರ್ಭದಲ್ಲಿ ಮಂದರ ಪರ್ವತಕ್ಕೆ ಬೆನ್ನು ಕೊಟ್ಟು ಎತ್ತಿ ಹಿಡಿದ, (ಕೂರ್ಮಾವತಾರಿ) ಸಮುದ್ರದಲ್ಲಿ ಮುಳುಗಿದ ಭೂಮಿಯನ್ನು ರಕ್ಷಿಸಿದ (ವರಾಹಾವತಾರಿ), ಪ್ರಹ್ಲಾದನ ಮಾತಿಗೆ ಪ್ರತ್ಯಕ್ಷನಾದ (ನರಸಿಂಹಾವತಾರಿ), ಆಕಾಶಕ್ಕೆ ಹೆಜ್ಜೆ ಯನ್ನಿಟ್ಟು ಅಳೆದ (ತ್ರಿವಿಕ್ರಮಾವತಾರಿ–ವಾಮನಾವತಾರಿ), ತಾಯಿಯ ಸಂಕಟಕ್ಕೆ ಪ್ರತಿಯಾಗಿ ತಾನೂ ಸಂಕಟ ಅನುಭವಿಸಿದ (ಪರಶುರಾಮಾವತಾರಿ), ತನ್ನ ರಾಣಿಯಾದ ಸೀತೆಯನ್ನು ಸೆರೆಯಿಂದ ಬಿಡಿಸಿ ಅವಳಿಗೆ ಸಂತೋಷ ನೀಡಿದ (ರಾಮಾವತಾರಿ), ಹಾಗೆ ನನ್ನಲ್ಲಿಯೂ ಕರುಣೆಯನ್ನು ತೋರಿಸು" ಎಂದು ಅರ್ಜುನನು ಪ್ರಾರ್ಥಿಸಿದನು.

ಮಱೆದು ನಾಲಗೆಗೊನೆಗೆ ನಾಮದ
ನಿಱುಗೆ ನೆಲೆಗೊಳೆ ನಿನ್ನನೇ ಸಲೆ
ತೆಱುವ ಬಿರುದನು ಬಲ್ಲೆನೊಱಲಿದು ನಿನ್ನ ಹಲುಬಿದರೆ
ಉಱುವ ಹೆಂಗುಸಿನುನ್ನತಿಕೆಯಲಿ
ಸೆಱಗು ಬೆಳೆದುದ ಕಂಡೆನೈ ಸೈ
ಗಱೆವುದೈ ಕಾರುಣ್ಯವರುಷವನೆನ್ನ ಮೇಲೆಂದ ॥೮೩॥

೮೩. 'ಅಪ್ಪಿತಪ್ಪಿ ನಾಲಗೆಯ ತುದಿಯಲ್ಲಿ ನಿನ್ನ ನಾಮೋಚ್ಚಾರ ಉಂಟಾದರೆ ನಿನ್ನನ್ನೇ ನೀನು ಪೂರ್ಣವಾಗಿ ಸಮರ್ಪಿಸಿಕೊಳ್ಳುವೆ ಎಂಬ ಬಿರುದು ನಿನಗಿರುವುದು ನನಗೆ ಗೊತ್ತು. ಕೂಗಿ ಕರೆದು ನಿನಗಾಗಿ ದುಃಖಿಸಿದರೆ ಪತಿವ್ರತೆಯಾದ, ದ್ರೌಪದಿಯ ಹಿರಿಮೆಯಲ್ಲಿ ಅಕ್ಷಯವಸ್ತ್ರ ಪ್ರದಾನವಾದುದನ್ನು ಕಂಡಿದ್ದೇನೆ. ನಿನ್ನ ಕರುಣಾಧಾರೆ ಯನ್ನು ನನ್ನ ಮೇಲೆ ಸುರಿಸು' ಎಂದನು ಅರ್ಜುನ.

ಹಸುಳೆಗಮರಾಚಲದ ಹೊಱೆ ಸೈ
ರಿಸುವುದೇ ಮಱೆಹುಲ್ಲೆ ಸಿಂಹದ
ಮಸಕಕಿದಿರೇ ಲತೆಯ ಎಳಗುಡಿ ಮಾಳಿಗೆಗೆ ತೊಲೆಯೆ
ಸಸಿದರಳೆ ಸಿಡಿಲೆಱಗಿದರೆ ಜೀ
ವಿಸುವುದೇ ನಿಮ್ಮಡಿಯ ವಿಶ್ವ
ಪ್ರಸರರೂಪಿಂಗಾನು ಲಕ್ಷ್ಯವೆ ಸಲಹಬೇಕೆಂದ ॥೮೪॥

೮೪. "ಪುಟ್ಟ ಮಗುವಿಗೆ ಮೇರುಪರ್ವತದ ಭಾರ ಸಹಿಸಲಾಗುವುದೇ ? ಜಿಂಕೆಮರಿ ಸಿಂಹದ ರೋಷಕ್ಕೆ ಎದುರಾಗಬಲ್ಲುದೇ? ಎಳೆಯ ಬಳ್ಳಿಯ ಚಿಗುರು ಮಾಳಿಗೆಗೆ ತೊಲೆ ಆದೀತೇ? ಹಿಂಜಿದ ಹತ್ತಿಗೆ ಸಿಡಿಲು ಬಡಿದರೆ ಅದು ಉಳಿಯುವುದೇ? ನಿಮ್ಮಯ ವಿಸ್ತಾರವಾದ ವಿಶ್ವರೂಪಕ್ಕೆ ನಾನು ಲೆಕ್ಕವೇ ? ನನ್ನನ್ನು ರಕ್ಷಿಸು" ಎಂದನು.

ಅಣಲೊಳಷ್ಟಾದಶ ಮಹಾಕ್ಷೋ
ಹಿಣಿಗಳಡಗಿದವೆಂಬುದಿದು ಭೂ
ಷಣವೆ ಜೀಯ ಮುರಾರಿ ನಿನ್ನಯ ರೋಮಕೂಪದಲಿ
ಗಣನೆಗೆಟ್ಟಜರುದ್ರಸುರಸಂ
ದಣಿಗಳಿವೆ ಜಠರದ ಜಗಂಗಳ
ನೆಣಿಸಬಲ್ಲವರಾರು ಸಾಕಿನ್ನೆನ್ನ ಸಲಹೆಂದ ॥೮೫॥

೮೫. "ನಿನ್ನ ಅಂಗುಳಲ್ಲಿ (ಬಾಯಿಯ ಒಳಭಾಗ) ಹದಿನೆಂಟು ಅಕ್ಷೋಹಿಣಿ ಸೇನೆಗಳು ಒಳಗೊಂಡಿವೆ ಎಂಬುದು ನಿನಗೆ ಶೋಭಿಸುವ ಸಂಗತಿಯೆ ? ಸ್ವಾಮೀ, ಮುಕುಂದ ನಿನ್ನಯ ರೋಮರಂಧ್ರಗಳಲ್ಲಿ ಅಸಂಖ್ಯಾತ ಬ್ರಹ್ಮ ರುದ್ರಾದಿ ದೇವತಾ ಸಮೂಹವಿದೆ. ಇನ್ನು ಭೂಮಿಯಲ್ಲಿ ಇರುವ ಲೋಕಗಳನ್ನು ಲೆಕ್ಕವಿಡುವರಾರು ? ಸಾಕಿನ್ನು ನನ್ನನ್ನು ಕಾಪಾಡು" ಎಂದನು.

ವಿಶ್ವ ನಿನ್ನಯ ಮಾಯೆ ನಿರ್ಮಲ
ವಿಶ್ವರೂಪನು ನೀನು ಬಗೆವಡೆ
ವಿಶ್ವ ನಿನ್ನೊಳು ಸುಳಿವುದಳಿವುದು ಲಲಿತ ಲೀಲೆಯಲಿ
ವಿಶ್ವವಲ್ಲಭ ನೀನು ನಿನ್ನದು
ವಿಶ್ವಪಾಲನೆ ವಿಶ್ವಚೇಷ್ಟಕ
ವಿಶ್ವದಾಧಾರನೆ ಜಡಾತ್ಮನ ಸಲಹಬೇಕೆಂದ ॥೮೬॥

೮೬. "ಈ ಬ್ರಹ್ಮಾಂಡ ನಿನ್ನಯ ಮಾಯೆ ಆಗಿದೆ. ನೀನು ಅನಂತರೂಪಿ. ವಿಶ್ವವ್ಯಾಪಿ, ನೀನು ಇಚ್ಛಿಸಿದರೆ ಈ ವಿಶ್ವವು ನಿನ್ನಲ್ಲಿ ಸೃಷ್ಟಿ ಆಗುವುದು, ನೀನು ಇಚ್ಛಿಸಿದರೆ ನಿನ್ನ ಲೀಲಾ ವಿಲಾಸದಲ್ಲಿ ಈ ವಿಶ್ವ ನಾಶವಾಗುವುದು. ನಿನ್ನ ಈ ವಿಶ್ವಕ್ಕೆ ನೀನು ಒಡೆಯ. ಈ ವಿಶ್ವದ ರಕ್ಷಣೆ ನಿನಗೆ ಸೇರಿದ್ದು. ವಿಶ್ವದ ಎಲ್ಲಾ ಕ್ರಿಯೆಗಳು ನಿನ್ನವೆ. ವಿಶ್ವದ ಎಲ್ಲ ಕ್ರಿಯೆಗಳ ಮೂಲ ನೀನು. ಈ ಜಡ ನರನಾದ ನನ್ನನ್ನು ಕಾಪಾಡು" ಎಂದನು.

ವೀರ ದೈತ್ಯಕುಠಾರ ಗಳಿತವಿ
ಕಾರ ಗೋಪೀಜಾರ ಲಲಿತವಿ
ಹಾರ ನಿಗಮವಿದೂರ ಸುಖಸಾಕಾರ ಗತಪಾರ

ಧೀರ ಜಗದಾಧಾರ ಲಸದಾ
ಚಾರ ಕಮಲಾಗಾರ ಭುವನಾ
ಧಾರ ನಿರ್ಜಿತಮಾರ ಮುರಹರ ಸಲಹಬೇಕೆಂದ ॥೮೭॥

೮೭. "ವೀರರಾದ ರಾಕ್ಷಸರಿಗೆ ಕ್ರೂರನಾದವನು, ವಿಕಾರ ರಹಿತನು, ಗೋಪಿಕೆಯರ ವಿಲಾಸಿ ಆದವನು, ವೇದಾತೀತನು, ಸುಖದ ಪ್ರತ್ಯಕ್ಷ ಸ್ವರೂಪಿ ಆದವನು, ಸೀಮಾತೀತನು, ಪರಾಕ್ರಮಿ, ಜಗತ್ತಿಗೆ ಆಧಾರನು, ಸದಾಚಾರನು ಕಮಲನಿವಾಸನು, ಮೂರು ಲೋಕಗಳಿಗೆ ಆಶ್ರಯದಾತನು, ಮನ್ಮಥ ವಿಜಯಿ ಆದವನು, ಮುರ ರಾಕ್ಷಸನನ್ನು ಕೊಂದವನು ನನ್ನನ್ನು ಕಾಪಾಡು" ಎಂದನು.

ಭಯದ ಬಿಗುಹಿನ ಭಾರ ಭಕುತಿಯ
ನಯದ ಬಿನ್ನಹದೋಜೆಯನು ಚಿನು
ಮಯನು ಕೇಳಿದು ಮೆಚ್ಚಿ ಡಿಂಗರಿಗಂಗೆ ನಗುತೆಂದ
ನಿಯತವೇ ನೀನಲ್ಲಲೇ ಸೇ
ನೆಯನು ಕೊಲುವನು ಕಾವವನು ನಿ
ಶ್ಚಯವ ನಿನ್ನೊಳು ತಿಳಿದು ಬಿನ್ನಹ ಮಾಡು ಸಾಕೆಂದ ॥೮೮॥

೮೮. "ಭಯದ ಹಿಡಿತದಲ್ಲಿ, ದಟ್ಟ ಭಕುತಿಯಿಂದ, ವಿನಯ ಪೂರ್ವಕವಾಗಿ ವಿಜ್ಞಾಪಿಸಿದ ರೀತಿಯನ್ನು ಕೇಳಿದ ಕೃಷ್ಣನು ಅದನ್ನು ಮೆಚ್ಚಿ ಭಕ್ತನಾದ ಅರ್ಜುನನಿಗೆ ನಗುತ್ತ ಹೀಗೆ ಹೇಳಿದನು: ಇದು ದೃಢ ನಿರ್ಧಾರವೇ ? ಸೇನೆಯನ್ನೆಲ್ಲ ನಾಶಮಾಡುವವನು ಅಥವಾ ಕಾಪಾಡುವವನು ನೀನು ಅಲ್ಲವಲ್ಲಾ ! ನಿನ್ನಲ್ಲಿ ನೀನೇ ವಿಚಾರ ಮಾಡಿ ನಿರ್ಧರಿಸಿ ತಿಳಿದುಕೊಂಡು ನಿನ್ನ ಕೋರಿಕೆಯನ್ನು ತಿಳಿಸು ಸಾಕು".

ಎನಿತು ಜಗವಡಗಿದವು ಕೌರವ
ರೆನಿಬರಡಗಿತು ನೋಡು ಧರ್ಮಜ
ತನಯ ಭೀಮಾರ್ಜುನರು ಭೀಷ್ಮದ್ರೋಣ ಮೊದಲಾದ
ಎನಿಬರಡಗಿತು ನೋಡು ಬಾಂಧವ
ಹನನ ನಿನಗುಂಟಾದಡೀಗಳೆ
ನೆನೆದು ಬಿನ್ನಹ ಮಾಡೆನುತ ಪಾರ್ಥಂಗೆ ಹರಿ ನುಡಿದ ॥೮೯॥

೮೯. "ನನ್ನಲ್ಲಿ ಎಷ್ಟೊಂದು ಜಗತ್ತುಗಳು ಅಡಗಿವೆ? ಎಷ್ಟೊಂದು ಮಂದಿ ಕೌರವರು ಅಡಕವಾಗಿದ್ದಾರೆ ಎಂಬುದನ್ನು ನೋಡು. ಭೀಮ, ಅರ್ಜುನ, ಭೀಷ್ಮ, ದ್ರೋಣ

ಮೊದಲಾದ ಎಷ್ಟೊಂದು ಜನರು ಅಡಗಿರುವುದನ್ನು ನೋಡು. ಬಂಧು ಹತ್ಯೆಯ ದೋಷ ನಿನಗೆ ಉಂಟಾಗುತ್ತಿದ್ದರೆ ಈಗಲೆ ಚೆನ್ನಾಗಿ ಯೋಚಿಸಿ ಹೇಳು" ಎಂದು ಕೃಷ್ಣನು ಅರ್ಜುನನಿಗೆ ಹೇಳಿದನು.

ಗುರುಗಳಿಗೆ ನಾ ತಪ್ಪೆನೆಂದೇ
ಮುರಿದಡೆನಗದು ಖಾತಿ ಭೀಷ್ಮನು
ವರಪಿತಾಮಹನೆಂದು ಹೊಳೆದರೆ ಬಳಿಕಸಹ್ಯವದು
ಅರಿಬಲವು ಮುನ್ನುರಿವುದೋ ನೀ
ನರಿವೆಯೋ ಲೇಸಾಗಿ ಎನ್ನೊಳು
ನರ ನಿರೀಕ್ಷಿಸೆನುತ್ತ ನುಡಿದನು ದಾನವಧ್ವಂಸಿ ॥೯೦॥

೯೦. 'ಗುರುಗಳಿಗೆ ನಾನು ವಿರುದ್ಧವಾಗಿ ನಡೆಯುವುದಿಲ್ಲ ಎಂಬುದಾಗಿ ನೀನು ಹಿಮ್ಮೆಟ್ಟಿದರೆ ಅದು ನನ್ನ ಮುನಿಸಿಗೆ ಕಾರಣವಾಗುತ್ತದೆ. ಭೀಷ್ಮನು ಹಿರಿಯ ಅಜ್ಜ ಎಂದು ನಿನಗೆ ಯೋಚಿಸಿದರೆ ಅದು ನನಗೆ ಸಹಿಸಲಾಗದು. ಶತ್ರುಬಲ ಈಗಾಗಲೇ ಉರಿದು ನಾಶವಾಗಿದೆಯೋ ಅಥವಾ ನೀನು ನಾಶ ಮಾಡುವೆ ಯೋ ಎಂಬುದನ್ನು ಅರ್ಜುನನೇ ನನ್ನ ರೂಪವನ್ನು ನೋಡಿ ಅರ್ಥ ಮಾಡಿಕೋ' ಎಂದು ಕೃಷ್ಣನು ಹೇಳಿದನು.

ನೆನೆದಡಜಕೋಟಿಗಳು ನಿಮ್ಮಯ
ಮನದೊಳಗೆ ಜನಿಸುವರುಪೇಕ್ಷೆಯೊ
ಳನಿತು ಕಮಲಜರಳಿವರೆಂದರೆ ನಿಮ್ಮ ಮಹಿಮೆಯನು
ನೆನೆಯಲಳವೇ ಜೀಯ ಸಾಕಿ
ನ್ನನುವರದೊಳೆನಗೇನ ಬೆಸಸಿದ
ರನಿತ ತಾ ಮುಖದಿರುಹಿದರೆ ಡಿಂಗರಿಗನಲ್ಲೆಂದ ॥೯೧॥

೯೧. "ನಿನ್ನ ಮನಸ್ಸಿನಲ್ಲಿ ನೀನು ಸಂಕಲ್ಪಿಸಿದರೆ, ಕೋಟಿ ಬ್ರಹ್ಮರು ಸೃಷ್ಟಿಯಾಗುವರು. ಅಂತೆಯೇ ನಿನ್ನ ಇಚ್ಛಾನುಸಾರ ಅಷ್ಟೂ ಮಂದಿ ಬ್ರಹ್ಮರು ನಾಶವಾಗುವರು ಎಂದ ಮೇಲೆ ನಿನ್ನ ಅಪಾರ ಮಹಿಮಾತಿಶಯವನ್ನು ಅರಿಯಲು ಯಾರಿಗೆ ಶಕ್ಯವಿದೆ? ಅಯ್ಯಾ ಸಾಕು ಮಾಡು, ಇನ್ನು ಈ ಯುದ್ಧದಲ್ಲಿ ನನಗೆ ನೀನು ಏನು ಅಪ್ಪಣೆ ಮಾಡಿದರೆ ಅದಕ್ಕೆಲ್ಲ ನಾನು ಮುಖ ತಿರುಹಿದರೆ (ಅಪ್ಪಣೆ ಪ್ರಕಾರ ನಡೆಯದಿದ್ದರೆ), ನಾ ನಿನ್ನ ದಾಸನೇ ಅಲ್ಲ ತಿಳಿ" ಎಂದು ಅರ್ಜುನನು ಹೇಳಿದನು.

ಮರಳಿ ಮುನ್ನಿನ ರೂಪನಂಗೀ
ಕರಿಸಿ ವಾಘೆಯ ಕೊಂಡು ತುರಗವ
ತಿರುಹಿ ಲುಳಿವಡೆಸುತ್ತ ಪಾರ್ಥಗೆ ಮಾಯೆಯನು ಬೀಸಿ
ಶರ ಧನುವ ಕೊಳ್ಳೇಳು ಕೈಕೋ
ಪರಬಲದ ತೋಟಿಯನು ತೋಱಿಸೈ
ಬಿರುದ ಘಾತಕತನವನೆಂದನು ನಗುತ ಮುರವೈರಿ ॥೯೨॥

೯೨. ಅನಂತರ ಶ್ರೀಕೃಷ್ಣನು ಮೊದಲಿನ ರೂಪವನ್ನು ಧರಿಸಿ ಲಗಾಮುಗಳನ್ನು ಹಿಡಿದುಕೊಂಡು ಕುದುರೆಗಳನ್ನು ತಿರುಗಿಸಿ ಚುರುಕುಗೊಳಿಸುತ್ತ, ಅರ್ಜುನನಿಗೆ ಮಾಯೆ ಆವರಿಸುವಂತೆ ಮಾಡಿ "ಬಿಲ್ಲು ಬಾಣಗಳನ್ನು ಹಿಡಿ, ಏಳು ಶತ್ರುಬಲದೊಡನೆ, ಯುದ್ಧವನ್ನು ಹೂಡು, ಬಿರುದನ್ನು ಬಣ್ಣಿಸುವ ಶತ್ರುಗಳನ್ನು ಘಾತಿಸುವ ನಿನ್ನ ಹೊಡೆತದ ಸತ್ವವನ್ನು ಪ್ರದರ್ಶಿಸು" ಎಂದು ನಸುನಗುತ್ತ ಅರ್ಜುನನಿಗೆ ಹೇಳಿದನು.

ಮೋಹ ಮಿಗೆ ಪಾಂಡವ ಮಮ ಪ್ರಾ
ಣಾಹಿಯೆಂಬೀ ಬಿರುದ ಸಲಿಸಲು
ಗಾಹಿನಲಿ ಮೇದಿನಿಯ ತಿಣ್ಣವನಿಳುಹಲೋಸುಗರ
ಆಹವದೊಳರ್ಜುನನ ರಥದೊಳು
ವಾಹಕನು ತಾನಾಗಿ ಶರಣ
ಸ್ನೇಹ ಸಂಸಾರಾನುರಾಗನು ಸುಳಿಸಿದನು ರಥವ ॥೯೩॥

೯೩. ಪಾಂಡವರ ಬಗ್ಗೆ ಮಿಗಿಲಾದ ಮೋಹದಿಂದ ಪಾಂಡವರು ನನ್ನ ಉಸಿರು ಎಂಬ ಬಿರುದನ್ನು ಉಳಿಸಿಕೊಳ್ಳಲು, ತನ್ನ ಪ್ರಭಾವದಿಂದ ಭೂಮಿಯ ಭಾರವನ್ನು ಇಳಿಸುವುದಕ್ಕಾಗಿ, ಯುದ್ಧದಲ್ಲಿ ಅರ್ಜುನನಿಗೆ ರಥ ನಡೆಸುವ ಸಾರಥಿಯಾಗಿ ಭಕ್ತರ ಸ್ನೇಹವೆಂಬ ಲೌಕಿಕತೆಯಲ್ಲಿ ಪ್ರೀತಿಯುಳ್ಳವನಾಗಿ ರಥವನ್ನು ನಡೆಸಿದನು.

ಅಕಾರಾದಿ ಪದ್ಯಪಾದಸೂಚಿ

ಉಪ್ಪಾರಳ್ಳಿ ರಾಮಪ್ಪಯ್ಯ ವಿರಚಿತ

ಗೀತಾರ್ಥ ಪ್ರಕಾಶಿಕೆ

ಅನುಬಂಧ ೨

ಅಕಾರಾದಿ ಪದ್ಯಪಾದಸೂಚಿ

ಕುಮಾರವ್ಯಾಸನ ಭಗವದ್ಗೀತೆ

ಭೀಷ್ಮಪರ್ವ – ಮೂರನೆಯ ಸಂಧಿ

ಕನ್ನಡದಲ್ಲಿ ಭಗವದ್ಗೀತೆಯ ಪದ್ಯಾನುವಾದಗಳು

1 ಅಚ್ಯುತರಾವ್ ಕೃಷ್ಣರಾವ್ ಹುಯಿಲಗೋಳ (ಮು) ೧೯೫೫ ಶ್ರೀಕೃಷ್ಣಗೀತಾಮೃತ (ಸಾಂಗತ್ಯ) ಗುರುರಾಜ ಗ್ರಂಥಮಾಲೆ, ಗದಗ

2 ಅನಂತ ತಿಮ್ಮಪ್ಪ ಹೆಗಡೆ (ಮು) ೧೯೮೦ ಕನ್ನಡ ಭಗವದ್ಗೀತಾಸಾರ (ಭಾಮಿನಿಷಟ್ಪದಿ) ತಿರುಮಲ ಪ್ರಕಾಶನ, ಹುಬ್ಬಳ್ಳಿ

3 ಅನಂತ ಸುಬ್ಬರಾವ್ ಹೆಚ್. ಕೆ. (ಮು) ೨೦೨೧ ಭಗವದ್ಗೀತಾ ಕಾವ್ಯರೂಪ (ಚೌಪದಿ) ಅನುವಾದಕ ನಾಗಸಂದ್ರ ಪೋಸ್ಟ್ ತುಮಕೂರು ರಸ್ತೆ ಬೆಂಗಳೂರು-೭೩

4 ಅನಂತರಾಮಯ್ಯ ಬಿ.ಎಸ್. (ಮು) ೧೯೬೪ ಶ್ರೀ ಬಾಲಗೀತ ಪ್ರಕಾಶಿಕಾ ಚೌಪದಿ (ಗೋವಿನಹಾಡಿನ ಧಾಟಿ), ಡಿ.ಎನ್.ಶರ್ಮ, ನಗರ್ತರಪೇಟೆ ಬೆಂಗಳೂರು

5 ಅನಂತರಾವ್ ಮಂಜೇಶ್ವರ (ಮು)೧೯೪೫ ಕನ್ನಡ ಪದ್ಯಗೀತೆ (ದ್ವಿಪದಿ, ಚೌಪದಿ ಇತ್ಯಾದಿ), ಮಂಜೇಶ್ವರ ರಾಮಕೃಷ್ಣರಾವ್, ಪುತ್ತೂರು

6 ಅನಸೂಯ ಎಸ್ ರಾಜೀವ್ (ಮು) ೨೦೧೧ ಭಗವದ್ಗೀತಾ ಸಾರಸುಧಾ(ಚೌಪದಿ) ವೆಂಕಟಾದ್ರಿ ಪ್ರಕಾಶನ ಬಸವನಗುಡಿ ಬೆಂಗಳೂರು

7 ಅನಸೂಯಾ ಎಸ್. ರಾಜೀವ್ (೨೦೧೧) (ಲೇ) ಭಗವದ್ಗೀತಾ ಸಾರಸುಧಾ (ಚೌಪದಿ) ಪ್ರ. ವೆಂಕಟಾದ್ರಿ ಪ್ರಕಾಶನ, ಬಸವನಗುಡಿ. ಬೆಂಗಳೂರು

8 ಅಪ್ರಮೇಯ ಅಯ್ಯಂಗಾರ್ ಜೆ. (ಲೇ) (೧೯೧೦) ಶ್ರೀ ಭಗವದ್ಗೀತದ ವಚನಗಳು (ಕಂದ) ಪ್ರ. ಲೇಖಕರು ಚಿಕ್ಕಮಗಳೂರು

9 ಅಮೃತಚನ್ನ ಶಾಮ (ಮು) ೧೯೬೪ ಗೀತಾಯೋಗ: ಕನ್ನಡ ಭಗವದ್ಗೀತೆ(ಭೋಗಷಟ್ಪದಿ), ಅನುವಾದಕ, ತುಮಕೂರು

10 ಅರಕಲಗೂಡು ಕೃಷ್ಣಪ್ಪ (ಲೇ)(ಸಂ) ಅನಕೃ (ಮು) ೧೯೫೬ ಭಗವದ್ಗೀತಾರ್ಥಸಾರ (ಕೀರ್ತನೆ) ಸ್ಟ್ಯಾಂಡರ್ಡ್ ಬುಕ್ ಡಿಪೋ, ಬೆಂಗಳೂರು

11 ಉಪ್ಪಾರಳ್ಳಿ ರಾಮಪ್ಪಯ್ಯ ೧೮೬೫ ಶ್ರೀ ಗೀತಾರ್ಥ ಪ್ರಕಾಶಿಕೆ (ಭಾಮಿನೀಷಟ್ಪದಿ) ಸರಸ್ವತೀಗ್ರಂಥ ಪ್ರೆಸ್, ಮದರಾಸ್

12 ಎನ್ ಆರ್ ರಾವ್ ( ) (ಲೇ) ಶ್ರೀಮನ್ನಾರಾಯಣಾಮೃತಧಾರಾ (ದ್ವಿಪದಿ) ಪ್ರ. ನಾರಾಯಣಾಮೃತ ಫೌಂಡೇಷನ್, ಮುಂಬಯಿ

13 ಕಡವ ಶಂಭುಶರ್ಮ (ಮು)೨೦೦೩ ಶ್ರೀಮದ್ಭಗವದ್ಗೀತಾ (ಅನುಷ್ಟುಪ್‌ಛಂದಸ್ಸು) ಕಡವ ಶಂಭುಶರ್ಮ ಸ್ಮಾರಕ ಪ್ರತಿಷ್ಠಾನ, ಪುತ್ತೂರು

14 ಕನಮಡಿ ನರಹರಿರಾಮಚಂದ್ರ ೧೮೫೭ ಶ್ರೀಮದ್ಭಗವದ್ಗೀತಾರ್ಥ ಪ್ರಬೋಧಿನಿ (ಭಾಮಿನೀಷಟ್ಪದಿ) ಲೇಖಕನೇ, ಬಿಜಾಪುರ

15 ಕಬ್ಬಿನಾಲೆ ವಸಂತ ಭಾರದ್ವಾಜ (ಮು)೨೦೧೧ ಭಗವಂತನ ಭಾವಗೀತೆ (ಭಾವಗೀತೆ) ಸುಂದರ ಸಾಹಿತ್ಯ, ಕಲಾಮಂದಿರ, ಹನುಮಂತನಗರ ಬೆಂಗಳೂರು

16 ಕಾನಲೇ ಪುಟ್ಟಪ್ಪ ೧೮೮೯ ಕನ್ನಡ ಪದ್ಯಾತ್ಮಕವಾದ ಶ್ರೀಭಗವದ್ಗೀತೆಯು (ಭಾಮಿನೀಷಟ್ಪದಿ?), ಭಾರತೀ ಪ್ರೆಸ್, ಮುಂಬಯಿ

17 ಕುಂಜಬೆಟ್ಟು ರಾಮಣ್ಣ ಕೃಷ್ಣಭಟ್ (ಮು) ೧೯೫೩ ಭಜನಗೀತಾ ಲಾವಣಿ (ಗೀತೆಯ ತಿರುಳು ಲಾವಣಿ), ತಲ್ಲಕೊಳಂ ಕೆ ಆಶಾಭಟ್

18 ಕುಡುತಿನಿ ರಂಗಾಚಾರ್ಯ (ಮು) ೧೯೫೬ ರಣರಂಗದಲ್ಲಿ ಆಕಳವಾಡಿ ಬುಕ್‌ಡಿಪೋ, ಗದಗ

19 ಕುಮಾರವ್ಯಾಸ (ಲೇ) (ಮು) ೧೯೫೪ ಕರ್ನಾಟಕ ಭಾರತ ಕಥಾಮಂಜರಿ ಭೀಷ್ಮಪರ್ವ ೩ನೇ ಸಂಧಿ, ಶ್ರೀಕುಮಾರವ್ಯಾಸ ಸ್ಮರಣಸಂಸ್ಥೆ ಕೋಳಿವಾಡ.

20 ಕುಮುದೇಂದು ಕವಿ (೨೦೧೧) ಸಿರಿಭೂವಲಯದ ಕನ್ನಡ ಭಗವದ್ಗೀತೆ (ಸಾಂಗತ್ಯ) ಸಂ. ಸುಧಾರ್ಥಿ, ಹಾಲವಾಗಿಲು ಗ್ರಾಮ, ತಟೇಕೇರಿ ಅಂಚೆ, ಹಾಸನ

21 ಕೃಷ್ಣರಾವ್ ಎ.ಜಿ. (ಮು) ೧೯೫೨ ಗೀತಾಮೃತ ಲಹರೀ(ವಾರ್ಧಕಷಟ್ಪದಿ) ಶ್ರೀಮದ್‌ಮಾಧ್ವಸಿದ್ಧಾಂತ ಕಾರ್ಯಾಲಯ ಉಡುಪಿ

22 ಕೃಷ್ಣಶಾಸ್ತ್ರೀ ಸ.ನ ಮು (೨೦ನೇ ಶತಮಾನ) ಶ್ರೀಗೀತಾ (೧ನೇ ಅಧ್ಯಾಯ) (ಭಾಮಿನಿಷಟ್ಪದಿ) ವೈಶ್ಯ ಸೇವಾ ಸಮಿತಿ ಬೆಂಗಳೂರು

23 ಕೃಷ್ಣಾಚಾರ್ಯ ಪಾಂಡುರಂಗೀ (ಮು) ೧೯೩೦ ಶ್ರೀಮದ್ಭಗವದ್ಗೀತೆ (ಷಟ್ಪದಿ,ಸೀಸಪದ್ಯ), ಶ್ರೀಮಧ್ವಸಿದ್ಧಾಂತಾಭಿವೃದ್ಧಿಕಾರಿಣೀ ಸಭೆ, ತಿರುಪತಿ, ತಿರುಚಾನೂರು

24 ಕೊಣನೂರು ದಚ್ಚಣ್ಣ (ಲೇ) ೨೦೧೦ ಶ್ರೀಮದ್ಭಗವದ್ಗೀತಾಮೃತಸಾರ (ಪದ್ಯರೂಪ) ಪ್ರ. ನವಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು

25 ಗುಂಡಪ್ಪ ಡಿ.ವಿ (ಮು) ೧೯೬೬ ಜೀವನ ಧರ್ಮಯೋಗ(ಕಂದ_ವೃತ್ತ), ಕಾವ್ಯಾಲಯ, ಮೈಸೂರು

26 ಗುರುಸುತ (ಮು) ೧೯೯೮ ಗೀತಬೋಧೆ (ಚೌಪದಿ) ಅನುವಾದಕರು, ಬೆಂಗಳೂರು

27 ಗೋಪಾಲ ಜೋಯಿಸ (ಲೇ) ೨೦೦೫ ಶ್ರೀಮದ್ಭಗವದ್ಗೀತಾಶಾಸ್ತ್ರ ವಿಚಾರ ದರ್ಶನವು (ಷಟ್ಪದಿ) ಪ್ರ. ಲೇಖಕ, ರಾಜಾಜಿನಗರ, ಬೆಂಗಳೂರು

28 ತಾಳಿಕೋಟೆ ನಾರಾಯಣರಾವ ರಾಯಚೂರು (ಮು) ೧೯೭೬ ಶ್ರೀಭಗವದ್ಗೀತೆ (ದ್ವಿಪದಿ), ರಾಯಚೂರು ಶ್ರೀರಾಮ ಸೇವಾಟ್ರಸ್ಟ್, ರಾಯಚೂರು

29 ದತ್ತಾತ್ರೇಯ ಅವಧೂತರು (ಮು)೨೦೦೭ ಶ್ರೀಜ್ಞಾನೇಶ್ವರಿ (ಗೀತೆ) (ಓವಿ ಛಂದಸ್ಸು) ಸದ್ಗುರು ಶ್ರೀಬ್ರಹ್ಮ ಚೈತನ್ಯ ವಾಗ್ಮಯಿ ಪ್ರಕಾಶನ ಪ್ರತಿಷ್ಠಾನ ಹುಬ್ಬಳ್ಳಿ.

30 ದತ್ತಾತ್ರೇಯ ಅವಧೂತರು (೨೦೦೭) (ಲೇ) ಶ್ರೀ ಜ್ಞಾನೇಶ್ವರಿ (ಓವಿರೂಪದಲ್ಲಿ) ಪ್ರ. ಸದ್ಗುರು ಶ್ರೀ ಬ್ರಹ್ಮಚೈತನ್ಯ ವಾಙ್ಮಯ ಪ್ರಕಾಶನ ಪ್ರತಿಷ್ಠಾನ, ಹುಬ್ಬಳ್ಳಿ

31 ದೇಲಪಾಂಡಿ ವಿಷ್ಣುಶರ್ಮ ಹೊಳ್ಳ (ಮು)೧೯೬೩ ಗೀತ ಸಾಂಗತ್ಯ (ಸಾಂಗತ್ಯ) ಅನುವಾದಕ, ಕುಂದಾಪುರ

32 ದೇವರಾಯ ಕುಲಕರ್ಣಿ (ಮು) ೧೯೬೧ ಶ್ರೀಮದ್ಭಗವದ್ಗೀತಾ ಸಾರ(ಲಾವಣಿ) ಪರಮಾರ್ಥ ವಿಚಾರ ಸಂಘ ಬೆಂಗಳೂರು

33 ದೇಶಿಕಾಚಾರ್ (ಮು) ೨೦೦೪ ಭಗವದ್ಗೀತಾನುವಾದ (ಅಪ್ರಕಟಿತ) ಪದ್ಯರೂಪ ವಾಷಿಂಗ್‌ಟನ್ ಅಮೆರಿಕಾ (ಮೈಸೂರಿನವರು)

34 ದೇಶಿಕಾಚಾರ್ (ಡಾಕ್ಟರ್) (೨೦೦೨) (ಲೇ) ಭಗವದ್ಗೀತಾನುವಾದ ಮೇರಿಲ್ಯಾಂಡ್, ಅಮೆರಿಕಾ (ಅಪ್ರಕಟಿತ)

35 ದ್ವಾರಕಾನಾಥ್ ಎನ್ ಎಸ್ (೨೦೦೫) (ಲೇ) ಶ್ರೀಮದ್ಭಗವದ್ಗೀತಾ ಮೌನದನಿ (ನವ್ಯಕವನ) ಪ್ರ. ತನುಮನ ಪ್ರಕಾಶನ, ಶ್ರೀರಾಮಪುರ ಎಕ್ಸ್‌ಟೆನ್ಷನ್, ಮೈಸೂರು

36 ದ್ವಾರಕಾನಾಥ್ ಎನ್. ಎಸ್. (ಮು) ೨೦೦೫ ಶ್ರೀಮದ್ ಭಗವದ್ಗೀತಾ ಮೌನದನಿ (ನವ್ಯ ಛಂದಸ್ಸು) ತನುಮನ ಪ್ರಕಾಶನ, ಶ್ರೀರಾಂಪುರ ಎಕ್ಸ್‌ಟೆನ್ಷನ್ ಮೈಸೂರು

37 ನರಸಿಂಹಾಚಾರ್ ಪು.ತಿ. (ಮು)೧೯೫೧ ಕನ್ನಡ ಭಗವದ್ಗೀತೆ (ದ್ವಿಪದಿ) ಡಿವಿಕೆ ಮೂರ್ತಿ, ಮೈಸೂರು

38 ನಾಗರಸಕವಿ (ಲೇ) (ಮು)೧೯೦೮ ಕರ್ಣಾಟಕ ಭಗವದ್ಗೀತೆ ಭಾಮಿನಿಷಟ್ಪದಿ ಶ್ರೀನಿವಾಸರಾವ್(ಸಂ), ಬೆಂಗಳೂರು

39 ನಾಗೇಶಶಾಸ್ತ್ರಿ ವೈ. (ಮು) ೧೯೩೨ ಭಗವದ್ಗೀತಾ(ಷಟ್ಪದಿ)

40 ನಿರಕ್ಷರಕುಕ್ಷಿ (ಮು) ೧೯೯೧ ಗೀತಾಭಾಷ್ಯ ತಾತ್ಪರ್ಯ (ಭಾಮಿನಿಷಟ್ಪದಿ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

41 ಪಂಡಿತ ಮಿರ್ಲೆ ಕೃಷ್ಣಶರ್ಮ ಶ್ರೀ ಕರ್ನಾಟಕ ಭಗವದ್ಗೀತೆ(ದ್ವಿಪದಿ) ಅನುವಾದಕ ಮೈಸೂರು

42 ಪಾವಂಜೆ ಗುರುರಾವ್ (ಸಂ)(ಮು) ೧೯೨೦ ಶ್ರೀಗೀತೆಹಾಡು (ಹಾಡು) ಶ್ರೀಮನ್ಮಾಧ್ವ ಸಿದ್ಧಾಂತ ಕಾರ್ಯಾಲಯ, ಉಡುಪಿ

43 ಪೀತಾಂಬರರಾವ್ ಪವಾರ್ ಬಿ ಟಿ (ಮು) ೧೯೭೬ ಭಗವದ್ಗೀತಾ(ತ್ರಿಪದಿ) ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್ ಶಂಕರಮಠ ರಸ್ತೆ ಬೆಂಗಳೂರು

44 ಪ್ರಮೇಯ ಅಯ್ಯಂಗಾರ್ ಜೆ. (ಮು) ೧೯೧೦ ಶ್ರೀಮದ್ಭಗವದ್ಗೀತಾ ವಚನಗಳು(ಕಂದ) ಅನುವಾದಕರು ಚಿಕ್ಕಮಗಳೂರು

45 ಬಡಕ್ಕಿಲ ವೆಂಕಟರಮಣಭಟ್ (ಮು) ೧೯೪೬ ಗೀತಾಸಾರ (ಭಾಮಿನಿಷಟ್ಪದಿ) ಶಿವರಾಮ ಕಾರಂತ ಪುತ್ತೂರು

46 ಬಿಳಿಗಿರಿ ವಾಸನ್ ಎಸ್ (ಲೇ) ೨೦೦೭ ಸಿರಿಗನ್ನಡ ಸರಳಭಗವದ್ಗೀತೆ (ಚೌಪದಿ) ಪ್ರ. ಸಿಂಚನ ಕನ್ನಡ ವೇದಿಕೆ, ಆರ್.ವಿ. ಕಾಲೇಜ್, ಜಯನಗರ ೪ ಟಿ ಬ್ಲಾಕ್, ಬೆಂಗಳೂರು

47 ಬೆಟಗೇರಿ ಬಾ. ಮಾ. (ಮು)೧೯೩೨ ಶ್ರೀಗೀತಾರ್ಥಬೋಧಿನಿ ಅಥವಾ ಕರ್ಮಯೋಗ ರಹಸ್ಯವು(ಭಾಮಿನಿಷಟ್ಪದಿ) ರಾಮಚಂದ್ರ ಮಾರ್ತಾಂಡ ಪದಕಿ, ಅಮೀನಭಾವಿ

48 ಭದ್ರಗಿರಿ ಕೇಶವದಾಸರು (ಲೇ) ೨೦೧೩ ಕೀರ್ತನರೂಪೀ ಭಗವದ್ಗೀತೆ (ಕೀರ್ತನೆ) ಪ್ರಕ. ಕೇಶವದಾಸ್ ಬುಕ್ ಡಿಪೊ. ವಿಶ್ವಶಾಂತಿ ಆಶ್ರಮ, ನೆಲಮಂಗಲ, ಬೆಂಗಳೂರು

49 ಭಾಗ್ಯಲಕ್ಷ್ಮಮ್ಮಣ್ಣಿ (ಲೇ) ೨೦೧೩ ಕನ್ನಡ ಸರಳ ಭಗವದ್ಗೀತೆ (ಚೌಪದಿ) ಪ್ರ ಶ್ರೀಪಾದ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು

50 ಯೆಳಬೆಂಚೆ ನಾಗೇಶಶಾಸ್ತ್ರಿ ೧೮೯೩- ಶ್ರೀಮತ್ಕರ್ನಾಟಕ ಭಗವದ್ಗೀತೆ (ಕಂದ) ಲೇಖಕನೇ ಪ್ರಕಾಶಕ

51 ರಘುನಾಥ ಮಾಧವ ಕುಲಕರ್ಣಿ (ಮು) ೨೦೧೧, ಶ್ರೀಮದ್ಭಗವದ್ಗೀತೆ (ಕನ್ನಡ ಶ್ಲೋಕಾನುವಾದ) (ದ್ವಿಪದಿ), ಪ್ರಿಸಂ ಬುಕ್ಸ್ ಪ್ರೈ.ಲಿ. ಜಯನಗರ ಬೆಂಗಳೂರು

52 ರತ್ನಾಕರ ಭಟ್ಟ ಕೆ ಪಿ. (೨೦೦೪) (ಲೇ) ಶ್ರೀಗೀತಾಂತರಂಗ (ಚೌಪದಿ) ಪ್ರ. ಶ್ರೀ ರಾಮಸೇನಾ ಪ್ರಕಾಶನ ಸಮಿತಿ, ಚಿಕ್ಕಮಗಳೂರು

53 ರಮೇಶಚಂದ್ರ(ಮು) ೧೯೮೧ ಕನ್ನಡ ಗೀತಾಮೃತ(ಸಮಶ್ಲೋಕಿಯಛಂದಸ್ಸು) ಸರಸ್ವತೀ ಪ್ರಕಾಶನ ಬನ್ನೂರುಮಠ ಅಕ್ಕಿಪೇಟೆ ಹುಬ್ಬಳ್ಳಿ ರಾಘವೇಂದ್ರ ಸುಬ್ಬರಾವಮೂಡಕಟ್ಟೆ (ಮು) ೧೯೮೬

54 ಶ್ರೀ ಲ.ನ. ಗೀತಾವತರಣ (ಚೌಪದಿ) ಶ್ರೀ ಲ.ನ. ಭಾರತೀ ಬೀದಿ ಶೃಂಗೇರಿ

55 ರಾಘವೇಂದ್ರರಾವ್ ಕೆ (ಮು) ೨೦೦೬ ಭಗವದ್ಗೀತೆ (ಸರಳಗನ್ನಡ ನುಡಿಗಳಲ್ಲಿ) (ದ್ವಿಪದಿ) ಸರಸ್ವತಿಪ್ರೇರಣ ಪಬ್ಲಿಷರ್ಸ್ ಎಲ್ ಬಿ ನಗರ ಹೈದ್ರಾಬಾದ್

56 ರಾಮಪ್ರಿಯ ಹಂ.ಕ. (ಮು)೨೦೨೦ ಭಗವದ್ಗೀತಾ ವಿದ್ಯಾನುವಾದ ಅನುವಾದಕ, ಮೇರಿಲ್ಯಾಂಡ್ ಅಮೆರಿಕಾ

57 ರಾವ್ ಎನ್.ಆರ್. ಶ್ರೀಮನ್ನಾರಾಯಣಾಮೃತಧಾರಾ (ದ್ವಿಪದಿ) ನಾರಾಯಣಾಮೃತ ಫೌಂಡೇಶನ್ ಮುಂಬಯಿ

58 ಲಕ್ಷ್ಮಣ ಬಾಬಣೆ ಪೈ (ಮು) ೧೯೮೦ ಕನ್ನಡ ಭಗವದ್ಗೀತೆ (೧_೮ ಅಧ್ಯಾಯ) (ಭಾಮಿನಿಷಟ್ಪದಿ) ಕೆ.ಜಿ.ದೇಸಾಯಿ ಶ್ರೀದುರ್ಗಾ ಪ್ರಕಾಶನಹುಬ್ಬಳ್ಳಿ

59 ಲಕ್ಷ್ಮಣ ವಿರೂಪಾಕ್ಷ ಜೋಷಿ (ಮು) ೧೯೯೮ ಶ್ರೀಮದ್ಭಗವದ್ಗೀತಾ ಕನ್ನಡ ಪದ್ಯಾನುವಾದ (ಚೌಪದಿ) ಶರಣ ಸುವಾಸಿನಿ ಬಳಗ ಹೊಸಪೇಟೆ

60 ಲಕ್ಷ್ಮೀನಾರಾಯಣಶಾಸ್ತ್ರಿ ಕ.ಲ. (ಮು) ೧೯೯೪ ಗೀತಾಮಕರಂದ ಕೀರ್ತನೆಗಳು(ಕೀರ್ತನೆ) ಸಿಂಹಾದ್ರಿ ಬಿಟಿಎಂ ಬಡಾವಣೆ ಬೆಂಗಳೂರು

61 ಲೀಲಾ ಪ್ರಕಾಶ್ ಕೆ (ಮು) ೨೦೦೬, ಸಿರಿಗನ್ನಡ ಭಗವದ್ಗೀತಾ, ವಿದ್ಯುತ್ ಪ್ರಕಾಶನ, ಟಿ.ಕೆ ಲೇಔಟ್ ಮೈಸೂರು

62 **ವಿಜಯನಾಥ ಭಟ್ಟ** (ಮು) ೧೯೯೬ ವಿಜಯಿನೀ(ಕನ್ನಡ ಶ್ಲೋಕರೂಪ) ವಿಜಯ ಫೌಂಡೇಷನ್ ಮೇಟಗಳ್ಳಿ, ಮೈಸೂರು

63 **ವಿಶ್ವೇಶ್ವರ ದೀಕ್ಷಿತ್** (ಮು) ೨೦೦೦ ಶ್ರೀಮದ್‌ಭಗವತ್ ಕಾನಾಡಿ ಚಿರಾಗ್ ಪ್ರಕಾಶನ ಕ್ಯಾಲಿಪೋರ್ನಿಯಾ, ಅಮೆರಿಕ

64 **ವೆಂಕಟರಮಣ ನರಸಿಂಹಶಾಸ್ತ್ರೀ** (ಮು) ೧೯೫೬ ಕನ್ನಡ ಶ್ರೀಕೃಷ್ಣ ಗೀತಾ ಹಾಡುಗಳು (ಹಾಡು) ಅನುವಾದಕನೇ ಪ್ರಕಾಶಕ ಗೋಕರ್ಣ

65 **ವೆಂಕಟರಾಮಯ್ಯ ಕೆ** (ಮು)೧೯೬೩ ಭಗವದ್ಗೀತಾ ರಹಸ್ಯೋದ್ದೇಶ ಭಾಗ ೧ ಮತ್ತು ೨ ಸಂಪಾದಕ ವೆಂಕಟರಾಮಯ್ಯ ಕೆ ಬೆಂಗಳೂರು

66 **ವೆಂಕಟರಾವ್ ರಾಮಚಂದ್ರನಾಯಕ್** (ಮು) ೧೯೬೪ ಕನ್ನಡ ಭಗವದ್ಗೀತೆ (ದ್ವಿಪದಿ) ತವಗ ಭೀಮಸೇನರಾವ್ ಕನ್ನಡ ಸಾಹಿತ್ಯ ಸಂಘ ಕಲ್ಬುರ್ಗಿ

67 **ವ್ಯಾಸರಾಯರು** (ಸಂ) ಕೃಷ್ಣದಾಸ ಮುರಗೊಂಡ(ಮು) ೧೯೮೨ ಗೀತಾಸಾರ (ವೃತ್ತನಾಮ, ಕೀರ್ತನೆ) ಕೃಷ್ಣದಾಸ ಮುರಗೋಡ ಗಂಗಾವತಿ

68 **ಶಂಭುಭಟ್ಟ** (ಮು)೧೯೪೯ ಶ್ರೀದಾಸಗೀತೆ (ದ್ವಿಪದಿ) ಅನುವಾದಕ ವಡೇವಾಡಿ

69 **ಶ್ರೀಮತಿ ಭಾಗ್ಯಲಕ್ಷ್ಮಮ್ಮಣ್ಣಿ** (ಮು) ೨೦೧೩ ಕನ್ನಡ ಸರಳ ಭಗವದ್ಗೀತೆ (ಚೌಪದಿ) ಶ್ರೀಪಾದ ಪ್ರಕಾಶನ ಬಸವೇಶ್ವರನಗರ ಬೆಂಗಳೂರು

70 **ಶ್ರೀಮತ್ಪರಮಹಂಸ ಬೋಧಾನಂದ ಭಾರತೀಸ್ವಾಮಿ** (ಮು) ೧೯೬೧ ಶ್ರೀಮದ್ಭಗವದ್ಗೀತಾ ಕುಸುಮ ಮಂಜರಿ(ಕುಸುಮ ಷಟ್ಪದಿ) ಅಭಿನವ ಆಸ್ತಿಕ ಪ್ರಕಾಶನ ಬೆಂಗಳೂರು

71 **ಸಂತ ಭದ್ರಗಿರಿ ಕೇಶವದಾಸರು** (ಸಂ) ಬಿ.ಕೆ.ನಾಗೇಂದ್ರ (ಮು) ೨೦೧೩ ಕೀರ್ತನರೂಪಿ ಭಗವದ್ಗೀತೆ(ಕೀರ್ತನೆ) ಕೇಶವದಾಸ್ ಬುಕ್ ಡಿಪೊ ವಿಶ್ವಶಾಂತಿ ಆಶ್ರಮ ನೆಲಮಂಗಲ ಬೆಂಗಳೂರು

72 **ಸಾಗರದ ಎನ್ ಶ್ರೀಕಂಠಯ್ಯ** (ಮು) ೧೯೦೮ ಕನ್ನಡ ವಚನ ಗೀತಾಮೃತ ಮಹೋದಧಿ ಭಾರತೀ ಸಂಪಂಗಿರಾಮ ಸವಿನುಡಿ ಗ್ರಂಥಮಾಲೆ ಬೆಂಗಳೂರು

73 **ಸೀತಾರಾಮಶಾಸ್ತ್ರಿ ಸಿ.ಕೆ.** (ಮು) ೨೦೦೧ ಭಗವದ್ಗೀತಾ ಲಾವಣಿ(ಲಾವಣಿ) ಗೀತಾ ಸತ್ಸಂಗ ಸಮಿತಿ ಕಾರಂಜಿ ಆಂಜನೇಯ ದೇವಸ್ಥಾನ ಬಸವನಗುಡಿ ಬೆಂಗಳೂರು

74 ಸುಬ್ಬಣ್ಣ ಎಂ.ಎಸ್ (ಮು)೧೯೩೮ ಕನ್ನಡ ಭಗವದ್ಗೀತೆ (ಕುಸುಮ ಷಟ್ಪದಿ)ವಿಷ್ಣು ಮುದ್ರಾಕ್ಷರ ಶಾಲೆ ಬಳ್ಳಾರಿ

75 ಸುಬ್ರಹ್ಮಣ್ಯ ಗಲಗಲಿ (ಮು) ೨೦೦೪ ಕನ್ನಡ ನುಡಿಯಲ್ಲಿ ಭಗವದ್ಗೀತೆ (ದ್ವಿಪದಿ) ಚುತುರ್ಮುಖ ಪ್ರಕಾಶನ ಹನುಮಂತನಗರ ಬೆಂಗಳೂರು

76 ಹರಿದಾಸ (ಲೇ) ಸಂ: ಎಸ್.ಎಸ್ ಕೋತಿನ (ಮು) ೧೯೫೫ ಶ್ರೀಮಹಾಭಗವದ್ಗೀತೆ. ಭಾಮಿನಿಷಟ್ಪದಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ



ಅನುಬಂಧ ೪
ಸಂಪಾದಕರ ಪರಿಚಯ

ಹೆಸರು : ಜಿ.ಅಶ್ವತ್ಥನಾರಾಯಣ
ತಾಯಿ–ತಂದೆ : ಹೆಚ್.ಗುಂಡಪ್ಪ–ಜಿ.ಜಾನಕಮ್ಮ
ಜನ್ಮದಿನ ೧೨–೫–೧೯೩೮
ಜನ್ಮಸ್ಥಳ : ಬೆಂಗಳೂರು

ಮನೆ ವಿಳಾಸ : ನಂ.೯೫ ೩೪ನೇ 'ಬಿ' ಕ್ರಾಸ್. ೧೬ನೇ ಮುಖ್ಯರಸ್ತೆ, ೪ನೇ '೬' ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೪೧, ದೂರವಾಣಿ : ೦೮೦–೨೬೬೩೭೭೮೩

ಶಿಕ್ಷಣ : ಎಂ.ಎ. ಕನ್ನಡ (ಎಂ.ಎ. ಸಮಾಜಶಾಸ್ತ್ರ ಶಾಸನಶಾಸ್ತ್ರ ಡಿಪ್ಲೊಮಾ, ಮೆಕ್ಯಾನಿಕಲ್ ಇಂಜನಿಯರಿಂಗ್ ಡಿಪ್ಲೊಮಾ)

ಉದ್ಯೋಗ : ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಡಿಗ್ರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿ ಕನ್ನಡಬೋಧನಾ ಸೇವೆ. ೧೯೯೬ರಲ್ಲಿ ನಿವೃತ್ತಿ.

ಸಂಸ್ಥೆಗಳಲ್ಲಿ ಸೇವೆ :

೧. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂಶ್ರೀ ಮುಗಳಿ ಅವರ ಅವಧಿಯಲ್ಲಿ ಡಿಗ್ರಿ ಪಠ್ಯಗಳ ಭಾಷಾತಜ್ಞರಾಗಿ ಪರಿಶೀಲಕ.

೨. ಪಿಯುಸಿ ಪಠ್ಯ ಪುಸ್ತಕ ಮಂಡಳಿ, ಕನ್ನಡ ಸಾಹಿತ್ಯಪರಿಷತ್ತಿನ ಪಠ್ಯಪುಸ್ತಕ ಸಮಿತಿ, ಮಹಾವೀರ ಸಂಸ್ಥೆ ಮುಂತಾದ ಸಮಿತಿಗಳ ಪಠ್ಯರಚನಾ ಸಮಿತಿ ಸದಸ್ಯ ಮತ್ತು ಪಠ್ಯಗಳ ರಚನೆ.

೩. ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣಕಾರ್ಯದ ಸಂಚಾಲಕ ಸಮಿತಿ ಸದಸ್ಯ

೪. ಗಮಕಕಲಾ ಪರಿಷತ್ತಿನ ಪರಿಯೋಜನೆ ಮತ್ತು ವ್ಯವಸ್ಥಾಪಕ ಮತ್ತು ಸಂಘಟಕ.

೫. ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡ ಶಿಬಿರಗಳ ನಿರ್ದೇಶಕ.

೬ ಐ.ಎ.ಎಸ್., ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕ.

೭ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ದೇವುಡು ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು, ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯ

೮. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನರಿಗೆ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ.

೯. ನಾಡಿನಾದ್ಯಂತ ಉಪನ್ಯಾಸಗಳು. ಮ. ರಾಮಮೂರ್ತಿ ಪಾರಂಭಿಸಿದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬ

೧೦. ಪ್ರಶಸ್ತಿಗಳು :

ಕುವೆಂಪು ಶ್ರೀ ಪ್ರಶಸ್ತಿ (೨೦೦೪)

ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ (೨೦೦೭)

ಕನ್ನಡ ಶ್ರೀ ಪ್ರಶಸ್ತಿ(೨೦೦೮)

ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ (೨೦೧೧)

ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ(೨೦೧೨)

ಸುಮಾ ವಸಂತ ಸಾಹಿತ್ಯ ಪ್ರಶಸ್ತಿ (೨೦೧೨)

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೨೦೧೩)

ಇತ್ಯಾದಿ.

ಸನ್ಮಾನ: ನಾಡಿನ ನಾನಾ ಸಂಸ್ಥೆಗಳು ಸಾಹಿತ್ಯಸೇವೆಗಾಗಿ ಗೌರವಿಸಿವೆ.

ಗ್ರಂಥಗಳ ರಚನೆ ಮತ್ತು ಸಂಪಾದನೆ :

ಜೈನ ಸಾಹಿತ್ಯ : ರತ್ನಕರಂಡಕ ಶ್ರಾವಕರ, ರತ್ನಾಕರನ ಮೂರು ಶತಕಗಳು, ಉತ್ತಮ ಕ್ಷಮಾ, ಜಾಗರೂಕರಾಗಿ ಜಾಣರಾಗಿ.

ಗ್ರಂಥ ಸಂಪಾದನೆ : ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮಪರ್ವ, ಸೋಮೇಶ್ವರಶತಕದ ಟೀಕೆ, ಕಬ್ಬಿಗರ ಕಾವ ಟೀಕೆ, ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ.

ಕಗ್ಗದ ಪದ್ಯಗಳು, ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ, ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ರಘುವರಚರಿತೆ, ವಿ.ಸೀ. ಸಮಗ್ರ ಜೀವನಚರಿತ್ರೆ ಅನುವಾದ ಸಂಪುಟ (೨ ಭಾಗಗಳು), ಸಾಹಿತ್ಯ ಸಮ್ಮೇಳನಾಧ್ಯಾಕ್ಷರ ಭಾಷಣಗಳು, ಸೌಂದರ್ಯ ಲಹರೀ ದೀಪಿಕೆ.

ದಾಸ ಸಾಹಿತ್ಯ : ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಪ್ರಸನ್ನ ಶ್ರೀನಿವಾಸ ದಾಸರ ಸಮಗ್ರ ಕೃತಿಗಳು, ಕೆಲ್ಲಂಗೆರೆ ತಿಮ್ಮಪ್ಪ ದಾಸರ ಕೀರ್ತನೆಗಳು, ಹೊಸಕೆರೆ ಚಿದಂಬರಯ್ಯನವರ ಭಕ್ತಿ ಗೀತೆಗಳು, ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ–೪, ದಾಸ ಸಾಹಿತ್ಯ ಸೌರಭ


ವಚನಸಾಹಿತ್ಯ : ದೇವರದಾಸಿಮಯ್ಯನ ವಚನಗಳು, ಫ.ಗು.ಹಳಕಟ್ಟಿ

ಸಮಗ್ರ ಗ್ರಂಥ ಉಪನ್ಯಾಸ ಮಾಲಿಕೆ : ಆದಿ ಪುರಾಣ, ಪಂಪಭಾರತ, ರಾಮಾಯಣ ದರ್ಶನ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಸೋಮೇಶ್ವರ ಶತಕ ಇತ್ಯಾದಿ (ಸತತ ೧೦ ವರ್ಷಗಳ ಕಾಲ),

ಶಬ್ದಕೋಶ : ಭಗವದ್ಗೀತಾ ಶಬ್ದಕೋಶ, ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ,

ಸ್ವತಂತ್ರ ಗ್ರಂಥ ರಚನೆ : ಪರಿಷತ್ತು–೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರೀ, ಫ.ಗು.ಹಳಕಟ್ಟಿ, ಹು.ಮ.ರಾಮಾರಾಧ್ಯ, ಉತ್ತಮಕ್ಷಮಾ, ವ್ಯಾವಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರು, ಇತ್ಯಾದಿ.

ಸಹ ಸಂಪಾದಕತ್ವ : ಆರ್.ವಿ.ಕಾಲೇಜಿನಿಂದ ಪ್ರಕಾಶಿತವಾದ ಸಿಂಚನ ಗ್ರಂಥಮಾಲೆಯಡಿ ಪಾಂಡುಗ್ರಂಥಮಾಲೆಯ ೨೯ ಗ್ರಂಥಗಳು, ರಾಸದರ್ಶನ, ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆ, ಇತ್ಯಾದಿ.



ಪ್ರೊ. ಜಿ. ಅಶ್ವತ್ಥನಾರಾಯಣ

ಸಂಪಾದಕರು

ಕನ್ನಡದಲ್ಲಿ ಸುಮಾರು 70 ಭಗವದ್ಗೀತೆಯ ಕನ್ನಡ ಪದ್ಯಾನುವಾದಗಳು ಪ್ರಕಟವಾಗಿವೆ. ದಾಸಸಾಹಿತ್ಯ ಶ್ರೇಷ್ಠರಾದ ವ್ಯಾಸರಾಯರ ಗೀತಾಸಾರವೇ ಮೊದಲ ಕನ್ನಡ ಗೀತಾನುವಾದ ಎನ್ನಬಹುದು. ಅನಂತರ 19ನೆಯ ಶತಮಾನದಲ್ಲಿ ಪ್ರಕಟವಾದ 4 ಭಗವದ್ಗೀತೆಗಳಲ್ಲಿ ಉಪ್ಪಾರಳ್ಳಿ ರಾಮಪ್ಪಯ್ಯನ 407 ಭಾಮಿನೀ ಷಟ್ಪದಿಗಳ ಗೀತಾರ್ಥಪ್ರಕಾಶಿಕೆ ಮೊದಲ ಪ್ರಕಟನೆಯಾಗಿದೆ. ಇದು 1856ರಲ್ಲಿ ಮೊದಲಬಾರಿಗೆ ದಶಪರ್ವಗಳ ಕುಮಾರವ್ಯಾಸಭಾರತ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಪ್ರಕಟವಾದಾಗ ಅದರಲ್ಲಿ ಭೀಷ್ಮಪರ್ವದ 3ನೆಯ ಸಂಧಿಯಲ್ಲಿ ಅನಾಮತ್ತಾಗಿ ಸೇರಿತು. ಅನಂತರ 1928ರವರೆಗೆ ಕುಮಾರವ್ಯಾಸ ಭಾರತ ಪುನರ್ಮುದ್ರಣಗಳಲ್ಲಿ ಸೇರಿಕೊಂಡಿದ್ದು, ಅನಂತರದ ಮುದ್ರಣಗಳಲ್ಲಿ ಬಿಟ್ಟುಹೋಯಿತು. ಹಾಗಾಗಿ ಈಗಿನ ತಲೆಮಾರಿನವರಿಗೆ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ ಕಣ್ಮರೆ-ಯಾಗಿತ್ತು. ಇದೀಗ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಪರಿಷ್ಕರಿಸಿ ಸಂಪಾದಿಸಿ ಕುಮಾರವ್ಯಾಸನ ಭಗವದ್ಗೀತೆಯೊಂದಿಗೆ ಸಿದ್ಧಪಡಿಸಿಕೊಟ್ಟಿದ್ದಾರೆ. ಕಳೆದುಹೋದ ಮಗು ಮತ್ತೆ ಸಿಕ್ಕಿದಂತೆ ಗೀತಾರ್ಥ ಪ್ರಕಾಶಿಕೆ ಕನ್ನಡಿಗರಿಗೆ ದೊರಕಿದೆ.

ಡಾ. ಬಿ. ನಂಜುಂಡಸ್ವಾಮಿ

ವಿದ್ವಾಂಸರು